ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ – 2023)

## ಭಾಗ – 2

7

## ಏಳನೆಯ ತರಗತಿ

## ಕನ್ನಡ ಮಾಧ್ಯಮ

@KTBS NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

# ಪರಿವಿಡಿ

H4S3H4


| ಅಧ್ಯಾಯದ ಸಂಖ್ಯೆ | ಇತಿಹಾಸ | ಪುಟ ಸಂಖ್ಯೆ |
|---|---|---|
| 14 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | 1 |
| 15 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857–1858) | 11 |
| 16 | ಸ್ವಾತಂತ್ರ್ಯ ಸಂಗ್ರಾಮ | 20 |
| 17 | ಕರ್ನಾಟಕದ ಏಕೀಕರಣ ಹಾಗೂ ಗಡಿ ವಿವಾದಗಳು | 52 |
| 18 | ಕರ್ನಾಟಕದ ಸಮಾಜಮುಖಿ ಚಳವಳಿಗಳು | 62 |
| 19 | ಕರ್ನಾಟಕ – ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ | 73 |
| 20 | ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ | 80 |
| | ಪೌರನೀತಿ | |
| 21 | ನ್ಯಾಯಾಂಗ | 90 |
| 22 | ರಕ್ಷಣಾಪಡೆಗಳು | 96 |
| 23 | ಭಾರತ ಮತ್ತು ನೆರೆ ದೇಶಗಳು | 104 |
| 24 | ವಿಶ್ವಸಂಸ್ಥೆ | 115 |
| | ಭೂಗೋಳ ವಿಜ್ಞಾನ | |
| 25 | ಆಸ್ಟ್ರೇಲಿಯ | 124 |
| 26 | ಅಂಟಾರ್ಟಿಕ | 142 |


© KTBS NOT TO BE REPUBLISHED

# ಇತಿಹಾಸ

## ಅಧ್ಯಾಯ 14 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

M7I1N4

**ಪಾಠದ ಪರಿಚಯ**

ಪಾಶ್ಚಿಮಾತ್ಯ ಶಿಕ್ಷಣದ ಅನುಷ್ಠಾನ ಭಾರತೀಯರಲ್ಲಿ ಒಂದು ಹೊಸ ಜಾಗೃತಿಯನ್ನು ಮೂಡಿಸಿತು. ಭಾರತೀಯರು ತಮ್ಮ ಸಮಾಜದಲ್ಲಿ ಬದಲಾವಣೆಗಳನ್ನು ತರಲು ಹಲವಾರು ಮಾರ್ಗಗಳನ್ನು ಹುಡುಕತೊಡಗಿದರು. ಈ ನಿಟ್ಟಿನಲ್ಲಿ ಸಂಘಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಭಾರತೀಯ ಸಮಾಜವನ್ನು ಸುಧಾರಿಸಲು ಶ್ರಮಿಸಿದ 19ನೇ ಶತಮಾನದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಕರ ಕಾರ್ಯಗಳನ್ನು ನಾವೀಗ ಅಭ್ಯಸಿಸೋಣ.

**ಸಾಮರ್ಥ್ಯಗಳು**

1 19ನೇ ಶತಮಾನದಲ್ಲಿ ಭಾರತೀಯ ಸಮಾಜದ ಜಾಗೃತಿಗೆ ಕಾರಣವಾದ ಅಂಶಗಳು ಮತ್ತು ಚಿಂತನಶೀಲರ ಪ್ರಯತ್ನಗಳನ್ನು ಕುರಿತು ಅರಿಯುವುದು.

2 ಸಮಾಜದ ಜಾಗೃತಿಗೆ ಸಂಘಸಂಸ್ಥೆಗಳು ಮತ್ತು ಸುಧಾರಕರು ನೀಡಿದ ಕೊಡುಗೆಗಳನ್ನು ಸ್ಮರಿಸುವುದು.

3 ಸಾಮಾಜಿಕ ಸುಧಾರಣಾ ಚಳವಳಿಯಿಂದುಂಟಾದ ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.

NOT TO BE REPUBLISHED

ಆಧುನಿಕ ಪಾಶ್ಚಿಮಾತ್ಯ ವಿಚಾರಧಾರೆಯ ಪರಿಣಾಮವಾಗಿ ಭಾರತದಲ್ಲಿ ಒಂದು ನೂತನ ಜಾಗೃತಿ ಉಂಟಾಯಿತು. ಪಾಶ್ಚಿಮಾತ್ಯ ಸಂಸ್ಕೃತಿ, ವೇಷಭೂಷಣ, ನಡಾವಳಿಗಳು, ಸಮಾಜ, ಧಾರ್ಮಿಕ ವಿಚಾರಗಳು, ನಂಬಿಕೆಗಳು ಮತ್ತು ಆಂಗ್ಲರ ಸಾಮಾಜಿಕ ಆದರ್ಶಗಳು ಭಾರತೀಯರ ಮೇಲೆ ಗಾಢವಾದ ಪ್ರಭಾವ ಬೀರಿದವು. ವಿಶೇಷವಾಗಿ ಭಾರತೀಯರು ಪಾಶ್ಚಿಮಾತ್ಯರ ವೈಜ್ಞಾನಿಕ ವಿಚಾರಧಾರೆ, ಮಾನವತಾವಾದ ಹಾಗೂ ಕಾರ್ಯಕಾರಣ ಸಿದ್ಧಾಂತಗಳಿಂದ ಪ್ರಭಾವಿತರಾದರು. ಈ ಬೆಳವಣಿಗೆಗಳ ಪರಿಣಾಮವು ವಸಾಹತುಶಾಹಿ ಕಾಲದ ಭಾರತದಲ್ಲಿ ಪುನರುಜ್ಜೀವನದ ಹುಟ್ಟಿಗೆ ನಾಂದಿಯಾಯಿತು. ಸಮಾನತೆಯ ಆಶಯಗಳನ್ನು ಸಾರುವ ಹೊಸ ಅರಿವೇ ಈ ಪುನರುಜ್ಜೀವನ ಚಳವಳಿ. ಇದನ್ನು ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯ ಹೆಸರಿನಿಂದಲೂ ಕರೆಯುವರು. ಈ ಚಳವಳಿಗಳು ದಲಿತ ಮತ್ತು ಮಹಿಳಾ ವರ್ಗಗಳ ಸಾಮಾಜಿಕ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದವು. ಬ್ರಿಟಿಷರು ಇಂಗ್ಲಿಷ್ ಶಿಕ್ಷಣವನ್ನು ಭಾರತೀಯರ ವಿಮೋಚನೆಗೆ ದಾರಿಯಾಗಿದೆಯೆಂದು ಪ್ರತಿಪಾದಿಸುತ್ತಲೆ, ವಸಾಹತು ಸಿದ್ಧಾಂತವನ್ನು ಭಾರತೀಯರ ಮೇಲೆ ಹೇರುತ್ತಾ ಹೋದರು.

## ಬ್ರಹ್ಮ ಸಮಾಜ (1828)

ಆಧುನಿಕ ಕಾಲಘಟ್ಟದ ಭಾರತದಲ್ಲಿ ಸಾಮಾಜಿಕ ಜಾಗೃತಿ ಮೂಡಿಸಿದವರಲ್ಲಿ ರಾಜಾ ರಾಮಮೋಹನ ರಾಯ್ ಮೊದಲಿಗರು. ಇವರನ್ನು 'ಭಾರತದ ಪುನರುಜ್ಜೀವನ ಪಿತಾಮಹ' ಎಂದು ರವೀಂದ್ರನಾಥ ಟಾಗೋರ್ ಕರೆದಿರುವುದು ಸಮರ್ಥನೀಯವಾಗಿದೆ.



ರಾಜಾ ರಾಮಮೋಹನ ರಾಯ್

ಜಡ ಭಾರತೀಯ ಸಮಾಜದಲ್ಲಿ ಚೇತನ ತುಂಬುವ ಉದ್ದೇಶವನ್ನು ಹೊಂದಿದ್ದ ರಾಜಾ ರಾಮಮೋಹನ ರಾಯ್ 1814ರಲ್ಲಿ 'ಆತ್ಮೀಯ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದು 1819ರ ವೇಳೆಗೆ ಸ್ಥಗಿತಗೊಂಡಿತು. ನಂತರ 1828ರಲ್ಲಿ 'ಬ್ರಹ್ಮಸಭಾ'ವನ್ನು ಸ್ಥಾಪಿಸಿದರು. ಅದು ಮರು ವರ್ಷ 'ಬ್ರಹ್ಮ ಸಮಾಜ' ಎಂದು ನಾಮಕರಣಗೊಂಡಿತು. ರಾಜಾ ರಾಮ ಮೋಹನ ರಾಯ್ ಪೂರ್ವ ಮತ್ತು ಪಶ್ಚಿಮದ ಚಿಂತನೆಗಳ ಸಮನ್ವಯದ ಪ್ರತಿನಿಧಿಯಾಗಿದ್ದರು. ಸತಿ ಪದ್ಧತಿ, ಜಾತಿ ಪದ್ಧತಿ, ಮೂರ್ತಿ ಪೂಜೆ, ಬಹುಪತ್ನಿತ್ವ, ಬಾಲ್ಯ ವಿವಾಹ ಹಾಗೂ ಎಲ್ಲಾ ತರದ ಮೂಢ ನಂಬಿಕೆಗಳನ್ನು ಬ್ರಹ್ಮ ಸಮಾಜವು ಬಲವಾಗಿ ವಿರೋಧಿಸಿತು. ರಾಮಮೋಹನ ರಾಯ್ ಮತ್ತು ಅವರ ಸಹವರ್ತಿಗಳು ಅರ್ಥಹೀನ ಸತಿ ಪದ್ಧತಿಯನ್ನು ನಿರ್ಮೂಲನಗೊಳಿಸುವಂತೆ ಬ್ರಿಟಿಷ್ ಸರ್ಕಾರವನ್ನು ಕೋರಿದರು. ಇದರಿಂದ ಅಂದಿನ ಗವರ್ನರ್ ಜನರಲ್ ಆಗಿದ್ದ ವಿಲಿಯಮ್ ಬೆಂಟಿಂಕ್‌ನು ಸತಿ ಪದ್ಧತಿ ಆಚರಣೆಯನ್ನು ಕಾನೂನುಬಾಹಿರವೆಂದು ಘೋಷಿಸಿದನು (1829). ಪಾಶ್ಚಿಮಾತ್ಯ ಶಿಕ್ಷಣವನ್ನು ಪ್ರತಿಪಾದಿಸಿದ ರಾಮಮೋಹನ ರಾಯ್ ಆ ಮೂಲಕ ಅಮಾನವೀಯ ಪದ್ಧತಿಗಳನ್ನು ತೊಡೆದು ಹಾಕಬಹುದೆಂದು ಬಲವಾಗಿ ನಂಬಿದ್ದರು. ವಿಧವಾ ವಿವಾಹ ಮತ್ತು ಏಕದೇವತಾರಾಧನೆಯ ಪರವಾಗಿದ್ದ ರಾಮಮೋಹನ ರಾಯ್ ಅವರು 'ಸಂವಾದ ಕೌಮುದಿ' ಪತ್ರಿಕೆಯ ಮೂಲಕ ಸಾಮಾಜಿಕ ಸುಧಾರಣಾ ಚಳವಳಿಯ ಪ್ರಕ್ರಿಯೆಯನ್ನು ಆರಂಭಿಸಿದರು.

ವೈಚಾರಿಕತೆಯ ಮೂಲಕ ಹಿಂದೂ ಧರ್ಮವನ್ನು ಪರಿಶುದ್ಧಗೊಳಿಸಲು ರಾಮಮೋಹನ ರಾಯ್ ಯತ್ನಿಸಿದರು. ತಮ್ಮ ವಿಚಾರವನ್ನು ಸಮರ್ಥಿಸಲು ಐದು ಉಪನಿಷತ್ತುಗಳನ್ನು ಸಂಸ್ಕೃತದಿಂದ ಬಂಗಾಳಿಗೆ ಭಾಷಾಂತರಿಸಿದರು.

ರಾಮಮೋಹನ ರಾಯ್ ಇಂಗ್ಲಿಷ್ ಶಿಕ್ಷಣವನ್ನು ಪ್ರತಿಪಾದಿಸಿದ ಮೊದಲಿಗರಲ್ಲಿ ಒಬ್ಬರು. ತಮ್ಮ ಖರ್ಚಿನಲ್ಲಿ ಇಂಗ್ಲಿಷ್ ಶಾಲೆ ನಡೆಸುತ್ತಿದ್ದರು. ಅವರು ವೇದಾಂತ ಕಾಲೇಜನ್ನು ಕೂಡ ಸ್ಥಾಪಿಸಿದರು. ರಾಮಮೋಹನ ರಾಯ್ ಭಾರತೀಯ ಪತ್ರಿಕೋದ್ಯಮದ ಆದ್ಯ ಪ್ರವರ್ತಕರಲ್ಲಿ ಒಬ್ಬರಾಗಿದ್ದಾರೆ. ಹಲವು ನಿಯತಕಾಲಿಕೆಗಳನ್ನು ಅವರು ಪ್ರಕಟಿಸಿದರು. ಒಟ್ಟಿನಲ್ಲಿ ಅವರು ಜೀವನವಿಡೀ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡಿದರು. ಅವರ ಸಮಾಜಮುಖಿ ಕಾರ್ಯಗಳನ್ನು ಮುಂದೆ ದೇವೇಂದ್ರನಾಥ ಟಾಗೋರ್ ಮತ್ತು ಕೇಶವ್‌ಚಂದ್ರ ಸೇನ್ ಮುಂದುವರಿಸಿದರು.

©KTBS NOT TO BE REPUBLISHED

**ನಿಮಗೆ ತಿಳಿದಿರಲಿ :** 'ರಾಜಾ' ಎಂಬುದು ರಾಮಮೋಹನ ರಾಯ್ ಅವರಿಗೆ ಮೊಗಲ್ ಬಾದಷಹ 1829ರಲ್ಲಿ ನೀಡಿದ ಬಿರುದಾಗಿತ್ತು.

## ಪ್ರಾರ್ಥನಾ ಸಮಾಜ (1867)



ಮಹಾದೇವ ಗೋವಿಂದ ರಾನಡೆ

ಪ್ರಾರ್ಥನಾ ಸಮಾಜವನ್ನು ಆತ್ಮಾರಾಮ್ ಪಾಂಡುರಂಗರು ಪ್ರಾರಂಭಿಸಿದರು. ಇದು ಬ್ರಹ್ಮ ಸಮಾಜದ ನಂತರ ಮುಂಬೈ ಪ್ರದೇಶದಲ್ಲಿ ಪ್ರಾರಂಭವಾದ ಪ್ರಮುಖ ಸಮಾಜ ಸುಧಾರಣಾ ಸಂಸ್ಥೆ. ಬಾಳಾ ವಾಗಳೆ, ಎನ್.ಜಿ. ಚಂದಾವರ್ಕರ್, ಎಂ.ಜಿ. ರಾನಡೆ ಮತ್ತು ಇತರರು ಇದರ ಪ್ರಮುಖ ನಾಯಕರು. ಇವರು ವಿಧವಾ ವಿವಾಹ, ಅಂತರ್ಜಾತಿ ವಿವಾಹ, ಮಹಿಳೆಯರ ಸ್ಥಾನಮಾನದ ಉನ್ನತೀಕರಣ ಮತ್ತು ಶೋಷಿತ ವರ್ಗದವರ ಅಭಿವೃದ್ಧಿಯ ಕಡೆಗೆ ಗಮನ ಹರಿಸಿದರು. ಅಲ್ಲದೆ ನಿರ್ಗತಿಕರಿಗೆ ಮತ್ತು ಅನಾಥರಿಗೆ ಆಶ್ರಮಗಳನ್ನು ಸ್ಥಾಪಿಸಿದರು. ವಿಧವೆಯರ ಉದ್ಧಾರಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆದರು.

## ಸತ್ಯಶೋಧಕ ಸಮಾಜ (1873)



ಮಹಾತ್ಮ ಜ್ಯೋತಿಬಾ ಫುಲೆ

ಮಹಾತ್ಮ ಜ್ಯೋತಿಬಾ ಫುಲೆ (1827–1890) ರವರಿಂದ ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರ ಚಳವಳಿ ಆರಂಭವಾಯಿತು. ಮಹಾರಾಷ್ಟ್ರದ ಕೆಳವರ್ಗದವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಅವರು ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಅಸ್ಪೃಶ್ಯರು, ಅನಾಥರು ಮತ್ತು ವಿಧವೆಯರಿಗಾಗಿ ಶಾಲೆಗಳನ್ನು ತೆರೆದರು. ಬ್ರಾಹ್ಮಣ ಪುರೋಹಿತಶಾಹಿಯನ್ನು ಖಂಡಿಸಿದ ಅವರು 'ಗುಲಾಮಗಿರಿ' ಎಂಬ ಕೃತಿಯನ್ನು ರಚಿಸಿ ತಮ್ಮ ಚಿಂತನೆಗಳನ್ನು ಸಂವಾದದ ರೂಪದಲ್ಲಿ ವಿವರಿಸಿದರು. ಪತ್ನಿ ಸಾವಿತ್ರಿಬಾಯಿಯ ಜೊತೆಗೂಡಿ ಪುಣೆಯಲ್ಲಿ ಬಾಲಕಿಯರ ಶಾಲೆಯನ್ನು ಆರಂಭಿಸಿದರು. ಬಾಲ ವಿಧವೆಯರಿಗೆ 1863ರಲ್ಲಿ ಪುನರ್‌ವಸತಿ ಕೇಂದ್ರವನ್ನು ತೆರೆಯುವ ಮೂಲಕ ನಡೆಯುತ್ತಿದ್ದ ಶಿಶುಹತ್ಯೆ ಪ್ರಕರಣಗಳನ್ನು ಕೊನೆಗಾಣಿಸುವ ಪ್ರಯತ್ನ ಮಾಡಿದರು. ವಿಧವಾ ವಿವಾಹವನ್ನು ಉತ್ತೇಜಿಸಿದರು. ವಾಸ್ತವವಾಗಿ ಫುಲೆ ಅವರನ್ನು ಬಿ.ಆರ್. ಅಂಬೇಡ್ಕರ್ ತಮ್ಮ ತಾತ್ವಿಕ ಮಾರ್ಗದರ್ಶಕರನ್ನಾಗಿ ಸ್ವೀಕರಿಸಿದ್ದರು.

© KTBS NOT TO BE REPUBLISHED

**ತರುಣ ಬಂಗಾಲಿ ಚಳವಳಿ**

ರಾಜಾ ರಾಮಮೋಹನ ರಾಯ್ ಅವರ ಸುಧಾರಣಾ ತುಡಿತ ಬಂಗಾಳದ ಅನೇಕ ಯುವ ಚಿಂತನಶೀಲರನ್ನು ಪ್ರೇರೇಪಿಸಿತು. ಇದು 'ತರುಣ ಬಂಗಾಲಿ' ಚಳವಳಿಗೆ ನಾಂದಿಯಾಯಿತು. ಆಂಗ್ಲೋಇಂಡಿಯನ್ ಯುವಕ ಹೆನ್ರಿ ವಿವಿಯನ್ ಡಿರೋಜಿಯೊರವರು ಈ ಚಳವಳಿಯ ನೇತಾರರಾಗಿದ್ದರು. ಸ್ವಂತಿಕೆ ಮತ್ತು ವಿವೇಚನೆಯಿಂದ ಅಲೋಚಿಸುವಂತೆ ಅವರು ಯುವಕರಿಗೆ ಕರೆ ನೀಡಿದರು. ಆದರೆ ಭಾರತೀಯರು ಆ ಸಮಯದಲ್ಲಿ ಅವರ ಕರೆಗೆ ಸೂಕ್ತವಾಗಿ ಸ್ಪಂದಿಸಲಿಲ್ಲ.

## ಆರ್ಯ ಸಮಾಜ (1875)

ಸ್ವಾಮಿ ದಯಾನಂದ ಸರಸ್ವತಿ (1824–1883) ಆರ್ಯ ಸಮಾಜವನ್ನು ಸ್ಥಾಪಿಸಿದರು. ಅವರ ಮೊದಲ ಹೆಸರು ಮೂಲಶಂಕರ ಎಂದಾಗಿತ್ತು. ವೇದಗಳ ಕಾಲದ ಭಾರತದ ಆದರ್ಶ ಸಮಾಜ ಪುನಃ ಸ್ಥಾಪನೆಯಾಗಬೇಕು ಎಂಬುದು ಅವರ ಆಶಯವಾಗಿತ್ತು. ಈ ಹಿನ್ನೆಲೆಯಲ್ಲಿ ದಯಾನಂದ ಸರಸ್ವತಿಯವರು "ವೇದಗಳಿಗೆ ಹಿಂದಿರುಗಿ" ಎಂದು ಕರೆ ನೀಡಿದರು. ಮೂರ್ತಿಪೂಜೆ, ಅಸ್ಪೃಶ್ಯತೆ, ಬಾಲ್ಯವಿವಾಹ ಮತ್ತು ಜಾತಿ ಪದ್ಧತಿಯನ್ನು ಅವರು ಖಂಡಿಸಿದರು. ದಯಾನಂದ ಸರಸ್ವತಿಯವರು ಅಂತರ್ಜಾತೀಯ ಮತ್ತು ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ಅಲ್ಲದೆ ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು.



*ಸ್ವಾಮಿ ದಯಾನಂದ ಸರಸ್ವತಿ*

ದಯಾನಂದ ಸರಸ್ವತಿಯವರು ತಮ್ಮ ವಿಚಾರಧಾರೆಯನ್ನು ಪ್ರಸಿದ್ಧ ಕೃತಿಯಾದ 'ಸತ್ಯಾರ್ಥ ಪ್ರಕಾಶ'ದಲ್ಲಿ ಅಭಿವ್ಯಕ್ತಿಸಿದ್ದಾರೆ. ಆರ್ಯ ಸಮಾಜವು ಭಾರತೀಯ ಶಿಕ್ಷಣಾಭಿವೃದ್ಧಿಗೆ ಶ್ರಮಿಸಿದ್ದಲ್ಲದೆ, ರಾಷ್ಟ್ರೀಯ ಚಳವಳಿಗೆ ಸ್ಫೂರ್ತಿ ನೀಡಿತು. ಆರ್ಯ ಸಮಾಜದ ನಾಯಕರಾದ ಲಾಲಾ ಹಂಸರಾಜ್ ಅವರು ಲಾಹೋರಿನಲ್ಲಿ "ದಯಾನಂದ ಆಂಗ್ಲೋವೇದಿಕ್ ಶಾಲೆ" (D.A.V.1886) ಯನ್ನು ಸ್ಥಾಪಿಸಿದರು. ತಿಲಕ್, ಲಾಲಾ ಲಜಪತ್ ರಾಯ್‌ರಂತಹ ರಾಷ್ಟ್ರೀಯ ನಾಯಕರು ಆರ್ಯ ಸಮಾಜದ ತತ್ವ ಮತ್ತು ಚಿಂತನೆಗಳಿಂದ ಗಾಢವಾಗಿ ಪ್ರಭಾವಿತರಾದರು. ಮತಾಂತರಗೊಂಡಿದ್ದವರನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆತರುವುದಕ್ಕಾಗಿ ದಯಾನಂದರ ಶಿಷ್ಯರಾದ ಶ್ರದ್ಧಾನಂದರು "ಶುದ್ಧಿ ಚಳವಳಿ"ಯನ್ನು ಆರಂಭಿಸಿದರು.

ದಯಾನಂದರು ಕೇವಲ ಜನ್ಮದ ಆಧಾರದಲ್ಲಿ ಬ್ರಾಹ್ಮಣರು ಅಧಿಕಾರ ಪಡೆಯುವುದನ್ನು ತಿರಸ್ಕರಿಸಿದರು. ಸ್ತ್ರೀಯರ ಸಹಿತ ಎಲ್ಲರಿಗೂ ವೇದಗಳನ್ನು ಕಲಿಯುವ ಅಧಿಕಾರವಿದೆಯೆಂದು ಘೋಷಿಸಿದರು. ಗೋಪೂಜೆಯನ್ನು ಪ್ರತಿಪಾದಿಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ಆರ್ಯ ಸಮಾಜವು ಸ್ವರಾಜ್ಯ ಮತ್ತು ಸ್ವದೇಶಿ ಭಾವನೆಯನ್ನು ಪ್ರಚೋದಿಸಿದ ಒಂದು ಆಂದೋಲನವಾಗಿತ್ತು.

@KTBS NOT TO BE REPUBLISHED




*ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯ ಕೇಂದ್ರಗಳು*

## ರಾಮಕೃಷ್ಣ ಮಿಷನ್ (1897)

"ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ". ಇದು ಸ್ವಾಮಿ ವಿವೇಕಾನಂದರು ಭಾರತೀಯ ಯುವಜನತೆಗೆ ನೀಡಿದ ಕರೆ. ಇವರ ಮೊದಲ ಹೆಸರು ನರೇಂದ್ರನಾಥ ದತ್ತ. ಇವರು ಕೊಲ್ಕತಾಯಲ್ಲಿ 1863 ಜನವರಿ 12ರಂದು ಜನಿಸಿದರು. ರಾಮಕೃಷ್ಣ ಪರಮಹಂಸರ ಶಿಷ್ಯರಾಗಿದ್ದ ಇವರು ತದನಂತರದಲ್ಲಿ ಸಂನ್ಯಾಸತ್ವ ಸ್ವೀಕರಿಸಿದರು.

ರಾಮಕೃಷ್ಣರ ಮರಣದ ನಂತರ ಅವರ ಶಿಷ್ಯರನ್ನು ಒಗ್ಗೂಡಿಸಿ ಮಾರ್ಗದರ್ಶನ ನೀಡುವ ಜವಾಬ್ದಾರಿ ನರೇಂದ್ರನಾಥ ದತ್ತರ ಹೆಗಲ ಮೇಲೆ ಬಿತ್ತು. 1892ರಲ್ಲಿ ಖೇತ್ರಿಯ ರಾಜರ ಸಲಹೆಯ ಮೇರೆಗೆ ನರೇಂದ್ರನಾಥ ದತ್ತರ ಹೆಸರು ಸ್ವಾಮಿ ವಿವೇಕಾನಂದ ಎಂದು ನಾಮಕರಣವಾಯಿತು. ಅಮೆರಿಕದ ಚಿಕಾಗೋ ನಗರದಲ್ಲಿ ನಡೆದ ಪ್ರಥಮ ವಿಶ್ವ ಧರ್ಮ ಸಮ್ಮೇಳನದಲ್ಲಿ (1893) ಅವರು ಹಿಂದೂ ಧರ್ಮದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅಲ್ಲಿ ಅವರು ವೇದಾಂತವನ್ನು ಕುರಿತು ಮಾಡಿದ ಭಾಷಣ ಅವರನ್ನು ವಿಶ್ವವಿಖ್ಯಾತರನ್ನಾಗಿಸಿತು. ಪಶ್ಚಿಮ ಸಂಸ್ಕೃತಿಯ ಹಲವು ಸಾಧನೆಗಳು, ಮಹಿಳಾ ಸಮಾನತೆಯ ಆಶಯಗಳು ಅವರಿಗೆ ಹಿಡಿಸಿದವು.



*ಶ್ರೀ ರಾಮಕೃಷ್ಣ ಪರಮಹಂಸರು*



*ಸ್ವಾಮಿ ವಿವೇಕಾನಂದರು*

@KTBS NOT TO BE REPUBLISHED

ಭಾರತವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದ ವಿವೇಕಾನಂದರು ಭಾರತದ ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ಕಂಡು ಮರುಗಿದರು. ಎಲ್ಲಿಯವರೆಗೆ ಜನರು ಹಸಿವು, ಬಡತನ ಮತ್ತು ಅಜ್ಞಾನದಲ್ಲಿರುವರೋ ಅಲ್ಲಿಯವರೆಗೆ ನಾನು ಮತ್ತೆ ಮತ್ತೆ ಜನ್ಮತಾಳಿ ಅದನ್ನು ಹೋಗಲಾಡಿಸಲು ಶ್ರಮಿಸುತ್ತೇನೆ ಎನ್ನುತ್ತಿದ್ದರು.

> ಪಂಡಿತ ಈಶ್ವರಚಂದ್ರ ವಿದ್ಯಾಸಾಗರರವರು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಕಾಲೇಜನ್ನು ತೆರೆದರು. 1856ರಲ್ಲಿ ಮೊದಲಬಾರಿಗೆ ಮೇಲ್ವರ್ಗದಲ್ಲಿ ಕಾನೂನುಬದ್ಧ ವಿಧವಾ ಪುನರ್‌ವಿವಾಹವು ಕೊಲ್ಕತಾದಲ್ಲಿ ವಿದ್ಯಾಸಾಗರರ ನೇತೃತ್ವದಲ್ಲಿ ನಡೆಯಿತು.

ಮಾನವಹಿತ ಮತ್ತು ಸಮಾಜ ಸೇವೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಅವರು ರಾಮಕೃಷ್ಣ ಮಿಷನ್ ಸ್ಥಾಪಿಸಿದರು. ಸ್ತ್ರೀಯರ ಬಗ್ಗೆ ಅಪಾರ ಕಾಳಜಿ ಹಾಗೂ ಗೌರವ ಹೊಂದಿದ ಸ್ವಾಮೀಜಿಯವರು, "ಸ್ತ್ರೀಯರ ಉದ್ಧಾರ ನಮ್ಮ ರಾಷ್ಟ್ರದ ಉದ್ಧಾರ" ಎಂದು ಒತ್ತಿಹೇಳಿದರು. 'ದರಿದ್ರ ನಾರಾಯಣ'ರ (ಬಡವರ) ಸೇವೆಗೆ ಕರೆನೀಡಿದರು. ಒಟ್ಟಾರೆ ಭಾರತದ ಉನ್ನತಿಯ ಕನಸನ್ನು ಕಂಡರು.

ಸ್ವಾಮಿ ವಿವೇಕಾನಂದರನ್ನು ಬಾಲ ಗಂಗಾಧರ ತಿಲಕರು 'ಭಾರತದ ರಾಷ್ಟ್ರೀಯತೆಯ ನಿಜವಾದ ಪಿತಾಮಹ' ಎಂದು ಬಣ್ಣಿಸಿದ್ದಾರೆ. ಸುಭಾಷಚಂದ್ರ ಬೋಸರನ್ನು ಒಳಗೊಂಡಂತೆ ಅನೇಕ ರಾಷ್ಟ್ರೀಯ ಹೋರಾಟಗಾರರು ಇವರ ಬರವಣಿಗೆಗಳಿಂದ ಪ್ರೇರಣೆಗೊಂಡರು.

ಸ್ವಾಮಿ ವಿವೇಕಾನಂದರು ವಿಶ್ವ ಧರ್ಮಸಮ್ಮೇಳನಕ್ಕೆ ಹೋಗುವ ಮುನ್ನ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದರು. ವಿವೇಕಾನಂದರನ್ನು ತಮ್ಮ ಅರಮನೆಗೆ ಆಹ್ವಾನಿಸಿದ 10ನೇ ಚಾಮರಾಜ ಒಡೆಯರ್ ಅವರು ಸಮ್ಮೇಳನಕ್ಕೆ ಹೋಗಲು ಧನಸಹಾಯ ನೀಡಿದರು. ವಿವೇಕಾನಂದರ ಸಲಹೆ ಮೇರೆ ದಲಿತರಿಗೆ ಮೂರು ಪ್ರತ್ಯೇಕ ಶಾಲೆಗಳನ್ನು ಮೈಸೂರು ಒಡೆಯರ್ ತೆರೆದರು.

**ಚಟುವಟಿಕೆ:** ವಿವೇಕಾನಂದರು ಚಿಕಾಗೋ ವಿಶ್ವ ಧರ್ಮಸಮ್ಮೇಳನದಲ್ಲಿ ಮಾಡಿದ ಭಾಷಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರಿ.

## ಥಿಯಸಾಫಿಕಲ್ ಸೊಸೈಟಿ (1875)

ಥಿಯಸಾಫಿಕಲ್ ಸೊಸೈಟಿ (ಬ್ರಹ್ಮವಿದ್ಯಾ ಸಮಾಜ)ಯನ್ನು ರಷ್ಯನ್ ಮಹಿಳೆ ಮ್ಯಾಡಂ ಎಚ್.ಪಿ. ಬ್ಲಾವಟ್‌ಸ್ಕಿ ಮತ್ತು ಅಮೆರಿಕದ ಕರ್ನಲ್ ಎಚ್.ಎಸ್. ಆಲ್ಕಾಟ್ ಇವರು ನ್ಯೂಯಾರ್ಕ್‌ನಲ್ಲಿ ಸ್ಥಾಪಿಸಿದರು. ಭಾರತಕ್ಕೆ ಆಗಮಿಸಿ ಚೆನ್ನೈ ಬಳಿಯ ಅಡಯಾರ್ ಎಂಬ ಸ್ಥಳದಲ್ಲಿ ಸೊಸೈಟಿಯ ಅಂತರ್‌ರಾಷ್ಟ್ರೀಯ ಕೇಂದ್ರವನ್ನು ಆರಂಭಿಸಿದರು ನಂತರ ಡಾ. ಆ್ಯನಿ ಬೆಸೆಂಟ್ ಇದರ ಅಧ್ಯಕ್ಷರಾಗಿದ್ದರು. ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದ ಅವರು ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದರು. 'ನ್ಯೂ ಇಂಡಿಯಾ' ಮತ್ತು 'ಕಾಮನ್‌ವೆಲ್ತ್' ಎಂಬ ಪತ್ರಿಕೆಗಳನ್ನು ಹೊರಡಿಸಿದರು. ಭಾರತದಲ್ಲಿ ಥಿಯಸಾಫಿಕಲ್ ಚಳವಳಿಯ ಕೇಂದ್ರ ಶಕ್ತಿಯಾಗಿ ಮುನ್ನಡೆಸಿದರು.

**ಥಿಯಸಾಫಿಕಲ್ ಸೊಸೈಟಿಯ ಉದ್ದೇಶಗಳೆಂದರೆ:**

1. ಭೇದವೆಲ್ಲವ ಬಿಟ್ಟು ವಿಶ್ವ ಭ್ರಾತೃತ್ವವನ್ನು ನೆಲೆಗೊಳಿಸುವುದು.
2. ಧರ್ಮ, ತತ್ತ್ವಶಾಸ್ತ್ರ ಮತ್ತು ವಿಜ್ಞಾನ ಇವುಗಳ ತುಲನಾತ್ಮಕ ಅಧ್ಯಯನ ನಡೆಸುವುದು.
3. ಪ್ರಕೃತಿಯ ನಿಗೂಢ ತತ್ವಗಳು ಮತ್ತು ಮನುಷ್ಯನಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ಕುರಿತು ಶೋಧ ನಡೆಸುವುದು.

ಅನಿಬೆಸೆಂಟ್ ಬನಾರಸ್‌ನಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಸ್ಥಾಪಿಸಿದರು. ಇದೇ ಮುಂದೆ ಬನಾರಸ್ ಹಿಂದೂ ಯುನಿವರ್ಸಿಟಿ (B.H.U.) ಎಂಬ ಹೆಸರನ್ನು ಪಡೆಯಿತು. ಅವರು ಮುಂದೆ ಹೋಂರೂಲ್ ಚಳವಳಿಯನ್ನು ಸಹ ಆರಂಭಿಸಿದರು. ಹಾಗೆಯೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದರು (1917).

© KTBS NOT TO BE REPUBLISHED

## ಅಲಿಘರ್ ಚಳವಳಿ ಮತ್ತು ಸರ್ ಸಯ್ಯದ್ ಅಹ್ಮದ್‌ಖಾನ್


ಸರ್ ಸಯ್ಯದ್ ಅಹ್ಮದ್ ಖಾನ್

ಬಹುತೇಕ ಮುಸ್ಲಿಮರು ಪಾಶ್ಚಾತ್ಯ ಶಿಕ್ಷಣವನ್ನು ಸಂಶಯದಿಂದ ನೋಡುತ್ತಿದ್ದರು ಮತ್ತು ತಮ್ಮ ಧರ್ಮ ಹಿತಾಸಕ್ತಿಗೆ ಮಾರಕವೆಂದು ನಂಬಿದ್ದರು. ಆರಂಭದಲ್ಲಿ ನವಾಬ್ ಅಬ್ದುಲ್ ಲತೀಫರು 1863ರಲ್ಲಿ 'ಮಹಮಡನ್ ಲಿಟರರಿ ಸೊಸೈಟಿ' ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಮುಸ್ಲಿಮರಲ್ಲಿ ಇಂಗ್ಲಿಷ್ ಶಿಕ್ಷಣ ವಿಸ್ತರಿಸಲು ಪ್ರಯತ್ನಿಸಿದರು. ಜೊತೆಗೆ ಹಿಂದೂಮುಸ್ಲಿಮರ ನಡುವೆ ಸಾಮರಸ್ಯ ತರುವ ಪ್ರಯತ್ನ ಮಾಡಿದರು. ಈ ಪ್ರಯತ್ನಕ್ಕೆ ಚಳವಳಿಯ ಸ್ವರೂಪ ನೀಡಿದವರು ಸರ್ ಸಯ್ಯದ್ ಅಹ್ಮದ್ ಖಾನ್. 1817ರಲ್ಲಿ ದಿಲ್ಲಿಯಲ್ಲಿ ಜನಿಸಿದ ಇವರು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಲ್ಲಿ ನ್ಯಾಯಾಂಗ ಅಧಿಕಾರಿಯಾಗಿ ನೇಮಕಗೊಂಡರು. ತನ್ನ ಸಮುದಾಯ ಇಂಗ್ಲಿಷ್ ಶಿಕ್ಷಣದಿಂದ ವಂಚಿತರಾಗಿ ಆರ್ಥಿಕ ಹಾಗೂ ಸಾಮಾಜಿಕ ಅವಕಾಶಗಳನ್ನು ಕಳೆದುಕೊಂಡಿದ್ದಾರೆ ಎಂದು ಭಾವಿಸಿದರು. ಶಿಕ್ಷಣವನ್ನು ಪಡೆಯುವ ಮೂಲಕ ಸರ್ಕಾರದಲ್ಲಿ ಮುಸ್ಲಿಂ ಸಮುದಾಯ ಸೂಕ್ತ ಪ್ರಾತಿನಿಧ್ಯ ಪಡೆಯಬೇಕೆಂಬುದು ಅವರ ಮಹದಾಸೆಯಾಗಿತ್ತು.

ಅಂತೆಯೇ ಒಬ್ಬ ಸಮಾಜ ಸುಧಾರಕರಾಗಿ ಪರ್ದಾಪದ್ಧತಿ, ಬಹುಪತ್ನಿತ್ವ ಹಾಗೂ ವಿವಾಹ ವಿಚ್ಛೇದನ ಪದ್ಧತಿಗಳನ್ನು ವಿರೋಧಿಸಿದರು. ಇಂಗ್ಲಿಷಿನ ವೈಜ್ಞಾನಿಕ ಮತ್ತು ಸಾಹಿತ್ಯಕ ಕೃತಿಗಳನ್ನು ಉರ್ದುವಿಗೆ ಭಾಷಾಂತರಿಸಲು 'ಟ್ರಾನ್ಸ್‌ಲೇಷನ್ ಸೊಸೈಟಿ'ಯನ್ನು ಪ್ರಾರಂಭಿಸಿದರು. ಅನಂತರದಲ್ಲಿ ಈ ಸಂಸ್ಥೆ 'ಸೈಂಟಿಫಿಕ್ ಸೊಸೈಟಿ' ಎಂದು ನಾಮಕರಣಗೊಂಡಿತು. ವೈಜ್ಞಾನಿಕ ಆಲೋಚನೆಗಳನ್ನು ಮುಸ್ಲಿಮರಲ್ಲಿ ಪ್ರಚಾರ ಪಡಿಸಲು 'ಅಲಿಘರ್ ಇನ್ಸ್‌ಟಿಟ್ಯೂಟ್ ಗೆಝೆಟ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯು ಇಂಗ್ಲಿಷ್ ಮತ್ತು ಉರ್ದು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು.

1875ರಲ್ಲಿ ಮಹಮಡನ್ ಆಂಗ್ಲೊ ಓರಿಯಂಟಲ್ ಕಾಲೇಜನ್ನು ಆರಂಭಿಸಿದರು. ಈ ಸಂಸ್ಥೆಯೇ 1920ರಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು.

© KTBS NOT TO BE REPUBLISHED

## ಶ್ರೀ ನಾರಾಯಣಗುರು

ಶ್ರೀ ನಾರಾಯಣಗುರು ಓರ್ವ ಪ್ರಮುಖ ಸಂತ ಮತ್ತು ಸಮಾಜ ಸುಧಾರಕರಾಗಿ ಪ್ರಸಿದ್ಧಿ ಹೊಂದಿದ್ದಾರೆ. ಅವರು 1854ರಲ್ಲಿ ತಿರುವಾಂಕೂರಿನ 'ಏಳವ' ಸಮುದಾಯದ ಕುಟುಂಬವೊಂದರಲ್ಲಿ ಜನಿಸಿದರು. "ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ" ಎಂಬ ಸಂಸ್ಥೆಯನ್ನು 1903ರಲ್ಲಿ ಸ್ಥಾಪಿಸಿದರು. ಅದರ ಮೂಲಕ ಅವರು ಕೇರಳದ ಏಳವರು ಸೇರಿದಂತೆ ಹಿಂದುಳಿದ ಸಮುದಾಯಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿಗಾಗಿ ಶ್ರಮಿಸಿದರು. ಜಾತಿ ಪದ್ಧತಿ, ಪ್ರಾಣಿಬಲಿಯನ್ನು ವಿರೋಧಿಸಿದರು. ಸಂಸ್ಕೃತ ಶಾಲೆಗಳನ್ನು ತೆರೆದು ಅಲ್ಲಿ ಜಾತಿಮತ ಭೇದರಹಿತವಾಗಿ ಎಲ್ಲರಿಗೂ ಪ್ರವೇಶ ನೀಡಿದರು. ಅವರು ಸುಮಾರು ಮೂವತ್ತು ದೇವಸ್ಥಾನಗಳನ್ನು ನಿರ್ಮಿಸಿದರು. ಕೇರಳದ ಅಸ್ಪೃಶ್ಯರೂ ಸೇರಿದಂತೆ ಎಲ್ಲಾ ಜಾತಿಯವರಿಗೂ ಪ್ರವೇಶ ಕಲ್ಪಿಸಿದರು. ದೇವಾಲಯಗಳಲ್ಲಿ ಎಲ್ಲ ಮತಧರ್ಮಗಳ ಗ್ರಂಥಗಳನ್ನು ಒಳಗೊಂಡ ಉತ್ತಮ ಗ್ರಂಥಾಲಯ ಇರಬೇಕೆಂದು ಬಯಸಿದರು. ಶ್ರೀ ನಾರಾಯಣಗುರು ಅವರ ಆಶಯವು ಈ ಹೇಳಿಕೆಯಲ್ಲಿ ವ್ಯಕ್ತವಾಗುತ್ತದೆ: "ಒಬ್ಬ ದೇವರು, ಒಂದು ಧರ್ಮ ಮತ್ತು ಒಂದು ಜಾತಿ" (One God, One Religion and One Caste). ಇವರ ಪ್ರಭಾವ ಕರ್ನಾಟಕದ ಮೇಲೂ ಉಂಟಾಗಿರುವುದನ್ನು ಗಮನಿಸಬಹುದು. ನಾರಾಯಣಗುರು ಅವರು 1928ರಲ್ಲಿ ನಿಧನರಾದರು.



ಶ್ರೀ ನಾರಾಯಣಗುರು

@KTBS NOT TO BE REPUBLISHED

**ಚಟುವಟಿಕೆ :**

ಶ್ರೀ ನಾರಾಯಣಗುರುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕಿರಿ.

## ಅಭ್ಯಾಸಗಳು

**I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

1 'ಭಾರತದ ಪುನರುಜ್ಜೀವನ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ?

2 ಮಹಾದೇವ ಗೋವಿಂದ ರಾನಡೆ ಯಾರು?

3 ಸತ್ಯಶೋಧಕ ಸಮಾಜದ ಸ್ಥಾಪಕರು ಯಾರು?

4 "ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ". ಇದು ಯಾರ ಕರೆಯಾಗಿತ್ತು?

5 ಡಾ. ಆ್ಯನಿ ಬೆಸೆಂಟ್ ಯಾರು?

6 ಅಲಿಘರ್ ಚಳವಳಿಯ ನೇತಾರ ಯಾರಾಗಿದ್ದರು?

7 ಶ್ರೀ ನಾರಾಯಣಗುರು ಸ್ಥಾಪಿಸಿದ ಸಂಸ್ಥೆ ಯಾವುದು?

**II ಟಿಪ್ಪಣಿ ಬರೆಯಿರಿ.**

1 ಸ್ವಾಮಿ ವಿವೇಕಾನಂದ

2 ಸ್ವಾಮಿ ದಯಾನಂದ ಸರಸ್ವತಿ

3 ಸರ್ ಸಯ್ಯದ್ ಅಹ್ಮದ್ ಖಾನ್

4 ಶ್ರೀ ನಾರಾಯಣಗುರು

**III ಚರ್ಚಿಸಿ.**

"ಸ್ತ್ರೀಯರ ಉದ್ಧಾರ ನಮ್ಮ ರಾಷ್ಟ್ರದ ಉದ್ಧಾರ". ಸ್ವಾಮಿ ವಿವೇಕಾನಂದರ ಈ ಮಾತು ಇಂದಿಗೂ ಪ್ರಸ್ತುತವೇ? ಗುಂಪಾಗಿ ಚರ್ಚಿಸಿರಿ.



**ಚಟುವಟಿಕೆ**

ಮಹಾದೇವ ಗೋವಿಂದ ರಾನಡೆ, ಜ್ಯೋತಿಬಾ ಫುಲೆ, ರಾಜಾ ರಾಮ ಮೋಹನ ರಾಮ್, ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದ ಸರಸ್ವತಿ, ಸರ್ ಸಯ್ಯದ್ ಅಹ್ಮದ್ ಖಾನ್ ಮತ್ತು ಶ್ರೀ ನಾರಾಯಣಗುರು ಇವರ ಜೀವನ ಚರಿತ್ರೆಯನ್ನು ಓದಿರಿ. (ನೋಡಿ: ಭಾರತಭಾರತಿ ಪುಸ್ತಕ ಮಾಲೆ)

NOT TO BE REPUBLISHED @KTBS

| ಅಧ್ಯಾಯ 15 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857–58) |
|---|---|

Q6N8U3

**ಪಾಠದ ಪರಿಚಯ**

ಆಧುನಿಕ ಭಾರತದ ಇತಿಹಾಸದಲ್ಲಿ 1857ರ ಸಂವತ್ಸರವು ಒಂದು ಪ್ರಮುಖ ಐತಿಹಾಸಿಕ ಮೈಲಿಗಲ್ಲಾಗಿದೆ. ಬ್ರಿಟಿಷರು 1857ರ ಐತಿಹಾಸಿಕ ಘಟನೆಯನ್ನು ಕೇವಲ ಸಿಪಾಯಿಗಳ ದಂಗೆ ಎಂದು ಪರಿಗಣಿಸಿದರೆ, ಭಾರತೀಯ ರಾಷ್ಟ್ರೀಯವಾದಿಗಳು ಗಟ್ಟಿದನಿಯಲ್ಲಿ ಇದನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಸಾರಿದರು. ಇದು ಮೂಲತಃ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನಡೆದ ಮಹಾಹೋರಾಟವಾಗಿತ್ತು. ಸಿಪಾಯಿಗಳು ಮತ್ತು ನಾಗರಿಕರು ಇಬ್ಬರೂ ಸಾಮ್ರಾಜ್ಯಶಾಹಿ ದೊರೆಗಳನ್ನು ಕಿತ್ತೊಗೆಯಲು ಬಯಸಿದರು. ಪ್ರಸ್ತುತ ಪಾಠದಲ್ಲಿ ಈ ಘಟನೆಯ ಕಾರಣಗಳು, ಗತಿ ಮತ್ತು ಪರಿಣಾಮಗಳನ್ನು ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1 1857ರ ಮಹಾದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಅಂಶಗಳನ್ನು ಅರಿಯುವುದು.

2 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ನಡೆಸಿದ ಪ್ರಮುಖ ನಾಯಕರ ಹೋರಾಟವನ್ನು ಸ್ಮರಿಸುವುದು.

3 ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.

© KTBS NOT TO BE REPUBLISHED

## 1857ರ ಮಹಾದಂಗೆಯ ಸ್ವರೂಪ

ಬ್ರಿಟಿಷ್ ಇತಿಹಾಸಕಾರರು 1857ರ ಭಾರತೀಯರ ಹೋರಾಟವನ್ನು ಕೇವಲ ಸಿಪಾಯಿಗಳ ದಂಗೆ ಎಂದು ಪರಿಗಣಿಸಿದರು. ಆದರೆ ಭಾರತದ ರಾಷ್ಟ್ರೀಯ ಇತಿಹಾಸಕಾರರು ಅದನ್ನು ಜನತೆಯ ಮಹಾನ್ ಬಂಡಾಯವೆಂದು ಸಾರಿದರಲ್ಲದೆ, 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದರು.

ಈ ಹೋರಾಟವನ್ನು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರಥಮ ಯುದ್ಧವೆಂದು ಕರೆದವರಲ್ಲಿ ವಿನಾಯಕ ದಾಮೋದರ ಸಾವರ್ಕರ್ ಮೊದಲಿಗರು. ಪಟ್ಟಾಭಿ ಸೀತಾರಾಮಯ್ಯ ಅವರು ಕೂಡ ಇದನ್ನು ಭಾರತದ ಮೊದಲ ಸ್ವಾತಂತ್ರ್ಯ ಸಮರವೆಂದು ಸಾರಿದರು. ಸೈನಿಕ ದಂಗೆ ಅಲ್ಪಕಾಲದಲ್ಲೇ ಜನತೆಯ ಬಂಡಾಯದ ಸ್ವರೂಪವನ್ನು ಪಡೆದುಕೊಂಡಿತೆಂದು ಜವಾಹರಲಾಲ್ ನೆಹರು ಅಭಿಪ್ರಾಯ ಪಟ್ಟಿದ್ದಾರೆ. ಅದು ದೇಶದ ಬಹುತೇಕ ಜನಸಮುದಾಯಗಳು ಒಂದಾಗಿ ನಡೆಸಿದ ಹೋರಾಟವಾಗಿತ್ತು.

1857ರ ಹೋರಾಟವು ಭಾರತದ ಇತಿಹಾಸದಲ್ಲಿ ಹೊಸ ರಾಜಕೀಯ ಪ್ರಜ್ಞೆಯನ್ನು ಸೃಷ್ಟಿಸಿತು. ಇದರ ಫಲವಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳು ವಿವಿಧ ರೂಪಗಳಲ್ಲಿ ಹುಟ್ಟಿ ಬೆಳೆದವು. ಈ ಹೋರಾಟಗಳಲ್ಲಿ ಭಾಗವಹಿಸಿ ಹುತಾತ್ಮರಾದವರು ಬಹುಬೇಗ ದೇಶದಲ್ಲಿ ಮನೆಮಾತಾದರು. ಅವರ ತ್ಯಾಗ ಬಲಿದಾನಗಳನ್ನು ನಾವು ನಿರಂತರವಾಗಿ ಸ್ಮರಿಸಿಕೊಳ್ಳಬೇಕಾಗಿದೆ.

## ಕಾರಣಗಳು

ಬ್ರಿಟಿಷರ ದೀರ್ಘಾವಧಿಯ ಆಡಳಿತದಿಂದ ಭಾರತದ ಆರ್ಥಿಕ ವ್ಯವಸ್ಥೆಯು ದುರ್ಬಲಗೊಂಡಿತ್ತು. ವಿವಿಧ ವರ್ಗದ ಜನರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದರು. ರೈತರು ತೆರಿಗೆಗಳ ಭಾರಕ್ಕೆ ಕುಸಿದಿದ್ದರು. ಕರಕುಶಲ ಕೈಗಾರಿಕೆಗಳು ನಾಶವಾಗತೊಡಗಿ, ಪರಂಪರಾಗತವಾಗಿ ನಂಬಿಕೊಂಡು ಬಂದಿದ್ದ ವೃತ್ತಿಗಳು ತಮ್ಮ ಪ್ರಸ್ತುತತೆ ಅಥವಾ ಶಕ್ತಿಯನ್ನು ಕಳೆದುಕೊಂಡು ಜನರು ಬೀದಿಪಾಲಾದರು. ಇದಕ್ಕೆ ಪ್ರೇರಣೆಯಾದ ಅಂಶಗಳನ್ನು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ಮತ್ತು ಸೈನಿಕ ಎಂದು ವಿಂಗಡಿಸಬಹುದು. ಇವುಗಳಲ್ಲಿ ಕೆಲವು ಪ್ರತ್ಯಕ್ಷ ಕಾರಣವಾದರೆ, ಮತ್ತೆ ಕೆಲವು ಪೂರಕ ಕಾರಣಗಳಾಗಿವೆ.

### 1 ರಾಜಕೀಯ ಕಾರಣ

ಬ್ರಿಟಿಷರ ದಿಗ್ವಿಜಯಗಳು ಮತ್ತು ಉದ್ದೇಶಪೂರ್ವಕ ಆಕ್ರಮಣ ನೀತಿ ಇಲ್ಲಿಯ ಆಳುವ ವರ್ಗ ಮತ್ತು ಜನತೆಯ ಭಾವನೆಗಳಿಗೆ ತೀವ್ರ ಆಘಾತವನ್ನುಂಟುಮಾಡಿತು. ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿ ಮತ್ತು ಲಾರ್ಡ್ ಡಾಲ್‌ಹೌಸಿಯು



ಬಹಾದೂರ್ ಷಹ

ಆಕ್ರಮಣಗಳು ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯಿಂದಾಗಿ ಅನೇಕ ಮಹಾರಾಜರು ಮತ್ತು ನವಾಬರು ಪದಚ್ಯುತಿಗೊಳ್ಳುವಂತಾಯಿತು. ಸಾತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ಅವಧ್ ಇವೇ ಮೊದಲಾದ ಪ್ರದೇಶಗಳು ಡಾಲ್‌ಹೌಸಿಯಿಂದ ಆಕ್ರಮಿಸಲ್ಪಟ್ಟವು. ಈ ಸಂಕ್ರಮಣ ಸ್ಥಿತಿಯ ರಾಜಕೀಯ ಒತ್ತಡಗಳಿಂದ ಮೊಗಲ್ ರಾಜ ಬಹಾದೂರ್‌ಷಹ ರಾಜಕೀಯವಾಗಿ ಕೇವಲ ನಾಮಮಾತ್ರ ಚಕ್ರವರ್ತಿಯಾದನು. ಕೆಲವು ರಾಜರ ವಿಶ್ರಾಂತಿ ವೇತನ ತಡೆಹಿಡಿಯಲಾಯಿತು. ರಾಜರ ಬಿರುದುಗಳು ರದ್ದಾದವು.

@KTBS NOT TO BE REPUBLISHED

## 2 ಆಡಳಿತಾತ್ಮಕ ಕಾರಣ

ಬ್ರಿಟಿಷರು ಎಲ್ಲಾ ನಾಗರಿಕ ಮತ್ತು ಸೈನಿಕ ಉನ್ನತ ಹುದ್ದೆಗಳನ್ನು ಯೂರೋಪಿಯನ್ನರಿಗೆ ಮೀಸಲು ಇಡುವ ಉದ್ದೇಶದಿಂದ ತಮ್ಮ ಹೊಸ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು. ಈ ವ್ಯವಸ್ಥೆಯ ಸ್ವರೂಪವು ಜನಸಾಮಾನ್ಯರಿಗೆ ಸ್ಪಂದಿಸುವಲ್ಲಿ ವಿಫಲಗೊಂಡಿದ್ದನ್ನು ಬಯಲುಗೊಳಿಸಿತು. ಆಡಳಿತದಲ್ಲಿ ಮಧ್ಯವರ್ತಿಗಳ ಪಾತ್ರ ಪ್ರಮುಖವಾಗಿತ್ತು. ಕಾನೂನಿನ ಆಳ್ವಿಕೆಯು ಸಾಮಾಜಿಕ ಶ್ರೇಣಿ ವ್ಯವಸ್ಥೆಯ ಕುಸಿತಕ್ಕೆ ದಾರಿಮಾಡಿಕೊಟ್ಟಿತು. ಪರ್ಷಿಯನ್ ಭಾಷೆಗೆ ಬದಲಾಗಿ ಇಂಗ್ಲಿಷ್ ನ್ಯಾಯಾಲಯದ ಭಾಷೆಯಾಗಿದ್ದು ಜನತೆಗೆ ಮತ್ತು ಭಾರತೀಯ ಆಳುವ ವರ್ಗಕ್ಕೆ ಸರಿಹೊಂದಲಿಲ್ಲ.

## 3 ಆರ್ಥಿಕ ಕಾರಣ

ಬ್ರಿಟಿಷರು ತಮ್ಮ ಲಾಭಕ್ಕಾಗಿ ಭಾರತದ ಆರ್ಥಿಕ ಸಂಪನ್ಮೂಲಗಳು ಮತ್ತು ಸಂಪತ್ತನ್ನು ದೋಚುವುದಕ್ಕಾಗಿ ತಮ್ಮ ರಾಜಕೀಯ ಅಧಿಕಾರವನ್ನು ಬಳಸಿಕೊಂಡರು. ಬ್ರಿಟಿಷರ ವ್ಯಾಪಾರಿ ಹಿತಾಸಕ್ತಿಯಿಂದಾಗಿ ಗುಡಿ ಕೈಗಾರಿಕೆ ಮತ್ತು ಇನ್ನಿತರ ಸ್ಥಳೀಯ ಕೈಗಾರಿಕೆಗಳು ನಾಶ ಹೊಂದಿದವು. ಭೂಕಂದಾಯ ನೀತಿಯು ಅತ್ಯಂತ ಶೋಷಣಾತ್ಮಕವಾಗಿತ್ತು. ಅನೇಕ ತಾಲ್ಲೂಕುದಾರರ ಮತ್ತು ಜಮೀನ್ದಾರರ ಸ್ಥಾನಮಾನ ಮತ್ತು ವರಮಾನದ ಮೂಲವನ್ನು ಕಿತ್ತುಕೊಳ್ಳಲಾಯಿತು. ದೊಡ್ಡ ಪ್ರಮಾಣದ ಸಂಪತ್ತಿನ ಹೊರಹರಿವು ಸೃಷ್ಟಿಯಾಯಿತು. ವ್ಯವಸಾಯದ ವಾಣಿಜ್ಯೀಕರಣದಿಂದಾಗಿ ರೈತರ ಆರ್ಥಿಕ ಶಕ್ತಿಯು ಕ್ಷಯಿಸಿತು. ತೀವ್ರ ಬರಗಾಲಗಳು ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡವು. ಈ ಎಲ್ಲಾ ಅಂಶಗಳು ಭಾರತವನ್ನು ಬಡತನಕ್ಕೆ ತಳ್ಳಿದವು.

NOT TO BE REPUBLISHED @KTBS

## 4 ಸಾಮಾಜಿಕ ಮತ್ತು ಧಾರ್ಮಿಕ ಕಾರಣ

ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳು ಸಹ ದಂಗೆಯ ಸ್ಫೋಟಕ್ಕೆ ಕಾರಣವಾದವು. ಇಂಗ್ಲಿಷರು ತಮ್ಮ ಜನಾಂಗೀಯ ಶ್ರೇಷ್ಠತೆಯ ಅಮಲಿನಲ್ಲಿದ್ದರು. ಅವರು "ಬಿಳಿಯರ ಮೇಲಿನ ಹೊರೆ" ಸಿದ್ಧಾಂತವನ್ನು ಆಚರಿಸುತ್ತಿದ್ದರು. ಭಾರತೀಯರನ್ನು ನಾಗರೀಕರನ್ನಾಗಿ ಮಾಡಲೆಂದೇ ಬಂದಿದ್ದೇವೆಂದು ಹೇಳತೊಡಗಿದರು. ಅವರು ಭಾರತೀಯರನ್ನು ಸಂಸ್ಕೃತಿ ಮತ್ತು ನಾಗರಿಕತೆಯ ಗಂಧವಿಲ್ಲದ ಅನಾಗರಿಕರು ಎಂದು ವರ್ಣಿಸಿದರು. ಭಾರತೀಯರನ್ನು ಅವರು "ಹಂದಿ", "ಕರಿ ಮನುಷ್ಯ"ರು ಇತ್ಯಾದಿ ಪದಗಳಿಂದ ಸಂಬೋಧಿಸುತ್ತಿದ್ದರು. ಯೂರೋಪಿಯನ್ನರ ಮೇಲುಸ್ತುವಾರಿಯಲ್ಲಿದ್ದ

ಹೋಟೇಲ್ ಮತ್ತು ಕ್ಲಬ್‌ಗಳಿಗೆ ಭಾರತೀಯರಿಗೆ ಪ್ರವೇಶವಿರಲಿಲ್ಲ. "ನಾಯಿಗಳಿಗೆ ಮತ್ತು ಭಾರತೀಯರಿಗೆ ಪ್ರವೇಶ ನಿಷಿದ್ಧ" ಎಂಬ ನಾಮಫಲಕಗಳನ್ನು ಅಲ್ಲಿ ತೂಗುಹಾಕಲಾಗಿತ್ತು. ಮೇಲಾಗಿ ಸತಿಪದ್ಧತಿ ಮತ್ತು ಬಾಲ್ಯವಿವಾಹ ನಿಷೇಧ, ವಿಧವಾ ಪುನರ್‌ವಿವಾಹಕ್ಕೆ ಪ್ರೋತ್ಸಾಹ ಇವೆಲ್ಲವುಗಳಿಂದ ಹಿಂದುಗಳು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಿಟಿಷರು ಮಾಡುತ್ತಿರುವ ಹಸ್ತಕ್ಷೇಪ ಎಂದು ಭಾವಿಸಿದರು. ಅಷ್ಟೇ ಅಲ್ಲದೆ ಹೊಸ ರೈಲುಮಾರ್ಗ ಮತ್ತು ಟೆಲಿಗ್ರಾಫ್ ತಂತಿಗಳ ನಿರ್ಮಾಣ ಕಾರ್ಯವು ಬ್ರಿಟಿಷರನ್ನು ಅನುಮಾನದಿಂದ ನೋಡುವಂತಾಯಿತು.

'ಬಿಳಿಯರ ಮೇಲಿನ ಹೊರೆ' ಎಂದರೆ ಭಾರತೀಯರು ಅನಾಗರಿಕರು. ಅವರನ್ನು ನಾಗರಿಕರನ್ನಾಗಿ ಮಾಡಲು ಯುರೋಪಿಯನ್ನರು ಬಂದಿದ್ದಾರೆ. ಅನಾಗರಿಕರನ್ನು ನಾಗರಿಕರನ್ನಾಗಿಸುವುದು ಬಿಳಿಯರ ಮೇಲಿನ ಜವಾಬ್ದಾರಿ. ಇದೊಂದು ವಸಾಹತುಶಾಹಿಯ ನಾಜೂಕಿನ ತಂತ್ರವಾಗಿತ್ತು. ಈ ಸಿದ್ಧಾಂತ ಕೊಟ್ಟವನು ಕವಿ ರುಡ್‌ಯಾರ್ಡ್ ಕಿಪ್ಲಿಂಗ್.

ಮಿಶನರಿಗಳ ಕ್ರೈಸ್ತ ಧರ್ಮಕ್ಕೆ ಮತಾಂತರ ಪ್ರಯತ್ನಗಳಿಂದ ಅನೇಕ ಭಾರತೀಯರು ಭಯಗೊಂಡರು. ಕ್ರೈಸ್ತ ಮತಪ್ರಚಾರಕರು ಬಹಿರಂಗವಾಗಿಯೇ ಹಿಂದೂ ಮತ್ತು ಇಸ್ಲಾಂ ಧಾರ್ಮಿಕ ಸಿದ್ಧಾಂತಗಳನ್ನು ಟೀಕಿಸತೊಡಗಿದರು. ಅವರು ಶಾಲೆ, ಆಸ್ಪತ್ರೆ, ಸೆರೆಮನೆ ಮತ್ತು ಮಾರುಕಟ್ಟೆ ಸ್ಥಳಗಳಲ್ಲಿ ಮತಪ್ರಚಾರ ಮಾಡುವುದನ್ನು ಕಾಣಬಹುದಾಗಿತ್ತು. "ಧಾರ್ಮಿಕ ಅನರ್ಹತೆಯ ಕಾಯಿದೆ"ಯ ಮೂಲಕ ಹಿಂದೂ ಪದ್ಧತಿಗಳನ್ನು ಪರಿಷ್ಕರಿಸಲಾಯಿತು. ಅದರ ಪ್ರಕಾರ ಮತಾಂತರಗೊಂಡ ಮಗನನ್ನು ಪಿತ್ರಾರ್ಜಿತ ಆಸ್ತಿಯ ಮೇಲಿನ ಹಕ್ಕಿನಿಂದ ಹೊರಗಿಡುವಂತಿರಲಿಲ್ಲ. ಇದು ಕ್ರೈಸ್ತ ಧರ್ಮಿಯರನ್ನಾಗಿಸಲು ಪ್ರೋತ್ಸಾಹಿಸುವ ತಂತ್ರ ಎಂದು ವಿದ್ಯಾವಂತರು ಅರ್ಥೈಸಿಕೊಂಡರು. ಅನೇಕ ಅನಾಥರನ್ನು ಕ್ರೈಸ್ತರನ್ನಾಗಿ ಮತಾಂತರಿಸಲಾಯಿತು.

### 5 ಸೈನಿಕ ಕಾರಣ

ಭಾರತೀಯ ಸೈನಿಕರಲ್ಲಿ ಅನೇಕ ಅಸಂತೃಪ್ತಿಗಳಿದ್ದವು. ಸೈನಿಕರು ಪಾರಂಪರಿಕವಾಗಿ ಬಳಸುತ್ತಿದ್ದ ಧಾರ್ಮಿಕ ಚಿಹ್ನೆ ಮತ್ತು ಪೇಟಗಳನ್ನು ಧರಿಸಬಾರದೆಂಬ ನಿಷೇಧಕ್ಕೊಳಪಟ್ಟಿದ್ದರು. ಭಾರತೀಯ ಸೈನಿಕರಿಗೆ ಅತ್ಯಂತ ಕಡಿಮೆ ವೇತನ ಇತ್ತು ಮತ್ತು ಮುಂಬಡ್ತಿಯ ಅವಕಾಶಗಳು ಇಲ್ಲದಾಗಿದ್ದವು. ಬ್ರಿಟಿಷ್ ಸೈನಿಕರಿಗೆ ಮಾತ್ರ ಹೆಚ್ಚಿನ ಸಂಬಳ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗಿತ್ತು. ಭಾರತೀಯ ಸೈನಿಕರನ್ನು ಅತ್ಯಂತ ದೂರ ಪ್ರದೇಶಗಳಿಗೆ ಕಾರ್ಯನಿಮಿತ್ತ ಹೆಚ್ಚುವರಿ ವೇತನ ನೀಡದೆ ನಿಯೋಜಿಸಲಾಗುತ್ತಿತ್ತು. ಲಾರ್ಡ್ ಕ್ಯಾನಿಂಗನ "ಸಾಮಾನ್ಯ ಸೇನಾಸೇವಾ ಕಾಯಿದೆ"ಯ ಪ್ರಕಾರ ಎಲ್ಲಾ ಸೈನಿಕರು ಬ್ರಿಟಿಷ್ ಆದೇಶದಂತೆ ಎಲ್ಲೆಂದರಲ್ಲಿ ಕಾರ್ಯನಿಮಿತ್ತ ತೆರಳಬೇಕಿತ್ತು.

©KTBS NOT TO BE REPUBLISHED

## 6 ತಕ್ಷಣದ ಕಾರಣ

ಜನಸಮೂಹದ ದಂಗೆಗೆ 1857ರ ಸನ್ನಿವೇಶ ಪರಿಪಕ್ವವಾಗಿತ್ತು. ಅವರಲ್ಲಿ ಕಿಚ್ಚೆಬ್ಬಿಸಲು ಒಂದೇ ಒಂದು ಕಿಡಿ ಸಾಕಾಗಿತ್ತು. 1857ರಲ್ಲಿ ಒಂದು ಹೊಸ ಮಾದರಿಯ ಬಂದೂಕನ್ನು (ಎನ್‌ಫೀಲ್ಡ್ ರೈಫಲ್) ಸೇನೆಯಲ್ಲಿ ತೊಡಗಿಸಿದ್ದು ಸಿಪಾಯಿ ದಂಗೆಗೆ ತಕ್ಷಣದ ಕಾರಣವಾಯಿತು. ಎನ್‌ಫೀಲ್ಡ್ ಬಂದೂಕುಗಳಿಗೆ ತೋಟಾ (ಕಾರ್ಟ್‌ರಿಡ್ಜ್)ಗಳನ್ನು ತುಂಬುವ ಮುನ್ನ ಅದಕ್ಕೆ ಹೊದಿಸಿದ ಕಾಗದವನ್ನು ಹಲ್ಲಿನಿಂದ ಕಚ್ಚಿ ಹರಿಯಬೇಕಿತ್ತು. ಈ ಕಾಗದಕ್ಕೆ ಹಂದಿ ಮತ್ತು ಗೋವಿನ ಕೊಬ್ಬು ಬಳಸಲಾಗಿದೆ ಎಂಬ ಸುದ್ದಿ ಕಾಳ್ಗಿಚ್ಚಿನಂತೆ ಸೈನಿಕರಲ್ಲಿ ಹಬ್ಬಿತು. ಇದು ಮುಸ್ಲಿಂ ಮತ್ತು ಹಿಂದೂ ಸಿಪಾಯಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡುವುದಾಗಿತ್ತು. ಯಾವ ಸೈನಿಕರು ಅವುಗಳನ್ನು ಬಳಸಲು ನಿರಾಕರಿಸಿದರೋ ಅಂಥವರು ಇಂಗ್ಲಿಷರಿಂದ ಶಿಕ್ಷೆಗೊಳಗಾದರು.

## ದಂಗೆಯ ಗತಿ


ಮಂಗಲ್‌ಪಾಂಡೆ

ಮೀರತ್‌ನಲ್ಲಿ ದಂಗೆಯು 1857ರ ಮೇ 10ರಂದು ಆರಂಭವಾಯಿತು. ಆನಂತರ ಉತ್ತರ ಭಾರತದ ಪ್ರಾಂತ್ಯಗಳಾದ್ಯಂತ ವ್ಯಾಪಕವಾಗಿ ತೀವ್ರಗೊಂಡು ಬಲಯುತವಾಯಿತು. ಮೀರತ್‌ನಲ್ಲಿ ದಂಗೆ ಸ್ಫೋಟಗೊಳ್ಳುವ ಮೊದಲೇ ಬ್ಯಾರಕ್‌ಪುರದ (ಬಂಗಾಲ) ಭಾರತೀಯ ಸಿಪಾಯಿ ಮಂಗಲ್‌ಪಾಂಡೆ ಕೊಬ್ಬು ಸವರಿದ ಬಂದೂಕನ್ನು ಬಳಸಲು ತಿರಸ್ಕರಿಸಿ, ಬಹಿರಂಗವಾಗಿಯೇ ಬ್ರಿಟಿಷ್ ಅಧಿಕಾರಿಯೊಬ್ಬನಿಗೆ ಗುಂಡಿಕ್ಕಿ ಕೊಂದನು. ನಂತರ ಅವನು ಸಹ ಕೊಲ್ಲಲ್ಪಟ್ಟನು. ಮೀರತ್‌ನಲ್ಲಿ ಕಣ್ಣಿಗೆ ಬಿದ್ದ ಪ್ರತಿಯೊಬ್ಬ ಯುರೋಪಿಯನರನ್ನು ಸಿಪಾಯಿಗಳು ಕೊಂದರು. 'ಮಾರೋ ಫರಂಗಿಕೋ' (ಯುರೋಪಿಯನ್ನರನ್ನು ಕೊಲ್ಲಿ) ಎಂದು ಉದ್ರಿಕ್ತರು ಅರಚುತ್ತಾ ದಿಲ್ಲಿಯ ಕಡೆಗೆ ಧಾವಿಸಿದರು. ದಿಲ್ಲಿಯಲ್ಲಿ ಸಿಪಾಯಿಗಳು ವೃದ್ಧ ಮತ್ತು ಶಕ್ತಿಹೀನ ಮೊಗಲ್ ದೊರೆ ಎರಡನೇ ಬಹಾದೂರ್‌ಷಹನನ್ನು ಭಾರತದ ಚಕ್ರವರ್ತಿ ಎಂದು ಘೋಷಣೆ ಮಾಡಿದರು.

@KTBS NOT TO BE REPUBLISHED




*ಮಹಾದಂಗೆಯ ಪ್ರದೇಶಗಳು*

@KTBS NOT TO BE REPUBLISHED

**ಪರಂಗಿ :** ಪರಂಗಿ ಪದವು ಪರ್ಷಿಯನ್ ಮೂಲದ್ದಾಗಿದೆ. ಇದನ್ನು ಉರ್ದು ಮತ್ತು ಹಿಂದಿಗಳಲ್ಲಿ ಯುರೋಪಿಯನ್ನರನ್ನು ಕೀಳಾಗಿ ಸೂಚಿಸಲು ಬಳಸಲಾಗುತ್ತಿತ್ತು.

ಅಲ್ಪಕಾಲದಲ್ಲೇ ದಂಗೆಯು ವ್ಯಾಪಕವಾಗಿ ಹಬ್ಬಿತು. ಕ್ರಾಂತಿಯ ಪ್ರಮುಖ ಕೇಂದ್ರಗಳೆಂದರೆ ದಿಲ್ಲಿ, ಕಾನ್ಪುರ, ಲಕ್ನೋ, ಬರೇಲಿ, ಝಾನ್ಸಿ ಮತ್ತು ಬಿಹಾರದ ಆರಾ.



*ಬ್ರಿಟಿಷರ ವಿರುದ್ಧ ಭಾರತೀಯರ ಹೋರಾಟ*



*ಝಾನ್ಸೀರಾಣಿ ಲಕ್ಷ್ಮೀಬಾಯಿ*

ದಿಲ್ಲಿಯಲ್ಲಿ ಸೇನಾಪತಿ ಬಖ್ತ್‌ಖಾನ್, ಕಾನ್ಪುರದಲ್ಲಿ ನಾನಾ ಸಾಹೇಬ್ ಮತ್ತು ತಾಂತ್ಯಾ ಟೋಪೆ, ಲಕ್ನೋದಲ್ಲಿ ಬೇಗಮ್ ಹಜ್ರತ್ ಮಹಲ್, ಝಾನ್ಸಿಯಲ್ಲಿ ಲಕ್ಷ್ಮೀಬಾಯಿ ಮತ್ತು ಬಿಹಾರದಲ್ಲಿ ಕುಂವರ್ ಸಿಂಗ್‌ರವರ ನೇತೃತ್ವದಲ್ಲಿ ದಂಗೆಗಳು ನಡೆದವು. ಬ್ರಿಟಿಷರು ದಂಗೆಯನ್ನು ಒಂದೊಂದಾಗಿ ದಮನಮಾಡಿದರು. ಬಂಡಾಯವು ಉತ್ತರ ಭಾರತಕ್ಕೆ ಸೀಮಿತವಾಗಿರದೆ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ತಮಿಳನಾಡು, ಕೇರಳ, ಗೋವಾ ಮತ್ತು ಪಾಂಡಿಚೇರಿಗಳಿಗೂ ಹಬ್ಬಿತು. ಕರ್ನಾಟಕದಲ್ಲಿ ಮುಂಡರಗಿ ಭೀಮರಾವ್, ಹಲಗಲಿ ಬೇಡ ಜನಾಂಗದವರು, ಸುರಪುರದ ವೆಂಕಟಪ್ಪ ನಾಯಕ ಮತ್ತು ನರಗುಂದದ ಬಾಬಾಸಾಹೇಬ ಮುಖ್ಯ ನಾಯಕರಾಗಿದ್ದರು. ಉತ್ತರ ಮತ್ತು ದಕ್ಷಿಣ ಭಾರತದ ಎಲ್ಲೆಡೆ ಬಂಡಾಯವು ವ್ಯಾಪಕವಾಗಿ ನಡೆದರೂ ಕೂಡ ಅಲ್ಪ ಸಮಯದೊಳಗೆ ಬ್ರಿಟಿಷರು ದಂಗೆಯನ್ನು ದಮನ ಮಾಡಿದರು.

**ಚಟುವಟಿಕೆ:** ಝಾನ್ಸಿ ರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದಳು ಎಂಬ ಸಂಗತಿಯನ್ನು ಸಂಗ್ರಹಿಸಿರಿ.

© KTBS NOT TO BE REPUBLISHED



ಕುಂವರ್ ಸಿಂಗ್



ನಾನಾ ಸಾಹೇಬ್

## ಫಲಿತಾಂಶಗಳು

ಈ ಹೋರಾಟವು ವಿಫಲಗೊಂಡರೂ ಅದು ದೀರ್ಘಕಾಲೀನ ಪರಿಣಾಮಗಳನ್ನು ಉಂಟುಮಾಡಿತು. ಭಾರತದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರಿತು. ಈ ಹೋರಾಟದ ಪರಿಣಾಮವಾಗಿ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯಗೊಂಡು ಅದರ ಕೈಯಲ್ಲಿದ್ದ ಭಾರತದ ಆಳ್ವಿಕೆಯನ್ನು ಬ್ರಿಟಿಷ್ ರಾಣಿ ವಹಿಸಿಕೊಂಡಳು. 1858ರಲ್ಲಿ ಬ್ರಿಟನ್ನಿನ ರಾಣಿ ವಿಕ್ಟೋರಿಯಾ ಒಂದು "ಘೋಷಣೆ"ಯನ್ನು ಹೊರಡಿಸಿದಳು. ಈ ಘೋಷಣೆಯು ಭಾರತೀಯರ ಹಕ್ಕುಗಳು, ಸಂಪ್ರದಾಯಗಳು ಮತ್ತು ಪದ್ಧತಿಗಳನ್ನು ಗೌರವಿಸುವುದಾಗಿ ಭರವಸೆ ನೀಡಿತು. ಅದು ಜನರ ಧಾರ್ಮಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪಮಾಡುವುದಿಲ್ಲವೆಂದು ಸ್ಪಷ್ಟಪಡಿಸಿತು.

1857–58ರ ಹೋರಾಟವು ಮುಂದೆ ಆಧುನಿಕ ರಾಷ್ಟ್ರೀಯ ಚಳವಳಿಯ ಉದಯಕ್ಕೆ ನಾಂದಿ ಹಾಡಿತು. ಇದು ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ನಿರಂತರ ಸ್ಫೂರ್ತಿಯ ಮೂಲವಾಗಿ ಪರಿಣಮಿಸಿತು.

NOT TO BE REPUBLISHED @KTBS

## ಅಭ್ಯಾಸಗಳು

### I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1 1857ರ ಹೋರಾಟದ ತಕ್ಷಣದ ಕಾರಣ ಯಾವುದಾಗಿತ್ತು?

2 ಮಂಗಲ ಪಾಂಡೆ ಯಾರು?

3 1857ರ ಮಹಾದಂಗೆಯ ಯಾವುದಾದರೂ ಒಂದು ಪರಿಣಾಮವನ್ನು ತಿಳಿಸಿರಿ.

4 1857ರ ಹೋರಾಟವನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಮೊದಲು ಯಾರು ಕರೆದರು?

## II ಟಿಪ್ಪಣಿ ಬರೆಯಿರಿ.

1 ಸ್ವಾತಂತ್ರ್ಯ ಸಂಗ್ರಾಮದ ಕಾರಣಗಳು

2 ಮಂಗಲ್ ಪಾಂಡೆ

3 ಝಾನ್ಸಿ ರಾಣಿ ಲಕ್ಷ್ಮೀಬಾಯಿ

4 ಎರಡನೇ ಬಹಾದೂರ್‌ಷಹ



### ಚಟುವಟಿಕೆ

ಮಂಗಲ್ ಪಾಂಡೆ, ಝಾನ್ಸಿ ಲಕ್ಷ್ಮೀಬಾಯಿ, ತಾಂತ್ಯಾ ಟೋಪೆ, ನಾನಾ ಸಾಹೇಬ್, ಬೇಗಮ್ ಹಜ್ರತ್ ಮಹಲ್, ಕುಂವರ್ ಸಿಂಗ್, ಮುಂಡರಗಿ ಭೀಮರಾವ್ ಮುಂತಾದ ಕ್ರಾಂತಿಕಾರರ ಜೀವನ ಕಥನವನ್ನು ಓದಿರಿ. (ನೋಡಿ: ಭಾರತಭಾರತಿ ಪುಸ್ತಕ ಮಾಲೆ).

©KTBS NOT TO BE REPUBLISHED

ಅಧ್ಯಾಯ 16

# ಸ್ವಾತಂತ್ರ್ಯ ಸಂಗ್ರಾಮ

J7K6C7

## 16.1 ಸ್ವಾತಂತ್ರ್ಯ ಚಳವಳಿ (1885–1919)

**ಪಾಠದ ಪರಿಚಯ**

ಬ್ರಿಟಿಷರ ಶೋಷಣಾತ್ಮಕ ನೀತಿಗಳಿಂದಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ರಾಷ್ಟ್ರೀಯತೆ ಚಿಗುರೊಡೆಯಿತು. ಇಂಗ್ಲಿಷ್ ಶಿಕ್ಷಣ ಪಡೆದ ಹೊಸ ವಿದ್ಯಾವಂತ ವರ್ಗವು ಬ್ರಿಟಿಷ್ ಆಳ್ವಿಕೆಯ ನಿಜವಾದ ಉದ್ದೇಶವನ್ನು ಅರ್ಥಮಾಡಿಕೊಂಡಿತು. ರೈತಾಪಿಗಳು, ಆದಿವಾಸಿಗಳು ಮತ್ತಿತರ ವರ್ಗಗಳು ಸಹ ಬ್ರಿಟಿಷರಿಂದ ತೀವ್ರ ಸಂಕಷ್ಟಕ್ಕೊಳಗಾಗಿದ್ದು, ಬ್ರಿಟಿಷರ ವಿರುದ್ಧ ತೀವ್ರ ಪ್ರತಿಭಟನೆಗಾಗಿ ಮಿಡಿಯುತ್ತಿದ್ದವು. ಈ ಪಾಠದಲ್ಲಿ ಭಾರತೀಯ ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾದ ಪ್ರಮುಖ ಅಂಶಗಳು, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆ ಮತ್ತು ರಾಷ್ಟ್ರೀಯ ಚಳವಳಿಯಲ್ಲಿ ಮಂದಗಾಮಿಗಳ ಮತ್ತು ತೀವ್ರಗಾಮಿಗಳ ಪಾತ್ರ ಇವೇ ಮೊದಲಾದ ಸಂಗತಿಗಳನ್ನು ನಿರೂಪಿಸಲಾಗಿದೆ.

ಮಹಾತ್ಮ ಗಾಂಧೀಜಿಯವರನ್ನು ನಾವು ಪ್ರೀತಿಯಿಂದ 'ಬಾಪು' ಎಂದು ಸ್ಮರಿಸಿಕೊಳ್ಳುತ್ತೇವೆ. ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಅವರು ಮಹಾನ್ ನಾಯಕರಾಗಿದ್ದರು. ಅಲ್ಲದೆ ಶೋಷಣೆ, ಅಸ್ಪೃಶ್ಯತೆಯ ನಿವಾರಣೆ ಮತ್ತು ಹಿಂದೂ ಮುಸ್ಲಿಂ ಸಾಮರಸ್ಯಕ್ಕಾಗಿ ತಮ್ಮನ್ನು ಪೂರ್ಣವಾಗಿ ಮುಡಿಪಾಗಿಟ್ಟಿದ್ದರು. ಅವರ ರಾಜಕೀಯ, ಆರ್ಥಿಕ ಚಿಂತನೆಗಳು ಜಗತ್ತಿನಾದ್ಯಂತ ಮನ್ನಣೆ ಪಡೆದಿವೆ. ಅವರ ನೇತೃತ್ವದ ರಾಜಕೀಯ ಹೋರಾಟದ ಈ ಕಾಲಾವಧಿಯನ್ನು 'ಗಾಂಧೀ ಯುಗ' (1919–1947) ಎಂದು ಕರೆಯಲಾಗಿದೆ. ಈ ಪಾಠದಲ್ಲಿ 1919–1947ರ ಕಾಲಾವಧಿಯ ಸ್ವಾತಂತ್ರ್ಯ ಚಳವಳಿಯನ್ನು ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು :**

1 19ನೇ ಶತಮಾನದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗಳಿಗೆ ಕಾರಣವಾದ ಪ್ರಮುಖ ಅಂಶಗಳನ್ನು ಅರಿಯುವುದು.

2 ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆಯ ಹಿನ್ನೆಲೆಯನ್ನು ಅರಿಯುವುದು.

3 ಮಂದಗಾಮಿಗಳು, ತೀವ್ರಗಾಮಿಗಳು ಮತ್ತು ಕ್ರಾಂತಿಕಾರಿಗಳ ತಾತ್ವಿಕ ನಿಲುವು, ನೀತಿಗಳನ್ನು ಅರ್ಥೈಸಿಕೊಳ್ಳುವುದು.

4 "ಒಡೆದು ಆಳುವ ನೀತಿ"ಯ ಮೂಲಕ ಬ್ರಿಟಿಷರು ಹೇಗೆ ಭಾರತವನ್ನಾಳಿದರು ಎಂಬುದನ್ನು ತಿಳಿಯುವುದು.

5 ಭಾರತೀಯ ರಾಷ್ಟ್ರೀಯ ಚಳವಳಿಗೆ ಬ್ರಿಟಿಷರ ಪ್ರತಿಕ್ರಿಯೆಯನ್ನು ಅರಿಯುವುದು.

6 ಗಾಂಧೀಜಿಯವರ ಆರಂಭಿಕ ಜೀವನ ಮತ್ತು ದಕ್ಷಿಣ ಆಫ್ರಿಕದಲ್ಲಿ ಅವರು ನಡೆಸಿದ ಪ್ರಯೋಗಗಳನ್ನು ಸ್ಮರಿಸಿಕೊಳ್ಳುವುದು.

© KTBS NOT TO BE REPUBLISHED

7 ಬ್ರಿಟಿಷರ ವಿರುದ್ಧ ಗಾಂಧೀಜಿಯವರು ಪ್ರಯೋಗಿಸಿದ ಅಹಿಂಸಾ ಮತ್ತು ಸತ್ಯಾಗ್ರಹ ನೀತಿಯನ್ನು ಮೆಚ್ಚುತ್ತ ಅವರ ಬಗ್ಗೆ ಹೆಮ್ಮೆಪಡುವುದು.

8 ಗಾಂಧೀಜಿಯವರ ನಾಯಕತ್ವದ ಗುಣ, ಧ್ಯೇಯ, ಸತ್ಯ, ಸರಳತೆ, ಮಾನವೀಯತೆ ಮತ್ತು ವಿನಯವನ್ನು ಪ್ರಶಂಸಿಸುವುದು.

9 ಸುಭಾಷ್‌ಚಂದ್ರ ಬೋಸ್ ಮತ್ತು ಡಾ. ಅಂಬೇಡ್ಕರ್ ಅವರ ಕೊಡುಗೆಗಳನ್ನು ಮೆಚ್ಚುವುದು.

## ರಾಷ್ಟ್ರೀಯತೆಯ ಬೆಳವಣಿಗೆ

ನಮ್ಮ ಭಾರತ ಬಹುಮುಖಿ ಅಥವಾ ವೈವಿಧ್ಯಮಯ ಸಂಸ್ಕೃತಿಗಳನ್ನು ಹೊಂದಿರುವ ದೇಶ. ನಮಗೆ ಸುದೀರ್ಘ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪರಂಪರೆ ಇದೆ. ಇವು 19ನೇ ಶತಮಾನದ ಉತ್ತರಾರ್ಧದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಒಂದು ತಾತ್ವಿಕ ಬುನಾದಿಯನ್ನು ಹಾಕಿಕೊಟ್ಟವು. ರಾಷ್ಟ್ರೀಯತೆ ಎಂದರೆ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಜನರ ಮನದಲ್ಲಿ ಮೂಡುವ 'ನಾವೆಲ್ಲರೂ ಒಂದೇ' ಎಂಬ ಏಕತೆಯ ಭಾವನೆಯಾಗಿದೆ. ಜೊತೆಗೆ ತಮ್ಮದೆಂಬ ಆ ಪ್ರದೇಶದ ಬಗೆಗಿನ ಗೌರವ ಮತ್ತು ಅಭಿಮಾನವನ್ನೂ ಒಳಗೊಂಡಿರುತ್ತದೆ.

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರ ಹೋರಾಟ ಬಿಡಿಬಿಡಿಯಾಗಿತ್ತೇ ವಿನಃ ಇಡಿಯಾಗಿರಲಿಲ್ಲ. ಇದರಿಂದ ಸರಿಯಾದ ಹೊಂದಾಣಿಕೆ ಇಲ್ಲದೆ ಹೋರಾಟ ವಿಫಲಗೊಂಡಿತು. ಆದರೆ ಇದು ಪ್ರಜ್ಞಾವಂತ ಭಾರತೀಯರಲ್ಲಿ ಸಂಘಟನೆಯ ಮಹತ್ವದ ಅರಿವನ್ನು ಉಂಟುಮಾಡಿತು. ಇದು ಕ್ರಮೇಣ ರಾಷ್ಟ್ರೀಯ ಹೋರಾಟವಾಗಿ ರೂಪುಗೊಂಡಿತು. ರಾಷ್ಟ್ರೀಯತೆಯ ಬೆಳವಣಿಗೆಗೆ ಹಲವು ಅಂಶಗಳು ಪ್ರೇರಣೆ ನೀಡಿವೆ. ಅವು ಈ ರೀತಿ ಇವೆ.

**1 ಪಾಶ್ಚಿಮಾತ್ಯ ಶಿಕ್ಷಣ ಮತ್ತು ಆಧುನಿಕ ಜ್ಞಾನವಿಜ್ಞಾನದ ಪರಿಚಯ:** ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರು ಯುರೋಪಿನ ಚಿಂತನಶೀಲ ಕೃತಿಗಳನ್ನು ಓದುವುದರ ಮೂಲಕ ರಾಷ್ಟ್ರೀಯ ರಾಜಕೀಯ ಮನೋಭಾವವನ್ನು ಅರಗಿಸಿಕೊಂಡರು. ಯುರೋಪಿನಲ್ಲಿ ಹುಟ್ಟಿಕೊಂಡ ಪರಿಕಲ್ಪನೆಗಳಾದ ಸ್ವಾತಂತ್ರ, ಸಮಾನತೆ ಮತ್ತು ಭ್ರಾತೃತ್ವ ಇವರನ್ನು ರಾಜಕೀಯವಾಗಿ ಪ್ರೇರೇಪಿಸಿತು. ಅದು ಅವರಲ್ಲಿ ಸ್ವಾತಂತ್ರ್ಯದ ಅಭಿಲಾಷೆಗೆ ಸ್ಫೂರ್ತಿ ನೀಡಿತು. ಇಂಗ್ಲಿಷ್ ಕಲಿತ ಭಾರತೀಯರು ತಮ್ಮ ಬೆಂಬಲಕ್ಕಿರುತ್ತಾರೆ ಎನ್ನುವ ಬ್ರಿಟಿಷರ ಲೆಕ್ಕಾಚಾರವನ್ನು ಹುಸಿಗೊಳಿಸಿದರು.

NOT TO BE REPUBLISHED ©KTBS

**2 ಏಕರೂಪ ಆಡಳಿತಾತ್ಮಕ ವ್ಯವಸ್ಥೆ:** ಬ್ರಿಟಿಷರು ಭಾರತವನ್ನು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು. ಇದರಿಂದ ಒಂದೇ ರೀತಿಯ ನಿಯಮಗಳಿಗೆ ಒಳಪಟ್ಟ ಭಾರತೀಯರಲ್ಲಿ ನಾವೆಲ್ಲರೂ ಸಮಾನರು ಎಂಬ ಭಾವನೆಯನ್ನು ಉಂಟುಮಾಡಿತು. ಅದೇ ರೀತಿ ಬ್ರಿಟಿಷರು ಜಾರಿಗೆ ತಂದ ಜನ ವಿರೋಧಿ ಕಾಯ್ದೆ ಕಾನೂನುಗಳನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಲಾರಂಭಿಸಿದರು. ಇದು ಭಾರತೀಯರಲ್ಲಿ ನಾವೆಲ್ಲ ಒಂದೇ ಎಂಬ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾಯಿತು.

**3 ಆರ್ಥಿಕ ಶೋಷಣೆ:** ಬ್ರಿಟಿಷರು ತಮ್ಮ ಆರ್ಥಿಕ ನೀತಿಗಳ ಮೂಲಕ ಭಾರತೀಯರ ವ್ಯಾಪಾರ, ಕೃಷಿ, ಕೈಗಾರಿಕೆಗಳ ಅವನತಿಗೆ ಕಾರಣರಾದರು. ಭೂಮಿಯನ್ನು ಮಾರಾಟದ ವಸ್ತುವನ್ನಾಗಿ ಪರಿವರ್ತಿಸಿದರು. ದಾದಾಭಾಯ್ ನವರೋಜಿಯವರು ಭಾರತದ ಸಂಪತ್ತನ್ನು ಬ್ರಿಟಿಷರು ದೋಚುತ್ತಿದ್ದ ಕ್ರಮವನ್ನು ತಮ್ಮ 'ಸಂಪತ್ತಿನ ಸೋರಿಕೆ ಸಿದ್ಧಾಂತ'ದ ಮೂಲಕ ಪ್ರತಿಪಾದಿಸಿದರು.

**4 ಪರಂಪರೆಯ ಪರಿಚಯ:** ಸರ್ ವಿಲಿಯಂ ಜೋನ್ಸ್, ಎಚ್.ಟಿ. ಕೋಲ್‌ಬ್ರೂಕ್, ಮ್ಯಾಕ್ಸ್ ಮುಲ್ಲರ್, ಕನ್ನಿಂಗ್‌ಹ್ಯಾಮ್ ಮುಂತಾದ ವಿದೇಶಿ ವಿದ್ವಾಂಸರು ಭಾರತದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ತಮ್ಮ ಅಧ್ಯಯನದ ಮೂಲಕ ಭಾರತೀಯರಿಗೆ ಪರಿಚಯಿಸಿದರು. ಇದರಿಂದ ಭಾರತೀಯ ಪರಂಪರೆ ಗ್ರೀಕ್, ರೋಮ್‌ಗಳಿಗೇನೂ ಕಡಿಮೆ ಇಲ್ಲ ಎಂಬುದು ದೃಢಪಟ್ಟಿತು. ಆ ಮೂಲಕ ರಾಷ್ಟ್ರೀಯತೆಯ ಬೇರುಗಳು ಅರಿವಿನ ರೂಪದಲ್ಲಿ ಮತ್ತೆ ಆಳಕ್ಕೆ ಇಳಿಯತೊಡಗಿದವು.

© KTBS NOT TO BE REPUBLISHED

**5 ಸಾಮಾಜಿಕ ಧಾರ್ಮಿಕ ಚಳವಳಿಗಳು:** 19ನೇ ಶತಮಾನದ ಭಾರತೀಯ ಸಮಾಜ ಸುಧಾರಕರಾದ ರಾಮಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ ಮೊದಲಾದವರು ಭಾರತೀಯ ವಂಚಿತ ಮತ್ತು ಶೋಷಿತ ಸಮುದಾಯಗಳಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟರು. ದಯಾನಂದರು ಸ್ವರಾಜ್ಯ ಮತ್ತು ಸ್ವದೇಶಿ ವಿಚಾರಧಾರೆಯನ್ನು ಬಿತ್ತಿದರೆ, ವಿವೇಕಾನಂದರು ಜಡಗೊಂಡಿದ್ದ ಸಮುದಾಯವನ್ನು ಎಚ್ಚರಗೊಳಿಸುವ ಕೆಲಸ ಮಾಡಿದರು. ಇದು ರಾಷ್ಟ್ರೀಯತೆಯ ಬೆಳವಣಿಗೆಗೆ ಹೊಸ ಆಯಾಮ ತಂದುಕೊಟ್ಟಿತು. ವಿದ್ಯಾವಂತ ಭಾರತೀಯರನ್ನು ಕ್ರಿಯಾಶೀಲರನ್ನಾಗಿಸಿತು.

**6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ:** ಈ ಘಟನೆಯು ಭಾರತೀಯರು ರಾಜಕೀಯವಾಗಿ ಹೆಚ್ಚು ಸಂಘಟಿತರಾಗಬೇಕೆಂಬುದನ್ನು ಮನವರಿಕೆ ಮಾಡಿಕೊಟ್ಟಿತು. ಅಲ್ಲದೆ ಈ ಹೋರಾಟದಲ್ಲಿ ಹುತಾತ್ಮರಾದ ಮಂಗಲ್‌ಪಾಂಡೆ, ಲಕ್ಷ್ಮೀಬಾಯಿ, ಹಜ್ರತ್ ಮಹಲ್ ಮೊದಲಾದ ನಾಯಕರು ಮುಂದಿನ ತಲೆಮಾರಿನ ನಾಯಕರಿಗೆ ಸ್ಫೂರ್ತಿಯ ಸೆಲೆಯಾದರು.

**7 ಜನಾಂಗೀಯ ತಾರತಮ್ಯತೆ:** ಬ್ರಿಟಿಷರು ತಮ್ಮನ್ನು ಶ್ರೇಷ್ಠರೆಂದು ಭಾವಿಸಿದ್ದರು. ಭಾರತೀಯರನ್ನು ಅನಾಗರಿಕರೆಂದು ಕರೆದರು. ಆಡಳಿತದ ಉನ್ನತ ಹುದ್ದೆಗಳು ಬ್ರಿಟಿಷರಿಗಷ್ಟೇ ಮೀಸಲಾಗಿದ್ದವು. ಭಾರತದಲ್ಲಿದ್ದ ಇಂಗ್ಲಿಷ್ ಸಮುದಾಯವು ಇಲ್ಬರ್ಟ್ ಮಸೂದೆಯನ್ನು (1884) ವಿರೋಧಿಸಿದ್ದು ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಇದರಿಂದ ಒಂದೇ ನೀತಿ, ನಿಯಮಗಳಿಗೆ ಒಳಪಟ್ಟ ಭಾರತೀಯರಲ್ಲಿ ಸಹಜವಾಗಿ ನಾವೆಲ್ಲರೂ ಸಮಾನರು ಎಂಬ ಭಾವನೆಯನ್ನು ಉಂಟುಮಾಡಿತು. ಬ್ರಿಟಿಷರು ತಂದ ಜನವಿರೋಧಿ ಕಾಯ್ದೆ ಕಾನೂನುಗಳನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಲಾರಂಭಿಸಿದರು. ಮೇಲೆ ವಿವರಿಸಿದ ಕಾರಣಗಳು ಭಾರತೀಯರಲ್ಲಿ ನಾವೆಲ್ಲ ಒಂದೇ ಎಂಬ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾದವು.

## ಭಾರತ ರಾಷ್ಟ್ರೀಯ ಕಾಂಗ್ರೆಸ್ (1885)

ಭಾರತ ರಾಷ್ಟ್ರೀಯ ಕಾಂಗ್ರೆಸ್ ನಿವೃತ್ತ ಬ್ರಿಟಿಷ್ ನಾಗರಿಕ ಸೇವಾಧಿಕಾರಿ ಎಲನ್ ಆಕ್ಟೇವಿಯನ್ ಹ್ಯೂಮ್ ಅವರ ಕನಸಿನ ಕೂಸಾಗಿತ್ತು. ಇದು 1885ರಲ್ಲಿ ಮುಂಬೈಯಲ್ಲಿ ಸ್ಥಾಪಿತವಾಯಿತು. ಉಮೇಶಚಂದ್ರ ಬ್ಯಾನರ್ಜಿಯವರು ಕಾಂಗ್ರೆಸಿನ ಮೊದಲ ಅಧ್ಯಕ್ಷರಾಗಿದ್ದರು. ಮುಂಬೈಯಲ್ಲಿ ನಡೆದ ಕಾಂಗ್ರೆಸಿನ ಮೊದಲ ಅಧಿವೇಶನದಲ್ಲಿ 72 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ ಹೆಚ್ಚಿನವರು ವಕೀಲರು, ಪತ್ರಕರ್ತರು ಮತ್ತು ಸಮಾಜದ ಪ್ರತಿಷ್ಠಿತ ವರ್ಗದವರಾಗಿದ್ದರು. ವಾಸ್ತವವಾಗಿ ಕಾಂಗ್ರೆಸ್ ರಾಷ್ಟ್ರೀಯ ಚಳವಳಿಗೆ ಚಾಲನೆ ನೀಡಿದ ಮೊದಲ ರಾಜಕೀಯ ವೇದಿಕೆಯಾಗಿತ್ತು.



*ಎ.ಓ. ಹ್ಯೂಮ್*
*ಕಾಂಗ್ರೆಸಿನ ಸ್ಥಾಪಕರು*



*ಉಮೇಶಚಂದ್ರ ಬ್ಯಾನರ್ಜಿ*
*ಪ್ರಥಮ ಅಧಿವೇಶನದ ಅಧ್ಯಕ್ಷರು*

NOT TO BE REPUBLISHED ©KTBS

### ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಉದ್ದೇಶಗಳು:

- ದೇಶದ ವಿವಿಧ ಭಾಗಗಳಲ್ಲಿರುವ ರಾಜಕೀಯ ಕಾರ್ಯಕರ್ತರ ನಡುವೆ ಸ್ನೇಹ ಸಂಬಂಧವನ್ನು ಬೆಸೆಯುವುದು;
- ರಾಷ್ಟ್ರೀಯ ಏಕತೆಯನ್ನುಂಟುಮಾಡುವುದು;
- ಜನತೆಯ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿ, ಜನಾಭಿಪ್ರಾಯವನ್ನು ರೂಪಿಸುವುದು; ಮತ್ತು
- ಪ್ರಾಂತೀಯತೆಯನ್ನು ತೊರೆದು ರಾಷ್ಟ್ರೀಯತೆಯನ್ನು ಮೂಡಿಸುವುದು.

## ಮಂದಗಾಮಿಗಳ ಯುಗ (1885–1905)

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಆರಂಭಿಕ ನಾಯಕರುಗಳನ್ನು ಮಂದಗಾಮಿಗಳು (ಸೌಮ್ಯವಾದಿಗಳು) ಎಂದು ಕರೆಯಲಾಗಿದೆ. 1885ರಿಂದ 1905ರ ನಡುವಿನ ಕಾಲಘಟ್ಟವನ್ನು ಮಂದಗಾಮಿಗಳ ಕಾಲ ಎಂದು ಪರಿಗಣಿಸಲಾಗಿದೆ. ಅವರು ಸಂವಿಧಾನಾತ್ಮಕ ನೀತಿಯಲ್ಲಿ ನಂಬಿಕೆಯಿರಿಸಿದ್ದರು. ಬ್ರಿಟಿಷ್ ಆಳ್ವಿಕೆಗೆ ನಿಷ್ಠಾವಂತರಾದ ಅವರು ಪ್ರಾರ್ಥನೆ, ಬಿನ್ನಹ ಮತ್ತು ಪ್ರತಿಭಟನೆಯ ನೀತಿಯನ್ನು ಅನುಸರಿಸಿದರು. ಜೊತೆಗೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತರುವಂತೆ ಬ್ರಿಟಿಷರನ್ನು ಮನವೊಲಿಸಲು ಪ್ರಯತ್ನಿಸಿದರು. ಪ್ರಮುಖ ಮಂದಗಾಮಿ ನಾಯಕರೆಂದರೆ ದಾದಾಭಾಯ್ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ, ಮಹಾದೇವ ಗೋವಿಂದ ರಾನಡೆ ಮತ್ತು ಇನ್ನಿತರರು.

ಮಂದಗಾಮಿಗಳ ಹೋರಾಟದ ಫಲವಾಗಿ ಭಾರತೀಯರು ಶಾಸನ ಸಭೆಗಳನ್ನು ಪ್ರವೇಶಿಸಲು ಸಾಧ್ಯವಾಯಿತು. ಅಲ್ಲದೆ ಮಂದಗಾಮಿಗಳ ಪ್ರಯತ್ನದಿಂದ ಭಾರತದ ಬಡತನಕ್ಕೆ ಬ್ರಿಟಿಷರು ಕಾರಣ ಎಂಬುದು ತಿಳಿಯಿತು. ಜೊತೆಗೆ ಈ ಕಾಲಘಟ್ಟದಲ್ಲಿ ಭಾರತೀಯರು ರಾಜಕೀಯ ಸಂಘರ್ಷಕ್ಕೆ ಬೇಕಾದ ತರಬೇತಿ ಪಡೆಯುವ ಮೂಲಕ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ರಾಷ್ಟ್ರೀಯ ವ್ಯಾಪ್ತಿಯನ್ನು ಸೃಷ್ಟಿಸಿಕೊಂಡರು.

©KTBS NOT TO BE REPUBLISHED



ದಾದಾಭಾಯ್ ನವರೋಜಿ



ಸುರೇಂದ್ರನಾಥ ಬ್ಯಾನರ್ಜಿ



ಗೋಪಾಲಕೃಷ್ಣ ಗೋಖಲೆ

ಪ್ರಮುಖ ಮಂದಗಾಮಿ ನಾಯಕರು

**ಮಂದಗಾಮಿಗಳ ಬೇಡಿಕೆಗಳು**

ವಾಕ್ ಮತ್ತು ಮುದ್ರಣ ಸ್ವಾತಂತ್ರ್ಯ, ಕಾರ್ಯಾಂಗದಿಂದ ನ್ಯಾಯಾಂಗದ ಬೇರ್ಪಡೆ, ಸೈನಿಕ ವೆಚ್ಚದ ಕಡಿತ, ಪ್ರಾಥಮಿಕ, ಪ್ರೌಢ ಮತ್ತು ತಾಂತ್ರಿಕ ಶಿಕ್ಷಣದ ಅನುಷ್ಠಾನ, ಶಸ್ತ್ರಾಸ್ತ್ರ ನಿಷೇಧ ಕಾಯಿದೆಯ ರದ್ಧತಿ, ಬ್ಯಾಂಕಿಂಗ್, ನೀರಾವರಿ, ವೈದ್ಯಕೀಯ ಮತ್ತು ಆರೋಗ್ಯ ಸೌಲಭ್ಯಗಳು, ಉಪ್ಪಿನ ಸುಂಕದ ಸಂಪೂರ್ಣ ರದ್ದತಿ, ಇಂಗ್ಲೆಂಡ್ ಮತ್ತು ಇಂಡಿಯಾದಲ್ಲಿ ಏಕಕಾಲದಲ್ಲಿ ಐ.ಸಿ.ಎಸ್. ಪರೀಕ್ಷೆಯನ್ನು ನಡೆಸುವುದು, ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ನೀಡುವುದು, ಉನ್ನತ ಹುದ್ದೆಗಳಿಗೆ ಭಾರತೀಯರನ್ನು ನೇಮಿಸುವುದು ಮುಂತಾದುವು.

## ತೀವ್ರಗಾಮಿಗಳ ಯುಗ (1905–1919)

ಮಂದಗಾಮಿಗಳು ಸಾಮಾನ್ಯ ಜನತೆಯನ್ನು ತಲಪಲಿಲ್ಲ. ಅವರು ಅನುಸರಿಸಿದ ಪ್ರಾರ್ಥನೆ ಮತ್ತು ಮನವಿ ನೀತಿಗಳನ್ನು 'ತಿರುಪೆಯ ನೀತಿ' (ಪಾಲಿಸಿ ಆಫ್ ಮೆಂಡಿಕೆನ್ಸಿ) ಎಂದು ತೀವ್ರವಾದಿಗಳು ವ್ಯಂಗ್ಯವಾಡಿದರು. ಯುವ ವರ್ಗ ಅವರ ನೀತಿಗಳಿಂದ ಆಕರ್ಷಿತರಾಗಲಿಲ್ಲ. ಇವರ ಕಾಯುವ ವಿಧಾನವನ್ನು ಪ್ರಶ್ನಿಸುವ ಹೊಸ ನಾಯಕರ ಒಂದು ಗುಂಪು ಕಾಂಗ್ರೆಸಿನಲ್ಲಿ ಉದಯಿಸಿತು. ಅವರೇ ತೀವ್ರಗಾಮಿಗಳು. ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲ್ ಇವರು ತೀವ್ರಗಾಮಿ ಗುಂಪಿನ ನಾಯಕರಾಗಿದ್ದು 'ಲಾಲ್–ಬಾಲ್–ಪಾಲ್' ಎಂದೇ ಜನಪ್ರಿಯರಾದರು. 1905–1919ರ ಕಾಲಾವಧಿಯನ್ನು ತೀವ್ರಗಾಮಿ ರಾಜಕೀಯದ ಕಾಲವೆಂದು ಗುರುತಿಸಲಾಗಿದೆ.

© KTBS NOT TO BE REPUBLISHED


*ಲಾಲಾ ಲಜಪತ್ ರಾಯ್ (ಲಾಲ್)*


*ಬಾಲಗಂಗಾಧರ ತಿಲಕ್ (ಬಾಲ್)*


*ಬಿಪಿನ್ ಚಂದ್ರಪಾಲ್ (ಪಾಲ್)*

**ತೀವ್ರಗಾಮಿಗಳ ಬೆಳವಣಿಗೆಗೆ ಕಾರಣಗಳು**

- ಭಾರತೀಯರನ್ನು ಉನ್ನತ ಹುದ್ದೆಗಳಿಗೆ ಪರಿಗಣಿಸದಿದ್ದುದು.
- 1905ರಲ್ಲಿ ಲಾರ್ಡ ಕರ್ಜನನು ಬಂಗಾಳವನ್ನು ವಿಭಜಿಸುವ ಮೂಲಕ ಮತೀಯ ರಾಜಕಾರಣಕ್ಕೆ ಪ್ರಯತ್ನಿಸಿದ್ದು.
- 1905ರಲ್ಲಿ ರಷ್ಯ ದೇಶವನ್ನು ಸಣ್ಣ ರಾಷ್ಟ್ರವಾದ ಜಪಾನ್ ಸೋಲಿಸಿದ ಘಟನೆಯು ಯುರೋಪಿಯನ್ನರನ್ನು ಏಷ್ಯನರು ಸೋಲಿಸಬಹುದು ಎಂಬ ಆತ್ಮವಿಶ್ವಾಸ ಮೂಡಿಸಿತು.
- ಐರ್ಲೆಂಡ್, ರಷ್ಯ, ಚೀನ, ಟರ್ಕಿ, ಈಜಿಪ್ಟ್ ಮುಂತಾದ ರಾಷ್ಟ್ರಗಳಲ್ಲಿ ನಡೆಯುತ್ತಿದ್ದ ಕ್ರಾಂತಿಕಾರಿ ಆಂದೋಲನಗಳು ಭಾರತೀಯರನ್ನು ಪ್ರೇರೇಪಿಸಿದವು.


ಅರವಿಂದ ಘೋಷ್

ಬಾಲಗಂಗಾಧರ ತಿಲಕರು ಒಬ್ಬ ಅಪ್ರತಿಮ ದೇಶಭಕ್ತ. "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ನಾನು ಅದನ್ನು ಪಡೆದೇ ತೀರುತ್ತೇನೆ", ಎಂಬ ಅವರ ಘೋಷಣೆಯಲ್ಲಿ ಸ್ವಾತಂತ್ರ್ಯದ ಉತ್ಕಟತೆಯಿತ್ತು. ಜನರನ್ನು ಒಗ್ಗೂಡಿಸುವ ದೃಷ್ಟಿಯಿಂದ ತಿಲಕರು ಗಣೇಶ ಮತ್ತು ಶಿವಾಜಿ ಉತ್ಸವಗಳನ್ನು ಪರಿಚಯಿಸಿದರು. 'ಮರಾಠ' (ಇಂಗ್ಲಿಷ್) ಮತ್ತು 'ಕೇಸರಿ' (ಮರಾಠಿ) ಪತ್ರಿಕೆಗಳನ್ನು ಪ್ರಕಟಿಸುವ ಮೂಲಕ ಜನರನ್ನು ರಾಜಕೀಯವಾಗಿ ಪ್ರೇರೇಪಿಸಿದರು. ಬಿಪಿನ್‌ಚಂದ್ರ ಪಾಲರು 'ನ್ಯೂ ಇಂಡಿಯಾ' ಹಾಗೂ ಅರವಿಂದರು 'ವಂದೇ ಮಾತರಂ' ಪತ್ರಿಕೆಗಳನ್ನು ಪ್ರಾರಂಭಿಸಿದರು. ಲಾಲಾ ಲಜಪತ್ ರಾಯ್ 'ಪಂಜಾಬಿನ ಸಿಂಹ' ಎಂದೇ ಜನಪ್ರಿಯರಾಗಿದ್ದರು. ಅವರು, "ನಾವು ಸ್ವರಾಜ್ಯವನ್ನು ಹಕ್ಕಿನ ರೂಪದಲ್ಲಿ ಪಡೆಯುತ್ತೇವೆಯೇ ಹೊರತು ಭಿಕ್ಷಾರೂಪದಲ್ಲಿ ಅಲ್ಲ" ಎಂದು ಹೇಳಿದರು. ಬಿಪಿನ್‌ಚಂದ್ರ ಪಾಲರು ಬಂಗಾಲದಲ್ಲಿ 'ಸಾಮೂಹಿಕ ಪ್ರತಿಭಟನೆ'ಯನ್ನು ಸಂಘಟಿಸಿದರು. ತೀವ್ರವಾದವನ್ನು ಪ್ರತಿನಿಧಿಸಿದ ಮತ್ತೊಬ್ಬ ನಾಯಕ ಅರವಿಂದ ಘೋಷ್. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳನ್ನು ಮಾತ್ರವೇ ಬಳಸುವುದು ಮತ್ತು ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು ಅವರ ಕಾರ್ಯವಿಧಾನವಾಗಿತ್ತು. ತೀವ್ರಗಾಮಿಗಳು ರಾಷ್ಟ್ರೀಯ ಹೋರಾಟಕ್ಕೆ ತೀವ್ರತೆಯನ್ನು ತಂದುಕೊಟ್ಟರು.

## ಬಂಗಾಲದ ವಿಭಜನೆ (1905)

ತೀವ್ರವಾದಿಗಳ ರಾಷ್ಟ್ರೀಯ ಹೋರಾಟವನ್ನು ಪ್ರೇರೇಪಿಸಿದ ಪ್ರಮುಖ ಘಟನೆಯೆಂದರೆ 1905ರ ಬಂಗಾಲದ ವಿಭಜನೆ.

© KTBS NOT TO BE REPUBLISHED

ಬಂಗಾಲದಲ್ಲಿ ರಾಷ್ಟ್ರೀಯತೆಯ ಅಲೆಯು ತೀವ್ರಗೊಳ್ಳುತ್ತಿರುವುದನ್ನು ಕಂಡು ಬ್ರಿಟಿಷರು ಆತಂಕಗೊಂಡರು. ಆದ್ದರಿಂದ ಬಂಗಾಲವನ್ನು ಹಿಂದು ಮತ್ತು ಮುಸಲ್ಮಾನ ಎಂಬ ಮತೀಯ ಭಿನ್ನತೆಯ ಆಧಾರದ ಮೇಲೆ ವಿಭಜಿಸುವ ಮೂಲಕ ರಾಷ್ಟ್ರೀಯತೆಯ ತೀವ್ರತೆಯನ್ನು ಹತ್ತಿಕ್ಕಲು ವೈಸರಾಯ್ ಲಾರ್ಡ್ ಕರ್ಜನ್ ಪ್ರಯತ್ನಿಸಿದನು. ಈ ವಿಭಜನೆಯನ್ನು ವಿರೋಧಿಸಿ 1905 ಅಕ್ಟೋಬರ್ 16ರಂದು ಬಂಗಾಲದಾದ್ಯಂತ 'ರಾಷ್ಟ್ರೀಯ ಶೋಕದಿನ'ವನ್ನಾಗಿ ಆಚರಿಸಿದರು. ರವೀಂದ್ರನಾಥ ಟಾಗೋರ್ 'ಅಮರ್ ಸೋನಾರ್ ಬಾಂಗ್ಲ' ಗೀತೆಯನ್ನು ರಾಷ್ಟ್ರೀಯ ಗೀತೆಯಾಗಿ ಹಾಡಿದರು. 'ವಂದೇ ಮಾತರಂ' ಎಲ್ಲರ ಘೋಷಣೆಯಾಗಿತ್ತು. ಬಂಗಾಲದ ಏಕತೆಯನ್ನು ಪ್ರತಿನಿಧಿಸಲು ಹಿಂದೂ ಮುಸಲ್ಮಾನರು ಪರಸ್ಪರ 'ರಕ್ಷಾ ಬಂಧನ್' ಕಟ್ಟಿಕೊಂಡರು. ಜನತೆಯ ತೀವ್ರ ಪ್ರತಿಭಟನೆಗಳಿಗೆ ಮಣಿದು 1911ರಲ್ಲಿ ವಿಭಜನೆಯನ್ನು ಬ್ರಿಟಿಷರು ರದ್ದು ಮಾಡಬೇಕಾಯಿತು.



*ಲಾರ್ಡ್ ಕರ್ಜನ್*



*ಬಂಕಿಮಚಂದ್ರ ಚಟರ್ಜಿ*

## ಮುಸ್ಲಿಂ ಲೀಗ್ ಸ್ಥಾಪನೆ (1906)

ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸುತ್ತ ರಾಷ್ಟ್ರೀಯ ಚಳವಳಿಯಿಂದ ಮುಸ್ಲಿಮರನ್ನು ದೂರವಿಡಲು ಪ್ರಯತ್ನ ನಡೆಸುತ್ತಲೇ ಇದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ಕಾಲದಿಂದಲೇ ಮುಸ್ಲಿಮರು ತಮ್ಮ ಸಮುದಾಯ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಪ್ರತ್ಯೇಕ ಸಂಘಟನೆಯನ್ನು ರಚಿಸಿಕೊಳ್ಳುವಂತೆ ಬ್ರಿಟಿಷರು ಅವರನ್ನು ಪ್ರೋತ್ಸಾಹಿಸಿದರು. 1906ರಲ್ಲಿ ಮುಸ್ಲಿಂ ನಿಯೋಗವೊಂದು ಭಾರತದ ವೈಸರಾಯ್ ಆಗಿದ್ದ ಮಿಂಟೋ ಅವರನ್ನು ಭೇಟಿ ಮಾಡಿತು. ಭೇಟಿಯ ಪ್ರೇರಣೆಯಿಂದಾಗಿ ಸರ್ ಆಗಾಖಾನ್, ಢಾಕಾದ ನವಾಬ ಸಲಿಮುಲ್ಲ ಮತ್ತು ಇನ್ನಿತರರು ಸೇರಿ 1906ರಲ್ಲಿ ಭಾರತ ಮುಸ್ಲಿಂ ಲೀಗನ್ನು ಢಾಕಾದಲ್ಲಿ (ಈಗಿನ ಬಾಂಗ್ಲಾದೇಶ) ಸ್ಥಾಪಿಸಿದರು.

© KTBS NOT TO BE REPUBLISHED

**ಮುಸ್ಲಿಂ ಲೀಗಿನ ಬೇಡಿಕೆಗಳು**

- ಚುನಾಯಿತ ಸಂಸ್ಥೆಗಳಲ್ಲಿ ಮುಸ್ಲಿಮರಿಗೆ ಕೇವಲ ಸಂಖ್ಯೆಯ ಆಧಾರದ ಮೇಲೆ ಪ್ರಾತಿನಿಧ್ಯವನ್ನು ಕೊಡದೆ ಆ ಸಮುದಾಯದ ರಾಜಕೀಯ ಪ್ರಾಮುಖ್ಯತೆಯ ಮೇಲೆ ನೀಡುವುದು.
- ಸ್ಥಳೀಯ ಸಂಸ್ಥೆಗಳಿಂದ ಹಿಡಿದು ಕೇಂದ್ರೀಯ ಶಾಸನ ಸಭೆಯವರೆಗೂ ಮುಸ್ಲಿಮರಿಗೆ ಪ್ರತ್ಯೇಕ ಮತೀಯ ಪ್ರಾತಿನಿಧ್ಯ ನೀಡುವುದು.
- ಸರಕಾರಿ ಸೇವೆಗಳಲ್ಲಿ ಮುಸ್ಲಿಮರಿಗೆ ಸರಿಯಾದ ಪ್ರಾತಿನಿಧ್ಯ ನೀಡುವುದು.

## ಸೂರತ್ ಒಡಕು (1907)

ಬಂಗಾಲದ ವಿಭಜನೆಯ ವಿವಾದದ ಹಿನ್ನೆಲೆಯಲ್ಲಿ ತೀವ್ರಗಾಮಿಗಳು ದೇಶಾದ್ಯಂತ ಸ್ವದೇಶಿ ಮತ್ತು ಬಹಿಷ್ಕಾರ ಚಳವಳಿಯನ್ನು ವ್ಯಾಪಕವಾಗಿ ಹಮ್ಮಿಕೊಂಡರು. ಆದರೆ ಮಂದಗಾಮಿಗಳು ಅದನ್ನು ಬಂಗಾಲಕ್ಕೆ ಮಾತ್ರವೇ ಸೀಮಿತಗೊಳಿಸಲು ಬಯಸಿದ್ದರು. ಅಲ್ಲದೆ ಅವರು ಸರ್ಕಾರದೊಂದಿಗೆ ನೇರ ಸಂಘರ್ಷಕ್ಕಿಳಿಯಲು ಸಿದ್ಧರಿರಲಿಲ್ಲ. ತೀವ್ರಗಾಮಿಗಳು ಮತ್ತು ಮಂದಗಾಮಿಗಳ ನಡುವಿನ ಭಿನ್ನಾಭಿಪ್ರಾಯಗಳು ತೀವ್ರಗೊಂಡು ಕಾಂಗ್ರೆಸಿನಲ್ಲಿ ರಾಜಕೀಯ ಒಡಕುಂಟಾಯಿತು. 1907ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ನಡುವೆ ಕಾಂಗ್ರೆಸ್ ಇಬ್ಭಾಗವಾಯಿತು. ಅನಂತರ ಭಾರತದ ರಾಷ್ಟ್ರೀಯ ಚಳವಳಿಯು ಪ್ರಧಾನವಾಗಿ ತೀವ್ರಗಾಮಿಗಳ ನೇತೃತ್ವದಲ್ಲಿಯೇ 1919ರ ವರೆಗೂ ಮುನ್ನಡೆಯಿತು.

1907ರಲ್ಲಿ ಕಾಂಗ್ರೆಸಿನಲ್ಲಾದ ಒಡಕಿನ ನಂತರ ಸರ್ಕಾರವು ತೀವ್ರಗಾಮಿಗಳ ವಿರುದ್ಧ ದಮನಕಾರಿ ಕ್ರಮಗಳನ್ನು ಕೈಗೊಂಡಿತು. ಅವರಲ್ಲಿ ಅನೇಕರನ್ನು ಸೆರೆಮನೆಗೆ ಕಳುಹಿಸಲಾಯಿತು, ಕೆಲವರನ್ನು ಗಡಿಪಾರು ಮಾಡಲಾಯಿತು. ತಿಲಕರಿಗೆ ಕರಿನೀರು ಶಿಕ್ಷೆಯನ್ನು ವಿಧಿಸಿ ಮಾಂಡಲೆ (ಬರ್ಮಾ) ಸೆರೆಮನೆಗೆ ಗಡಿಪಾರು ಮಾಡಲಾಯಿತು. ಇದರಿಂದಾಗಿ ರಾಜಕೀಯ ಚಟುವಟಿಕೆಗಳು ತಾತ್ಕಾಲಿಕವಾಗಿ ನಿಧಾನಗೊಂಡವು. ಸೆರೆಮನೆಯ ವಾಸದಲ್ಲೇ ತಿಲಕರು 'ಗೀತಾ ರಹಸ್ಯ'ವನ್ನು ಬರೆದರು.

ತೀವ್ರಗಾಮಿಗಳನ್ನು ರಾಜಕೀಯವಾಗಿ ನಿಷ್ಕ್ರಿಯಗೊಳಿಸುವ ಸಲುವಾಗಿ ಬ್ರಿಟಿಷರು ಮಂದಗಾಮಿಗಳು ಮತ್ತು ಮುಸ್ಲಿಮರಿಗೆ ಶಾಸಕಾಂಗದಲ್ಲಿ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಿ ಒಲೈಸಲೆತ್ನಿಸಿದರು. ಈ ನಿಟ್ಟಿನಲ್ಲಿ ಮಿಂಟೋಮಾರ್ಲೆ ಸುಧಾರಣೆಗಳನ್ನು 1909ರಲ್ಲಿ ಜಾರಿಗೆ ತಂದರು. ಈ ಕಾಯಿದೆಯಲ್ಲಿ ಮುಸ್ಲಿಮರಿಗೆ 'ಪ್ರತ್ಯೇಕ ಮತಕ್ಷೇತ್ರ'ವನ್ನು ಕಲ್ಪಿಸಿದರು. ಈ ಮಧ್ಯೆ ಮೊದಲ ಮಹಾಯುದ್ಧವು ಹಠಾತ್ ಆರಂಭವಾಯಿತು (1914). ಇದು ರಾಷ್ಟ್ರೀಯ ಚಳವಳಿಗೆ ಹೊಸ ಹುರುಪನ್ನು ನೀಡಿತು. 1916ರಲ್ಲಿ ಲೋಕಮಾನ್ಯ ತಿಲಕರು ಮತ್ತು ಆ್ಯನಿ ಬೆಸೆಂಟರು ಹೋಂ ರೂಲ್ (ಗೃಹಾಡಳಿತ) ಚಳವಳಿಯನ್ನು ಹಮ್ಮಿಕೊಂಡರು.

©KTBS NOT TO BE REPUBLISHED

## ರೌಲಟ್ ಕಾಯಿದೆ (1919)

1917ರ ಡಿಸೆಂಬರ್‌ನಲ್ಲಿ ನ್ಯಾಯಮೂರ್ತಿ ರೌಲಟ್‌ನ ಮಾರ್ಗದರ್ಶನದಲ್ಲಿ ಒಂದು ಸಮಿತಿ ರಚನೆಯಾಯಿತು. ಇದರ ಉದ್ದೇಶ ಭಾರತದ ಕ್ರಾಂತಿಕಾರಿ ಚಟುವಟಿಕೆಗಳನ್ನು ಹತ್ತಿಕ್ಕುವುದಾಗಿತ್ತು. ಅಂತಿಮವಾಗಿ ರೌಲಟ್ ಕಾಯಿದೆ 1919ರ ಫೆಬ್ರವರಿಯಲ್ಲಿ ಜಾರಿಯಾಯಿತು. ಈ ಕಾಯಿದೆಯ ಪ್ರಕಾರ ಅನುಮಾನ ಬಂದ ಯಾವುದೇ ವ್ಯಕ್ತಿಯನ್ನು ಯಾವ ಕಾರಣವೂ ನೀಡದೆ ಸರ್ಕಾರ ಬಂಧಿಸಬಹುದಾಗಿತ್ತು. ಮುನ್ಸೂಚನೆ ನೀಡದೆ ಯಾವುದೇ ಪ್ರದೇಶವನ್ನು ಶೋಧ ಮಾಡಬಹುದಾಗಿತ್ತು. ಬಂಧಿತ ವ್ಯಕ್ತಿಗೆ ವಕೀಲರನ್ನು ನೇಮಿಸಿಕೊಳ್ಳುವ ಹಕ್ಕು ಕೂಡ ಇರಲಿಲ್ಲ. ಭಾರತೀಯರು ಇದನ್ನು ತೀವ್ರವಾಗಿ ವಿರೋಧಿಸಿದರು. ಕ್ರೋಧದ ಅಲೆಗಳು ದೇಶಾದ್ಯಂತ ಕಂಡುಬಂದವು. ಇದರ ವಿರುದ್ಧ ಗಾಂಧೀಜಿಯವರು ಸತ್ಯಾಗ್ರಹ ಹೂಡಿದರು.

## ಜಲಿಯನ್‌ವಾಲಾಬಾಗ್ ಹತ್ಯಾಕಾಂಡ (1919)

ರೌಲಟ್ ಕಾಯಿದೆಯ ವಿರುದ್ಧ ಗಾಂಧೀಜಿ ಹಮ್ಮಿಕೊಂಡಿದ್ದ ಸತ್ಯಾಗ್ರಹದಿಂದಾಗಿ ಪಂಜಾಬಿನ ಬಹುತೇಕ ಭಾಗಗಳಲ್ಲಿ ಪ್ರತಿಭಟನೆಗಳು ಆರಂಭವಾದವು. 1919 ಏಪ್ರಿಲ್ 13ರಂದು ಅಮೃತಸರದ ಸುವರ್ಣ ಮಂದಿರದಿಂದ ಸ್ವಲ್ಪ ದೂರದಲ್ಲಿರುವ ಜಲಿಯನ್‌ವಾಲಾಬಾಗ್ ಎಂಬಲ್ಲಿಯ ಉದ್ಯಾನದಲ್ಲಿ ಸಭೆಯೊಂದನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ತಮ್ಮ ನಾಯಕರಾಗಿದ್ದ ಡಾ. ಕಿಚ್‌ಲೂ ಮತ್ತು ಡಾ. ಸತ್ಯಪಾಲರ ಬಂಧನದ ವಿರುದ್ಧ ಪ್ರತಿಭಟನೆ ಮಾಡುವುದಾಗಿತ್ತು.

© KTBS NOT TO BE REPUBLISHED



*ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಭೀಕರ ದೃಶ್ಯ*

ಅಮೃತಸರದ ರಕ್ಷಣಾ ಪಾಲಕನಾಗಿದ್ದ ಜನರಲ್ ಡೈಯರನು ಪ್ರತಿಭಟನೆ ಮಾಡುತ್ತಿದ್ದ ಜನರಿಗೆ ಬುದ್ಧಿ ಕಲಿಸಬೇಕೆಂದು ಉದ್ಯಾನದ ಏಕೈಕ ನಿರ್ಗಮನ ದ್ವಾರವನ್ನು

ಮುಚ್ಚಿಸಿ ನಿರಾಯುಧರಾಗಿದ್ದ ಜನತೆಯ ಮೇಲೆ ಗುಂಡು ಹಾರಿಸಲು ಅಜ್ಞಾಪಿಸಿದನು. ಭಯಭೀತಿಯಿಂದ ಜನಸ್ತೋಮ ಒಮ್ಮೆಲೆ ಹೌಹಾರಿತು. ಸರ್ಕಾರಿ ವರದಿಯ ಪ್ರಕಾರ ಕೊಲ್ಲಲ್ಪಟ್ಟವರು ಕೇವಲ 379 ಮಂದಿ ಮಾತ್ರವಾಗಿತ್ತು. ಆದರೆ ವಾಸ್ತವವಾಗಿ ವರದಿಯ ಹೇಳಿಕೆಗಿಂತಲೂ ಹೆಚ್ಚು ಜನರು ಸತ್ತಿದ್ದರು. ಇಂದಿಗೂ ಸಹ ಉದ್ಯಾನದಲ್ಲಿ ಗುಂಡಿನ ಗುರುತುಗಳನ್ನು ಕಾಣಬಹುದು. ಈ ಕ್ರೂರ ಕೃತ್ಯವನ್ನು ತೀವ್ರವಾಗಿ ಖಂಡಿಸಲಾಯಿತು.

## ಕ್ರಾಂತಿಕಾರಿ ರಾಷ್ಟ್ರೀಯತೆ

ತೀವ್ರವಾದಿಗಳಲ್ಲಿ ಕೆಲವು ಮಂದಿ ಸಶಸ್ತ್ರ ಕ್ರಾಂತಿಗೆ ಮುಂದಾದರು. ಇವರನ್ನು 'ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು' ಎನ್ನುವರು. ಬ್ರಿಟಿಷ್ ಅಧಿಕಾರಿಗಳು ಇವರನ್ನು 'ಭಯೋತ್ಪಾದಕರು' ಎಂದು ಕರೆದರು. ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ತುರ್ತಾಗಿ ದೊರಕಿಸುವ ಧ್ಯೇಯ ಇವರದಾಗಿತ್ತು. ಗಾಢವಾದ ದೇಶಭಕ್ತಿ ಮತ್ತು ತ್ಯಾಗಮನೋಭಾವವು ಕ್ರಾಂತಿಕಾರಿ ರಾಷ್ಟ್ರೀಯವಾದದ ಮೂಲತತ್ವವಾಗಿತ್ತು.

ರಹಸ್ಯ ಸಂಘಟನೆಯನ್ನು ರೂಪಿಸಿಕೊಂಡ ಕ್ರಾಂತಿಕಾರಿಗಳಲ್ಲಿ ವಾಸುದೇವ ಬಲವಂತ ಫಡ್ಕೆ ಮೊದಲಿನವರು. ದಾಮೋದರ ಮತ್ತು ಬಾಲಕೃಷ್ಣ ಚಾಪೇಕರ್ ಸಹೋದರರು ಅವರ ರಹಸ್ಯ ಸಂಘಟನೆಯ ಜೀವನಾಡಿಗಳಾಗಿದ್ದರು. ಇವರಿಬ್ಬರನ್ನೂ ಬಂಧಿಸಿ ಗಲ್ಲಿಗೇರಿಸಲಾಯಿತು.

ನಮ್ಮ ದೇಶದ ಇತರ ಕ್ರಾಂತಿಕಾರಿಗಳೆಂದರೆ ವಿನಾಯಕ ದಾಮೋದರ ಸಾವರ್ಕರ್, ಖುದಿರಾಮ್ ಬೋಸ್, ಚಂದ್ರಶೇಖರ ಆಜಾದ್ ಮತ್ತು ಭಗತ್ ಸಿಂಗ್. ಖುದಿರಾಮ್ ಸ್ವಾತಂತ್ರ್ಯ ಹೋರಾಟದಲ್ಲಿ ನೇಣುಗಂಬ ಏರಿದ ಭಾರತದ ಮೊದಲ ಹುತಾತ್ಮ (1908). ಆಗ ಅವನ ವಯಸ್ಸು ಕೇವಲ 19 ವರ್ಷ. ಇಷ್ಟು ಚಿಕ್ಕವನ ಬಲಿದಾನವನ್ನು ಕಂಡು ದೇಶದ ಜನತೆ ಕಂಬನಿ ಮಿಡಿಯಿತು.

@KTBS NOT TO BE REPUBLISHED



*ಖುದಿರಾಮ್ ಬೋಸ್*



*ಚಂದ್ರಶೇಖರ ಆಜಾದ್*



*ಭಗತ್ ಸಿಂಗ್*



*ವಿನಾಯಕ ದಾಮೋದರ ಸಾವರ್ಕರ್*

ವಿನಾಯಕ ದಾಮೋದರ ಸಾವರ್ಕರ್ ಮತ್ತೋರ್ವ ಕ್ರಾಂತಿಕಾರಿ. 1899ರಲ್ಲಿ ಅವರು 'ಮಿತ್ರಮೇಳ' ಎನ್ನುವ ಪ್ರಥಮ ಗುಪ್ತ ಸಂಘಟನೆಯನ್ನು ಕಟ್ಟಿದರು. ನಂತರ ಇದನ್ನೇ 'ಅಭಿನವ ಭಾರತ' ಎಂದು ಕರೆಯಲಾಯಿತು. ಅವರಿಗೆ ಬ್ರಿಟಿಷ್ ಸರ್ಕಾರ ಜೀವಾವಧಿ ಕಾರಾಗೃಹವಾಸವನ್ನು ವಿಧಿಸಿ ಅಂಡಮಾನ್ ಜೈಲಿಗೆ ರವಾನಿಸಿತು. ಅವರು ಕ್ರೂರ ದೈಹಿಕ ಚಿತ್ರಹಿಂಸೆಯನ್ನು ಅನುಭವಿಸಿದ ಅಂಡಮಾನ್ ಜೈಲಿನಲ್ಲಿ ಭಾರತ ಸರ್ಕಾರ ಅವರ ಸ್ಮಾರಕವನ್ನು ನಿರ್ಮಿಸಿದೆ.

ಚಂದ್ರಶೇಖರ ಆಜಾದ್ 'ಹಿಂದೂಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್'ಗೆ ಸೇರಿ ಕಾಕೋರಿ ಪಿತೂರಿ, ಶಾಸನ ಸಭೆಯ ಬಾಂಬ್ ಘಟನೆ ಹಾಗೂ ಲಾಹೋರಿನಲ್ಲಿ ಬ್ರಿಟಿಷ್ ಅಧಿಕಾರಿ ಸ್ಯಾಂಡರ್ಸ್‌ನ ಮೇಲೆ ಗುಂಡಿನ ದಾಳಿ ಮುಂತಾದ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದನು.

**ಚಟುವಟಿಕೆ:** 'ಕಾಕೋರಿ ಪಿತೂರಿ' ಎಂದರೇನು? ಶಿಕ್ಷಕರ ಮಾರ್ಗದರ್ಶನದಲ್ಲಿ ವಿಷಯ ಸಂಗ್ರಹಿಸಿರಿ.

ಬ್ರಿಟಿಷ್ ಸೈನಿಕರಿಂದ ತಪ್ಪಿಸಿಕೊಳ್ಳಲು ಆಜಾದ್ ಒಂದು ಸಣ್ಣ ಪಿಸ್ತೂಲಿನೊಂದಿಗೆ ಏಕಾಂಗಿ ಹೋರಾಟ ನಡೆಸಿದನು. ಕೇವಲ ಒಂದು ಗುಂಡು ಉಳಿದಿದ್ದಾಗ ತನ್ನ ಕಪೋಲಕ್ಕೆ ಗುರಿಯಿಟ್ಟು ಹಾರಿಸಿಕೊಂಡು, ತಾನು ಬಂಧನಕ್ಕೊಳಗಾಗುವುದಿಲ್ಲ ಎನ್ನುವ ತನ್ನ ಪ್ರತಿಜ್ಞೆಯನ್ನು ಉಳಿಸಿಕೊಂಡನು. ಭಗತ್ ಸಿಂಗ್, ರಾಜಗುರು, ಸುಖದೇವ್, ಭಗವತೀ ಚರಣ್ ಹಾಗೂ ಗಯಾಪ್ರಸಾದರಂತಹ ಅನೇಕ ಹುತಾತ್ಮರು ಬ್ರಿಟಿಷರ ದಾಸ್ಯದಿಂದ ಭಾರತ ಬಿಡುಗಡೆ ಹೊಂದಲು ತಮ್ಮನ್ನೇ ಅರ್ಪಿಸಿಕೊಂಡರು.

ಭಗತ್ ಸಿಂಗ್ ಹಿಂದೂಸ್ಥಾನ್ ಸಮಾಜವಾದಿ ರಿಪಬ್ಲಿಕನ್ ಸಂಘಟನೆಯನ್ನು ಸೇರಿ ಅದರ ಪ್ರಧಾನ ಕಾರ್ಯದರ್ಶಿಯಾದನು. 1929ರಲ್ಲಿ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ದಿಲ್ಲಿಯಲ್ಲಿ ಕೇಂದ್ರೀಯ ಶಾಸನಸಭೆಯ ಮೇಲೆ ಬಾಂಬೆಸೆದರು. ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಈ ಮೂವರನ್ನು ಗಲ್ಲಿಗೇರಿಸಲಾಯಿತು. ಭಗತ್‌ಸಿಂಗ್ "ಇಂಕ್ವಿಲಾಬ್ ಜಿಂದಾಬಾದ್" (ಕ್ರಾಂತಿ ಚಿರಾಯುವಾಗಲಿ) ಎಂಬ ಘೋಷಣೆಯನ್ನು ಮೊದಲ ಬಾರಿಗೆ ಹಾಕಿದ ಭಾರತೀಯನಾಗಿದ್ದಾನೆ. ಒಟ್ಟಿನಲ್ಲಿ ಕ್ರಾಂತಿಕಾರಿಗಳು ರಾಜಕೀಯ ಪ್ರಜ್ಞೆಯನ್ನು ಬಡಿದೆಬ್ಬಿಸಿದರು. ಅವರಿಂದ ಯುವಜನತೆ ಪ್ರೇರಣೆ ಪಡೆಯಿತು.

ವಿದೇಶದಲ್ಲಿ ನೆಲೆಸಿದ್ದ ಭಾರತೀಯರು ಕೂಡ ಕ್ರಾಂತಿಕಾರಿ ಚಟುವಟಿಕೆಯನ್ನು ಆರಂಭಿಸಿದರು. ಸೋಹನ್‌ಸಿಂಗ್ ಭಾಕ್ನ ಎಂಬವನು 1913ರಲ್ಲಿ ಅಮೆರಿಕದ ಸ್ಯಾನ್‌ಫ್ರಾನ್ಸಿಸ್‌ಕೋದಲ್ಲಿ ಘದರ್ ಚಳವಳಿಯನ್ನು ಪ್ರಾರಂಭಿಸಿದನು.

ಮಂದಗಾಮಿಗಳಿಂದ ಆರಂಭವಾದ ಕಾಂಗ್ರೆಸ್ ಪಕ್ಷ ಕ್ರಮೇಣ ಜನಪ್ರಿಯ ಸಂಘಟನೆಯಾಗಿ ರೂಪುಗೊಂಡಿತು. ಕಾಂಗ್ರೆಸ್ ಸಂಘಟನೆಯು ನಿಧಾನವಾಗಿ ಬೇರೆ ಬೇರೆ ರಾಜಕೀಯ ಬೆಳವಣಿಗೆಗಳಿಗೆ ಒಳಗಾಯಿತು. ತೀವ್ರಗಾಮಿಗಳು ಕಾಂಗ್ರೆಸಿಗೆ ಭಾವ ತೀವ್ರತೆಯನ್ನು ತಂದುಕೊಟ್ಟರು. ಬ್ರಿಟಿಷರು ಕಾಂಗ್ರೆಸನ್ನು ದ್ವೇಷಿಸುವ ಮೂಲಕ ಒಡೆಯುವ ಪ್ರಯತ್ನ ಮಾಡಿದರು. ಮತೀಯ ರಾಜಕೀಯ ತಂತ್ರಗಾರಿಕೆಯನ್ನು ಅನುಸರಿಸಿ ರಾಷ್ಟ್ರೀಯ ಹೋರಾಟದ ಕಾವನ್ನು ತಗ್ಗಿಸುವ ಪ್ರಯತ್ನ ಮಾಡಿದರು. ಇದರಿಂದ ರಾಷ್ಟ್ರೀಯ ಹೋರಾಟಕ್ಕೆ ತಾತ್ಕಾಲಿಕ ಹಿನ್ನಡೆಯಾಯಿತೇ ವಿನಃ ಅದು ನಿಷ್ಕ್ರಿಯಗೊಳ್ಳಲಿಲ್ಲ. 1919ರ ನಂತರ ಕಾಂಗ್ರೆಸ್ ಗಾಂಧೀಜಿಯವರ ನಾಯಕತ್ವದಲ್ಲಿ ಹೊಸ ರೂಪ ತಳೆಯಿತು.

© KTBS NOT TO BE REPUBLISHED

# 16.2 ಗಾಂಧಿ ಯುಗ (1919–1947)

## ಮಹಾತ್ಮ ಗಾಂಧಿ

ಆಧುನಿಕ ವಿಶ್ವಕ್ಕೆ ಮೋಹನದಾಸ್ ಕರಮಚಂದ ಗಾಂಧಿಯವರ ಬಗ್ಗೆ ಗೊತ್ತಿರುವಷ್ಟು ಯಾವ ಭಾರತೀಯರ ಬಗ್ಗೆಯೂ ಗೊತ್ತಿರಲಿಕ್ಕಿಲ್ಲ. ಅಹಿಂಸೆ ಮತ್ತು ಸತ್ಯಾಗ್ರಹ ನೀತಿಯು ಗಾಂಧೀಜಿಯವರ ಹೋರಾಟದ ಅಸ್ತ್ರಗಳಾಗಿದ್ದವು. ಅವರು ಸ್ವಾತಂತ್ರ್ಯ ಚಳವಳಿಗೆ ಜನಾಂದೋಲನದ ಸ್ವರೂಪವನ್ನು ತಂದುಕೊಟ್ಟರು. ಸರಳತೆ, ಸಜ್ಜನಿಕೆ, ಸತ್ಯಸಂಧತೆ ಅವರ ಯಶಸ್ಸಿನ ಸೂತ್ರಗಳಾಗಿದ್ದವು. ಮಹಿಳೆಯರೂ ಸೇರಿದಂತೆ ಎಲ್ಲ ಸಾಮಾಜಿಕ ವರ್ಗಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಈ ಅಸ್ತ್ರಗಳೇ ಪ್ರಮುಖ ಕಾರಣವಾಗಿದ್ದವು.

**ಆರಂಭಿಕ ಜೀವನ:** ಗಾಂಧೀಜಿಯವರು 1869ರ ಅಕ್ಟೋಬರ್ 2ರಂದು ಪೋರಬಂದರ್ ಎಂಬಲ್ಲಿ ಕರಮಚಂದ ಗಾಂಧಿ ಮತ್ತು ಪುತಲೀಬಾಯಿಯವರ ಮಗನಾಗಿ ಜನಿಸಿದರು. ಅವರ ತಂದೆ ಪೋರಬಂದರ್ ಮತ್ತು ರಾಜಕೋಟ್ ಸಂಸ್ಥಾನಗಳಲ್ಲಿ ದಿವಾನ್ (ಮುಖ್ಯಮಂತ್ರಿ) ಆಗಿದ್ದರು. ತಾಯಿ ಆಳವಾದ ಧಾರ್ಮಿಕ ನಂಬಿಕೆಯುಳ್ಳವರಾಗಿದ್ದರು. ಗಾಂಧೀಜಿಯವರ ನೈತಿಕ ಮೌಲ್ಯಗಳು ಮತ್ತು ಬದ್ಧತೆ ಅವರ ತಾಯಿಯಿಂದ ಬಳುವಳಿಯಾಗಿ ಬಂದಿದ್ದವು.

> ಗಾಂಧೀಜಿಯವರ ಜೀವನದ ಮೇಲೆ ಪ್ರಭಾವ ಬೀರಿದ ಪ್ರಮುಖ ಕೃತಿಗಳೆಂದರೆ: ಭಗವದ್ಗೀತೆ, ಜಾನ್ ರಸ್ಕಿನನ 'ಕೊನೆಯ ತನಕ' (Unto this Last), ಲಿಯೋ ಟಾಲ್‌ಸ್ಟಾಯ್ ಅವರ 'ನಿನ್ನಂತರಂಗವೇ ದೇವರ ರಾಜ್ಯ' (The Kingdom of God lies Within You) ಮತ್ತು ಸತ್ಯ ಹರಿಶ್ಚಂದ್ರ ನಾಟಕ.

© KTBS NOT TO BE REPUBLISHED

## ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ

ಗಾಂಧೀಜಿಯವರ ಆರಂಭಿಕ ಶಿಕ್ಷಣ ಪೋರಬಂದರಿನಲ್ಲಾಯಿತು. ಉನ್ನತ ಶಿಕ್ಷಣಕ್ಕಾಗಿ ಅವರು ಇಂಗ್ಲೆಂಡಿಗೆ ತೆರಳಿದರು. ಅವರು ಬ್ರಿಟನಿನಲ್ಲಿ ಕಾನೂನು ಪದವಿ ಪಡೆದರು. 1891ರಲ್ಲಿ ಭಾರತಕ್ಕೆ ಹಿಂದಿರುಗಿ ರಾಜ್‌ಕೋಟ್ ಮತ್ತು ಮುಂಬೈಯಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿದರು. ಆರಂಭದಲ್ಲಿ ವಕೀಲ ವೃತ್ತಿಯಲ್ಲಿ ಅವರು ಯಶಸ್ವಿಯಾಗಲಿಲ್ಲ. ಕೆಲಕಾಲದ ನಂತರ ದಾದಾ ಅಬ್ದುಲ್ಲಾ ಕಂಪನಿಯ ಆಹ್ವಾನದ ಮೇರೆಗೆ ಕಾನೂನು ಸಲಹೆಗಾರರಾಗಿ ದಕ್ಷಿಣ ಆಫ್ರಿಕಕ್ಕೆ ತೆರಳಿದರು. ಅಲ್ಲಿ ಸತ್ಯಾಗ್ರಹ ಮತ್ತು ಅಹಿಂಸೆಗಳೆಂಬ ಅಸ್ತ್ರಗಳ ಮೂಲಕ ಭಾರತೀಯರಿಗಾಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಡಿದರು. ದಕ್ಷಿಣ ಆಫ್ರಿಕದಲ್ಲಿ ನಡೆಸಿದ ಈ ಪ್ರಯೋಗಗಳು ಮತ್ತು ಅವುಗಳಿಂದ ದೊರಕಿದ ಯಶಸ್ಸಿನಿಂದ ಗಾಂಧೀಜಿಯವರ ವ್ಯಕ್ತಿತ್ವಕ್ಕೆ ವಿಶೇಷ ಮೆರಗು ಬಂದಿತು. ಇಂದು ಗಾಂಧೀಜಿಯವರ ಹೋರಾಟದ ವಿಧಾನವು 'ಗಾಂಧೀಗಿರಿ' ಎಂಬ ಹೆಸರಿನಿಂದ ಜನಪ್ರಿಯವಾಗುತ್ತಿದೆ.

ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿದ್ದಾಗ, ಭಾರತೀಯರು ಅಲ್ಲಿ ಕೆಳದರ್ಜೆಯವರಾಗಿ ಬಾಳುವುದನ್ನು ಕಂಡು ಆಘಾತಕ್ಕೊಳಗಾದರು. 'ಬಿಳಿಯರ' ಸರ್ಕಾರದ ಜನಾಂಗೀಯ ನೀತಿಯನ್ನು ಅವರು ವಿರೋಧಿಸಿದರು. ಅವರು ಸತ್ಯಾಗ್ರಹ ಮತ್ತು ಅಹಿಂಸಾ ಮಾರ್ಗಗಳ ಮೂಲಕ ಸರ್ಕಾರದ ಜನಾಂಗೀಯ ಪೂರ್ವಾಗ್ರಹವನ್ನು ಬದಲಾಯಿಸುವಲ್ಲಿ ಸಾಕಷ್ಟು ಯಶಸ್ಸನ್ನು ಕಂಡರು.

ಸತ್ಯಾಗ್ರಹ ಸಿದ್ಧಾಂತವು ಸಂಸ್ಕೃತದ ಎರಡು ಪದಗಳಿಂದ ಕೂಡಿದೆ: 'ಸತ್ಯ' ಎಂದರೆ ವಾಸ್ತವಿಕ ಸಂಗತಿ, 'ಆಗ್ರಹ' ಎಂದರೆ ಒತ್ತಾಯ. ಇದರರ್ಥ "ಸತ್ಯದಪರ ದೃಢವಾಗಿ ನಿಲ್ಲು".

**ಚಟುವಟಿಕೆ:** ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ನಡೆಸಿದ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟಗಳನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.

1915ರಲ್ಲಿ ಭಾರತಕ್ಕೆ ಹಿಂತಿರುಗಿದ ನಂತರ ಗಾಂಧೀಜಿಯವರು ಅಹಮದಾಬಾದಿನಲ್ಲಿ ಸಾಬರಮತಿ ಆಶ್ರಮವನ್ನು (1916) ಸ್ಥಾಪಿಸಿದರು. ತಮ್ಮ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆಯವರ ಮಾರ್ಗದರ್ಶನದ ಮೇರೆಗೆ ಭಾರತಾದ್ಯಂತ ಪ್ರವಾಸ ಮಾಡಿ ಜನತೆಯ ಶೋಚನೀಯ ಸ್ಥಿತಿಯನ್ನು ಕಂಡರು. ಇದು ಅವರ ಮೊದಲ ಸಾಮಾಜಿಕ ಅನುಭವವಾಗಿತ್ತು. ಹೀಗೆ ಗಾಂಧೀಜಿಯವರು ಭಾರತೀಯ ಸಮಾಜದ ವಾಸ್ತವ ಸ್ವರೂಪವನ್ನು ಅರಿಯತೊಡಗಿದರು.



*ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಕಾನೂನು ಸಲಹೆಗಾರರಾಗಿದ್ದಾಗ*

## ಆರಂಭದ ರಾಜಕೀಯ ಜೀವನ

ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ 1919ರ ಸಂವತ್ಸರವು ಒಂದು ಮಹತ್ವದ ಮೈಲಿಗಲ್ಲಾಗಿದೆ. ಇದು ಗಾಂಧೀಜಿಯವರು ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದ ವರ್ಷ. ಬ್ರಿಟಿಷರನ್ನು ದೈಹಿಕ ಬಲದ ಮೂಲಕ ಹೊರದೂಡಲು ಸಾಧ್ಯವಿಲ್ಲವೆಂಬ ಸತ್ಯವನ್ನು ಅವರು ಮನಗಂಡಿದ್ದರು. ತಾತ್ವಿಕವಾಗಿ ದೈಹಿಕ ಬಲದ ಪ್ರಯೋಗಕ್ಕೆ ವಿರುದ್ಧವಾಗಿದ್ದರು. 1919ರಲ್ಲಿ ಗಾಂಧೀಜಿಯವರು ರೌಲಟ್ ಕಾಯಿದೆಯ ಜಾರಿ ಮತ್ತು ಜಲಿಯನ್‌ವಾಲಾಬಾಗ್ ಘೋರ ಹಿಂಸಾಕೃತ್ಯದ ವಿರುದ್ಧ ಚಳವಳಿ ಹೂಡಿದರು. ಅಲ್ಲದೆ ಖಿಲಾಫತ್ ಚಳವಳಿಯ ನಾಯಕತ್ವ ವಹಿಸಿದರು. ಈ ಮೂಲಕ ಹಿಂದೂ ಮತ್ತು ಮುಸ್ಲಿಮರ ನಡುವೆ ಸಾಮರಸ್ಯ ಏರ್ಪಡಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು.

©KTBS NOT TO BE REPUBLISHED

### ಖಿಲಾಫತ್ ಚಳವಳಿ ಎಂದರೇನು?

ಟರ್ಕಿ ಸಾಮ್ರಾಜ್ಯವು ಖಲೀಫನ ಕೈಕೆಳಗಿತ್ತು. ಖಲೀಫನು ಸಕಲ ಮುಸ್ಲಿಮರ ಧರ್ಮಗುರು ಎಂದು ಅನೇಕ ಮುಸ್ಲಿಮರು ನಂಬಿದ್ದರು. ಒಂದನೆಯ ವಿಶ್ವಸಮರದಲ್ಲಿ ಟರ್ಕಿ ಬ್ರಿಟನ್ನಿನ ವಿರುದ್ಧವಾಗಿ ನಿಂತಿದ್ದು, ಯುದ್ಧದಲ್ಲಿ ಪರಾಭವಗೊಂಡಿತು. ಟರ್ಕಿಯ ಭಾಗವಾಗಿದ್ದ ಅರೇಬಿಯಾ, ಜೋರ್ಡಾನ್, ಇರಾಕ್ ಇತ್ಯಾದಿಗಳು ಸ್ವತಂತ್ರ ರಾಜ್ಯಗಳಾದವು. 1919ರಲ್ಲಿ ಕಮಾಲ್ ಪಾಷಾ ಎಂಬ ನಾಯಕನು ಟರ್ಕಿಯ ಖಲೀಫನ ಅರಸೊತ್ತಿಗೆಯನ್ನು ಮೂಲೆಗೊತ್ತಿ ಅಧಿಕಾರಕ್ಕೇರಿದನು. ಇದಕ್ಕೆ ಪ್ರತಿಕ್ರಿಯಿಸಿದ ಭಾರತೀಯ ಮುಸ್ಲಿಮರು ಖಲೀಫನ ಪರವಾಗಿಯೂ ಬ್ರಿಟನ್ನಿನ ವಿರುದ್ಧವಾಗಿಯೂ ಆಂದೋಲನ ನಡೆಸಿದರು. ಇದನ್ನು ಖಿಲಾಫತ್ ಚಳವಳಿ ಎನ್ನುವರು. ಗಾಂಧೀಜಿಯವರು ಚಳವಳಿಯ ಮುಂದಾಳತ್ವವನ್ನು ವಹಿಸಿದರು. ಮೊಹಮ್ಮದ್ ಆಲಿ ಮತ್ತು ಶೌಕತ್ ಆಲಿ (ಆಲಿ ಸಹೋದರರು) ಈ ಚಳವಳಿಯ ಪ್ರಮುಖ ನಾಯಕರಾಗಿದ್ದರು.

## ಅಸಹಕಾರ ಚಳವಳಿ (1920–22)

ಗಾಂಧೀಜಿಯವರ ನಾಯಕತ್ವದಲ್ಲಿ ಅಸಹಕಾರ ಚಳವಳಿಯು 1920ರಲ್ಲಿ ಆರಂಭವಾಯಿತು. ಅವರು ಸರ್ಕಾರದೊಂದಿಗೆ ಅಸಹಕಾರ ತೋರಬೇಕೆಂದು ಜನತೆಗೆ ಕರೆಕೊಟ್ಟರಲ್ಲದೆ 'ಸ್ವರಾಜ್ಯ'ಕ್ಕಾಗಿ ಒತ್ತಾಯಿಸಬೇಕೆಂದರು. ಈ ಕಾರ್ಯಕ್ರಮದ ಅಂಗವಾಗಿ ನ್ಯಾಯಾಲಯಗಳು, ಶೈಕ್ಷಣಿಕ ಸಂಸ್ಥೆಗಳು, ಶಾಸಕಾಂಗ ಸಭೆಗಳಿಗೆ ಚುನಾವಣೆ ಮತ್ತು ಬ್ರಿಟಿಷ್ ಸರಕುಗಳನ್ನು ಬಹಿಷ್ಕರಿಸಲಾಯಿತು. ಇದರೊಂದಿಗೆ ಸರ್ಕಾರಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವುದಲ್ಲದೆ, ಸರ್ಕಾರ ನೀಡಿದ್ದ ಬಿರುದುಗಳನ್ನು ಹಿಂತಿರುಗಿಸಲಾಯಿತು. ಸ್ವಾತಂತ್ರ್ಯ ಚಳವಳಿಯನ್ನು ದೊಡ್ಡ ಮಟ್ಟದಲ್ಲಿ ಪರಿಣಾಮಕಾರಿಯಾಗಿ ನಡೆಸುವ ಸಲುವಾಗಿ 'ರಚನಾತ್ಮಕ ಕಾರ್ಯಕ್ರಮಗಳನ್ನು' ಗಾಂಧೀಜಿ ರೂಪಿಸಿದರು. ಈ ಕಾರ್ಯಕ್ರಮವು ವಿಶೇಷವಾಗಿ ನೂಲುವುದು ಮತ್ತು ನೇಯುವುದು, ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದೂ ಮುಸ್ಲಿಮರ ನಡುವೆ ಸಾಮರಸ್ಯ ಮೂಡಿಸುವುದಕ್ಕೆ ಒತ್ತು ನೀಡಿತು.

ಈ ಕಾಲಘಟ್ಟದಲ್ಲಿ ಪ್ರಮುಖ ನಾಯಕರಾದ ಸಿ.ಆರ್. ದಾಸ್, ಮೋತಿಲಾಲ್ ನೆಹರು, ವಲ್ಲಭಭಾಯ್ ಪಟೇಲ್, ಸುಭಾಷ್‌ಚಂದ್ರ ಬೋಸ್ ಇವರುಗಳು ಚಳವಳಿಗೆ ಸೇರಿದರು. ಅವರ ಅಹಿಂಸಾತ್ಮಕ ಮತ್ತು ಸತ್ಯಾಗ್ರಹದಂತಹ ವಿಧಾನಗಳಿಂದ ಸಮಾಜದ ಎಲ್ಲಾ ಸ್ತರದ ವರ್ಗದವರು ಆಕರ್ಷಿತರಾಗಿ ಚಳವಳಿಯಲ್ಲಿ ಭಾಗಿಯಾದರು. ಈ ಚಳವಳಿಯಲ್ಲಿ ವಿದ್ಯಾರ್ಥಿಗಳು, ರೈತರು ಮತ್ತು ಮಹಿಳೆಯರಿದ್ದರು. ಇದು ಭಾರತೀಯರಿಗೆ ಹೊಸ ಅನುಭವವಾಗಿತ್ತು. ರವೀಂದ್ರನಾಥ್ ಟಾಗೋರ್ ತಮ್ಮ 'ನೈಟ್‌ಹುಡ್' ಹಾಗೂ ಗಾಂಧೀಯವರು ತಮ್ಮ 'ಕೈಸರ್–ಎ–ಹಿಂದ್' ಪದವಿಗಳನ್ನು ಬ್ರಿಟಿಷ್ ಸರ್ಕಾರಕ್ಕೆ

© KTBS NOT TO BE REPUBLISHED

ಹಿಂತಿರುಗಿಸಿದರು. ಇದೇ ವೇಳೆ ಸರ್ಕಾರವು ಚಳವಳಿಯನ್ನು ಹತ್ತಿಕ್ಕಲು ದಮನಕಾರಿ ಕ್ರಮಗಳನ್ನು ಅನುಸರಿಸಿತು. ಇದಕ್ಕೆ ಉತ್ತರವೆಂಬಂತೆ ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಉದ್ರಿಕ್ತ ಜನಸ್ತೋಮ ಹಿಂಸಾಕೃತ್ಯದಲ್ಲಿ ತೊಡಗಿ ಅಲ್ಲಿನ ಠಾಣೆಯ 22 ಮಂದಿ ಪೊಲೀಸರನ್ನು ಜೀವಂತ ದಹಿಸಿತು (1922). ಗಾಂಧೀಜಿಯವರು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದರು. ತಮ್ಮ ಅಹಿಂಸಾ ಸಿದ್ಧಾಂತಕ್ಕೆ ವಿರುದ್ಧವಾಗಿ ಜನತೆ ವರ್ತಿಸುತ್ತಿರುವುದನ್ನು ಕಂಡು ವಿಷಾದಿಸುತ್ತಾ ಅಸಹಕಾರ ಚಳವಳಿಯನ್ನು ನಿಲ್ಲಿಸಿದರು.

ಸ್ವರಾಜ್ಯವನ್ನು ಸ್ಥಾಪಿಸುವಲ್ಲಿ ಅಸಹಕಾರ ಚಳವಳಿಯು ವಿಫಲವಾದರೂ ಅದೊಂದು ವಿಶಿಷ್ಟವಾದ ಪ್ರಪ್ರಥಮ ಜನಾಂದೋಲನವಾಗಿತ್ತು. ಇದರ ಪರಿಣಾಮವಾಗಿ ರಾಷ್ಟ್ರೀಯ ಭಾವನೆಗಳು ಭಾರತದ ಮೂಲೆಮೂಲೆಗೂ ತಲುಪುವಂತಾಯಿತು. ಗಾಂಧೀಜಿಯವರು 1924ರಿಂದ 1929ರವರೆಗೆ ರಚನಾತ್ಮಕ ಕಾರ್ಯಕ್ರಮಗಳಾದ ಖಾದಿಯನ್ನು ಜನಪ್ರಿಯಗೊಳಿಸುವುದು ಮತ್ತು ಹರಿಜನ ಉದ್ಧಾರ ಕಾರ್ಯಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು. ಸ್ವರಾಜ್ಯವಾದಿಗಳಾದ ಸಿ.ಆರ್. ದಾಸ್ ಮತ್ತು ಮೋತಿಲಾಲ್ ನೆಹರು ಅವರ ನೇತೃತ್ವದಲ್ಲಿ ರಾಷ್ಟ್ರೀಯ ಹೋರಾಟದ ಚಟುವಟಿಕೆಗಳು ಮುಂದುವರಿದವು.

## ನೆಹರು ವರದಿ (1927)

ಬ್ರಿಟಿಷರು ಭಾರತೀಯ ರಾಜಕೀಯ ನಾಯಕರಿಗೆ ಎಲ್ಲಾ ಸಮುದಾಯದವರು ಒಪ್ಪುವಂತಹ ಸಂವಿಧಾನವನ್ನು ರಚಿಸಿಕೊಳ್ಳುವಂತೆ ಸವಾಲೆಸೆದರು. ಭಾರತೀಯ ಸರ್ವಪಕ್ಷಗಳ ಸಮ್ಮೇಳನದಲ್ಲಿ ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಬ್ರಿಟಿಷರಿಗೆ ಬೆರಗು ಹುಟ್ಟಿಸುವಂತೆ ಸಂವಿಧಾನವೊಂದನ್ನು ರಚಿಸಿತು. ಅದು ಬ್ರಿಟಿಷ್ ಪ್ರಭುತ್ವದಡಿಯಲ್ಲಿ ಸ್ವಯಂ ಆಡಳಿತದ ಸ್ಥಾನಮಾನವನ್ನು ಒಪ್ಪಿದ್ದಲ್ಲದೆ ಅಂತಿಮವಾಗಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಗುರಿಯನ್ನೂ ವ್ಯಕ್ತಪಡಿಸಿತು.


ಮೋತಿಲಾಲ್ ನೆಹರು

## ಸೈಮನ್ ನಿಯೋಗ (1928)

ಅಸಹಕಾರ ಚಳವಳಿಯ ಸ್ಥಗಿತದಿಂದಾಗಿ ರಾಜಕೀಯ ಹೋರಾಟವು ತಾತ್ಕಾಲಿಕವಾಗಿ ತನ್ನ ಕಾಂತಿಯನ್ನು ಕಳೆದುಕೊಂಡಿತು. ಬ್ರಿಟಿಷ್ ಸರ್ಕಾರ 1919ರ ಸುಧಾರಣೆಗಳು ಭಾರತದ ಪ್ರಾಂತಗಳಲ್ಲಿ ಹೇಗೆ ಕಾರ್ಯಗತಗೊಂಡಿವೆ ಎಂದು ಅಧ್ಯಯನ ಮಾಡಿ ವರದಿ ಸಲ್ಲಿಸಲೆಂದು ಸೈಮನ್ ನಿಯೋಗವನ್ನು ಭಾರತಕ್ಕೆ ಕಳುಹಿಸಿತು (1928). ನಿಯೋಗವು ಇಂಗ್ಲಿಷ್ ಸದಸ್ಯರನ್ನು ಮಾತ್ರವೇ ಒಳಗೊಂಡಿದ್ದು ಭಾರತೀಯರಿಗೆ ಅದರಲ್ಲಿ ಪ್ರಾತಿನಿಧ್ಯವಿರಲಿಲ್ಲ.

©KTBS NOT TO BE REPUBLISHED




*ಸೈಮನ್ ನಿಯೋಗದ ಬಹಿಷ್ಕಾರದ ದೃಶ್ಯ*

ಭಾರತೀಯರು "ಸೈಮನ್ನರೆ ಹಿಂತಿರುಗಿ" ಎಂಬ ಘೋಷಣೆಯನ್ನು ಮೊಳಗಿಸುವುದರೊಂದಿಗೆ ನಿಯೋಗವನ್ನು ಬಹಿಷ್ಕರಿಸಿದರು. ಲಾಹೋರಿನಲ್ಲಿ ನಡೆದ ಬಹಿರಂಗ ಪ್ರತಿಭಟನೆಯು ತೀವ್ರ ಸ್ವರೂಪವನ್ನು ತಾಳಿತು. ಈ ಸಂದರ್ಭದಲ್ಲಿ ನಡೆದ ಲಾಠಿ ಪ್ರಯೋಗದಲ್ಲಿ ಲಾಲಾ ಲಜಪತ್ ರಾಯ್ ಅವರು ಚೇತರಿಸಿಕೊಳ್ಳಲಾಗದೆ ಮರಣ ಹೊಂದಿದರು (1928). ಅವರ ಬಲಿದಾನದಿಂದ ಜನರ ಸಹನೆಯ ಕಟ್ಟೆಯೊಡೆಯಿತು.

ಬ್ರಿಟಿಷರನ್ನು ಭಾರತದಿಂದ ಹೊರದೂಡುವ ಬಗ್ಗೆ ಲಾಲಾ ಲಜಪತ್ ರಾಯ್ ನುಡಿದಿದ್ದ ಭವಿಷ್ಯವಾಣಿ ಇದಾಗಿದೆ: "ನನ್ನ ಮೈಮೇಲಿನ ಲಾಠಿ ಹೊಡೆತಗಳು ಮುಂದೊಂದು ದಿನ ಬ್ರಿಟಿಷ್ ಶವಪೆಟ್ಟಿಗೆಯ ಮೇಲಿನ ಮೊಳೆಗಳಾಗಲಿವೆ".

## ಪೂರ್ಣ ಸ್ವರಾಜ್ಯ (1929)

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಳಗಿನ ಯುವಪೀಳಿಗೆಯನ್ನು ಪ್ರತಿನಿಧಿಸುತ್ತಿದ್ದ ಜವಾಹರಲಾಲ್ ನೆಹರು ಮತ್ತು ಸುಭಾಷ್‌ಚಂದ್ರ ಬೋಸ್ ಅವರು ನೆಹರು ವರದಿಯಲ್ಲಿ ಪ್ರಸ್ತಾಪಿಸಲಾಗಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ಪರಿಧಿಯೊಳಗಿನ ಸ್ವಯಂ ಆಡಳಿತದ ಸ್ಥಾನಮಾನವನ್ನು ಒಪ್ಪಿಕೊಳ್ಳಲಿಲ್ಲ. ಇದರ ಪರಿಣಾಮವಾಗಿ 1929ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ "ಸಂಪೂರ್ಣ ಸ್ವಾತಂತ್ರ್ಯ"ದ ನಿರ್ಣಯವನ್ನು ಮಂಡಿಸಲಾಯಿತು. 1930ರ ಜನವರಿ 26ರಂದು "ಪೂರ್ಣ ಸ್ವರಾಜ್ಯದಿನ" ಎಂದು ಆಚರಿಸಲು ಅಧಿವೇಶನದಲ್ಲಿ ನಿರ್ಧರಿಸಲಾಯಿತು. ಈ ಐತಿಹಾಸಿಕ ಸಂಭ್ರಮಾಚರಣೆಯ ದಿನದ ನೆನಪನ್ನು ಹಸಿರಾಗಿಸಲು, ಸ್ವತಂತ್ರ ಭಾರತದ ಸಂವಿಧಾನವನ್ನು ಜನವರಿ 26, 1950ರಂದು ಅಂಗೀಕರಿಸಲಾಯಿತು. ಅಂದಿನಿಂದ ಪ್ರತಿವರ್ಷ ಆ ದಿನವನ್ನು ಗಣರಾಜ್ಯೋತ್ಸವ ದಿನವಾಗಿ ಆಚರಿಸಲಾಗುತ್ತಿದೆ.

©KTBS NOT TO BE REPUBLISHED

# ನಾಗರಿಕ ಕಾನೂನುಭಂಗ ಚಳವಳಿ



*ದಂಡಿ ಯಾತ್ರೆಯ ದೃಶ್ಯ*

ನಾಗರಿಕ ಕಾನೂನುಭಂಗ ಚಳವಳಿಯನ್ನು 1930ರ ಮಾರ್ಚ್ 12ರಂದು ಗಾಂಧೀಜಿ ಅವರು ಪ್ರಸಿದ್ಧ ದಂಡಿಯಾತ್ರೆಯೊಂದಿಗೆ ಆರಂಭಿಸಿದರು. ಆಯ್ದ 78 ಮಂದಿ ಅನುಯಾಯಿಗಳೊಡನೆ ಗಾಂಧೀಜಿ ಸಾಬರಮತಿ ಆಶ್ರಮದಿಂದ ಗುಜರಾತಿನ ಕಡಲತೀರದ ದಂಡಿಯವರೆಗೂ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು. ಜನರಿಂದ ಉಪ್ಪನ್ನು ಉತ್ಪಾದಿಸುವುದರ ಮೂಲಕ ಉಪ್ಪಿನ ಕಾನೂನನ್ನು ಮುರಿಯುವುದು ಈ ಯಾತ್ರೆಯ ಮುಖ್ಯ ಉದ್ದೇಶವಾಗಿತ್ತು.

ಕಾನೂನುಭಂಗ ಚಳವಳಿಯು ಬಹುಬೇಗ ದೇಶದಾದ್ಯಂತ ಹರಡಿತು. ಎಲ್ಲೆಡೆ ಜನರು ಹರತಾಳ, ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಪ್ರಚಾರ, ಮದ್ಯದ ಅಂಗಡಿಗಳ ಮುಂದೆ ಪ್ರತಿಭಟನೆ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮೊದಲಾದವುಗಳಲ್ಲಿ ಭಾಗವಹಿಸಿದರು. ಅಂಕೋಲೆಯ ಉಪ್ಪಿನ ಸತ್ಯಾಗ್ರಹವು ದಾಖಲೆಯನ್ನು ನಿರ್ಮಿಸಿ ಭಾರತಾದ್ಯಂತ ಖ್ಯಾತಿ ಗಳಿಸಿತು.

ಇದೇ ವೇಳೆ ವಾಯವ್ಯ ಭಾರತದಲ್ಲಿ 'ಗಡಿನಾಡ ಗಾಂಧಿ' ಖಾನ್ ಅಬ್ದುಲ್ ಗಫಾರ್ ಖಾನರು 'ಖುದಾಯಿ ಖಿದ್ಮತ್‌ಗಾರ' (ದೇವರ ಸೇವಕರು) ಎಂಬ ಸಂಘವನ್ನು ಸ್ಥಾಪಿಸಿದರು. ನಾಗಾಲ್ಯಾಂಡಿನಲ್ಲಿ 13 ವರ್ಷದ ಬಾಲೆ ರಾಣಿ ಗಾಯ್ಡಿಲ್ಯೂ ಬ್ರಿಟಿಷರ ವಿರುದ್ಧ ಬಂಡಾಯ ನಡೆಸಿದಳು. ಹೀಗಾಗಿ ಅವರು ಭಾರತೀಯರಿಗೆ ಕೆಲವು ರಾಜಕೀಯ ರಿಯಾಯಿತಿಗಳನ್ನು ನೀಡಲು ಮುಂದಾದರು.

©KTBS NOT TO BE REPUBLISHED

## ದುಂಡುಮೇಜಿನ ಸಮ್ಮೇಳನಗಳು (1930–32)

ದಂಡಿ ಯಾತ್ರೆಯ ಬಳಿಕ ಬ್ರಿಟಿಷ್ ಸರ್ಕಾರ ಮೂರು ದುಂಡುಮೇಜಿನ ಸಮ್ಮೇಳನಗಳನ್ನು ಲಂಡನ್ನಿನಲ್ಲಿ ಆಯೋಜಿಸಿತು. ಕಾಂಗ್ರೆಸ್ ಮತ್ತು ಗಾಂಧೀಜಿಯವರು ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು. ಆದರೆ ಈ ಸಮ್ಮೇಳನಗಳು ಭಾರತೀಯ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲಗೊಂಡವು.

ಬ್ರಿಟಿಷ್ ಸರ್ಕಾರವು 1935ರಲ್ಲಿ ಭಾರತೀಯರಿಗೆ ಸರ್ಕಾರದಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ಸಹಭಾಗಿತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ಕಲ್ಪಿಸಿಕೊಡುವ ದೃಷ್ಟಿಯಿಂದ "ಭಾರತ ಸರ್ಕಾರ ಕಾಯಿದೆ"ಯನ್ನು ಜಾರಿಗೆ ತಂದಿತು.

## ಭಾರತ ಬಿಟ್ಟು ತೊಲಗಿ ಚಳವಳಿ (1942)

ಕ್ರಿಪ್ಸ್ ಆಯೋಗದ ವೈಫಲ್ಯವು ಭಾರತೀಯರನ್ನು ಕೆರಳಿಸಿತು. ಗಾಂಧೀಜಿ ಅವರು 1942ರ ಆಗಸ್ಟ್ 8ರಂದು ಮುಂಬೈನಲ್ಲಿ ಕಾಂಗ್ರೆಸಿನ ಸಭೆ ಕರೆದರು. ಅಲ್ಲಿ ಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ಎಂಬ ನಿರ್ಣಯವನ್ನು ಅಂಗೀಕರಿಸಿದರು. ಭಾರತೀಯರಿಗೆ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆ ನೀಡಿದರು. ಸರ್ಕಾರವು ಮರುದಿನವೆ ಗಾಂಧೀಜಿ ಮತ್ತು ಇತರ ನಾಯಕರನ್ನು ಬಂಧಿಸಿತು.

©KTBS
NOT TO BE REPUBLISHED



*ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದ ಜನಸಾಗರ*

ಬಂಧನದ ಸುದ್ದಿ ಹರಡುತ್ತಿದ್ದಂತೆಯೆ ದೇಶದಾದ್ಯಂತ ಹರತಾಳಗಳು, ಶಾಲಾಕಾಲೇಜು ಮತ್ತು ಕಾರ್ಖಾನೆಗಳಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟನೆಗಳು ನಡೆದವು. ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ರೈಲ್ವೆ ನಿಲ್ದಾಣಗಳ ಮೇಲೆ ವಿವಿಧೆಡೆ ಆಕ್ರಮಣಗಳು ಜರುಗಿದವು. ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ರೈತರು 'ಬಂಡಾಯ'ವನ್ನು ಬೆಂಬಲಿಸಿದರು.

ಉತ್ತರ ಪ್ರದೇಶದ ಬಲಿಯಾ, ಬಂಗಾಳದ ತಾಮ್ಲುಕ್ ಮತ್ತು ಮುಂಬಯಿ ಆಧಿಪತ್ಯದ ಸಾತಾರ ಸೇರಿದಂತೆ ದೇಶದ ಹಲವು ಕಡೆಗಳಲ್ಲಿ ಕ್ರಾಂತಿಕಾರಿಗಳು 'ಪರ್ಯಾಯ ಸರ್ಕಾರ'ಗಳನ್ನು ಸ್ಥಾಪಿಸಿದರು. ಇದೇ ವೇಳೆ ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮವು ಕರ್ನಾಟಕದಲ್ಲಿ ಮೊದಲಿಗೆ ಸ್ವಾತಂತ್ರ್ಯ ಘೋಷಿಸಿಕೊಂಡಿತು.

"ಭಾರತ ಬಿಟ್ಟು ತೊಲಗಿ" ಚಳವಳಿಯು ಕೂಡ ತತ್‌ಕ್ಷಣದ ರಾಜಕೀಯ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾಯಿತು. ಆದರೆ ಭಾರತದ ಜನತೆ ಸ್ವತಂತ್ರರಾಗಲು ದೃಢ ನಿರ್ಧಾರ ತಳೆದಿದ್ದಾರೆ ಎಂಬ ಸಂದೇಶ ಸ್ಪಷ್ಟವಾಗಿತ್ತು. ಇದು ಗಾಂಧಿ ಯುಗದ ಬಹುದೊಡ್ಡ ಜನಾಂದೋಲನವಾಗಿತ್ತು.

**ಗಾಂಧೀಜಿಯ ಬಗ್ಗೆ ಐನ್‌ಸ್ಟೈನ್‌ರ ಅನಿಸಿಕೆ:** "ಮುಂದಿನ ಪೀಳಿಗೆಗಳು ರಕ್ತಮಾಂಸಗಳಿಂದ ಕೂಡಿದ ಇಂತಹ ಒಬ್ಬ ವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದರು ಎಂಬುದನ್ನು ನಂಬಲು ಕಷ್ಟಪಡುತ್ತಾರೆ".

## ಸಮಾಜವಾದಿಗಳು

1930ರ ದಶಕದಲ್ಲಿ ಕಾಂಗ್ರೆಸಿನ ಒಳಗೂ ಹೊರಗೂ ಸಮಾಜವಾದಿ ಚಿಂತನೆಗಳು ಪ್ರಚಾರವಾದವು. 1934ರ ಕಾಂಗ್ರೆಸ್ ಅಧಿವೇಶನದಲ್ಲಿ ಸಮಾಜವಾದಿ ಗುಂಪೊಂದು ಕಾಂಗ್ರೆಸ್ಸಿನಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿತು. ಸಮಾಜವಾದಿಗಳು ಬಹುತೇಕ ಯುವಪೀಳಿಗೆಗೆ ಸೇರಿದವರಾಗಿದ್ದರು. ಅವರು ಅಲ್ಪಕಾಲದಲ್ಲೇ 'ಕಾಂಗ್ರೆಸ್ ಸೋಷಲಿಷ್ಟ್ ಪಕ್ಷ'ವನ್ನು ಸ್ಥಾಪಿಸಿದರು. ಅದರ ಮಹಾಕಾರ್ಯದರ್ಶಿ ಜಯಪ್ರಕಾಶ್ ನಾರಾಯಣ್. ಆಚಾರ್ಯ ನರೇಂದ್ರ ದೇವ್ ಪಕ್ಷದ ಇನ್ನೊಬ್ಬ ಪ್ರಮುಖ ನಾಯಕರು. ಕಾಂಗ್ರೆಸಿನಲ್ಲಿದ್ದ ಸಮಾಜವಾದಿಗಳಲ್ಲಿ ಖ್ಯಾತ ನಾಯಕರೆಂದರೆ ಜವಾಹರಲಾಲ್ ನೆಹರು ಮತ್ತು ಸುಭಾಷ್‌ಚಂದ್ರ ಬೋಸ್. ನೆಹರು ತಾವೊಬ್ಬ 'ಸಮಾಜವಾದಿ' ಎಂದು ಗುರುತಿಸಿಕೊಂಡರೂ ತಾತ್ವಿಕವಾಗಿ ಗಾಂಧೀಜಿಯ ಜೊತೆಗಿದ್ದರು.

©KTBS NOT TO BE REPUBLISHED



*ಜವಾಹರಲಾಲ್ ನೆಹರು*



*ಜಯಪ್ರಕಾಶ್ ನಾರಾಯಣ್*



*ಆಚಾರ್ಯ ನರೇಂದ್ರ ದೇವ್*

ಸಮಾಜವಾದಿಗಳು ಅನೇಕ ರೈತ ಮತ್ತು ಕಾರ್ಮಿಕ ಸಂಘಟನೆಗಳನ್ನು ಕಟ್ಟುವ ಮೂಲಕ ಭಾರತೀಯ ಸಮಾಜದ ದುರ್ಬಲ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾ, ಅರುಣಾ ಅಸಫ್ ಆಲಿ ಮುಂತಾದ ಸೋಷಲಿಸ್ಟ್ ನಾಯಕರು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಹತ್ವದ ಪಾತ್ರವಹಿಸಿ ಜನಪ್ರಿಯ ನಾಯಕರಾಗಿ ಮೂಡಿಬಂದರು.

### ಜಯಪ್ರಕಾಶ್ ನಾರಾಯಣ್ (ಜೆ.ಪಿ.)

ಜಯಪ್ರಕಾಶ್ ನಾರಾಯಣ್ ಅವರು 1902ರಲ್ಲಿ ಬಿಹಾರದಲ್ಲಿ ಜನಿಸಿದರು. ಉನ್ನತ ವಿದ್ಯಾಭ್ಯಾಸವನ್ನು ಏಳು ವರ್ಷಗಳ ಕಾಲ ಅಮೆರಿಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಡೆಸಿದರು. ಅಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಅವರಿಗೆ ಸಮಾಜವಾದದ ಪರಿಚಯವಾಯಿತು. ಭಾರತಕ್ಕೆ ಹಿಂತಿರುಗಿದ ನಂತರ ಜವಾಹರಲಾಲ್ ನೆಹರು ಅವರ ಮಾರ್ಗದರ್ಶನದಂತೆ ಕಾಂಗ್ರೆಸ್ ಪಕ್ಷವನ್ನು ಸೇರಿದರು. 1934ರಲ್ಲಿ ಕಾಂಗ್ರೆಸ್ ಸೋಷಲಿಷ್ಟ್ ಪಕ್ಷವನ್ನು ಸ್ಥಾಪಿಸಿದರು. 1941ರಲ್ಲಿ ಬಂಧನಕ್ಕೆ ಒಳಗಾದ ಜಯಪ್ರಕಾಶ್ ನಾರಾಯಣರು ಮರುವರ್ಷ ಹಜಾರಿಬಾಗ್ ಜೈಲಿನಿಂದ ತಪ್ಪಿಸಿಕೊಂಡು ಭೂಗತರಾದರು. ಅಡಗುತಾಣದಿಂದಲೇ ಭಾರತ ಬಿಟ್ಟು ತೊಲಗಿ ಚಳವಳಿಗೆ ಬೆಂಬಲ ನೀಡಿದರು. ನಂತರ ಮಾರುವೇಷದಲ್ಲಿ ಭಾರತದಾದ್ಯಂತ ಸಂಚರಿಸಿದರು. ಅವರನ್ನು 1944ರಲ್ಲಿ ಮತ್ತೆ ಬಂಧಿಸಿದ ಸರಕಾರ ಲಾಹೋರಿನ ಕೋಟೆಯಲ್ಲಿಟ್ಟಿತು. ನಂತರ ಅಲ್ಲಿಂದ ಬಿಡುಗಡೆಗೊಂಡರು.

ಸ್ವಾತಂತ್ರ್ಯಾನಂತರದಲ್ಲಿ ಅವರು ವಿನೋಬಾ ಭಾವೆಯವರ ಭೂದಾನ ಚಳವಳಿಯಲ್ಲಿ ಗುರುತಿಸಿಕೊಂಡರು. 1970ರ ದಶಕದಲ್ಲಿ ಭಾರತ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಬಹುದೊಡ್ಡ ಸಂಕ್ರಮಣಕ್ಕೆ ಒಳಗಾಯಿತು. 1975ರಲ್ಲಿ ಜಾರಿಯಾದ ತುರ್ತು ಪರಿಸ್ಥಿತಿಯು ಭಾರತದ ರಾಜಕೀಯ ನಕ್ಷೆಯನ್ನು ಬದಲಿಸಿತು. ಭ್ರಷ್ಟಾಚಾರವು ಆ ಕಾಲದ ಬಹುದೊಡ್ಡ ವಿಷಯವಾಗಿ ಚರ್ಚಿತವಾಯಿತು. 1974ರಲ್ಲಿ ಸಕ್ರಿಯ ರಾಜಕೀಯವನ್ನು ಪ್ರವೇಶಿಸಿದ್ದ ಜಯಪ್ರಕಾಶ್ ನಾರಾಯಣರು 'ಸಂಪೂರ್ಣ ಕ್ರಾಂತಿ' ಎಂಬ ಆಂದೋಳನವನ್ನು ಹುಟ್ಟಿಹಾಕಿದರು. ಇವರ ಚಳವಳಿಯ ಪರಿಣಾಮವಾಗಿ 1977ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. ಆಂತರಿಕ ಕಚ್ಚಾಟಗಳಿಂದ ಜನತಾ ಪಕ್ಷವು ಇಬ್ಭಾಗವಾದಾಗ ಭ್ರಮನಿರಸನಗೊಂಡರು. ಅಂತಿಮವಾಗಿ 1979ರಲ್ಲಿ ನಿಧನ ಹೊಂದಿದರು. ಜನರು ಇವರನ್ನು ಪ್ರೀತಿಯಿಂದ 'ಲೋಕನಾಯಕ' ಎಂದೇ ಕರೆದರು.

## ಆದಿವಾಸಿ ಮತ್ತು ರೈತ ಚಳವಳಿಗಳು

ಆದಿವಾಸಿಗಳು ಮೂಲತ: ಕೃಷಿಕರಾಗಿದ್ದರು. ಅವರು ಬೇಸಾಯದ ನೆಲೆಯ ಸಮಸ್ಯೆಗಳನ್ನು ಎದುರಿಸುತ್ತಾ ತಮ್ಮ ಹೋರಾಟಗಳನ್ನು ಕಟ್ಟಿಕೊಂಡಿದ್ದರಿಂದ ಅವರ ಹೋರಾಟಗಳನ್ನು ರೈತ ಹೋರಾಟದ ಪ್ರಮುಖ ಭಾಗವಾಗಿ ನೋಡಲಾಗುತ್ತದೆ. ಬ್ರಿಟಿಷ್



© KTBS NOT TO BE REPUBLISHED

ಆಳ್ವಿಕೆಯಡಿ ರೈತವರ್ಗ ತೀರ ಹೀನಾಯ ಸ್ಥಿತಿಯಿಂದ ಬಳಲಿತು. ಸರ್ಕಾರ, ಜಮೀನ್ದಾರರು, ಮಧ್ಯವರ್ತಿಗಳು, ಸ್ಥಳೀಯ ವ್ಯಾಪಾರಿಗಳು ಮತ್ತು ಅಧಿಕಾರಿಗಳಿಂದ ಅವರು ಶೋಷಣೆಗೆ ಒಳಗಾದರು. ಅವರ ದುಸ್ಥಿತಿಯೆ ಅವರನ್ನು ಸರ್ಕಾರ ಮತ್ತು ಜಮೀನ್ದಾರರ ವಿರುದ್ಧ ಸಿಡಿದೇಳುವಂತೆ ಪ್ರೇರೇಪಿಸಿತು.

ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸೆಟೆದು ನಿಂತು ಪೌರುಷದಿಂದ ಹೋರಾಡಿದ ಮೊದಲಿಗರೆಂದರೆ ಭಾರತದ ಆದಿವಾಸಿಗಳು. ಆದಿವಾಸಿಗಳ ಹೆಚ್ಚಿನ ಹೋರಾಟಗಳಲ್ಲಿ ಬ್ರಿಟಿಷ್ ಅಧಿಕಾರಿಗಳು ಮಾತ್ರವೇ ಅವರ ಶತ್ರುಗಳಾಗಿರಲಿಲ್ಲ. ಸ್ಥಳೀಯ ಜಮೀನ್ದಾರರು, ಸಾಹುಕಾರರು, ಕಂಟ್ರಾಕ್ಟರರು, ಕ್ರೈಸ್ತ ಮಿಶನರಿಗಳು  ಹೀಗೆ ಹೊರಗಿನಿಂದ ಅವರ ಪ್ರದೇಶಗಳಿಗೆ ಹೋಗಿ ಶೋಷಣೆ ಮಾಡುತ್ತಿದ್ದ ಎಲ್ಲ ವರ್ಗಗಳು ಅವರ ಶತ್ರುಗಳೇ ಆಗಿದ್ದರು. ಭೀಕರ ರಕ್ತಪಾತವೇ ಆದಿವಾಸಿ ದಂಗೆಗಳ ಪ್ರಮುಖ ಲಕ್ಷಣವಾಗಿತ್ತು. ದಂಗೆಯೆದ್ದ ಆದಿವಾಸಿ ಪಂಗಡಗಳಲ್ಲಿ ಮುಖ್ಯವಾದವುಗಳೆಂದರೆ ಕೋಲ, ಸಂತಾಲ, ಮುಂಡ ಮತ್ತು ನಾಗಾ. ಆದಿವಾಸಿ ಸಮುದಾಯಗಳಿಂದಲೇ ಅವರ ಹೋರಾಟದ ನಾಯಕತ್ವ ರೂಪುಗೊಂಡಿದ್ದು ಆ ಚಳವಳಿಗಳ ವಿಶೇಷ ಲಕ್ಷಣವಾಗಿತ್ತು.

19ನೇ ಶತಮಾನದಲ್ಲಿ ರೈತರು ಪ್ರತಿಭಟನೆ ಮತ್ತು ದಂಗೆಯ ರೂಪದಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. 20ನೇ ಶತಮಾನದಲ್ಲಿ ರಾಜಕೀಯ ಶಕ್ತಿಗಳ ಬೆಂಬಲ ಪಡೆದ ಅವರು ಅಂತಿಮವಾಗಿ ರಾಷ್ಟ್ರೀಯ ಚಳವಳಿಯಿಂದ ತಮ್ಮ ಶಕ್ತಿಯನ್ನು ವೃದ್ಧಿಸಿಕೊಂಡರು.

ಕೆಲವು ಪ್ರಮುಖ ರೈತ ದಂಗೆಗಳೆಂದರೆ ಚಂಪಾರಣ್, ಖೇಡ (ಕೈರ), ಬರ್ದೋಲಿ, ಬಂಗಾಲದ ನೀಲಿ ಬೆಳೆಗಾರ ಹೋರಾಟ ಮತ್ತು ಮಾಪಿಳ್ಳೆಗಳ ದಂಗೆಗಳು. ನಾವೀಗ ಆಯ್ದ ಮೂರು ದಂಗೆಗಳ ಬಗ್ಗೆ ತಿಳಿಯೋಣ.

## ಚಂಪಾರಣ್, ಖೇಡಾ ಮತ್ತು ಮಾಪಿಳ್ಳೆ ದಂಗೆಗಳು

**ಚಂಪಾರಣ್:** ಚಂಪಾರಣ್ (ಬಿಹಾರ) ರೈತರು ಪ್ಲಾಂಟರುಗಳ ವಿರುದ್ಧ ಹೊಂದಿರುವ ಅಸಮಾಧಾನ ಮತ್ತು ಪ್ರತಿಭಟನೆಗೆ ಸುದೀರ್ಘ ಇತಿಹಾಸವಿದೆ. ಪ್ಲಾಂಟರ್‌ಗಳು ಬಲವಂತವಾಗಿ ನೀಲಿ ಬೆಳೆಯುವಂತೆ ರೈತರನ್ನು ಒತ್ತಾಯಿಸುತ್ತಿದ್ದರು. ಗಾಂಧೀಜಿ ಅವರ ವಿರುದ್ಧ 1917ರಲ್ಲಿ ಚಂಪಾರಣ್ ಸತ್ಯಾಗ್ರಹವನ್ನು ಆರಂಭಿಸಿದರು. ಕೊನೆಯಲ್ಲಿ ರೈತರ ಸಮಸ್ಯೆ ಪರಿಹಾರ ಕಂಡಿತು. ಈ ಚಳವಳಿಯ ಮೂಲಕ ಬಾಬು ರಾಜೇಂದ್ರ ಪ್ರಸಾದ್ ಪ್ರಮುಖ ನಾಯಕರಾಗಿ ರೂಪುಗೊಂಡರು.

**ಖೇಡಾ ರೈತ ಹೋರಾಟ:** ಖೇಡಾ ಗುಜರಾತ್ ರಾಜ್ಯದ ಪ್ರಮುಖ ಜಿಲ್ಲೆ. 1918ರ ಸಂದರ್ಭದಲ್ಲಿ ಬೆಳೆಗಳು ವಿಫಲವಾಗಿ ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದರು.

@KTBS NOT TO BE REPUBLISHED

ಈ ಹಿನ್ನೆಲೆಯಲ್ಲಿ ಅವರು ಕಂದಾಯ ಕಟ್ಟುವುದರಿಂದ ವಿನಾಯಿತಿ ನೀಡಬೇಕೆಂದು ಸರಕಾರಕ್ಕೆ ಮನವಿ ಸಲ್ಲಿಸಿದರು. ಸರಕಾರ ಇವರ ಮನವಿಯನ್ನು ತಿರಸ್ಕರಿಸಿದ್ದಲ್ಲದೆ, ಕಂದಾಯ ಸಂಗ್ರಹಣೆಗೆ ಒತ್ತಾಯಿಸಿತು. ಪರಿಣಾಮವಾಗಿ ಖೇಡಾದಲ್ಲಿ ರೈತ ಹೋರಾಟ ಪ್ರಾರಂಭವಾಯಿತು. ಗಾಂಧೀಜಿಯವರು ಈ ಹೋರಾಟಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡಿದ್ದಲ್ಲದೆ, ರೈತರು ಕಂದಾಯವನ್ನು ಕಟ್ಟಬಾರದೆಂದು ತಿಳಿಸಿದರು. ಅಂತಿಮವಾಗಿ ತಮ್ಮ ನಿರ್ಧಾರವನ್ನು ಬದಲಾಯಿಸಿಕೊಂಡ ಸರಕಾರ, ಯಾರಿಗೆ ಸಾಧ್ಯವಾಗುವುದೋ ಅಂತಹ ರೈತರು ಕಂದಾಯವನ್ನು ಕಟ್ಟಬಹುದೆಂದು ತಿಳಿಸಿತು. ಇದನ್ನು ಒಪ್ಪಿದ ಗಾಂಧೀಜಿಯವರು ಚಳವಳಿಯನ್ನು ಕೈಬಿಡಲು ಒಪ್ಪಿದರು. ಈ ಹೋರಾಟದ ಮೂಲಕ ರಾಜಕೀಯವಾಗಿ ಬೆಳೆದ ನಾಯಕರೆಂದರೆ ಸರದಾರ ವಲ್ಲಭಭಾಯಿ ಪಟೇಲರು.

**ಮಾಪಿಳ್ಳೆ ದಂಗೆ:** ರೈತ ಚಳವಳಿಗಳಲ್ಲಿ ಮಲಬಾರಿನಲ್ಲಿ ನಡೆದ ಮಾಪಿಳ್ಳೆಗಳ ದಂಗೆಯು (1921) ಪ್ರಸಿದ್ಧವಾಗಿದೆ. ಮಲಬಾರ್ ಪ್ರದೇಶದ ಮುಸ್ಲಿಮರನ್ನು ಮಾಪಿಳ್ಳೆಗಳು (ಮೊಪ್ಲಾಸ್) ಎಂದು ಕರೆಯುತ್ತಿದ್ದರು. ಅವರು ಪ್ರಮುಖವಾಗಿ ಕೃಷಿ ಅಲ್ಲದೇ ಚಹಾ ಮತ್ತು ಕಾಫಿ ತೋಟಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಕೃಷಿಯಲ್ಲಿ ತೊಡಗಿದ್ದ ಅನೇಕರು ಗೇಣಿದಾರರಾಗಿದ್ದರು. ಆಗಾಗ ಮಾಡುತ್ತಿದ್ದ ಗೇಣಿಯ ಹೆಚ್ಚಳವೇ ದಂಗೆಗೆ ಮುಖ್ಯ ಕಾರಣವಾಗಿತ್ತು. 19ನೇ ಶತಮಾನದಲ್ಲಿಯೇ ಅನೇಕ ಬಾರಿ ಪ್ರತಿರೋಧಗಳನ್ನು ಒಡ್ಡಿದ್ದರು. ಆದರೆ ಖಿಲಾಫತ್ ಚಳುವಳಿಯು ಮಾಪಿಳ್ಳೆಗಳಲ್ಲಿ ಹೊಸ ಉತ್ಸಾಹವನ್ನು ಮೂಡಿಸಿತು. ಸ್ಥಳೀಯ ಮಾಪಿಳ್ಳೆ ನಾಯಕರೇ ಆಂದೋಲನದ ಮುಂದಾಳುತನ ವಹಿಸಿದರು. ಅವರು ಜಮೀನ್ದಾರರ ವಿರುದ್ಧ ಹಿಂಸಾತ್ಮಕ ಹೋರಾಟಕ್ಕೆ ಇಳಿದು ಅವರ ಆಸ್ತಿಪಾಸ್ತಿಗಳನ್ನು ನಾಶ ಮಾಡಿದರು. ಹಿಂಸೆಯನ್ನು ತಡೆಯಲು ಬ್ರಿಟಿಷರು ದಕ್ಷಿಣ ಮಲಬಾರಿನಲ್ಲಿ ಸೇನಾಡಳಿತ ಜಾರಿ ಮಾಡಿದರು. ಚಳವಳಿಯು ಅಲ್ಪಕಾಲದಲ್ಲೇ ಮತೀಯ ರೂಪ ಪಡೆಯಿತು. ಹಾಗೂ ಕ್ರಮೇಣ ತನ್ನ ಕಾವನ್ನು ಕಳೆದುಕೊಂಡಿತು.

© KTBS NOT TO BE REPUBLISHED

## 16.3 ಸ್ವಾತಂತ್ರ್ಯದೆಡೆಗೆ

ಜನಾಂದೋಲನಗಳು ಸೃಷ್ಟಿಸಿದ ಒತ್ತಡ ಮತ್ತು ಎರಡನೇ ಮಹಾಯುದ್ಧದಿಂದ ಉಂಟಾದ ಸನ್ನಿವೇಶದಿಂದಾಗಿ ಬ್ರಿಟಿಷರು ಭಾರತದ ಸಮಸ್ಯೆಗೆ ಆದಷ್ಟು ಬೇಗ ಪರಿಹಾರವನ್ನು ಕಂಡು ಹಿಡಿಯಲು ಅನುವಾದರು. ಇದೇ ವೇಳೆ ಮಹಾಯುದ್ಧದ ಪರಿಣಾಮವಾಗಿ ಬ್ರಿಟಿಷರ ಆರ್ಥಿಕ ಮತ್ತು ಸೈನಿಕ ಶಕ್ತಿ ಕುಂದಿತ್ತು.

ಎರಡನೇ ಮಹಾಯುದ್ಧದ ಅಂತ್ಯದಲ್ಲಿ (1945) ಅಧಿಕಾರಕ್ಕೆ ಬಂದ ಲೇಬರ್ ಪಕ್ಷವು ಭಾರತದ ಜತೆ ರಾಜಕೀಯ ಒಪ್ಪಂದವೊಂದನ್ನು ಮಾಡಿಕೊಳ್ಳಬಯಸಿತು. ಈ ಅಂತಿಮ ಹಂತದಲ್ಲಿ ಭಾರತದ ಭವಿಷ್ಯಕ್ಕೆ ಸಂಬಂಧಿಸಿದ ನಿರ್ಣಾಯಕ ನಿರ್ಧಾರಗಳನ್ನು ಮೌಲಾನಾ

ಅಬುಲ್ ಕಲಂ ಆಜಾದ್, ಜವಾಹರಲಾಲ್ ನೆಹರು ಮತ್ತು ವಲ್ಲಭಭಾಯ್ ಪಟೇಲ್ ತೆಗೆದುಕೊಂಡರು.

ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಲು ಅನುಸರಿಸಬೇಕಾದ ಮಾರ್ಗಗಳನ್ನು ಕಂಡು ಕೊಳ್ಳಲು ಬ್ರಿಟಿಷ್ ಸರ್ಕಾರ 1946ರಲ್ಲಿ ಕ್ಯಾಬಿನೇಟ್ ಆಯೋಗವನ್ನು ಭಾರತಕ್ಕೆ ಕಳುಹಿಸಿತು. ಆದರೆ ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ಪಾಕಿಸ್ತಾನವೆಂದು ಕರೆಯಲ್ಪಡುವ ಪ್ರತ್ಯೇಕ ಮುಸ್ಲಿಂ ದೇಶಕ್ಕಾಗಿ ಪಟ್ಟು ಹಿಡಿಯಿತು. ಹೀಗಾಗಿ ಭಾರತವನ್ನು ವಿಭಜಿಸುವುದು ಅನಿವಾರ್ಯವಾಯಿತು. 1947ರ ಜೂನ್ 3ರಂದು ಭಾರತದ ಕೊನೆಯ ಮತ್ತು 34ನೇ ವೈಸ್‌ರಾಯ್ ಆದ ಲಾರ್ಡ್ ಮೌಂಟ್‌ಬ್ಯಾಟನ್ ಭಾರತವನ್ನು ವಿಭಜಿಸಿ ಅಧಿಕಾರವನ್ನು ಭಾರತೀಯರಿಗೆ ಹಸ್ತಾಂತರಿಸಲಾಗುವುದೆಂಬ ಐತಿಹಾಸಿಕ ನಿರ್ಣಯವನ್ನು ಘೋಷಿಸಿದರು.


ಮೌಲಾನಾ ಅಬುಲ್ ಕಲಂ ಆಜಾದ್


ಜವಾಹರಲಾಲ್ ನೆಹರು


ವಲ್ಲಭಭಾಯ್ ಪಟೇಲ್

NOT TO BE REPUBLISHED

1947ರ ಆಗಸ್ಟ್ 14ರಂದು ಪಾಕಿಸ್ತಾನ ಭಾರತದಿಂದ ಪ್ರತ್ಯೇಕಗೊಂಡಿತು. ಭಾರತ 1947ರ ಆಗಸ್ಟ್ 15ರಂದು ಸ್ವತಂತ್ರಗೊಂಡಿತು. ಜವಾಹರಲಾಲ್ ನೆಹರು ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾದರು. ಆರಂಭದಲ್ಲಿ ವ್ಯಾಪಾರಿ ಉದ್ದೇಶವನ್ನು ಇಟ್ಟುಕೊಂಡು ಬಂದಿದ್ದ ಬ್ರಿಟಿಷರು ಸುಮಾರು ಎರಡು ಶತಮಾನಗಳ ಕಾಲ ಭಾರತವನ್ನು ಆರ್ಥಿಕ ಮತ್ತು ರಾಜಕೀಯವಾಗಿ ದುರ್ಬಲಗೊಳಿಸಿದರು. ಭಾರತೀಯರು ನಡೆಸಿದ ಹೋರಾಟಗಳಿಂದ ಕೊನೆಗೂ ಸಾಮ್ರಾಜ್ಯವಾದಿಗಳು ಇಲ್ಲಿಂದ ನಿರ್ಗಮಿಸಲೇಬೇಕಾಯಿತು. ದೀರ್ಘಕಾಲ ಸಾಗಿದ ರಾಷ್ಟ್ರೀಯ ಹೋರಾಟವು


ಲಾರ್ಡ್ ಮೌಂಟ್‌ಬ್ಯಾಟನ್

ಅಂತ್ಯಗೊಂಡ ದಿನವಾದ 15 ಆಗಸ್ಟ್ 1947 ಭಾರತದ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ ದಿನವಾಗಿದೆ. ಭಾರತದ ಕೋಟ್ಯಂತರ ಜನರ ಹೃದಯಗಳಲ್ಲಿ ಆ ದಿನವು ಅಚ್ಚಳಿಯದೆ ಶಾಶ್ವತವಾಗಿ ನೆಲೆಸಿದೆ. ಪ್ರತಿ ವರ್ಷವೂ ಸ್ವಾತಂತ್ರ್ಯ ಹೋರಾಟದ ಆಶಯಗಳನ್ನು ನೆನೆಪಿಸುವ ದಿನವಾಗಿದೆ.

## ಮಹಮ್ಮದ್ ಆಲಿ ಜಿನ್ನಾ (1876–1948) ಮತ್ತು ಮುಸ್ಲಿಂ ಲೀಗ್

ಸ್ವತಂತ್ರಪೂರ್ವ ಭಾರತದ ರಾಜಕೀಯ ಬೆಳವಣಿಗೆಗಳಲ್ಲಿ ಜಿನ್ನಾ ಅವರು ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ವೃತ್ತಿಯಲ್ಲಿ ಅವರು ವಕೀಲರಾಗಿದ್ದು, ಉದಾರ ರಾಷ್ಟ್ರೀಯ ವಾದಿಗಳಾಗಿದ್ದರು. ಆರಂಭದಲ್ಲಿ ಅವರು ಮುಸ್ಲಿಂ ಲೀಗಿನ ಜೊತೆಗೆ ಗುರುತಿಸಿಕೊಂಡಿರಲಿಲ್ಲ ಹಾಗೂ ತಾತ್ವಿಕವಾಗಿ ಅದರ ವಿರೋಧಿಯಾಗಿದ್ದರು. ಅಂದಿನ ದಿನಗಳಲ್ಲಿ ಅವರನ್ನು ಹಿಂದೂಮುಸ್ಲಿಂ ಏಕತೆಯ ರಾಯಭಾರಿ ಎಂದು ಪರಿಗಣಿಸಿದ್ದರು. 1913ರಲ್ಲಿ ಮುಸ್ಲಿಂಲೀಗಿನ ಸದಸ್ಯರಾಗುವ ಮೂಲಕ ಭಾರತ ಮುಸ್ಲಿಂ ಸಮುದಾಯದ ನಾಯಕರಾಗಿ ರೂಪುಗೊಳ್ಳತೊಡಗಿದರು.



ಮಹಮ್ಮದ್ ಆಲಿ ಜಿನ್ನಾ

1927ರಲ್ಲಿ ಜಿನ್ನಾ ಅವರು 14 ಅಂಶಗಳ ಬೇಡಿಕೆಗಳನ್ನು ಮುಂದಿಟ್ಟರು. ಇವನ್ನು ದಿಲ್ಲಿ ಘೋಷಣೆ ಎನ್ನುವರು. ಈ ಅಂಶಗಳು ಮತೀಯ ರಾಜಕಾರಣಕ್ಕೆ ನೀರೆರೆದವು. ಈ ನಾಲ್ಕು ಅಂಶಗಳು 1928ರಲ್ಲಿ ಜಿನ್ನಾರವರು ಸಿದ್ಧಪಡಿಸಿದ '14 ಅಂಶಗಳ ದಾಖಲೆ'ಯ ಭಾಗವಾಗಿ ಅಂತರ್ಗತಗೊಂಡವು. ಈ 14 ಅಂಶಗಳ ದಾಖಲೆ ಮುಸ್ಲಿಂಲೀಗಿನ ಮತೀಯ ರಾಜಕಾರಣದ ಸೈದ್ಧಾಂತಿಕ ಮಾರ್ಗದರ್ಶಿಯಾಗಿತ್ತು. ಜಿನ್ನಾ ಅವರು 1936ರ ನಂತರ 'ಎರಡು ರಾಷ್ಟ್ರಗಳ ಸಿದ್ಧಾಂತ'ದ ಪ್ರತಿಪಾದಕರಾದರು. ಈ ಪ್ರತಿಪಾದನೆಯು 1940ರ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಅಂಗೀಕಾರವಾಯಿತು. ಈ ಹಿನ್ನೆಲೆಯಲ್ಲಿ ನಡೆದ ಮುಂದಿನ ರಾಜಕೀಯ ಬೆಳವಣಿಗೆಗಳು ಭಾರತವನ್ನು ವಿಭಜಿಸುವ ಮೂಲಕ ಪಾಕಿಸ್ತಾನದ ಉದಯಕ್ಕೆ ಕಾರಣವಾದವು.

ಚೌಧರಿ ರಹಮತ್ ಆಲಿ ಮತ್ತು ಅವರ ಮೂರು ಮಂದಿ ಸ್ನೇಹಿತರು 1933ರಲ್ಲಿ ಬರೆದ ಪತ್ರವೊಂದರಲ್ಲಿ ಪ್ರತ್ಯೇಕ ಮುಸ್ಲಿಂ ರಾಜ್ಯದ ರಚನೆಯನ್ನು ಪ್ರಸ್ತಾಪಿಸಿದ್ದರು. ಪಂಜಾಬ್, ಅಫ್‌ಘನ್, ಕಾಶ್ಮೀರ, ಸಿಂಧ್ ಮತ್ತು ಬಲೂಚಿಸ್ತಾನ್ ಎಂಬ ಪ್ರಾಂತ್ಯಗಳ ಹೆಸರಿನ ಮೊದಲ ಇಂಗ್ಲಿಷ್ ಅಕ್ಷರಗಳನ್ನು ಬಳಸಿಕೊಂಡು "ಪಾಕಿಸ್ತಾನ" ಎಂದು ಕರೆಯಲಾಗಿದೆ. PAKISTAN ಹೆಸರಿನ ಕೊನೆಯ ಮೂರು ವರ್ಣಗಳು ಬಲೂಚಿಸ್ತಾನ ಪ್ರಾಂತ್ಯವನ್ನು ಸಂಕೇತಿಸುತ್ತದೆ.

© KTBS NOT TO BE REPUBLISHED

# ಸುಭಾಷ್‌ಚಂದ್ರ ಬೋಸ್ ಮತ್ತು ಭಾರತೀಯ ರಾಷ್ಟ್ರೀಯ ಸೇನೆ

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸರ ಪಾತ್ರ ಅನನ್ಯವಾದುದು. ಅವರು ಕಲ್ಕತ್ತ ವಿಶ್ವವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಲಂಡನಿನಲ್ಲಿ ಐ.ಸಿ.ಎಸ್. ಪರೀಕ್ಷೆಯಲ್ಲಿ ನಾಲ್ಕನೇ ರ್‍ಯಾಂಕ್ ಪಡೆದಿದ್ದರು. ಅವರು 'ದೇಶಬಂಧು' ಚಿತ್ತರಂಜನ್ ದಾಸರ ಪ್ರಭಾವದಿಂದ ಚಳವಳಿಗೆ ಆಕರ್ಷಿತರಾಗಿ ರಾಜಕೀಯಕ್ಕೆ ಧುಮುಕಿದರು. ವಿಶೇಷವಾಗಿ ಸ್ವಾಮಿ ವಿವೇಕಾನಂದರ ಬದುಕು ಮತ್ತು ಬರವಣಿಗೆಗಳಿಂದ ಅವರು ಸ್ಫೂರ್ತಿ ಪಡೆದಿದ್ದರು.

ಸುಭಾಷರು ಗಾಂಧೀಜಿಯವರ ಬಗೆಗೆ ಅಪಾರ ಗೌರವ ಹೊಂದಿದ್ದರು. ಆದರೆ ಅವರ ರಾಜನೀತಿಯನ್ನು ವಿರೋಧಿಸಿದರು. ಕೊನೆಗೆ ಗಾಂಧೀಜಿ ಅವರೊಂದಿಗೆ ತೀವ್ರ ಭಿನ್ನಾಭಿಪ್ರಾಯ ತಳೆದು 1939ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷದಿಂದ ಹೊರಬಂದರು. ನಂತರ 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಸಂಘಟಿಸಿದರು.



ಸುಭಾಷ್‌ಚಂದ್ರ ಬೋಸ್

ಈ ವೇಳೆ ಎರಡನೆಯ ಮಹಾಯುದ್ಧ ಭರದಿಂದ ಸಾಗುತ್ತಿತ್ತು (1939–1945). ಬ್ರಿಟಿಷರು ಬೋಸರ ಕ್ರಾಂತಿಕಾರಿ ನಿಲುವನ್ನು ಗಮನಿಸಿ, ಅವರು ಅಪಾಯಕಾರಿ ಎಂದು ಪರಿಗಣಿಸಿ ಗೃಹಬಂಧನದಲ್ಲಿ ಇರಿಸಿದರು. ಆದರೆ ಬೋಸರು ಬಂಧನದಿಂದ ರಹಸ್ಯವಾಗಿ ತಪ್ಪಿಸಿಕೊಂಡು ಪೇಷಾವರ ಮತ್ತು ಕಾಬೂಲ್ (ಅಫ್‌ಘಾನಿಸ್ತಾನ) ಮೂಲಕ ಮಾಸ್ಕೊಗೆ ಹೋಗುವ ಪ್ರಯಾಸಕಾರಿ ಪ್ರಯಾಣವನ್ನು ಕೈಗೊಂಡರು. ಅಲ್ಲಿಂದ ವಿಮಾನದ ಮೂಲಕ ಜರ್ಮನಿಯ ಬರ್ಲಿನ್ ನಗರಕ್ಕೆ ತೆರಳಿದರು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನೊಂದಿಗೆ ಒಪ್ಪಂದ ಮಾಡಿಕೊಂಡರು. ಬ್ರಿಟಿಷರನ್ನು ಭಾರತದಿಂದ ಹೊರದಬ್ಬುವುದು ಅವರ ಮಹಾನ್ ಯೋಜನೆಯಾಗಿತ್ತು. (ಆಗ ಜರ್ಮನಿಯ ವಿರುದ್ಧ ಬ್ರಿಟಿಷರು ಎರಡನೇ ಜಾಗತಿಕ ಯುದ್ಧದಲ್ಲಿ ತೊಡಗಿದ್ದರು).

ಈ ನಡುವೆ ಜಪಾನ್ ಬ್ರಿಟಿಷರ ವಿರುದ್ಧ ಎರಡನೇ ಮಹಾಯುದ್ಧವನ್ನು ಪ್ರವೇಶಿಸಿತು. ಯುದ್ಧದಲ್ಲಿ ಬ್ರಿಟನ್ನಿನ ಸೇವೆಯಲ್ಲಿದ್ದ ಸುಮಾರು 40,000 ಭಾರತೀಯ ಸೈನಿಕರು ಜಪಾನಿನ ಯುದ್ಧ ಖೈದಿಗಳಾಗಿದ್ದರು. ಅವರು ಮೋಹನ್ ಸಿಂಗ್ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಸೇನೆ (ಇಂಡಿಯನ್ ನೇಷನಲ್ ಆರ್ಮಿ-ಐ.ಎನ್.ಎ.) ಅಥವಾ ಆಜಾದ್ ಹಿಂದ್ ಫೌಜ್ ಎಂಬ ಹೆಸರಿನಿಂದ ಸಂಘಟಿತರಾಗಿದ್ದರು. 1943ರಲ್ಲಿ ಸುಭಾಷ್‌ಚಂದ್ರರು ಸಿಂಗಾಪುರಕ್ಕೆ ಬಂದು ಐಎನ್‌ಎಯ ನಾಯಕತ್ವ ವಹಿಸಿಕೊಂಡರು. ಸುಭಾಷರನ್ನು 'ನೇತಾಜಿ' ಎಂದು ಕರೆಯಲಾಯಿತು. ಶೀಘ್ರವೇ ನೇತಾಜಿಯವರು ಸಿಂಗಾಪುರದಲ್ಲಿ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ'ವನ್ನು ಸ್ಥಾಪಿಸಿದರು. ಜರ್ಮನಿ, ಇಟಲಿ ಮತ್ತು ಜಪಾನ್

©KTBS NOT TO BE REPUBLISHED

ದೇಶಗಳು ಅದಕ್ಕೆ ಮಾನ್ಯತೆ ನೀಡಿದವು. ‘ಚಲೋ ದಿಲ್ಲಿ’ ಎಂಬ ಘೋಷಣೆಯೊಂದಿಗೆ ನೇತಾಜಿಯವರ ನಾಯಕತ್ವದಲ್ಲಿ ಐಎನ್‌ಎ ಬರ್ಮಾದ ಕಡೆಯಿಂದ ಭಾರತದ ಪ್ರದೇಶದಲ್ಲಿ (ಈಗಿನ ಮಣಿಪುರ) ಸುಮಾರು 150 ಮೈಲಿಗಳಷ್ಟು ಮುನ್ನುಗ್ಗಿತು. ಅಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಭಾರತೀಯ ನೆಲದ ಮೇಲೆ ಹಾರಿಸಿತು. ಆದರೆ ಅಲ್ಪಕಾಲದಲ್ಲೇ ಬ್ರಿಟಿಷ್ ಸೇನೆ ಬರ್ಮಾದ ರಾಜಧಾನಿ ರಂಗೂನನ್ನು ವಶಪಡಿಸಿಕೊಂಡಿದ್ದರಿಂದ ಐಎನ್‌ಎಗೆ ಹಿನ್ನಡೆ ಉಂಟಾಯಿತು. ಐಎನ್‌ಎ ಸೈನಿಕರನ್ನು ನಿಶ್ಶಸ್ತ್ರಗೊಳಿಸಿ ಖೈದಿಗಳನ್ನಾಗಿ ಮಾಡಲಾಯಿತು. ಶತ್ರುಪಡೆಗೆ ಜಪಾನ್ ಶರಣಾದ ಬಳಿಕ (1945) ನೇತಾಜಿ ಟೋಕಿಯೊಗೆ ತೆರಳುವಾಗ ಅಲ್ಲಿ ನಡೆದ ವಿಮಾನ ದುರಂತದಲ್ಲಿ ಅವರು ಮೃತಪಟ್ಟರೆಂದು ಹೇಳಲಾಗುತ್ತದೆ. ಆದರೆ ವಿಮಾನ ದುರಂತದ ಬಗ್ಗೆ ವಿವಾದಗಳು ತಲೆದೋರಿವೆ.

ಐಎನ್‌ಎ ತನ್ನ ತತ್‌ಕ್ಷಣದ ಗುರಿಸಾಧಿಸುವಲ್ಲಿ ವಿಫಲವಾದದ್ದೇನೊ ನಿಜ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಅದಕ್ಕೊಂದು ಮಹತ್ವದ ಸ್ಥಾನವಿದೆ. "ನೀವು ರಕ್ತವನ್ನು ನೀಡಿದರೆ, ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ" ಎಂದು ನೇತಾಜಿ ದಿಟ್ಟತನದ ಕರೆ ನೀಡಿದರು. ನೇತಾಜಿಯವರ ಅಪ್ರತಿಮ ಸಾಮರ್ಥ್ಯಗಳಿಗೆ ಐಎನ್‌ಎ ಸಾಕ್ಷಿಯಾಗಿ ನಿಂತಿದೆ. ಕೊಲ್ಕತಾದಿಂದ ಮಾಸ್ಕೊಗೆ ಮತ್ತು ಜರ್ಮನಿಯಿಂದ ಜಪಾನಿಗೆ ಆ ಬಿಕ್ಕಟ್ಟಿನ ದಿನಗಳಲ್ಲಿ ಅವರು ಮಾಡಿರುವ ಪ್ರಯಾಣಗಳು ಭಾರತೀಯ ಇತಿಹಾಸದಲ್ಲಿ ಹಿಂದೆಂದೂ ಕಾಣದ ಸಾಹಸದ ಕ್ಷಣಗಳಾಗಿವೆ. ಬ್ರಿಟನ್ನಿನ ಶತ್ರುಗಳ ನೆರವಿನಿಂದ ಭಾರತವನ್ನು ಸ್ವತಂತ್ರಗೊಳಿಸುವುದು ಸುಭಾಷರ ಏಕೈಕ ಗುರಿಯಾಗಿತ್ತು. ಅವರು ಭಾರತದ ಜನತೆಗೆ ಧೈರ್ಯ, ಸಾಹಸ ಮತ್ತು ಉದಾತ್ತವಾದ ದೇಶಪ್ರೇಮದ ಉಜ್ವಲ ಪರಂಪರೆಯನ್ನೇ ಬಿಟ್ಟು ಹೋಗಿದ್ದಾರೆ.

ಐಎನ್‌ಎ ತನ್ನ ಗುರಿಯನ್ನು ಸಾಧಿಸುವಲ್ಲಿ ವಿಫಲವಾದರೂ, ಅದಕ್ಕೆ ಇತಿಹಾಸದಲ್ಲಿ ಮಹತ್ವದ ಸ್ಥಾನವಿದೆ. ಅವರ ಹೋರಾಟಗಳು ಅವರಿಗೆ ಭಾರತದ ಚರಿತ್ರೆಯಲ್ಲಿ ಅಚ್ಚಳಿಯದ ಸ್ಥಾನವನ್ನು ತಂದುಕೊಟ್ಟಿವೆ.

© KTBS
NOT TO BE REPUBLISHED

## ಅಂಬೇಡ್ಕರ್ ಮತ್ತು ಅವರ ಸುಧಾರಣೆಗಳು



*ಡಾ. ಬಿ. ಆರ್. ಅಂಬೇಡ್ಕರ್*

ಡಾ. ಬಿ.ಆರ್. ಅಂಬೇಡ್ಕರ್ (1891–1956) ಅವರು ದಲಿತ ಮತ್ತು ಇತರೆ ಶೋಷಿತ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ದೊಡ್ಡ ಹೋರಾಟಗಾರರು. ಅತ್ಯಂತ ಪ್ರತಿಭಾವಂತರಾಗಿದ್ದ ಅವರು ಸತತ ಅಧ್ಯಯನದಿಂದ ವಿಶೇಷ ವ್ಯಕ್ತಿತ್ವವನ್ನು ಸ್ವಯಂ ರೂಪಿಸಿಕೊಂಡವರು. ಇಂದಿಗೂ ಪ್ರತಿಷ್ಠಿತ ವೆನಿಸಿಕೊಂಡಿರುವ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್, ಕೊಲಂಬಿಯ ವಿಶ್ವವಿದ್ಯಾಲಯದಿಂದ (ಅಮೆರಿಕ) ಪಿ.ಎಚ್.ಡಿ., ಎಲ್.ಎಲ್.ಡಿ. ಪದವಿಗಳನ್ನು ಪಡೆದುಕೊಂಡರು. ಬಾರ್-ಅಟ್-ಲಾ ಕೂಡ ಪಡೆದರು. ಅವರು ಪಡೆದ ಶೈಕ್ಷಣಿಕ ಪದವಿಗಳೇ ಅವರ ಬೌದ್ಧಿಕ

ಮೇರು ವ್ಯಕ್ತಿತ್ವವನ್ನು ಹೇಳುತ್ತವೆ. ಸಾಮಾಜಿಕ ಬದಲಾವಣೆಯನ್ನು ಸಂವಿಧಾನಾತ್ಮಕ ಮಾರ್ಗದಲ್ಲೇ ಪಡೆಯಬೇಕೆಂಬ ಅವರ ಸಂಕಲ್ಪ ಮತ್ತು ಕಾರ್ಯಶೀಲತೆ ಅವರ ವಿಶೇಷ ಗುಣಗಳು. ಮುಂದೆ ಸ್ವತಂತ್ರ ಭಾರತದ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಸಂವಿಧಾನ ರೂಪುಗೊಳಿಸುವ ನಾಯಕತ್ವದ ಜವಾಬ್ದಾರಿಯನ್ನು ನಿರ್ವಹಿಸಿದರು. ಸಂವಿಧಾನ ಶಿಲ್ಪಿ ಎಂದೇ ಖ್ಯಾತರಾದರು.

ಅಂಬೇಡ್ಕರ್ ಭಾರತೀಯ ರಾಷ್ಟ್ರೀಯತೆಯ ತುಸು ವಿಭಿನ್ನ ಪರಿಕಲ್ಪನೆಯ ಪ್ರತಿನಿಧಿಯಾಗಿದ್ದರು. ಗಾಂಧೀಜಿಯವರಿಗೆ ರಾಜಕೀಯ ಸ್ವಾತಂತ್ರ್ಯ ಮೊದಲ ಆದ್ಯತೆಯಾಗಿದ್ದರೆ, ಅಂಬೇಡ್ಕರ್‌ರವರಿಗೆ ಸಾಮಾಜಿಕ ಸ್ವಾತಂತ್ರ್ಯ ಮೊದಲ ಆದ್ಯತೆಯಾಗಿತ್ತು. ಸಾಮಾಜಿಕವಾಗಿ ತುಳಿತಕ್ಕೊಳಗಾದವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯವಾಗಿ ಮೇಲೆ ಬರಬೇಕು ಎಂಬುದು ಅವರಿಗೆ ಮುಖ್ಯವಾಗಿತ್ತು. ಹೀಗಾಗಿ ಅವರು ದನಿಯಿಲ್ಲದ ಲಕ್ಷಾಂತರ ಭಾರತೀಯರ ಪ್ರತಿನಿಧಿಯಾಗಿದ್ದರು. ಅವರು ಅಸ್ಪೃಶ್ಯ ಜಾತಿಗೆ ಸೇರಿದವರಾದ್ದರಿಂದ, ಎಲ್ಲಾ ತರದ ಅವಮಾನಗಳನ್ನು ಮತ್ತು ಸಾಮಾಜಿಕ ಬಹಿಷ್ಕಾರಗಳನ್ನು ಅನುಭವಿಸಿದರು. ದಲಿತರು ಮತ್ತು ಶೋಷಿತರು ರಾಜಕೀಯ ಪ್ರಾತಿನಿಧ್ಯವನ್ನು ಪಡೆದಾಗ ಮಾತ್ರ ಅವರ ವಿಮೋಚನೆ ಎಂಬುದು ಅವರ ನಿಲುವಾಗಿತ್ತು.

NOT TO BE REPUBLISHED ©KTBS

**ಚಟುವಟಿಕೆ :** ಡಾ. ಬಿ.ಆರ್. ಅಂಬೇಡ್ಕರ್ ಬರೆದ ಕೃತಿಗಳನ್ನು ಪಟ್ಟಿಮಾಡಿ ಹಾಗೂ ಅವರು ಸಿದ್ಧಪಡಿಸಿದ 'ಹಿಂದೂ ಕೋಡ್ ಬಿಲ್ಲ'ನ್ನು ಕುರಿತು ಮಾಹಿತಿ ಸಂಗ್ರಹಿಸಿರಿ.

ಡಾ. ಬಿ.ಆರ್. ಅಂಬೇಡ್ಕರ್ ದಲಿತ ವರ್ಗಗಳ ಪ್ರತಿನಿಧಿಯಾಗಿ ಲಂಡನಿನಲ್ಲಿ ನಡೆದ ಮೂರೂ ದುಂಡುಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಬ್ರಿಟಿಷರಿಂದ ಘೋಷಿಸಲ್ಪಟ್ಟ 'ಮತೀಯ ತೀರ್ಪು' (ಕಮ್ಯೂನಲ್ ಎವಾರ್ಡ್) (1932) ದಲಿತ ವರ್ಗಕ್ಕೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಕಲ್ಪಿಸಿತು. ಈ ತೀರ್ಪನ್ನು ಒಪ್ಪದ ಗಾಂಧೀಜಿಯವರು ಯರವಾಡಾ (ಪುಣೆ) ಸೆರೆಮನೆಯಲ್ಲಿ ಆಮರಣ ಉಪವಾಸವನ್ನು ಕೈಗೊಂಡರು. ಅಂತಿಮವಾಗಿ ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆ ಪುಣೆ ಒಪ್ಪಂದದ (1932) ಮೂಲಕ ಸಮಸ್ಯೆ ಅಂತ್ಯಗೊಂಡಿತು. ಅವರು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿದ್ದರು. 1956 ಡಿಸೆಂಬರ್ 6ರಂದು ತೀರಿಕೊಂಡರು. ಇದಕ್ಕೆ ಕೆಲವೇ ತಿಂಗಳುಗಳ ಮೊದಲು ಬೌದ್ಧಮತಕ್ಕೆ ಮತಾಂತರಗೊಂಡಿದ್ದರು. 1990ರಲ್ಲಿ ಅವರಿಗೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್‌ರವರು ಅಸ್ಪೃಶ್ಯರ ಪ್ರಗತಿಗಾಗಿ "ಮೂಕನಾಯಕ" ಮತ್ತು "ಬಹಿಷ್ಕೃತ ಭಾರತ" ಎಂಬ ಪತ್ರಿಕೆಗಳ ಸಂಪಾದಕರಾಗಿದ್ದರು, ಅವರು ಸ್ಥಾಪಿಸಿದ ಸಂಘಟನೆಯೆಂದರೆ ಬಹಿಷ್ಕೃತ ಹಿತಕಾರಿಣಿ ಸಭಾ.




*ಭಾರತದ ವಿಭಜನೆ, 1947*

## ಮುಖ್ಯ ಇಸವಿಗಳು

| | |
|---|---|
| ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆ | 1885 |
| ಮಂದಗಾಮಿಗಳ ಕಾಲ | 1885–1905 |
| ತೀವ್ರಗಾಮಿಗಳ ಕಾಲ | 1905–1919 |
| ಬಂಗಾಲದ ವಿಭಜನೆ | 1905 |
| ಮುಸ್ಲಿಂ ಲೀಗಿನ ಸ್ಥಾಪನೆ | 1906 |
| ಸೂರತ್ ಒಡಕು | 1907 |
| ಜಲಿಯನ್‌ವಾಲಾಬಾಗ್ ಹತ್ಯಾಕಾಂಡ | 1919 |
| ಗಾಂಧೀಜಿಯವರ ಜನನ | 1869, ಅಕ್ಟೋಬರ್ 2 |
| ಅಸಹಕಾರ ಚಳವಳಿ | 1920–1922 |
| ಚೌರಿಚೌರ ದುರಂತ | 1922 |
| ಪೂರ್ಣ ಸ್ವರಾಜ್ಯದ ಘೋಷಣೆ | 1929 |
| ಪೂರ್ಣ ಸ್ವರಾಜ್ಯ ದಿನಾಚರಣೆ | 1930, ಜನವರಿ 26 |
| ಉಪ್ಪಿನ ಸತ್ಯಾಗ್ರಹ | 1930, ಮಾರ್ಚ್ 12 |
| ಎರಡನೇ ವಿಶ್ವಸಮರ | 1939–1945 |
| ಭಾರತ ಬಿಟ್ಟು ತೊಲಗಿ ಚಳವಳಿ | 1942 |
| ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಘೋಷಣೆ | 1947, ಜೂನ್ 3 |
| ಸ್ವತಂತ್ರ ಪಾಕಿಸ್ತಾನದ ರಚನೆ | 1947, ಆಗಸ್ಟ್ 14 |
| ಸ್ವತಂತ್ರ ಭಾರತದ ರಚನೆ | 1947, ಆಗಸ್ಟ್ 15 |

@KTBS
NOT TO BE REPUBLISHED

## ಅಭ್ಯಾಸಗಳು

**I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

1 ಭಾರತ ರಾಷ್ಟ್ರೀಯ ಕಾಂಗ್ರೆಸನ್ನು ಸ್ಥಾಪಿಸಿದವರು ಯಾರು?

2 "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ನಾನು ಅದನ್ನು ಪಡೆದೇ ತೀರುತ್ತೇನೆ". ಇದನ್ನು ಹೇಳಿದವರು ಯಾರು?

3 ಭಾರತ ಮುಸ್ಲಿಂ ಲೀಗ್ ಯಾವಾಗ ಸ್ಥಾಪನೆಯಾಯಿತು?

4 ಯಾವುದಾದರೂ ಒಂದು ಗುಪ್ತ ಕ್ರಾಂತಿಕಾರಿ ಸಂಘವನ್ನು ಹೆಸರಿಸಿರಿ.

5 ಗಾಂಧೀಜಿ ಅವರು ಎಲ್ಲಿ, ಯಾವಾಗ ಜನಿಸಿದರು?

6 'ಫಾರ್ವರ್ಡ್ ಬ್ಲಾಕ್' ಆರಂಭಿಸಿದವರು ಯಾರು?

7 ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಗಾಂಧೀಜಿ ನೀಡಿದ ಘೋಷಣೆ ಯಾವುದು?

8 'ನೀವು ರಕ್ತವನ್ನು ನೀಡಿದರೆ, ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ' ಎಂಬ ಘೋಷಣೆ ನೀಡಿದವರು ಯಾರು?

9 ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರು ಯಾರಾಗಿದ್ದರು?

10 'ಭಾರತದ ಉಕ್ಕಿನ ಮನುಷ್ಯ' ಎಂದು ಖ್ಯಾತರಾದವರು ಯಾರು?

## II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1 ಭಾರತ ರಾಷ್ಟ್ರೀಯ ಕಾಂಗ್ರೆಸಿನ ಯಾವುದಾದರೂ ಎರಡು ಉದ್ದೇಶಗಳನ್ನು ಬರೆಯಿರಿ.

2 'ಲಾಲ್, ಬಾಲ್, ಮತ್ತು ಪಾಲ್' ಎಂದು ಜನಪ್ರಿಯರಾದ ರಾಷ್ಟ್ರೀಯ ನಾಯಕರು ಯಾರು?

3 ಹೋಂ ರೂಲ್ ಚಳವಳಿಗಳನ್ನು ಆರಂಭಿಸಿದವರು ಯಾರು?

4 ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಯಾವಾಗ ಸಂಭವಿಸಿತು? ಈ ಘಟನೆಗೆ ಕಾರಣವಾದ ಬ್ರಿಟಿಷ್ ಪೊಲೀಸ್ ಅಧಿಕಾರಿ ಯಾರು?

5 ದಂಡಿ ಯಾತ್ರೆಯ ಪ್ರಾಮುಖ್ಯತೆ ಏನು?

6 ಭಾರತ ಬಿಟ್ಟು ತೊಲಗಿ ಚಳವಳಿಯನ್ನು ಕುರಿತು ಬರೆಯಿರಿ.

7 ಪ್ರಮುಖ ಆದಿವಾಸಿ ಮತ್ತು ರೈತ ಚಳವಳಿಗಳನ್ನು ಹೆಸರಿಸಿರಿ.

## III ಟಿಪ್ಪಣಿ ಬರೆಯಿರಿ.

1 ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಅಂಶಗಳು.

2 ರೌಲಟ್ ಕಾಯಿದೆ.

3 ಸುಭಾಷ್‌ಚಂದ್ರ ಬೋಸ್

4 ಡಾ. ಬಿ.ಆರ್. ಅಂಬೇಡ್ಕರ್

©KTBS NOT TO BE REPUBLISHED

## IV ಬಿಟ್ಟ ಜಾಗದಲ್ಲಿ ಸೂಕ್ತವಾದ ಪದವನ್ನು ತುಂಬಿರಿ.

1 ಗಾಂಧೀಯವರ ರಾಜಕೀಯ ಗುರು ______________ .

2 ಚೌರಿಚೌರ ಘಟನೆಯು _______________ ರಲ್ಲಿ ಸಂಭವಿಸಿತು.

3 "ಸಂಪೂರ್ಣ ಸ್ವರಾಜ್ಯ" ನಿರ್ಣಯವು ____________ ರಲ್ಲಿ ಅಂಗೀಕರಿಸಲ್ಪಟ್ಟಿತು.

4 ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಮಹಾಕಾರ್ಯದರ್ಶಿ __________ ಆಗಿದ್ದರು.

5 ಸ್ವತಂತ್ರ್ಯ ಭಾರತದ ಮೊದಲ ಪ್ರಧಾನಿಮಂತ್ರಿ __________ ಆಗಿದ್ದರು.

6 'ಎರಡು ರಾಷ್ಟ್ರಗಳ ಸಿದ್ಧಾಂತ' ಪ್ರತಿಪಾದಿಸಿದವರು __________ .

7 ಭಾರತೀಯ ರಾಷ್ಟ್ರೀಯ ಸೇನೆ (ಐ.ಎನ್.ಎ.)ಯ ನಾಯಕತ್ವವನ್ನು ________ ವಹಿಸಿದರು.

8 ಸಂವಿಧಾನ ರಚನಾ ಸಭೆಯ ಅಧ್ಯಕ್ಷರು __________.

©KTBS NOT TO BE REPUBLISHED



### ಚಟುವಟಿಕೆಗಳು

1 ದಾದಾಭಾಯಿ ನೌರೋಜಿ ಮತ್ತು ಬಾಲಗಂಗಾಧರ ತಿಲಕ್ ಅವರ ಜೀವನ ಚರಿತ್ರೆಯನ್ನು ಓದಿರಿ.

2 ಕ್ರಾಂತಿಕಾರಿಗಳ ಭಾವಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

3 ಈ ಕೆಳಗಿನ ಕ್ರಾಂತಿಕಾರರ ಜೀವನ ಚರಿತ್ರೆಯನ್ನು ಓದಿ, ಲೇಖನವೊಂದನ್ನು ಬರೆದು ಶಾಲೆಯ ಬುಲೆಟಿನ್ ಬೋರ್ಡಿನಲ್ಲಿ ಪ್ರಕಟಿಸಿರಿ.

ವಾಸುದೇವ ಬಲವಂತ ಫಡ್ಕೆ, ಖುದಿರಾಮ್ ಬೋಸ್, ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಮೇಡಂ ಕಾಮಾ.

4 'ದಂಡಿ ಯಾತ್ರೆ' ಮತ್ತು 'ಭಾರತ ಬಿಟ್ಟು ತೊಲಗಿ' ಚಳವಳಿಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.

5 ಭಾರತದ ರಾಷ್ಟ್ರಪತಿಗಳ ಹಾಗೂ ಉಪರಾಷ್ಟ್ರಪತಿಗಳ ಹೆಸರುಗಳನ್ನು ಸಂಗ್ರಹಿಸಿರಿ.

# ಅಧ್ಯಾಯ 17 ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು

R1G2V3

**ಪಾಠದ ಪರಿಚಯ**

ಕನ್ನಡ ನಾಡಿಗೆ ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಚರಿತ್ರೆಯಿದೆ. ಕನ್ನಡಿಗರು ಚಾರಿತ್ರಿಕವಾಗಿ ಬೇರೆ ಬೇರೆ ರಾಜಕೀಯ ವ್ಯವಸ್ಥೆಗಳಲ್ಲಿ ಬದುಕಿದವರು. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕನ್ನಡ ಭಾಷಿಕರ ಪ್ರದೇಶಗಳು ಮರಾಠಾ ಪೇಶ್ವೆಗಳು, ಪಾಳೇಗಾರರು, ಇಂಗ್ಲಿಷರು, ಸುಲ್ತಾನರು, ನವಾಬರು ಮುಂತಾದವರ ಆಳ್ವಿಕೆಯಲ್ಲಿ ಇಪ್ಪತ್ತು ಆಡಳಿತ ಘಟಕಗಳಲ್ಲಿ ಹಂಚಿಹೋದವು. ಇದರಿಂದ ಕನ್ನಡಿಗರು ಕನ್ನಡ ನೆಲದಲ್ಲಿಯೇ ಪರಕೀಯತೆಯ ಭಾವನೆಯನ್ನು ಅನುಭವಿಸುತ್ತಿದ್ದರು. ಬ್ರಿಟಿಷರು ಕಂದಾಯ ವಸೂಲಿಯ ಅನುಕೂಲಕ್ಕೆ ಮಾತ್ರ ಪ್ರದೇಶಗಳನ್ನು ವಿಭಜಿಸಿದರೇ ಹೊರತು, ಭಾಷೆ ಮತ್ತು ಸಂಸ್ಕೃತಿಯನ್ನು ಪರಿಗಣಿಸಲಿಲ್ಲ. ಈ ಪಾಠದಲ್ಲಿ ಕರ್ನಾಟಕ ಏಕೀಕರಣ ಚಳವಳಿಯ ಹಂತಗಳನ್ನು ಪರಿಚಯಿಸಲಾಗಿದೆ. ಏಕೀಕರಣ ಸೃಷ್ಟಿಸಿದ ಗಡಿ ವಿವಾದಗಳನ್ನು ಕೂಡ ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1 ಕರ್ನಾಟಕ ಏಕೀಕರಣದ ಹಿನ್ನೆಲೆ ಹಾಗೂ ಚಳವಳಿಯ ಪ್ರಮುಖ ಹಂತಗಳನ್ನು ಅರಿಯುವುದು.

2 ಏಕೀಕರಣ ಚಳವಳಿಯನ್ನು ರೂಪಿಸಿದ ಮಹನೀಯರ ಬಗ್ಗೆ ತಿಳಿಯುವುದು.

3 1956ರ ಅನಂತರ ಹುಟ್ಟಿಕೊಂಡ ಗಡಿ ವಿವಾದಗಳನ್ನು ಅರ್ಥೈಸಿಕೊಂಡು ಪರಿಹಾರವನ್ನು ಸೂಚಿಸುವುದು.

@KTBS NOT TO BE REPUBLISHED

## ಏಕೀಕರಣದ ಚಾರಿತ್ರಿಕ ಹಿನ್ನೆಲೆ

'ಕವಿರಾಜಮಾರ್ಗ' ಕೃತಿಯಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಇತ್ತು ಎಂದು ವರ್ಣಿಸಲಾಗಿದೆ. ಅನೇಕ ಕನ್ನಡ ಅರಸುಮನೆತನಗಳು ಈ ಭಾಗವನ್ನು ಆಳಿದವು. ಆದರೆ ವಿಜಯನಗರ ಸಾಮ್ರಾಜ್ಯದ ಪತನಾನಂತರ ಕನ್ನಡ ಪ್ರದೇಶಗಳು ರಾಜಕೀಯ ಸ್ಥಿತ್ಯಂತರಗಳಿಗೆ ಒಳಗಾದವು. ರಾಜಕೀಯವಾಗಿ ಮೇಲ್ಗೈ ಸಾಧಿಸಿದ ಶಕ್ತಿಗಳು ಕನ್ನಡ ಮತ್ತು ಕನ್ನಡಿಗರನ್ನು ಗೌಣವಾಗಿಸಿದವು. ಟಿಪ್ಪುವಿನ ಮರಣದ ನಂತರ ಬ್ರಿಟಿಷರು ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನು ಬೇರೆ ಬೇರೆ ಭಾಷಿಕ ಹಿನ್ನೆಲೆಯ ರಾಜಕೀಯ

ಶಕ್ತಿಗಳ ಅಧೀನಕ್ಕೆ ವರ್ಗಾಯಿಸಿದರು. ಕನ್ನಡಿಗರು ಮರಾಠ, ನಿಜಾಮ ಮುಂತಾದವರ ಅಧೀನದಲ್ಲಿ ಪರಕೀಯ ಭಾವನೆಯಿಂದ ಬದುಕುವ ಅನಿವಾರ್ಯತೆಯನ್ನು ಎದುರಿಸಿದರು. ಇಂತಹ ಪ್ರತಿಕೂಲ ಸನ್ನಿವೇಶಗಳಿಂದ ಹೊರಬಂದು ಕನ್ನಡಿಗರು ಒಂದು ರಾಜ್ಯವನ್ನು ಕಟ್ಟಿಕೊಂಡು, ಒಂದು ಆಡಳಿತದಲ್ಲಿರಲು ಹೋರಾಟಗಳನ್ನು ನಡೆಸಿದರು. ಇದನ್ನೇ ಏಕೀಕರಣ ಚಳವಳಿಯೆಂದು ಕರೆಯಲಾಗಿದೆ.

ಏಕೀಕರಣದ ಆರಂಭಿಕ ಹೆಜ್ಜೆಯನ್ನು ಇಟ್ಟವರು ಮುಂಬೈಕರ್ನಾಟಕ ಭಾಗದ ಜನರು. ರಾ.ಹಾ. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ 1890ರಲ್ಲಿ ಆರಂಭವಾದ 'ಕರ್ನಾಟಕ ವಿದ್ಯಾವರ್ಧಕ ಸಂಘ' ಏಕೀಕರಣ ಕಲ್ಪನೆಗೆ ಸಾಂಸ್ಥಿಕ ರೂಪವನ್ನು ನೀಡಿತು. ವೆಂಕಟ ರಂಗೋ ಕಟ್ಟಿಯಂತಹ ಮಹನೀಯರು ಏಕೀಕರಣದ ಆರಂಭಿಕ ಹಂತದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

**ಚಟುವಟಿಕೆ:** ಮುಂಬೈಕರ್ನಾಟಕ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಲು ಶ್ರಮಿಸಿದ ಡೆಪ್ಯೂಟಿ ಚೆನ್ನಬಸಪ್ಪನವರ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿರಿ.

@KTBS NOT TO BE REPUBLISHED

1915ರಲ್ಲಿ ಪ್ರಾರಂಭವಾದ ಕನ್ನಡ ಸಾಹಿತ್ಯ ಪರಿಷತ್ತು, ಹಾಗೂ ಕರ್ನಾಟಕ ಸಭಾ (1916) ಈ ಚಳವಳಿಯನ್ನು ಮುಂದುವರೆಸಿದವು.

1924ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣ ರಾವ್ ಅವರು 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಸ್ವಾಗತಗೀತೆಯನ್ನು ಹಾಡುವ ಮೂಲಕ ಏಕೀಕರಣ ಚಳವಳಿಗೆ ವಿದ್ಯುತ್ ಸಂಚಲನವನ್ನು ತಂದುಕೊಟ್ಟರು. ಈ ಸಮ್ಮೇಳನದ ಅಧ್ಯಕ್ಷರಾಗಿದ್ದ ಗಾಂಧೀಜಿಯವರು ಏಕೀಕರಣಕ್ಕೆ ತಮ್ಮ ಬೆಂಬಲವನ್ನು ನೀಡಿದರು. ಏಕೀಕರಣ ಚಳವಳಿಯು ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿಯೆ ಬೆಳೆಯಿತು.

**ಚಟುವಟಿಕೆ:** 1) ಏಕೀಕರಣಕ್ಕೆ ದುಡಿದ ಸಾಹಿತಿಗಳ ಹೆಸರನ್ನು ಪಟ್ಟಿಮಾಡಿ.
2) ಬಿ.ಎಂ.ಶ್ರೀ. ಅವರ ಬಗೆಗೆ ಹೆಚ್ಚಿನ ಮಾಹಿತಿಯನ್ನು ಕಲೆಹಾಕಿ.

### ಕರ್ನಾಟಕದ ಇಪ್ಪತ್ತು ಆಡಳಿತ ಪ್ರದೇಶಗಳು

| | | |
|---|---|---|
| 1 ಮದ್ರಾಸು–ಕರ್ನಾಟಕ | : | ಬಳ್ಳಾರಿ, ದಕ್ಷಿಣ ಕನ್ನಡ, ನೀಲಗಿರಿ ಜಿಲ್ಲೆಗಳು ಹಾಗೂ ಇತರ ತಾಲ್ಲೂಕುಗಳು. (ಬ್ರಿಟಿಷ್ ಆಡಳಿತ) |
| 2 ಮುಂಬೈ–ಕರ್ನಾಟಕ | : | ಉತ್ತರ ಕನ್ನಡ, ಧಾರವಾಡ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳು ಮತ್ತು ಇತರ ಮೂರು ತಾಲ್ಲೂಕುಗಳು. (ಬ್ರಿಟಿಷ್ ಆಡಳಿತ) |

| | | |
|---|---|---|
| 3 ಕೊಡಗು | : | ಚೀಫ್ ಕಮಿಷನರ್ ಆಡಳಿತ. (ಬ್ರಿಟಿಷ್ ಆಡಳಿತ) |
| 4 'ಕಂಟೋನ್ಮೆಂಟ್' ಕರ್ನಾಟಕ | : | ಬೆಳಗಾವಿ ಮತ್ತು ಬೆಂಗಳೂರು ಇವು ಮಿಲಿಟರಿ ಸ್ಟೇಷನ್ ಅಥವಾ ದಂಡುಪ್ರದೇಶಗಳು. (ಬ್ರಿಟಿಷ್ ಆಡಳಿತ) |
| 5 ಮೈಸೂರು | : | ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು (ಮೈಸೂರು ಸಂಸ್ಥಾನ) |
| 6 ಹೈದರಾಬಾದ್ ಸಂಸ್ಥಾನ | : | ಕಲಬುರಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು (ಹೈದರಾಬಾದ್ ಸಂಸ್ಥಾನ). |
| 7 ರಿಂದ 20 | | ಚಿಕ್ಕಪುಟ್ಟ 14 ಸಂಸ್ಥಾನಗಳು.<br>ಒಟ್ಟು 20 ಆಡಳಿತ ಘಟಕಗಳು. |

## ಏಕೀಕರಣ ಚಳವಳಿಯಲ್ಲಿ ಪತ್ರಿಕೋದ್ಯಮ ಮತ್ತು ಸಾಹಿತ್ಯದ ಪಾತ್ರ

ದಿನಪತ್ರಿಕೆ ಹಾಗೂ ಮತ್ತು ವಾರಪತ್ರಿಕೆಗಳು ಮತ್ತು ಸಾಹಿತ್ಯ ಕೃತಿಗಳು ಇವು ಏಕೀಕರಣ ಚಳವಳಿಗೆ ಪ್ರೇರಣೆ ನೀಡಿದವು. ಮುಂಬೈಕರ್ನಾಟಕ, ಮೈಸೂರು ಸಂಸ್ಥಾನ ಮತ್ತು ಕರಾವಳಿ ಕರ್ನಾಟಕದಲ್ಲಿ ಅನೇಕ ಪತ್ರಿಕೆಗಳು ಪ್ರಕಟಗೊಳ್ಳುತ್ತಿದ್ದವು.

©KTBS NOT TO BE REPUBLISHED

**ಪ್ರಮುಖ ವೃತ್ತ ಪತ್ರಿಕೆಗಳು :**

ಮುಂಬೈಕರ್ನಾಟಕ 'ವಿಜಯ', 'ರಾಜಹಂಸ', 'ಕರ್ನಾಟಕ ವೃತ್ತ', 'ಕನ್ನಡ ಕೇಸರಿ', 'ಕರ್ನಾಟಕ ವೈಭವ',

ಮೈಸೂರು ಸಂಸ್ಥಾನ 'ಸೂರ್ಯೋದಯ ಪ್ರಕಾಶಿಕಾ', 'ಹಿತಬೋಧಿನಿ', 'ವೃತ್ತಾಂತ ಚಿಂತಾಮಣಿ', 'ಮೈಸೂರು ಹೆರಾಲ್ಡ್'.

ಕರ್ನಾಟಕದ ನಾಡುನುಡಿ ಸಂಸ್ಕೃತಿಗಳ ಸಂವರ್ಧನೆಗಾಗಿ ಶ್ರಮಿಸಿದ ಹಿರಿಯರೆಂದರೆ ಆಲೂರು ವೆಂಕಟರಾಯರು. ಕರ್ನಾಟಕದ ಅಂದಿನ ದುಃಸ್ಥಿತಿಯನ್ನು ಕಂಡು ಅವರು ಹೀಗೆಂದು ಉದ್ಗರಿಸಿದ್ದರು: "ಛೇ, ಕರ್ನಾಟಕವೆಲ್ಲಿದೆ?... ನಾಲ್ಕಾರು ಕಡೆ ಹರಿದು ಹಂಚಿಹೋದ ಕರ್ನಾಟಕವನ್ನು ಹೊಲಿದು ಅಖಂಡವಾಗಿ ಮಾಡುವವರಾರು? ಅಷ್ಟೊಂದು ಅಭಿಮಾನ ಉಂಟೇನು?"


ಆಲೂರು ವೆಂಕಟರಾಯರು
'ಕರ್ನಾಟಕ ಕುಲಪುರೋಹಿತ'


ಹುಯಿಲಗೋಳ ನಾರಾಯಣರಾವ್


ರಾಷ್ಟ್ರಕವಿ ಕುವೆಂಪು


ರಾಷ್ಟ್ರಕವಿ ಗೋವಿಂದ ಪೈ

ಕನ್ನಡನಾಡು ನುಡಿಗಳ ವೈಭವವನ್ನು ಕನ್ನಡಿಗರಿಗೆ ತಿಳಿಸುವುದೇ ವೆಂಕಟರಾಯರ ಉದ್ದೇಶವಾಗಿತ್ತು. ಅದಕ್ಕಾಗಿ 'ಕರ್ನಾಟಕದ ಗತವೈಭವ' ಎಂಬ ಪುಸ್ತಕ ಬರೆದು ತಮ್ಮ ಖರ್ಚಿನಿಂದ ಪ್ರಕಟಿಸಿದರು. ಇದು ಅತ್ಯಂತ ಸ್ಫೂರ್ತಿದಾಯಕ ಪುಸ್ತಕವಾಗಿತ್ತು. ಹೈದರಾಬಾದಿನ ಕನ್ನಡಿಗರು ಅವರಿಗೆ ಸನ್ಮಾನ ಮಾಡಿ (1941) 'ಕರ್ನಾಟಕ ಕುಲಪುರೋಹಿತ' ಎಂಬ ಬಿರುದನ್ನು ಅರ್ಪಿಸಿದರು. ಮುಂಬೈಕರ್ನಾಟಕದಲ್ಲಿ ಕನ್ನಡಿಗರಲ್ಲಿ ಜಾಗೃತಿ ಮೂಡಿಬರಲು ಶಾಂತಕವಿಗಳ ಪಾತ್ರ ದೊಡ್ಡದು. ಸಾಹಿತ್ಯ ಸಮ್ಮೇಳನದ ಖರ್ಚಿಗಾಗಿ, "ಬೇಡಲು ಕನ್ನಡದಾಸಯ್ಯ ಬಂದಿಹ, ನೀಡಿರಮ್ಮಾ ತಡಮಾಡದಲೇ" ಎಂದು ದಾಸಯ್ಯನಾಗಿ ಹಾಡಿ ಹಣ ಸಂಗ್ರಹಿಸಿದರು. ಕುವೆಂಪು ಅವರ 'ಜಯಹೇ ಕರ್ನಾಟಕ ಮಾತೆ', 'ನೀ ಮೆಟ್ಟುವ ನೆಲ ಅದೇ ಕರ್ನಾಟಕ' ಮುಂತಾದವು ಲಕ್ಷೋಪಲಕ್ಷ ಕನ್ನಡಿಗರ ಹೃದಯ ತಟ್ಟಿತು. ಹುಯಿಲಗೋಳ ನಾರಾಯಣರಾವ್ ಅವರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆಯು ಅತ್ಯಂತ ಜನಪ್ರಿಯವಾಯಿತು. ಕನ್ನಡದ ಮೊದಲ 'ರಾಷ್ಟ್ರಕವಿ' ಮಂಜೇಶ್ವರ ಗೋವಿಂದ ಪೈ ಅವರು ಕರ್ನಾಟಕದಲ್ಲಿ ಕಾಸರಗೋಡು ವಿಲೀನಗೊಳ್ಳಬೇಕೆಂದು ಕೊನೆಯವರೆಗೂ ಹೋರಾಡಿದರು. ಇನ್ನೂ ಅನೇಕ ಕವಿಗಳು, ಲೇಖಕರು ಕನ್ನಡಿಗರಲ್ಲಿ ತೀವ್ರ ಅಭಿಮಾನ ಮೂಡಿಸಿದರು.

## ಸ್ವಾತಂತ್ರ್ಯೋತ್ತರ ಏಕೀಕರಣ ಚಳವಳಿ

ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲಾವಧಿಯ ಏಕೀಕರಣದ ಕನಸು ನನಸಾದುದು ದೇಶ ಸ್ವಾತಂತ್ರ್ಯಗಳಿಸಿದ ಅನಂತರವೇ, ಅದೂ ಮೂರು ಹಂತಗಳಲ್ಲಿ.

© KTBS NOT TO BE REPUBLISHED

## ಮೊದಲನೆಯ ಹಂತ (1947–48)

1947ರ ಮೊದಲು ನಮ್ಮ ದೇಶದಲ್ಲಿ ಎರಡು ಬಗೆಯ ರಾಜ್ಯಗಳಿದ್ದುವು: ಬ್ರಿಟಿಷ್ ಭಾರತದ ಪ್ರಾಂತ್ಯಗಳು ಮತ್ತು ಅರಸೊತ್ತಿಗೆಯ (ಸಂಸ್ಥಾನಿಕ) 562 ರಾಜ್ಯಗಳು. ಸಂವಿಧಾನ ಸಭೆಯು ಭಾರತವನ್ನು ಭಾಷಾವಾರು ಪ್ರಾಂತ್ಯಗಳಾಗಿ ರೂಪಿಸದೆ, ಭಾರತವನ್ನು ನಾಲ್ಕು ಬಗೆಯ ಆಡಳಿತ ಘಟಕಗಳನ್ನಾಗಿ ವಿಂಗಡಿಸಿತು. ಅವೇ ಎ, ಬಿ, ಸಿ ಮತ್ತು ಡಿ ಘಟಕಗಳು. ಅದರಂತೆ ಕರ್ನಾಟಕದ ಇಪ್ಪತ್ತು ಆಡಳಿತ ಘಟಕಗಳನ್ನು ಐದು ಘಟಕಗಳಾಗಿ ಪುನರ್‌ವಿಂಗಡಿಸಲಾಯಿತು. ಈ ಐದು ಘಟಕಗಳೆಂದರೆ ಮುಂಬೈ, ಮದ್ರಾಸ್, ಮೈಸೂರು, ಹೈದರಾಬಾದ್ ಮತ್ತು ಕೊಡಗು ಕರ್ನಾಟಕಗಳು. ಇದು ಕರ್ನಾಟಕ ಏಕೀಕರಣದ ನಿಟ್ಟಿನಲ್ಲಿ ಮೊದಲನೆಯ ಹಂತವಾಯಿತು.

## ಎರಡನೆಯ ಹಂತ (1953)

1951–52ರಲ್ಲಿ ಲೋಕಸಭೆಗೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯಿತು. ಚುನಾವಣೆಯ ನಂತರ ಉಗ್ರ ಚಳುವಳಿಯ ಮನೋಭಾವದ 'ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್' ಎಂಬ ಪಕ್ಷ ಉದಯಿಸಿತು (1952). ಈ ಪಕ್ಷ ಏಕೀಕರಣಕ್ಕಾಗಿ ಸತ್ಯಾಗ್ರಹ ನಡೆಸಿ ಸುಮಾರು 5000 ಮಂದಿ ಬಂಧಿತರಾಗಿ ಸೆರೆಮನೆ ಸೇರಿದರು. ಅಂದಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರು ಏಕೀಕರಣಕ್ಕೆ ಬೆಂಬಲವನ್ನು ನೀಡಿದರು. ಇವರು ಏಕೀಕರಣದ ಪರವಾಗಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡರು.

© KTBS NOT TO BE REPUBLISHED

1952ರಲ್ಲಿ ಪೊಟ್ಟಿ ಶ್ರೀರಾಮುಲು ಎಂಬ ಆಂಧ್ರದ ಮುಖಂಡರು ಆಂಧ್ರ ಪ್ರಾಂತ್ಯವನ್ನು ರಚಿಸಲು ಒತ್ತಾಯಿಸಿ ಉಪವಾಸ ಕೈಗೊಂಡು 58 ದಿನಗಳ ನಂತರ ನಿಧನ ಹೊಂದಿದರು. ಆಂಧ್ರದಲ್ಲಿ ತೀವ್ರವಾದ ಗಲಭೆಗಳುಂಟಾದವು. ಶ್ರೀರಾಮುಲು ನಿಧನದ ಬಳಿಕ ಪ್ರಧಾನಿ ನೆಹರು ಆಂಧ್ರ ರಾಜ್ಯವನ್ನು ರಚಿಸಲು ಸರ್ಕಾರ ನಿರ್ಧರಿಸಿದೆಯೆಂದು ಘೋಷಿಸಿದರು. ಅದರಂತೆ ಆಂಧ್ರ ಪ್ರದೇಶ ರಚನೆಯಾಯಿತು (1953).

ಆಂಧ್ರ ಪ್ರದೇಶ ರಚನೆಯಾದಾಗ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನು ಮೈಸೂರು ಪ್ರಾಂತಕ್ಕೆ ಸೇರಿಸಲಾಯಿತು. ಇದು ಏಕೀಕರಣದ ಎರಡನೆಯ ಹಂತ.

## ಕೊನೆಯ ಹಂತ (1956)

ಆಂಧ್ರ ಪ್ರದೇಶ ರಚನೆಯಾದ ನಂತರ ಭಾಷೆಯ ಆಧಾರದಲ್ಲಿ ಭಾರತದ ಪುನರ್‌ವಿಂಗಡನೆಯ ಬೇಡಿಕೆ ತೀವ್ರಗೊಂಡಿತು. ಕೇಂದ್ರ ಸರ್ಕಾರವು ರಾಜ್ಯಗಳ ಪುನರ್ ವಿಂಗಡನೆಯನ್ನು ಕುರಿತು ವರದಿ ನೀಡಲು 'ರಾಜ್ಯ ಪುನರ್‌ವಿಂಗಡಣಾ ಆಯೋಗ'ವನ್ನು

(ಎಸ್.ಆರ್.ಸಿ.) ನೇಮಿಸಿತು. ಅದರ ಅಧ್ಯಕ್ಷರು ಎಸ್. ಫಜಲ್ ಅಲಿ (ಆದ್ದರಿಂದ 'ಫಜಲ್ ಅಲಿ ಆಯೋಗ' ಎನ್ನುವರು). ಅದರ ಇತರ ಸದಸ್ಯರು ಎಚ್.ಎನ್ ಕುಂಜ್ರು ಮತ್ತು ಕೆ.ಎಂ.ಪಣಿಕ್ಕರ್. ಆಯೋಗವು 1955ರಲ್ಲಿ ವರದಿಯನ್ನು ಸಲ್ಲಿಸಿತು. ಅದರಂತೆ ಭಾರತದ ರಾಜ್ಯಗಳ ಪುನರ್‌ವಿಂಗಡನೆಯು ಭಾಷೆ ಮತ್ತು ಆಡಳಿತದ ಅನುಕೂಲದ ನೆಲೆಗಳಲ್ಲಿ ನಡೆಯಿತು. ನಾಡಿನ ಎಲ್ಲ ಪಕ್ಷಗಳು ಆಯೋಗದ ವರದಿಯನ್ನು ಮಾನ್ಯ ಮಾಡಿದವು. ಆದರೆ ಕಾಸರಗೋಡನ್ನು ಕೇರಳ ರಾಜ್ಯಕ್ಕೆ ಸೇರಿಸಿದ್ದನ್ನೂ ಬಳ್ಳಾರಿ ಜಿಲ್ಲೆಯ ಕುರಿತು ಮಾಡಿದ ಸಲಹೆಗಳನ್ನೂ ಕನ್ನಡಿಗರು ಏಕಕಂಠದಿಂದ ಪ್ರತಿಭಟಿಸಿದರು. ಮೈಸೂರು ವಿಧಾನಸಭೆಯು ಬಳ್ಳಾರಿಯನ್ನು ಮೈಸೂರಿನಿಂದ ಪ್ರತ್ಯೇಕಗೊಳಿಸಬಾರದೆಂದೂ ನೂತನ ರಾಜ್ಯಕ್ಕೆ 'ಮೈಸೂರು ರಾಜ್ಯ'ವೆಂದು ಹೆಸರಿಸಬೇಕೆಂದೂ ತೀರ್ಮಾನಕ್ಕೆ ಬಂತು. (ಫಜಲ್ ಆಲಿ ಆಯೋಗವು ಬಳ್ಳಾರಿ ಜಿಲ್ಲೆಯ ಬಹುಭಾಗವನ್ನು ಆಂಧ್ರ ಪ್ರದೇಶಕ್ಕೆ ಮರಳಿಸಲು ಶಿಫಾರಸು ಮಾಡಿತ್ತು).

ಕೇಂದ್ರ ಸರ್ಕಾರವು ಬಳ್ಳಾರಿಯನ್ನು ಕುರಿತು ಮೈಸೂರು ವಿಧಾನಸಭೆಯು ತಳೆದ ಅಭಿಪ್ರಾಯವನ್ನು ಅಂಗೀಕರಿಸಿತು. ಏಕೀಕರಣಗೊಂಡ ಕರ್ನಾಟಕವು 1956ರ ನವೆಂಬರ್ 1 ರಂದು 'ವಿಶಾಲ ಮೈಸೂರು ರಾಜ್ಯ' ಎಂಬ ಹೆಸರಿನೊಂದಿಗೆ ಅಸ್ತಿತ್ವಕ್ಕೆ ಬಂತು.

@KTBS NOT TO BE REPUBLISHED

## ಏಕೀಕರಣೋತ್ತರ ಕರ್ನಾಟಕ

| | |
|---|---|
| 1 ಬಳ್ಳಾರಿ ಜಿಲ್ಲೆಯನ್ನು ಒಳಗೊಂಡ ಮೈಸೂರು ಹತ್ತು ಜಿಲ್ಲೆಗಳು | ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ಹಾಸನ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ. |
| 2 ಮುಂಬೈ ರಾಜ್ಯದ ನಾಲ್ಕು ಜಿಲ್ಲೆಗಳು | ಬೆಳಗಾವಿ, ಧಾರವಾಡ, ವಿಜಯಪುರ ಮತ್ತು ಉತ್ತರ ಕನ್ನಡ. |
| 3 ದಕ್ಷಿಣ ಕನ್ನಡ ಜಿಲ್ಲೆ | ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು ಮತ್ತು ಕೊಯಮುತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಬಿಟ್ಟು). |
| 4 ಕೊಡಗು ಜಿಲ್ಲೆ | |
| 5 ಹೈದರಾಬಾದ್ ರಾಜ್ಯದ ಮೂರು ಜಿಲ್ಲೆಗಳು | ಕಲಬುರಗಿ, ರಾಯಚೂರು ಮತ್ತು ಬೀದರ್. |
| ಒಟ್ಟು 19 ಜಿಲ್ಲೆಗಳು ಇದ್ದವು. (ಇಂದು ಒಟ್ಟು 31 ಜಿಲ್ಲೆಗಳಿವೆ.) | |




©KTBS NOT TO BE REPUBLISHED

*ಕರ್ನಾಟಕ ಏಕೀಕರಣ (1956)*

**ಚಟುವಟಿಕೆ :** ಮೂವತ್ತೊಂದು ಜಿಲ್ಲೆಗಳ ಹೆಸರುಗಳನ್ನು ಪಟ್ಟಿಮಾಡಿರಿ.

ಮೈಸೂರು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರು ರಾಜ್ಯದ ಜನತೆಯನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ಮಾಡಿದರು. ತರುವಾಯ 1956ರಲ್ಲಿ ಉದಯಿಸಿದ ಮೈಸೂರು ರಾಜ್ಯಕ್ಕೆ ಎಸ್. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಗಳಾದರು. 1973 ನವೆಂಬರ್ 1ರಂದು ಅಂದಿನ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸ್ ಅವರು ವಿಶಾಲ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದರು.



*ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿ*



*ಎಸ್. ನಿಜಲಿಂಗಪ್ಪ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ*



*ಡಿ. ದೇವರಾಜ ಅರಸ್ ಮುಖ್ಯಮಂತ್ರಿ*

©KTBS NOT TO BE REPUBLISHED

## ಗಡಿ ವಿವಾದಗಳು

ರಾಷ್ಟ್ರೀಯ ದೃಷ್ಟಿಕೋನದಲ್ಲೇ ಭಾಷಾವಾರು ಪ್ರಾಂತಗಳ ರಚನೆಯನ್ನು ಪರಿಗಣಿಸಿದ್ದರಿಂದ ಗಡಿಭಾಗದ ಕೆಲವು ಪ್ರದೇಶಗಳ ಕನ್ನಡಿಗರು ಅನ್ಯಾಯಕ್ಕೆ ಒಳಗಾದರು. ಭಾಷಿಕವಾಗಿ ಬಹು ಸಂಖ್ಯಾತರಾದರೂ ಬೇರೆ ಭಾಷಿಕ ಪ್ರಾಂತ್ಯಕ್ಕೆ ಸೇರ್ಪಡೆಯಾದ್ದರಿಂದ ಅಲ್ಲಿನ ಪರಿಸ್ಥಿತಿಯಲ್ಲಿ ಅವರು ಅಲ್ಪಸಂಖ್ಯಾತರಾದರು. ಹೀಗಾಗಿ ಇಂದಿಗೂ ಕರ್ನಾಟಕ ಸರ್ಕಾರ ಹಾಗೂ ಕನ್ನಡ ಹೋರಾಟಗಾರರು ಈ ಪ್ರದೇಶಗಳನ್ನು ಕರ್ನಾಟಕಕ್ಕೆ ಮರಳಿ ಪಡೆಯುವ ಆಶಾಭಾವನೆಯಿಂದ ಹೋರಾಟಗಳನ್ನು ನಡೆಸುತ್ತಿದ್ದಾರೆ. ಪ್ರಮುಖವಾಗಿ ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳ ಜೊತೆ ನಿರಂತರ ಸಂಘರ್ಷ ನಡೆಯುತ್ತಿದೆ. ಆದರೆ ಈ ವಿಷಯವನ್ನು ಇತ್ಯರ್ಥಪಡಿಸುವ ಅಧಿಕಾರ ಕೇಂದ್ರ ಸರಕಾರದ ಬಳಿಯಿದೆ.

**ಚಟುವಟಿಕೆ:** ಕನ್ನಡಾಭಿಮಾನವನ್ನು ಮೂಡಿಸುವ ಪದ್ಯಗಳನ್ನು ಸಂಗ್ರಹಿಸಿರಿ.

## 1 ಕರ್ನಾಟಕ ಮಹಾರಾಷ್ಟ್ರ ನಡುವಣ ವಿವಾದ

ಬಹುಸಂಖ್ಯಾತ ಕನ್ನಡಿಗರಿರುವ ಕೆಲವು ಪ್ರದೇಶಗಳು ಇಂದಿಗೂ ಮಹಾರಾಷ್ಟ್ರದಲ್ಲಿವೆ. ಅವುಗಳಲ್ಲಿ ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ ಮತ್ತು ಜತ್ ತಾಲ್ಲೂಕುಗಳು ಮುಖ್ಯವಾದವು. ಆದರೆ ಪ್ರಮುಖ ಸಂಘರ್ಷ ನಡೆದಿರುವುದು ಬೆಳಗಾವಿ ನಗರಕ್ಕಾಗಿ. ಮಹಾರಾಷ್ಟ್ರ ಸರಕಾರವು ಬೆಳಗಾವಿ ತನಗೆ ಸೇರಬೇಕೆಂದು ನಿರಂತರವಾಗಿ ಒತ್ತಡವನ್ನು ಹೇರುತ್ತಿದೆ.

ಕರ್ನಾಟಕ ಸರಕಾರ ಮತ್ತು ಕನ್ನಡಪರ ಸಂಘಟನೆಗಳು ಮಹಾರಾಷ್ಟ್ರದ ಬೇಡಿಕೆಯನ್ನು ಸಮರ್ಥವಾಗಿ ಅಲ್ಲಗಳೆಯುತ್ತಲೇ ಬಂದಿವೆ. ಮಹಾರಾಷ್ಟ್ರ ಏಕೀಕರಣ ಸಮಿತಿಯು ಬೆಳಗಾವಿ ಮತ್ತು ಇತರ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಪ್ರತಿಪಾದಿಸುತ್ತಲೇ ಇದೆ.

ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವಿನ ಗಡಿ ಭಾಗಗಳನ್ನು ಕುರಿತು ಅಧ್ಯಯನ ಮಾಡಿ ಶಿಫಾರಸು ಮಾಡಲು 1966ರಲ್ಲಿ ಏಕಸದಸ್ಯ ಸಮಿತಿಯನ್ನು ಮೆಹರ್ ಚಂದ್ ಮಹಾಜನ್ ಅವರ ನೇತೃತ್ವದಲ್ಲಿ ಕೇಂದ್ರ ಸರಕಾರ ನೇಮಕ ಮಾಡಿತು. ಮಹಾಜನ್ ವರದಿಯು ಬೆಳಗಾವಿ ಕರ್ನಾಟಕದ ಭಾಗವೆಂದೇ ಶಿಫಾರಸು ಮಾಡಿತು. ಕರ್ನಾಟಕದ ಪಾಲಿಗೆ ಮಹಾಜನ್ ವರದಿಯ ಶಿಫಾರಸ್ಸೇ ಅಂತಿಮ. ಕರ್ನಾಟಕ ಸರಕಾರವು ಬೆಳಗಾವಿಯಲ್ಲಿ ಸುವರ್ಣ ಸೌಧವನ್ನು ಕಟ್ಟಿಸಿ ಶಾಸನಸಭೆಗಳ ಕಲಾಪಗಳನ್ನು ವರ್ಷದಲ್ಲಿ ಒಂದು ಬಾರಿ ನಡೆಸುತ್ತ ಬರುತ್ತಿದೆ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದೆ.

## 2 ಕರ್ನಾಟಕ ಕೇರಳ ನಡುವಣ ವಿವಾದ.

ಇಲ್ಲಿ ಪ್ರಮುಖ ವಿವಾದವಿರುವುದು ಕಾಸರಗೋಡು ಪ್ರದೇಶಕ್ಕೆ ಸಂಬಂಧಿಸಿದ್ದು. ಐತಿಹಾಸಿಕವಾಗಿ ಕಾಸರಗೋಡು ಪ್ರದೇಶ ಕನ್ನಡ ರಾಜವಂಶಗಳ ಆಳ್ವಿಕೆಗೆ ಸೇರಿತ್ತು. ಕೆಳದಿ ಸಂಸ್ಥಾನದ ಶಿವಪ್ಪ ನಾಯಕ ಮುಂತಾದವರು ಈ ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದ್ದರು. ಬೇಕಲ್ ಕೋಟೆಯನ್ನು ಇಕ್ಕೇರಿ ಸಂಸ್ಥಾನದವರು ಕಟ್ಟಿಸಿದ್ದರೆಂದು ದಾಖಲೆಗಳು ಹೇಳುತ್ತವೆ. ಹೀಗೆ ಸಾಂಸ್ಕೃತಿಕವಾಗಿ ಕನ್ನಡ ನಾಡಿನೊಂದಿಗೆ ಸಂಬಂಧವಿರುವ ಕಾಸರಗೋಡು ಇಂದು ಇಕ್ಕಟ್ಟಿನ ಪರಿಸ್ಥಿತಿಯಲ್ಲಿದೆ. ಇದಕ್ಕೆ ಮುಖ್ಯ ಕಾರಣ ರಾಜ್ಯ ಪುನರ್‌ವಿಂಗಡಣಾ ಆಯೋಗವು ತನ್ನ ವರದಿಯಲ್ಲಿ (1955) ಕಾಸರಗೋಡನ್ನು ಕೇರಳಕ್ಕೆ ವಿಲೀನಗೊಳಿಸಬೇಕೆಂದು ಶಿಫಾರಸು ಮಾಡಿದ್ದು. ಇದನ್ನು ವಿರೋಧಿಸಿ ಕರ್ನಾಟಕ ಸಮಿತಿ ಮುಂತಾದ ಹೋರಾಟ ಸಂಘಟನೆಗಳು ಹುಟ್ಟಿಕೊಂಡವು. ವಿದ್ಯಾರ್ಥಿಗಳು, ಮಹಿಳೆಯರು, ಸರಕಾರಿ ನೌಕರರು ಮುಂತಾದ ವಿವಿಧ ವರ್ಗದವರು ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಹೋರಾಟ ಮಾಡಿದರು. ಇಂದಿಗೂ ಕಾಸರಗೋಡಿನ ಪರವಾದ ಹೋರಾಟದ ಪಂಜು ಉರಿಯುತ್ತಲೇ ಇದೆ. ಕಯ್ಯಾರ ಕಿಞ್ಞಣ್ಣ ರೈ ಮತ್ತು

©KTBS NOT TO BE REPUBLISHED

ಅವರ ಸಹವರ್ತಿಗಳು ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂಬ ಹೋರಾಟಕ್ಕೆ ತಾತ್ವಿಕ ಮತ್ತು ಸಾತ್ವಿಕ ಬೆಂಬಲ ನೀಡುತ್ತಾ ಈ ಹೋರಾಟವನ್ನು ಜೀವಂತವಾಗಿಟ್ಟಿದ್ದಾರೆ.

## ಅಭ್ಯಾಸಗಳು

### I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1 ಕರ್ನಾಟಕ ವಿದ್ಯಾವರ್ಧಕ ಸಂಘದ ಮೊದಲ ಅಧ್ಯಕ್ಷರು ಯಾರು?

2 ಹೈದರಾಬಾದ್ ಸಂಸ್ಥಾನದಲ್ಲಿದ್ದ ಕನ್ನಡ ಜಿಲ್ಲೆಗಳನ್ನು ಹೆಸರಿಸಿರಿ.

3 'ಕರ್ನಾಟಕ ಕುಲಪುರೋಹಿತ' ಎಂದು ಯಾರನ್ನು ಕರೆಯುತ್ತಾರೆ?

4 ಕರ್ನಾಟಕ ಏಕೀಕರಣಕ್ಕೆ ಕೊಡುಗೆ ನೀಡಿದ ಎರಡು ಸಂಘಟನೆಗಳನ್ನು ಹೆಸರಿಸಿರಿ.

5 ಕನ್ನಡದ ಮೊದಲ ರಾಷ್ಟ್ರಕವಿ ಯಾರು?

### II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1 ಫಜಲ್ ಅಲಿ ಆಯೋಗದ ಯಾವ ಶಿಫಾರಸುಗಳನ್ನು ಕನ್ನಡಿಗರು ಪ್ರತಿಭಟಿಸಿದರು?

2 ಕರ್ನಾಟಕವು ಯಾವ ದಿನದಂದು ಏಕೀಕೃತವಾಯಿತು? ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ ಯಾರು?

### III ಟಿಪ್ಪಣಿ ಬರೆಯಿರಿ.

ಆಲೂರು ವೆಂಕಟರಾವ್, ಫಜಲ್ ಅಲಿ ಆಯೋಗ

### IV ಚರ್ಚಿಸಿರಿ.

ಮಹಾರಾಷ್ಟ್ರ, ಕೇರಳ ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಗಡಿವಿವಾದಗಳಿಗೆ ನಿಮ್ಮ ಪರಿಹಾರ ಸೂಚಿಸಿರಿ. (ಶಿಕ್ಷಕರ ಸಹಾಯ ಪಡೆಯಿರಿ).

@KTBS NOT TO BE REPUBLISHED



**ಚಟುವಟಿಕೆಗಳು**

1 ಏಕೀಕೃತ ಕರ್ನಾಟಕದ (1956) ಗಡಿಗಳನ್ನು ಭಾರತದ ಭೂಪಟದಲ್ಲಿ ಗುರುತಿಸಿರಿ.

2 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಮತ್ತು ಗೋವಿಂದ ಪೈಯವರ 'ಕನ್ನಡಿಗರ ತಾಯಿ' ಈ ಹಾಡುಗಳನ್ನು ಗುಂಪಾಗಿ ಹಾಡಿರಿ.

| ಅಧ್ಯಾಯ 18 | ಕರ್ನಾಟಕದ ಸಮಾಜಮುಖಿ ಚಳವಳಿಗಳು |
|---|---|

J9X4S1

**ಪಾಠದ ಪರಿಚಯ**

ಅಧಿಕಾರರೂಢರು ಜನಪರವಲ್ಲದ ನಿರ್ಧಾರ, ಕಾರ್ಯಕ್ರಮ ಮತ್ತು ಯೋಜನೆಗಳನ್ನು ಕಾರ್ಯಗತ ಮಾಡಲು ಮುಂದಾದಾಗ, ಅವನ್ನು ವಿರೋಧಿಸುವ ಹಕ್ಕು ಜನತೆಯ ಕೈಯಲ್ಲಿದೆ. ಕರ್ನಾಟಕದಲ್ಲಿ ಇಂಥ ಪ್ರಸಂಗಗಳು ಕಾಣಿಸಿಕೊಂಡಾಗ, ಪ್ರಜ್ಞಾವಂತ ನಾಗರಿಕರು ಸಿಡಿದೆದ್ದು ಆಂದೋಲನಗಳನ್ನು ನಡೆಸಿದರು. ಇದೇ ವೇಳೆ ದುರ್ಬಲ, ಶೋಷಿತ ಮತ್ತು ಹಿಂದುಳಿದ ವರ್ಗಗಳು ತಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಶ್ರೇಯೋಭಿವೃದ್ಧಿಗಾಗಿ ಹೋರಾಟ ಮಾಡಿದರು. ಈ ಪಾಠದಲ್ಲಿ ಕರ್ನಾಟಕದ ಪರಿಸರವಾದಿಗಳು, ಮಹಿಳೆಯರು, ರೈತರು, ದಲಿತರು ಮತ್ತು ಕನ್ನಡಪರ ಸಂಘಟನೆಗಳು ಮಾಡಿರುವ ಚಳವಳಿಗಳನ್ನು ನಿರೂಪಣೆ ಮಾಡಲಾಗಿದೆಯಲ್ಲದೆ ಅಧಿಕಾರ ವಿಕೇಂದ್ರೀಕರಣದ ನಿಟ್ಟಿನಲ್ಲಿ ಜಾರಿಗೊಂಡ ಮಹತ್ವದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೂಡ ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1 ಪರಿಸರ ಚಳವಳಿಯನ್ನು ಕೆಲವು ನಿದರ್ಶನಗಳೊಂದಿಗೆ ಅರಿಯುವುದು.
2 ಮಹಿಳೆಯ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳನ್ನು ಮೆಚ್ಚುವುದು.
3 ರೈತರು ತಮ್ಮ ಹಿತರಕ್ಷಣೆಗಾಗಿ ನಡೆಸಿದ ಹೋರಾಟಗಳನ್ನು ಅರ್ಥೈಸಿಕೊಳ್ಳುವುದು.
4 ದಲಿತರ ಹೋರಾಟಗಳನ್ನು ಅರಿಯುವುದು.
5 ಕನ್ನಡ ಕಾವಲು ಚಳವಳಿಗಳ ಪ್ರಸ್ತುತತೆಯನ್ನು ಅರಿತು ಅವುಗಳ ಬಗ್ಗೆ ಆಸಕ್ತಿ ವಹಿಸುವುದು.
6 ಪಂಚಾಯತ್ ರಾಜ್ ವ್ಯವಸ್ಥೆಯ ಅವಶ್ಯಕತೆಯನ್ನು ಮೆಚ್ಚುವುದು.

©KTBS NOT TO BE REPUBLISHED

## ಪರಿಸರ ಚಳವಳಿ

ನಮ್ಮ ಭೂಮಿಯ ಭಾಗವಾಗಿರುವ ಮಣ್ಣು, ಕಲ್ಲು, ನೀರು, ಗಾಳಿ, ಬೆಳಕುಗಳನ್ನು ಅವಲಂಬಿಸಿ ಪಶುಪಕ್ಷಿಗಳು, ಗಿಡಮರಗಳು ಮತ್ತು ಮನುಷ್ಯ ಸೇರಿದಂತೆ ಉಳಿದೆಲ್ಲ ಜೀವಿಗಳು ಬದುಕಬೇಕಾಗಿದೆ. ಪ್ರಕೃತಿಯಲ್ಲಿ ಸಹಜ ಸಮತೋಲನವಿದೆ. ಮನುಷ್ಯ ನಾಗರಿಕನಾಗಿ ಬೆಳೆಯುತ್ತಿದ್ದಂತೆ ಪರಿಸರವನ್ನು ತನ್ನ ಅಂಕೆಯಿಲ್ಲದ ಆಸೆಗಳಿಗೆ ಬಲಿಕೊಡುತ್ತಿದ್ದಾನೆ. ಪ್ರಕೃತಿಯನ್ನು ಸೃಷ್ಟಿಯ ಬೆಡಗು ಎಂದು ಅರಿಯದೆ ಕೇವಲ ತನ್ನ ಉಪಯೋಗಕ್ಕಾಗಿ ಇರುವ ಕಚ್ಚಾವಸ್ತುವೆಂದು ಪರಿಗಣಿಸಿದ್ದಾನೆ. ಮನೆಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಗುಬ್ಬಚ್ಚಿಗಳನ್ನು ನೋಡಲು ಊರ ಹೊರಗಡೆ ಹೋಗಬೇಕಾದ ಪರಿಸ್ಥಿತಿ ಬಂದೊದಗಿದೆ.

> ಭೂಮಿಯಲ್ಲಿರುವ ಜೈವಿಕ ಮತ್ತು ಅಜೈವಿಕ ಅಂಶಗಳೇ ಪರಿಸರ.

ಕೈಗಾರಿಕಾ ಕ್ರಾಂತಿ, ವಾಣಿಜ್ಯ ವ್ಯಾಪಾರದ ಕ್ರಾಂತಿಗಳುಂಟಾಗಿ ಪರಿಸರವು ತೀವ್ರವಾಗಿ ಹದಗೆಟ್ಟಿದೆ. ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಪರಿಸರದ ಸಂಪತ್ತಿನ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು ನಿರಂತರ ಪ್ರಯತ್ನಿಸುತ್ತಿದ್ದಾರೆ. ಇದರಿಂದ ಅನೇಕ ಹೊಸ ಸಮಸ್ಯೆಗಳು ಸೃಷ್ಟಿಯಾಗಿವೆ. ಜನ ಸಮುದಾಯಗಳು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿವೆ. ಒಟ್ಟಾರೆ ಪ್ರಾಕೃತಿಕ ಸಂಪತ್ತಿನ ನಾಶದಿಂದ ಬಹುಸಂಖ್ಯಾ ನಾಗರಿಕರು ತೀವ್ರ ಸಂಕಟವನ್ನು ಎದುರಿಸುತ್ತಿದ್ದಾರೆ. 20ನೇ ಶತಮಾನದ ಉತ್ತರಾರ್ಧದಲ್ಲಿ ಜನರಲ್ಲಿ ಹೊಸ ಎಚ್ಚರವನ್ನು ಮೂಡಿಸುವ ಸಲುವಾಗಿ ಪರಿಸರ ಜಾಗೃತಿ ಚಳವಳಿಗಳು ಆರಂಭವಾದವು. 1970ರ ದಶಕದಲ್ಲಿ ಪರಿಸರ ಚಳವಳಿ ಜಾಗತಿಕ ಮಟ್ಟದಲ್ಲಿ ಆರಂಭಗೊಂಡು ಕರ್ನಾಟಕವನ್ನು ತಲುಪಿತು.

ಗಾಂಧೀಜಿಯವರು ಹೇಳುವಂತೆ, "ಭೂಮಿಯು ಎಲ್ಲರ ಅವಶ್ಯಕತೆಯನ್ನು ಪೂರೈಸುತ್ತದೆ. ಆದರೆ ಅವರ ದುರಾಸೆಯನ್ನಲ್ಲ".

ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಗಣಿಗಾರಿಕೆ ಪ್ರಾರಂಭವಾದುದರಿಂದ ಪರಿಸರ ಸಂರಕ್ಷಣಾ ಚಳವಳಿ ಅನಿವಾರ್ಯವಾಯಿತು. 'ಸಹ್ಯಾದ್ರಿ ಗಣಿ ವಿರೋಧಿ ವೇದಿಕೆ' ಪ್ರಾರಂಭವಾಗಿ ಕುದುರೆಮುಖ ಮತ್ತು ಇತರ ಪ್ರದೇಶಗಳ ಗಣಿಗಾರಿಕೆಯನ್ನು ವಿರೋಧಿಸಿತು. ಕೇಂದ್ರ ಸರಕಾರವೇ ಕಬ್ಬಿಣದ ಗಣಿಗಾರಿಕೆಯ ಕಂಪೆನಿಯನ್ನು ಪ್ರಾರಂಭಿಸಿತ್ತು. ಈ ಗಣಿಗಾರಿಕೆಯಿಂದ ಭದ್ರಾ ನದಿಯ ಮೂಲವೇ ಮಲಿನವಾಯಿತು. ಈ ಹೋರಾಟದಿಂದ ಸರಕಾರದ ಮೇಲೆ ತೀವ್ರ ಒತ್ತಡವುಂಟಾಗಿ ಕ್ರಮೇಣ ಸರ್ಕಾರವು ಪರಿಸರ ರಕ್ಷಣೆಯ ಕ್ರಮಗಳನ್ನು ಕೈಗೊಂಡಿತು.

**ಸಾಲುಮರದ ತಿಮ್ಮಕ್ಕ:** ಇಂದಿಗೂ ಹೋರಾಟ ನಡೆಸುತ್ತಿರುವ ವಯೋವೃದ್ಧೆ' ಸಾಲುಮರದ ತಿಮ್ಮಕ್ಕ' 284 ಮರಗಳ ತಾಯಿ. ಅಕ್ಷರಸ್ಥರಲ್ಲದಿದ್ದರೂ ಪರಿಸರ ಸಂರಕ್ಷಣೆಯ ಪಾಠ ಹೇಳಿಕೊಟ್ಟ ನಿಸ್ವಾರ್ಥ ಬದುಕು ಇವರದು. ಇವರಿಗೆ 2019ರಲ್ಲಿ ದೇಶದ ನಾಲ್ಕನೇ ಉನ್ನತ ನಾಗರಿಕ ಸಮ್ಮಾನವಾದ ಪದ್ಮಶ್ರೀ ಪ್ರಶಸ್ತಿ ಸಿಕ್ಕಿತು.



ಸಹ್ಯಾದ್ರಿ ಶ್ರೇಣಿಯ ಪ್ರಮುಖ ನದಿಯಾದ ತುಂಗಾ ಕಲುಷಿತವಾಗುತ್ತಿರುವುದನ್ನು ಗಮನಿಸಿ 'ತುಂಗಾ ಮೂಲವನ್ನು ಉಳಿಸಿ' ಆಂದೋಲನವನ್ನು ಆರಂಭಿಸಲಾಯಿತು. ಸಹ್ಯಾದ್ರಿ ಪರ್ವತ ಶ್ರೇಣಿಯ ಅರಣ್ಯ ಪ್ರದೇಶಗಳು ಕ್ರಮೇಣ ಬರಿದಾಗತೊಡಗಿದವು. ಗಿಡಮರಗಳು ಉಳಿಸಿ ಬೆಳೆಸುವ ಉದ್ದೇಶದಿಂದ ಅದರ ನಾಶವನ್ನು ತಡೆಯಲು ಭಾರತದ

© KTBS NOT TO BE REPUBLISHED

ವಿವಿಧ ಪ್ರದೇಶಗಳಲ್ಲಿ 'ಚಿಪ್ಕೊ' ಅಥವಾ 'ಅಪ್ಪಿಕೊ' ಚಳವಳಿಗಳು ಆರಂಭಗೊಂಡವು. ಚಿಪ್ಕೊ ಚಳವಳಿಯಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಸುಂದರಲಾಲ್ ಬಹುಗುಣ ಅವರ ಪಾತ್ರವನ್ನು ನಾವು ಮರೆಯುವಂತಿಲ್ಲ.

**ಚಟುವಟಿಕೆ :** ಅಪ್ಪಿಕೊ ಚಳವಳಿಯ ಧ್ಯೇಯೋದ್ದೇಶಗಳನ್ನು ಪಟ್ಟಿಮಾಡಿರಿ.

ಅರಣ್ಯ ಇಲಾಖೆಯು ನೀಲಗಿರಿ, ಅಕೇಶಿಯಾಗಳಂತಹ ಆಮದು ಸಸ್ಯಗಳನ್ನು ನೆಡಲಾರಂಭಿಸಿತು. ಈ ಯೋಜನೆಯನ್ನು 'ಸಾಮಾಜಿಕ ಅರಣ್ಯ'ವೆನ್ನುವರು. ನೀಲಗಿರಿಯು ಅಂತರ್‌ಜಲದ ಮಟ್ಟವನ್ನು ಕೆಳಕ್ಕೆ ತಳ್ಳುತ್ತದೆ ಎಂದು ಅದರ ನೆಡುವಿಕೆಯನ್ನು ಪರಿಸರವಾದಿಗಳು ವಿರೋಧಿಸಿದರು.

ದಾವಣಗೆರೆ ಜಿಲ್ಲೆಯ ಹರಿಹರ ಪಾಲಿಫೈಬರ್ ಕೈಗಾರಿಕೆಯು ತಾಜ್ಯವಸ್ತುಗಳನ್ನು ತುಂಗಭದ್ರಾ ನದಿಗೆ ಬಿಟ್ಟು ನದಿಯ ನೀರನ್ನು ಹಾಳು ಮಾಡುವುದರ ವಿರುದ್ಧ ಹೋರಾಟ ನಡೆಯಿತು. ಇತರ ಚಳವಳಿಗಳೆಂದರೆ ಕಾರವಾರದ ಸೀಬರ್ಡ್ ನೌಕಾನೆಲೆಯ ವಿರುದ್ಧದ ಹೋರಾಟ, ಕರಾವಳಿಯಲ್ಲಿ ಕೋಜೆಂಟ್ರಿಕ್ಸ್ ನಾಗಾರ್ಜುನ ವಿದ್ಯುತ್ ಯೋಜನೆಯ ವಿರುದ್ಧ ಹೋರಾಟ. ಕೆರೆಗಳನ್ನು ಉಳಿಸಿ ಹೋರಾಟ, ಭದ್ರಾ ಮೇಲ್ದಂಡೆ ಯೋಜನೆಯ ವಿರುದ್ಧದ ಹೋರಾಟ, ಕಬ್ಬನ್ ಪಾರ್ಕ್ ಉಳಿಸಿ, ಕಾರ್ಗಿಲ್ ಸೀಡ್ಸ್ ಸಂಸ್ಥೆಯ ವಿರುದ್ಧದ ಹೋರಾಟ, ಕೈಗಾರಿಕಾ ನಗರಗಳ ವಿರುದ್ಧದ ಹೋರಾಟ ಮುಂತಾದವು.

ತೀರ ಇತ್ತೀಚಿಗೆ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿದವುಗಳೆಂದರೆ ಕರ್ನಾಟಕದಲ್ಲಿ ನಡೆದ ಗಣಿಗಾರಿಕಾ ವಿರುದ್ಧದ ಚಳವಳಿಗಳು. ಬಳ್ಳಾರಿ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ದಾವಣಗೆರೆ, ರಾಮನಗರ ಮುಂತಾದ ಜಿಲ್ಲೆಗಳಲ್ಲಿ ಗಣಿ ಸಂಪತ್ತನ್ನು ಲೂಟಿ ಹೊಡೆಯುವ ಶಕ್ತಿಗಳ ವಿರುದ್ಧ ಈ ಚಳವಳಿಗಳು ಪ್ರಾರಂಭವಾದವು. ಭಾರತದ ಸರ್ವೋಚ್ಚ ನ್ಯಾಯಾಲಯವು ಪರಿಸರ ಸಂರಕ್ಷಣೆಯನ್ನು ಗಂಭೀರವಾಗಿ ಪರಿಗಣಿಸಿ ತೀರ್ಪುಗಳನ್ನು ನೀಡುತ್ತಿದೆ.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಸಾರ್ವಜನಿಕ ಹಿತಾಸಕ್ತಿ ದಾವೆಗಳನ್ನು ಪರಿಗಣಿಸಿ ಅಕ್ರಮ ಗಣಿಗಾರಿಕೆಯ ಕುರಿತು ನಡೆಸಿದ ಕೂಲಂಕಷ ತನಿಖೆಗಳು ಹಾಗೂ ಸುದೀರ್ಘ ವರದಿಗಳು ಉಲ್ಲೇಖಾರ್ಹವಾದುದು. ಇವೆಲ್ಲವುಗಳ ಪರಿಣಾಮವಾಗಿ ಪ್ರಕೃತಿಯ ಶೋಷಣೆ ಕಡಿಮೆಯಾಗುತ್ತಿದೆ. ಇಂದೂ ಅನೇಕ ಹೋರಾಟಗಳು ಮುಂದುವರಿದಿವೆ. ಕೃತಕ ರಾಸಾಯನಿಕದಿಂದ ಭೂಮಿಯನ್ನು ಹಾಳುಮಾಡುವ ಪದ್ಧತಿಗೆ ಪರ್ಯಾಯವಾಗಿ ನೈಸರ್ಗಿಕ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುವಂತೆ ಒತ್ತಾಯಿಸುವ ಹೋರಾಟವು

NOT TO BE REPUBLISHED ©KTBS

ಒಂದು ಕ್ರಾಂತಿಯ ರೂಪವನ್ನು ತಳೆಯುತ್ತಿದೆ. ಇದು ಸಮಾಧಾನದ ಸಂಗತಿಯಾಗಿದೆ. ಕರ್ನಾಟಕದಲ್ಲಿ 'ಸಾವಯವ ಕೃಷಿ ಮಿಷನ್' ಸ್ಥಾಪನೆಗೊಂಡು ಸಾವಯವ ಕೃಷಿಗೆ ಪ್ರೋತ್ಸಾಹ ಸಿಗುತ್ತಿದೆ. ನೂರಾರು ಮಂದಿ ಕೃಷಿಕರು ಸಾವಯವ ಕೃಷಿಯ ಲಾಭ ಪಡೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಭಾರತದಲ್ಲೇ ಮುಂಚೂಣಿಯಲ್ಲಿದೆ. ಆದರೂ ಸಾಗಬೇಕಾದ ದಾರಿ ತುಂಬ ಇದೆ.

## ಮಹಿಳಾ ಚಳವಳಿ

ಮಹಿಳಾ ಚಳವಳಿಯು ಆರಂಭದಲ್ಲಿ ಮುಖ್ಯವಾಗಿ ಸ್ತ್ರೀಶಿಕ್ಷಣಕ್ಕೆ ಒತ್ತುನೀಡಿತು. ಕರ್ನಾಟಕದಲ್ಲಿ ಶ್ರೀರಂಗಮ್ಮ ಮತ್ತು ರುಕ್ಮಿಣಮ್ಮ ಎಂಬವರು ಬಿ.ಎ. ಆನರ್ಸ್ ಪದವಿ ಗಳಿಸಿದ ಮೊದಲ ಮಹಿಳೆಯರು. ಇಂದಿರಮ್ಮ ಎಂಬುವರು ಬೆಂಗಳೂರಿನ ಪ್ರಥಮ ಮಹಿಳಾ ಮೇಯರ್ ಆಗಿದ್ದರು. ಇಷ್ಟಾದರೂ ಮಹಿಳೆಯರ ಸಬಲೀಕರಣವೆನ್ನುವುದು ಮರೀಚಿಕೆಯಾಗಿತ್ತು. ಮಹಿಳೆಯರಿಗೆ ಆಸ್ತಿಯಲ್ಲಿ ಪಾಲು ಸಿಗುತ್ತಿರಲಿಲ್ಲ. ವಿವಿಧ ಧರ್ಮೀಯ ಮಹಿಳೆಯರು ಬೇರೆ ಬೇರೆ ಬಗೆಯಲ್ಲಿ ಶೋಷಣೆಗೆ ಒಳಗಾಗಿದ್ದಾರೆ.

**ಚಟುವಟಿಕೆ :** ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿರುವ ಮಹಿಳೆಯರನ್ನು ಪಟ್ಟಿಮಾಡಿರಿ.

ಅನೇಕ ಮಂದಿ ಮಹಿಳೆಯರು ಕುಟುಂಬದ ಚೌಕಟ್ಟಿನಿಂದ ಹೊರಗೆ ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ದೇಶಸೇವೆಗೆ ಮುಂದಾದರು. ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು, ಅರುಣಾ ಅಸಫ್ ಅಲಿ, ಡಾ. ಮುತ್ತುಲಕ್ಷ್ಮಿ ರೆಡ್ಡಿ ಮುಂತಾದವರನ್ನು ನಾವಿಲ್ಲಿ ಸ್ಮರಿಸಬಹುದು.



*ಕಮಲಾದೇವಿ ಚಟ್ಟೋಪಾಧ್ಯಾಯ*



*ಅರುಣಾ ಅಸಫ್ ಅಲಿ*

1975ರಲ್ಲಿ ಅಂತರ್‌ರಾಷ್ಟ್ರೀಯ ಮಹಿಳಾ ವರ್ಷಾಚರಣೆ ಪ್ರಾರಂಭವಾಯಿತು. ಕರ್ನಾಟಕ ಸರಕಾರ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಕ್ರಮೇಣ

©KTBS NOT TO BE REPUBLISHED

ಮಹಿಳಾ ಸಂಘಟನೆಗಳು ಸಕ್ರಿಯವಾದವು. ಎಡಪಂಥೀಯ ಸಂಘಟನೆಗಳು ಕಾರ್ಮಿಕ ಮಹಿಳೆಯರನ್ನು ಸಂಘಟಿಸುವ ಕೆಲಸವನ್ನು ಮಾಡಿದವು. ಮಹಿಳಾ ಸಂಘಟನೆಗಳು ವರದಕ್ಷಿಣೆ, ಅತ್ಯಾಚಾರ, ಕೌಟುಂಬಿಕ ಹಿಂಸೆಯನ್ನು ವಿರೋಧಿಸಿದವು. ಹಾಗೆಯೇ ಮಹಿಳೆಯರ ಹಕ್ಕುಗಳ ಪ್ರತಿಪಾದನೆಗೆ ಕಾನೂನು ಮಾರ್ಗವನ್ನು ಬಲಪಡಿಸಲು ಒತ್ತಡ ಹೇರಲಾಯಿತು. ಚುನಾವಣೆಯಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಮೂಲಕ ಶಾಸನಸಭೆಗಳಲ್ಲಿ ಅವರ ನಿರ್ಣಾಯಕ ಪಾತ್ರವಿರಬೇಕೆಂದು ಈ ಸಂಘಟನೆಗಳು ಹೋರಾಡುತ್ತಿವೆ.

ಈ ಎಲ್ಲಾ ಹೋರಾಟಗಳ ಫಲವಾಗಿ ಸರ್ಕಾರ ಅನೇಕ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 50ರಷ್ಟು ಸ್ಥಾನವನ್ನು ಮಹಿಳೆಯರಿಗೆ ಕಾದಿರಿಸುವ ಆದೇಶ ಹೊರಡಿಸಿದ ಮೊದಲ ರಾಜ್ಯ ಕರ್ನಾಟಕ. ಸರಕಾರಿ ನೇಮಕಾತಿಯಲ್ಲಿಯೂ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡಿರುವ ಮೂಲಕ ಸ್ವಲ್ಪ ಮಟ್ಟಿಗೆ ಮಹಿಳೆಯರಿಗೆ ನ್ಯಾಯ ಒದಗಿಸಿದೆ. ಹೆಣ್ಣುಮಕ್ಕಳ ಹಾಗೂ ಮಹಿಳೆಯರ ಹಿತರಕ್ಷಣೆಗಾಗಿ ಸರ್ಕಾರವು ಮಹಿಳಾ ಆಯೋಗವನ್ನು ಸ್ಥಾಪಿಸಿದೆ. ಇದು ಸ್ತ್ರೀಯರ ಶೋಷಣೆಯ ವಿರುದ್ಧ ಧ್ವನಿ ಎತ್ತುವುದರ ಮೂಲಕ ಅವರಿಗೆ ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸುತ್ತಿದೆ.

@KTBS NOT TO BE REPUBLISHED

## ರೈತ ಚಳವಳಿ

ರೈತರನ್ನು ನಮ್ಮ ದೇಶದ ಬೆನ್ನೆಲುಬು ಎಂದು ಮೊದಲಿನಿಂದಲು ಕರೆಯಲಾಗಿದೆ. ಅದರೆ ಈ ಬೆನ್ನಲುಬು ಗಟ್ಟಿಯಾಗಿರಲು ಬೇಕಾದ ಅವಶ್ಯಕತೆಗಳನ್ನು ಒದಗಿಸಿಲ್ಲ. ಇಂದೂ ಸಹ ನಮ್ಮ ರೈತರು ಸರಕಾರದ ನೆರವಿಲ್ಲದೆ ಬದುಕಲಾರದ ಸ್ಥಿತಿಯಲ್ಲಿದ್ದಾರೆ. ಕೈಗಾರಿಕೋದ್ಯಮಿಗಳು ತಾವು ಉತ್ಪಾದಿಸಿದ ವಸ್ತುವಿನ ಬೆಲೆಯನ್ನು ತಾವೇ ನಿರ್ಧರಿಸುತ್ತಾರೆ. ಆದರೆ ರೈತರು ಇಂದಿಗೂ ತಮ್ಮ ಉತ್ಪನ್ನಗಳ ಬೆಲೆ ನಿರ್ಧರಿಸುವ ಹಂತಕ್ಕೆ ಬೆಳೆದಿಲ್ಲ. ಅವರು ವರುಣನ ಕೃಪೆ ಅಥವಾ ಅವಕೃಪೆಗೆ ಸದಾ ಒಳಗಾಗಿದ್ದಾರೆ. ತಮ್ಮನ್ನು ರಕ್ಷಿಸಬೇಕಾದ ಸರಕಾರಗಳು ತಮ್ಮ ಕಷ್ಟದ ದಿನಗಳಲ್ಲಿ ನೆರವಿಗೆ ಬಾರದಿದ್ದಾಗ ರೈತರು ಹೋರಾಟದ ಹಾದಿಗಳನ್ನು ತುಳಿದಿದ್ದಾರೆ. ಅನೇಕ ರೈತರು ಈ ಹೋರಾಟಗಳಲ್ಲಿ ಪ್ರಾಣತೆತ್ತು ಹುತಾತ್ಮರಾಗಿದ್ದಾರೆ. ಶತಮಾನಗಳಿಂದಲೂ ರೈತರು ಹೋರಾಟ ಮಾಡಿಕೊಂಡೇ ಬಂದಿದ್ದರೂ ಅವರ ಹಸನಾದ ಬದುಕಿನ ಕನಸು ಇನ್ನೂ ದೂರವಿದೆ.

ರೈತ ಹೋರಾಟಗಳು ಪ್ರಮುಖವಾಗಿ ಭೂಮಾಲೀಕರ ವಿರುದ್ಧ ನಡೆದವು. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ನಾವು ಕಾಣುವ ಪ್ರಥಮ ರೈತ ಹೋರಾಟ 1951ರಲ್ಲಿ

ಶಿವಮೊಗ್ಗ ಜಿಲ್ಲೆಯ ಕಾಗೋಡಿನಲ್ಲಿ ನಡೆಯಿತು. ರೈತರು ಗೇಣಿಯನ್ನು ಅಳತೆ ಮಾಡುವ 'ಕೊಳಗ'ದ ವಿರುದ್ಧ ಹೋರಾಟ ಪ್ರಾರಂಭಮಾಡಿದರು. ಕ್ರಮೇಣ ರೈತರ ಶೋಷಣೆಯ ವಿಷಯಗಳಾದ ಸಾಲದ ವಸೂಲಿ, ಗೇಣಿದಾರರಿಗೆ ನೀಡುತ್ತಿದ್ದ ಕಿರುಕುಳ ಮುಂತಾದ ಪ್ರಮುಖ ಸಮಸ್ಯೆಗಳ ವಿರುದ್ಧ ರೈತರು ಹೋರಾಟ ಮುಂದುವರೆಸಿದರು. ಸಮಾಜವಾದಿ ಪಕ್ಷದ ಶಾಂತವೇರಿ ಗೋಪಾಲ ಗೌಡರು ಈ ಹೋರಾಟದ ಮುಂಚೂಣಿಯಲ್ಲಿದ್ದರು. ಡಾ. ರಾಮಮನೋಹರ ಲೋಹಿಯಾ ಅವರು ಭೇಟಿ ನೀಡಿ ಈ ಹೋರಾಟಕ್ಕೆ ಹೊಸ ಶಕ್ತಿಯನ್ನು ತಂದುಕೊಟ್ಟರು.

**ಚಟುವಟಿಕೆ :** ನಾ. ಡಿ'ಸೋಜ ಅವರ 'ಕೊಳಗ' ಕಾದಂಬರಿಯನ್ನು ಓದಿ ರೈತರ ಸ್ಥಿತಿಗತಿಯನ್ನು ಕುರಿತು ಪ್ರಬಂಧ ಬರೆಯಿರಿ.

1950ರ ದಶಕದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮಾಜವಾದಿಗಳು ರೈತ ಹೋರಾಟ ನಡೆಸಿದರು. 1972ರಲ್ಲಿ ಕೋಲಾರದಲ್ಲಿ ಭೂಆಕ್ರಮಣ ಚಳವಳಿ ನಡೆಯಿತು. 1980ರಲ್ಲಿ ಮಲಪ್ರಭಾ ನದಿ ಭಾಗದ ರೈತರು ಹತ್ತಿ ಬೆಳೆ ನೆಲಕಚ್ಚಿದಾಗ ಪ್ರತಿಭಟಿಸಿದರು. ಕೆಲವರು ಪೊಲೀಸರ ಗುಂಡಿಗೆ ಬಲಿಯಾದರು. ರೈತರು ಸರಕಾರದ ವಿರುದ್ಧ ಅಸಹಕಾರ ಚಳವಳಿಯನ್ನು ಮುಂದುವರಿಸಿದರು. ಈ ಸಂದರ್ಭದಲ್ಲಿ ಇಪ್ಪತ್ತಕ್ಕೂ ಹೆಚ್ಚು ರೈತರು ನವಲಗುಂದ, ನರಗುಂದ ಮತ್ತು ಸವದತ್ತಿಯಲ್ಲಿ ಪ್ರಾಣತೆತ್ತರು.

ಈ ಹಿನ್ನೆಲೆಯಲ್ಲಿ ರೈತರು ತಮ್ಮದೇ ಆದ ಸಂಘಟನೆಗಳನ್ನು ಕಟ್ಟಿಕೊಂಡರು. ಕರ್ನಾಟಕ ರಾಜ್ಯ ರೈತ ಸಂಘ ಶಿವಮೊಗ್ಗ ಜಿಲ್ಲೆಯಲ್ಲಿ ಆರಂಭಗೊಂಡು, ಸ್ಥಳೀಯ ಸಮಸ್ಯೆಗಳನ್ನು ಕೈಗೆತ್ತಿಕೊಂಡಿತು. ದೂರಗಾಮಿ ನೇತ್ಯಾತ್ಮಕ ಪರಿಣಾಮಗಳನ್ನು ಸೃಷ್ಟಿ ಮಾಡಹೊರಟ ವಿದೇಶಿ ಕಂಪನಿಗಳ ಆಗಮನವನ್ನು ವಿರೋಧಿಸಿತು. ಕರ್ನಾಟಕ ಪ್ರಾಂತ ರೈತ ಸಂಘ, ಕಿಸಾನ್ ಸಭಾ, ದಲಿತ ಸಂಘರ್ಷ ಸಮಿತಿ, ರೈತ ಕೂಲಿ ಕಾರ್ಮಿಕರ ಸಂಘ ಮುಂತಾದ ಸಂಘಟನೆಗಳು ರೈತರ ಸಮಸ್ಯೆಗಳಿಗೆ ಹೋರಾಟದ ದನಿಯಾದವು. ರೈತ ಹೋರಾಟದ ಮುಖಂಡರಲ್ಲಿ ಎಂ.ಡಿ. ನಂಜುಂಡಸ್ವಾಮಿ, ಸುಂದರೇಶ್, ಪುಟ್ಟಣ್ಣಯ್ಯ, ಕಡಿದಾಳು ಶಾಮಣ್ಣ ಮೊದಲಾದವರು ಪ್ರಮುಖರಾಗಿದ್ದಾರೆ.



*ಎಂ.ಡಿ. ನಂಜುಂಡ ಸ್ವಾಮಿ*

**ಚಟುವಟಿಕೆ :** ಬಾಗೂರು ನವಿಲೆ ಚಳವಳಿಯನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.

## ದಲಿತ ಚಳವಳಿ

ಪ್ರಸಿದ್ಧ ಮನಃಶಾಸ್ತ್ರಜ್ಞ ಆರ್.ಡಿ. ಲಿಯಾಂಗ್ ಒಂದು ಅದ್ಭುತವಾದ ಮಾತನ್ನು ದಾಖಲಿಸುತ್ತಾರೆ: "ಇತರರ ಅನುಭವವನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಿದೆ. ಆದರೆ ಆ ಅನುಭವವನ್ನು ನೀವು ಅನುಭವಿಸಲು ಸಾಧ್ಯವೇ ಇಲ್ಲ". ದಲಿತ ಮತ್ತು ಮಹಿಳಾ ನೆಲೆಗಳಿಗೆ ಇದು ಅಕ್ಷರಶಃ ಅನ್ವಯವಾಗುತ್ತದೆ. ದಲಿತರಿಗೆ ವರ್ಣವ್ಯವಸ್ಥೆಯಲ್ಲೂ ಸ್ಥಾನವಿರಲಿಲ್ಲ. ಅವರು ಶೂದ್ರಾತಿ ಶೂದ್ರರಾಗಿದ್ದರು. ಸಾಮಾಜಿಕವಾಗಿ ಯಾವುದೇ ಸ್ಥಾನವನ್ನು ಹೊಂದಿರದ ಅಸ್ಪೃಶ್ಯ ಜಾತಿಗಳಲ್ಲಿ ಹುಟ್ಟಿದ ಒಂದೇ ಕಾರಣಕ್ಕಾಗಿ ಈ ಸಮುದಾಯ ಸಮಾಜದ ಮುಖ್ಯ ವಾಹಿನಿಯಿಂದ ಹೊರಗುಳಿಯಿತು. ಇದರ ವಿರುದ್ಧ ನಡೆದ ಅನೇಕ ಹೋರಾಟಗಳನ್ನು ಚರಿತ್ರೆಯ ಉದ್ದಕ್ಕೂ ನಾವು ಕಾಣುತ್ತೇವೆ. ಆದರೆ ವಸಾಹತುಶಾಹಿ ಕಾಲಘಟ್ಟದಲ್ಲಿ ದಲಿತರಿಗೆ ಸಂಬಂಧಿಸಿದ ವಿಷಯಗಳು ರಾಷ್ಟ್ರೀಯ ಹಂತದಲ್ಲಿ ಚರ್ಚೆ, ಸಂವಾದಗಳಿಗೆ ಒಳಗಾದವು. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವಿನ 1930ರ ದಶಕದ ಚರ್ಚೆಗಳೇ ಇದಕ್ಕೆ ಪ್ರಮುಖ ಸಾಕ್ಷಿ. ಇಬ್ಬರ ಗುರಿ ಒಂದೇ ಆದರೂ ಸಾಗಿದ ಮಾರ್ಗಗಳು ಬೇರೆಯಾಗಿದ್ದವು.

ಸ್ವಾಮಿ ವಿವೇಕಾನಂದರ ಮೈಸೂರಿನ ಭೇಟಿಯ ನಂತರ ಅವರ ಸಲಹೆಯ ಮೇರೆಗೆ ದಲಿತ ವರ್ಗದ ಪ್ರಮುಖ ಪ್ರಶ್ನೆಗಳನ್ನು ಅಂದಿನ ಮೈಸೂರಿನ ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರು ಗಂಭೀರವಾಗಿ ಪರಿಗಣಿಸಿ ದಲಿತರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದರು.

©KTBS NOT TO BE REPUBLISHED

1936ರಲ್ಲಿ ದಕ್ಷಿಣ ಭಾರತದ ದಲಿತ ನಾಯಕರಲ್ಲಿ ಪ್ರಮುಖರಾದ ಎಂ.ಸಿ. ರಾಜಾ ಅವರ ಸಮ್ಮುಖದಲ್ಲಿ ಮೈಸೂರು ಅರಮನೆಗೆ ದಲಿತರ ಪ್ರವೇಶವಾಯಿತು.

ಹಿಂದೆ ದಲಿತರ ಪರವಾಗಿ ಬಹುತೇಕ ದಲಿತೇತರರು ಹೋರಾಟ ಮಾಡಿದರು. ಈಗ ದಲಿತರೇ ತಮ್ಮ ಸಮಸ್ಯೆಗಳನ್ನು ತಾವೇ ಪ್ರತಿನಿಧಿಸತೊಡಗಿದ್ದಾರೆ. ಇವರಿಗೆ ಮೂಲ ಸ್ಫೂರ್ತಿ ಡಾ. ಬಿ.ಆರ್. ಅಂಬೇಡ್ಕರರ ಸೈದ್ಧಾಂತಿಕ ನಿಲುವುಗಳು. ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳು ದಲಿತ ಚಳವಳಿಗಳ ಬೀಜಮಂತ್ರಗಳಾದವು. ದಲಿತರ ಸಮಸ್ಯೆಗಳ ಪರಿಹಾರಕ್ಕೆ ರಾಜಕೀಯ ಸಾಧನೆಯನ್ನು ತಮ್ಮ ಧ್ಯೇಯವಾಗಿಸಿಕೊಂಡು ಸಂಘಟನಾತ್ಮಕವಾಗಿ ಜಾಗೃತರಾಗತೊಡಗಿದರು.

ದಲಿತ ವರ್ಗಗಳಲ್ಲಿ ಅಂಬೇಡ್ಕರರು ಅವರ ಸ್ವಾಭಿಮಾನದ ಸಂಕೇತವಾದರಲ್ಲದೆ 'ದಲಿತ ಸೂರ್ಯ' ಎಂಬ ಕೀರ್ತಿಗೆ ಪಾತ್ರರಾದರು. ಈ ಎಲ್ಲ ಬೆಳವಣಿಗೆಗಳ ಪ್ರತಿಧ್ವನಿಗಳು ಕರ್ನಾಟಕದಲ್ಲಿ ಮೊಳಗುವಂತಾಯಿತು.

ಇಪ್ಪತ್ತನೇ ಶತಮಾನದಲ್ಲಿ ಹುಟ್ಟಿ ಬೆಳೆದ ಬ್ರಾಹ್ಮಣೇತರ ಚಳವಳಿಗಳು ದಲಿತರನ್ನು ಹೆಚ್ಚು ಒಳಗೊಳ್ಳಲಿಲ್ಲ. ಇದನ್ನು ಪ್ರಶ್ನಿಸುತ್ತಾ 1970ರ ದಶಕದಲ್ಲಿ 'ದಲಿತ ಚಳವಳಿ'ಯು ರೂಪುಗೊಂಡು ಒಂದು ನಿರ್ಣಾಯಕ ಶಕ್ತಿಯಾಗಿ ಬೆಳೆಯಿತು. 'ಹೈದರಾಬಾದ್–ಕರ್ನಾಟಕ' (ಈಗ ಈ ಪ್ರದೇಶವನ್ನು ಕಲ್ಯಾಣ–ಕರ್ನಾಟಕ ಎಂದು ಕರೆಯಲಾಗುತ್ತದೆ) ಪ್ರದೇಶದಲ್ಲಿ ಬಿ. ಶಾಮಸುಂದರ್ ಅವರು 1970ರಲ್ಲಿ ಭೀಮಸೇನಾ ಸಂಘಟನೆಯನ್ನು ಹುಟ್ಟುಹಾಕಿದರು. ದಲಿತ ಚಳವಳಿಗೆ ಒಂದು ಹೊಸ ತಿರುವನ್ನು ಕೊಟ್ಟಿದ್ದು 'ಬಸವಲಿಂಗಪ್ಪ ಬೂಸಾ ಪ್ರಕರಣ' (1973).

ಸಚಿವರಾಗಿದ್ದ ಬಸವಲಿಂಗಪ್ಪನವರು ಮೈಸೂರಿನ ಕಾರ್ಯಕ್ರಮವೊಂದರಲ್ಲಿ ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಇದರ ವಿರುದ್ಧವಾಗಿ ಕರ್ನಾಟಕದಾದ್ಯಂತ ಹೋರಾಟಗಳಾದವು. ಕೊನೆಗೆ ಬಸವಲಿಂಗಪ್ಪನವರು ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿದರು. ಈ ಪ್ರಕರಣ ಕ್ರಮೇಣ ದಲಿತ ಪ್ರಜ್ಞೆಯನ್ನು ತೀವ್ರವಾಗಿ ಬೆಳೆಸಲು ಕಾರಣವಾಯಿತು.

@KTBS NOT TO BE REPUBLISHED

ಅನಂತರ 1976ರಲ್ಲಿ ಭದ್ರಾವತಿಯಲ್ಲಿ 'ದಲಿತ ಲೇಖಕ ಕಲಾವಿದರ ಒಕ್ಕೂಟ' ಸ್ಥಾಪನೆಯಾಯಿತು. ಕರ್ನಾಟಕದ ದಲಿತ ಚಳವಳಿಯ ಆರಂಭದ ಗಟ್ಟಿ ಹೆಜ್ಜೆಯನ್ನು ಈ ಒಕ್ಕೂಟದ ಪ್ರಾರಂಭದಲ್ಲಿ ಕಾಣಬಹುದು. ಮುಂದೆ ಇದರ ಆಶ್ರಯದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸ್ಥಾಪನೆಗೊಂಡಿತು. ಪ್ರೊ. ಬಿ. ಕೃಷ್ಣಪ್ಪ ಅದರ ರಾಜ್ಯ ಸಂಚಾಲಕರಾದರು. ಹೀಗೆ ಡಿ.ಎಸ್.ಎಸ್. ಒಂದು ಸಾಂಸ್ಥಿಕ ರೂಪ ಪಡೆಯಿತು.

ಕ್ರಮೇಣ ದಲಿತ ಸಂಘರ್ಷ ಸಮಿತಿಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ನೌಕರರು, ಮಹಿಳೆಯರು, ಪೌರಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಲೇಖಕರು ಹಾಗೂ ಕಲಾವಿದರ ಒಕ್ಕೂಟಗಳೆಂಬ ಅದರ ಶಾಖೆಗಳು ಆರಂಭಗೊಂಡವು. ಪಾರಂಪರಿಕವಾಗಿ ಭೂಮಿಯೇ ಇಲ್ಲದಿದ್ದ ದಲಿತರು ಭೂಮಿಯನ್ನು ಪಡೆಯುವ ಹೋರಾಟವನ್ನು ಆರಂಭಿಸಿದರು. ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ಮೂಲಕ ಅಧಿಕಾರದ ಕೇಂದ್ರಗಳಿಗೆ ಪ್ರವೇಶ ಪಡೆಯುವುದು ದಲಿತ ಚಳವಳಿಯ ಮತ್ತೊಂದು ಕಾರ್ಯಸೂಚಿಯಾಗಿತ್ತು. ಆದರೆ ಕಾಲಕ್ರಮೇಣ ದಲಿತ ಸಂಘರ್ಷ ಚಳವಳಿಯಲ್ಲಿ ಬಿರುಕುಗಳು ಕಾಣಿಸಲಾರಂಭಿಸಿದವು. ಬೇರೆ ಬೇರೆ ಹೆಸರುಗಳಲ್ಲಿ ಹೊಸ ಸಂಘಟನೆಗಳು ಹುಟ್ಟಿಕೊಂಡವು.

**ಚಟುವಟಿಕೆ:** ದೇವನೂರು ಮಹಾದೇವ ಮತ್ತು ಡಾ. ಸಿದ್ಧಲಿಂಗಯ್ಯನವರ ಕೃತಿಗಳನ್ನು ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

ಸಾಹಿತಿಗಳಾದ ದೇವನೂರು ಮಹಾದೇವ ಮತ್ತು ಡಾ. ಸಿದ್ಧಲಿಂಗಯ್ಯನವರು ಸಾಹಿತ್ಯದ ಮೂಲಕ ದಲಿತರ ಒಳಜಗತ್ತನ್ನು ದಲಿತೇತರರಿಗೆ ತೆರೆದುಕೊಟ್ಟರು. ಇತರ ದಲಿತ ಲೇಖಕರು ಈ ಸಮುದಾಯಗಳು ಜಾಗತೀಕರಣದ ಹಿನ್ನೆಲೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಅನಾವರಣ ಮಾಡುತ್ತಿದ್ದಾರೆ. ಇಂದು ದಲಿತರು ಸಮಾಜದ ಎಲ್ಲ ಆಗುಹೋಗುಗಳಲ್ಲಿ ನಿರ್ಣಾಯಕ ಪಾತ್ರವಹಿಸುವ ಸಾಮರ್ಥ್ಯವನ್ನು ತೋರುತ್ತಿದ್ದಾರೆ. ಆದರೆ ಸಾಗಬೇಕಾದ ದಾರಿ ಬಹಳಷ್ಟಿದೆ.

## ಕನ್ನಡ ಉಳಿಸಿ ಚಳವಳಿ ಅಥವಾ ಕನ್ನಡ ಕಾವಲು ಚಳವಳಿ

ಏಕೀಕರಣ ಚಳವಳಿಯು ಕನ್ನಡಿಗರಲ್ಲಿ ಆತ್ಮವಿಶ್ವಾಸ ಮತ್ತು ಅನ್ಯೋನ್ಯತೆಯನ್ನು ತಂದಿತು. ಸಾಹಿತ್ಯ ಸೃಷ್ಟಿಯ ಮೂಲಕ ಕನ್ನಡದ ಲೇಖಕರು ಜನರ ಕನ್ನಡತನವನ್ನು ಜೀವಂತವಾಗಿ ಇಟ್ಟಿದ್ದರು. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಹಾಗೂ ಕನ್ನಡಪರ ಸಂಘಟನೆಗಳ ಪಾತ್ರ ಹಿರಿದಾಗಿದೆ. 1960ರ ದಶಕದ ನಂತರ ಬೆಂಗಳೂರಿನಲ್ಲಿ ಅನ್ಯಭಾಷಿಕರ ಅಬ್ಬರ ಹೆಚ್ಚಾದಾಗ ಅ.ನ.ಕೃ., ಚಿದಾನಂದಮೂರ್ತಿ, ಮ.ನ. ರಾಮಮೂರ್ತಿ, ವಾಟಾಳ್ ನಾಗರಾಜ್ ಮುಂತಾದವರು ಹಾಗೂ ಕರ್ನಾಟಕ ಯುವಜನ ಸಭಾ, ಕನ್ನಡ ಜಾಗೃತ ಪರಿಷತ್, ಕನ್ನಡ ಶಕ್ತಿಕೇಂದ್ರ ಮುಂತಾದ ಸಂಘಟನೆಗಳು ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಮೇಲ್ಗೈಯನ್ನು ಸಾಧಿಸುವಲ್ಲಿ ಸಫಲರಾದರು. ಇವಲ್ಲದೆ ಇನ್ನೂ ಅನೇಕ ಕನ್ನಡಪರ ಸಂಘಟನೆಗಳು ಇಂದು ಕನ್ನಡ ನೆಲ, ಜಲ ಮತ್ತು ಭಾಷೆಯ ಸಂರಕ್ಷಣೆಯ ವಿಷಯದಲ್ಲಿ ಹೆಚ್ಚು ಕ್ರಿಯಾಶೀಲವಾಗಿವೆ.

@KTBS NOT TO BE REPUBLISHED

## ಗೋಕಾಕ್ ಚಳವಳಿ

ಒಂದರ್ಥದಲ್ಲಿ 1980ರ ದಶಕವು ಕನ್ನಡ ಭಾಷೆಯ ಅಸ್ತಿತ್ವಕ್ಕೆ ನಡೆದ ಹೋರಾಟದ ಕಾಲ. 1982ರಲ್ಲಿ ಗೋಕಾಕ ವರದಿಯ ಅನುಷ್ಠಾನಕ್ಕಾಗಿ ಒಂದು ನಿರ್ಣಾಯಕ ಚಾರಿತ್ರಿಕ ಹೋರಾಟ ಪ್ರಾರಂಭವಾಯಿತು. ಇಡೀ ಕನ್ನಡ ಸಮುದಾಯ ಅಭೂತಪೂರ್ವ ರೀತಿಯಲ್ಲಿ ಈ ಹೋರಾಟವನ್ನು ನಡೆಸಿತು. ಕರ್ನಾಟಕದಲ್ಲಿದ್ದ ಭಾಷಾ ಅಲ್ಪಸಂಖ್ಯಾತರು ಕನ್ನಡವನ್ನು ಕಡ್ಡಾಯವಾಗಿ ಕಲಿಯದೆ ಅವರ ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯುತ್ತೇವೆಂಬ ಹಟಕ್ಕೆ ಬಿದ್ದರು. ಅಂದಿನ ಮುಖ್ಯಮಂತ್ರಿಗಳಾದ ಆರ್. ಗುಂಡೂರಾಯರು ಉಡುಪಿಗೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಯ ಮಠಾಧಿಪತಿಗಳು ಸಂಸ್ಕೃತಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು

ಒತ್ತಾಯಿಸಿದರು. ಇದರ ಪರಿಣಾಮವಾಗಿ ಶಿಕ್ಷಣ ಯಾವ ಮಾಧ್ಯಮದಲ್ಲಿ ಇರಬೇಕು ಎನ್ನುವ ಪ್ರಶ್ನೆಯನ್ನು ಬಿಟ್ಟು ಶಿಕ್ಷಣದಲ್ಲಿ ಭಾಷೆಗಳ ಸ್ಥಾನಗಳು ಹೇಗಿರಬೇಕು ಎಂಬುದನ್ನು ನಿರ್ಧರಿಸಲು ಒಂದು ಸಮಿತಿ ರಚನೆಯಾಯಿತು. ಡಾ. ವಿನಾಯಕ ಕೃಷ್ಣ ಗೋಕಾಕರ ಅಧ್ಯಕ್ಷತೆಯಲ್ಲಿ ಭಾಷಾ ಸಮಿತಿ ರಚನೆಯಾಯಿತು. ಈ ಸಮಿತಿಯು ಕನ್ನಡ ಭಾಷೆಗೆ ಪ್ರಥಮ ಆದ್ಯತೆ ಮತ್ತು ಕಡ್ಡಾಯ ಮಾಡಬೇಕೆಂದು ಶಿಫಾರಸು ಮಾಡಿತು. ಈ ಸಮಿತಿಯು ತ್ರಿಭಾಷಾ ಸೂತ್ರಕ್ಕೆ 350 ಅಂಕಗಳನ್ನು ನಿಗದಿಪಡಿಸಿತು. ತ್ರಿಭಾಷಾ ಪರೀಕ್ಷೆಯಲ್ಲಿ ಕನ್ನಡವು 150 ಅಂಕಗಳ ಪ್ರಥಮ ಭಾಷೆ ಆಗಿರಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿತು.

ಗೋಕಾಕ್ ವರದಿಯನ್ನು ಅಂದಿನ ಸರಕಾರ ಒಪ್ಪಲಿಲ್ಲ. ಡಾ. ರಾಜಕುಮಾರ್ ಅವರ ನೇತೃತ್ವದಲ್ಲಿ ಕರ್ನಾಟಕದಾದ್ಯಂತ ಬೃಹತ್ ಆಂದೋಲನ ನಡೆಯಿತು. ಕುವೆಂಪು, ಪಾಟೀಲ ಪುಟ್ಟಪ್ಪ ಮುಂತಾದ ಹಿರಿಯ ಸಾಹಿತಿಗಳು ಈ ಹೋರಾಟಕ್ಕೆ ಬೆಂಬಲವನ್ನು ನೀಡಿದರು.



*ವಿನಾಯಕ ಕೃಷ್ಣ ಗೋಕಾಕ್*




*ಡಾ|| ರಾಜ್ ಕುಮಾರ್*

@KTBS
NOT TO BE REPUBLISHED

ಗೋಕಾಕ್ ಚಳವಳಿಯ ಪ್ರಮುಖ ಘೋಷಣೆಗಳೆಂದರೆ "ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ", "ಏನೇ ಬರಲಿ ಕನ್ನಡ ಇರಲಿ", "ಗೋಕಾಕ್ ವರದಿ ಜಾರಿಗೆ ಬರಲಿ", "ಕರ್ನಾಟಕದಲ್ಲಿ ಕನ್ನಡದ ಉಸಿರು ತುಂಬಲಿ", ಮುಂತಾದವು.

## ಅಭ್ಯಾಸಗಳು

**I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

1 'ತುಂಗಾಮೂಲವನ್ನು ಉಳಿಸಿ' ಆಂದೋಲನ ಏಕೆ ಆರಂಭವಾಯಿತು?

2 'ಅಪ್ಪಿಕೋ' ಚಳವಳಿ ಎಂದರೇನು?

3 'ಸಾಮಾಜಿಕ ಅರಣ್ಯ' ಎಂದರೇನು?

4 ಕರ್ನಾಟಕದ ಮೊದಲ ಮಹಿಳಾ ಬಿ.ಎ. ಆನರ್ಸ್ ಪದವೀಧರರು ಯಾರು?

**II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ನಾವೇಕೆ ಪ್ರಾಚೀನ ಕೆರೆಗಳನ್ನು ಉಳಿಸಬೇಕು?

2 ಪ್ರಮುಖ ಪರಿಸರ ಚಳವಳಿಗಳನ್ನು ಹೆಸರಿಸಿರಿ.

3 ದಲಿತ ಚಳವಳಿ ಏಕೆ ಪ್ರಾರಂಭವಾಯಿತು?

4 ದಲಿತ ಚಳವಳಿಯ ಬೀಜಮಂತ್ರಗಳು ಯಾವುವು?

**III ಚರ್ಚಿಸಿರಿ.**

1 ನಿಮ್ಮ ಪ್ರದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಆಗಿರುವ ಸಾಮಾಜಿಕ ಆರ್ಥಿಕ ಬದಲಾವಣೆಗಳು.

2 ದಲಿತ ಚಳವಳಿಗಳ ಸಾಧನೆಗಳು.

©KTBS
NOT TO BE REPUBLISHED



**ಚಟುವಟಿಕೆಗಳು**

1. ನಿಮ್ಮ ಪ್ರದೇಶದಲ್ಲಿಯ ದಲಿತರ ಮನೆಗಳಿಗೆ ಭೇಟಿ ನೀಡಿ ಅವರ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿ ಕುರಿತು ವಿಶ್ಲೇಷಿಸಿರಿ.
2. ಗೋಕಾಕ್ ವರದಿಯ ಶಿಫಾರಸುಗಳನ್ನು ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

| ಅಧ್ಯಾಯ 19 | ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ |
|---|---|

N1I7J6

**ಪಾಠದ ಪರಿಚಯ**

ಈ ಪಾಠದಲ್ಲಿ ಕರ್ನಾಟಕದಲ್ಲಿ ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಆದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೂಲ ಅಂಶಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಕೆಲವು ವರ್ಗಗಳು ಅಭಿವೃದ್ಧಿಯ ಸಿಂಹಪಾಲನ್ನು ಪಡೆದರೆ ಉಳಿದವು ವಿವಿಧ ಕಾರಣಗಳಿಗಾಗಿ ಅಭಿವೃದ್ಧಿಯಿಂದ ದೂರ ಉಳಿದಿವೆ. ಇದರ ಪರಿಣಾಮವೇ ಸಾಮಾಜಿಕ ಅಸಮತೋಲನ. ಇದನ್ನು ಹೋಗಲಾಡಿಸಲು ಸಂವಿಧಾನದ ಆಶಯಗಳ ಚೌಕಟ್ಟಿನಲ್ಲಿ ಸರ್ಕಾರವು ಭೂಸುಧಾರಣೆಗಳು, ಹಿಂದುಳಿದ ವರ್ಗಗಳ ಆಯೋಗಗಳ ನೇಮಕಾತಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಸಾಮರ್ಥ್ಯಗಳು**

1 ಸ್ವಾತಂತ್ರ್ಯದ ನಂತರ ಕರ್ನಾಟಕದಲ್ಲಿ ಆಗಿರುವ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಸಾಧನೆಯನ್ನು ತಿಳಿಯುವುದು.

2 ಭೂಸುಧಾರಣೆ ಕಾಯಿದೆಯ ಉದ್ದೇಶ ಹಾಗೂ ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.

3 ಹಿಂದುಳಿದ ವರ್ಗಗಳ ಆಯೋಗಗಳು ನೀಡಿರುವ ಕೊಡುಗೆಗಳನ್ನು ಮೆಚ್ಚುವುದು.

@KTBS NOT TO BE REPUBLISHED

## ಭೂಸುಧಾರಣೆ

ಭೂಮಿಯ ಹಿಡುವಳಿಗಳಲ್ಲಿ ಇರುವ ಸಮಸ್ಯೆಗಳನ್ನು ಹೋಗಲಾಡಿಸಲು ಜಾರಿಗೊಳಿಸಲಾಗಿರುವ ಕ್ರಮಗಳನ್ನು ಭೂಸುಧಾರಣೆ ಎನ್ನುವರು. ಭೂಮಿಯು ಮನುಷ್ಯನ ಬದುಕಿನ ಅವಿಭಾಜ್ಯ ಅಂಗ. ಅವನು ತನ್ನ ಬದುಕನ್ನು ರೂಪಿಸಿಕೊಳ್ಳಲು ಭೂಮಿಯನ್ನು ಅವಲಂಬಿಸಿದ್ದಾನೆ. ಆದರೆ ಭೂಮಿಯು ಎಲ್ಲಾ ಸಮುದಾಯಗಳಿಗೆ ಸಮಾನವಾಗಿ ಹಂಚಿಕೆಯಾಗಿಲ್ಲ. ಈ ಭೂಒಡೆತನದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಭೂಸುಧಾರಣೆಯನ್ನು ಕೈಗೊಳ್ಳಲಾಯಿತು.

ಹಿಂದೆ ಭೂಮಾಲಿಕರ ಪರವಾದ ಕಾನೂನುಗಳು ಇದ್ದವೇ ವಿನಹ ಗೇಣಿದಾರನ ಪರವಾದ ಕಾನೂನುಗಳು ಇರಲಿಲ್ಲ. ಇದರಿಂದ ಸಂಪತ್ತಿನ ಕ್ರೋಢೀಕರಣ ಮತ್ತು ಹಂಚಿಕೆಯಲ್ಲಿ ಗಣನೀಯ ಅಸಮತೋಲನ ಏರ್ಪಟ್ಟಿತು. ಭೂಸುಧಾರಣೆಯ ಮೂಲಕ

ಸಮ ಸಮಾಜವನ್ನು ರೂಪಿಸುವ ಪ್ರಯತ್ನವನ್ನು 1970ರ ದಶಕದಲ್ಲಿ ಕಾಣುತ್ತೇವೆ. ಕೂಲಿ ರೈತರ ಮತ್ತು ದಲಿತ ಚಳವಳಿಗಳ ಪರಿಣಾಮವಾಗಿ ಭೂಹಂಚಿಕೆಯ ಪ್ರಶ್ನೆಗಳು ಉದ್ಭವಿಸಿದವು. ಭೂಹೀನ ಕೆಳ ಸಮುದಾಯಗಳಿಗೆ ಭೂಮಿಯನ್ನು ನೀಡಬೇಕೆಂದು ಆಗ್ರಹಿಸಿ ಅನೇಕ ಹೋರಾಟಗಳು ನಡೆದವು. ಇದರ ಪರಿಣಾಮವಾಗಿ ಭೂಸುಧಾರಣೆಗಳು ಜಾರಿಯಾದವು. ಈ ಸುಧಾರಣೆಗಳ ಪ್ರಮುಖ ಅಂಶಗಳು ಇವಾಗಿವೆ.

### 1 ಜಮೀನ್ದಾರಿ ಪದ್ಧತಿಯ ನಿರ್ಮೂಲನ

ಭೂಮಿಯ ಮೇಲಿನ ಭೂಮಾಲೀಕ ವರ್ಗದ ಹಿಡಿತವನ್ನು ಮಿತಿಗೊಳಿಸುವುದು ಈ ಕ್ರಮದ ಉದ್ದೇಶವಾಗಿದೆ. 1955ರಲ್ಲಿ ಭಾರತದ ಮಾಜಿ ಉಪರಾಷ್ಟ್ರಪತಿ ಬಿ.ಡಿ. ಜತ್ತಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಭೂಸುಧಾರಣೆಯನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ಕೆಲವು ಶಿಫಾರಸುಗಳನ್ನು ಮಾಡಿತು. ಈ ಸಮಿತಿಯು ಪ್ರತಿ ಕುಟುಂಬಕ್ಕೆ ಗರಿಷ್ಠ ಪ್ರಮಾಣ, ಅಂದರೆ 116 ಎಕರೆ ಒಣ ಭೂಮಿಯನ್ನು ಅಥವಾ 27 ಎಕರೆ ನೀರಾವರಿ ಭೂಮಿಯನ್ನು ಹೊಂದಬಹುದೆಂದು ಶಿಫಾರಸು ಮಾಡಿತು. ಈ ಶಿಫಾರಸುಗಳು ಉಳ್ಳವರ ಪರವಾಗಿದ್ದವು. 1957ರಲ್ಲಿ ಜಾರಿಗೊಂಡ ಈ ಶಿಫಾರಸುಗಳು ಇದ್ದ ವ್ಯವಸ್ಥೆಯನ್ನು ನಿರ್ಣಾಯಕವಾಗಿ ಬದಲಾಯಿಸಲು ಸಾಧ್ಯವಾಗಲಿಲ್ಲ. 1974ರ ಭೂಸುಧಾರಣೆ ಕಾನೂನುಗಳು ಈ ಪದ್ಧತಿಯನ್ನು ಹೋಗಲಾಡಿಸುವಲ್ಲಿ ನಿರ್ಣಾಯಕವಾದವು.

ಒಂದು ಎಕರೆಗೆ 100 ಸೆಂಟ್ಸ್ ಅಥವಾ 40 ಗುಂಟೆ.

### 2 ಗೇಣಿ ಪದ್ಧತಿಯಲ್ಲಿ ಸುಧಾರಣೆ

ಭಾರತದ ಗೇಣಿದಾರರು ಅನೇಕ ಸಮಸ್ಯೆಯನ್ನು ಎದುರಿಸುತ್ತಿದ್ದರು. ಅವುಗಳೆಂದರೆ ಹೆಚ್ಚಿನ ಪ್ರಮಾಣದ ಗೇಣಿ, ಭೂಹಿಡುವಳಿಯಲ್ಲಿ ಅಭದ್ರತೆ ಮತ್ತು ಒಡೆತನವಿಲ್ಲದ ಭೂಹೀನ ಸ್ಥಿತಿ. ಈ ಸಮಸ್ಯೆಯನ್ನು ಹೋಗಲಾಡಿಸಲು 1974ರಲ್ಲಿ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಅವರು ಭೂಹಿಡುವಳಿ ಬಗ್ಗೆ ಕ್ರಾಂತಿಕಾರಕ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೊಳಿಸಿದರು. ಇದರಂತೆ 'ಉಳುವವನೆ ಭೂಮಿಯ ಒಡೆಯ'ನಾದನು. ತಲೆಮಾರುಗಳಿಂದ ಗೇಣಿಯನ್ನು ಮಾಡುತ್ತಿದ್ದ ಅನೇಕ ಭೂಹೀನರು ನವಭೂಮಾಲೀಕರಾದರು.

1974ರ ಭೂಸುಧಾರಣಾ (ತಿದ್ದುಪಡಿ) ಕಾಯ್ದೆಯ ಪ್ರಮುಖ ಅಂಶಗಳು

1 ಅದು ಎಲ್ಲ ರೀತಿಯ ಗೇಣಿಯನ್ನು ರದ್ದುಗೊಳಿಸಿತು.

2 ರೈತನಿಗೆ ತಾನು ಉಳುಮೆ ಮಾಡುತ್ತಿದ್ದ ಭೂಮಿಯ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಲು ಅವಕಾಶ ನೀಡಲಾಯಿತು.

© KTBS NOT TO BE REPUBLISHED

3 ಗೇಣಿಯ ಎಲ್ಲ ಭೂಮಿಯು ಸರಕಾರದ ಸ್ವಾಧೀನಕ್ಕೆ ಸೇರಿತು. ಭೂಮಿಯ ಮೇಲೆ ಹಕ್ಕನ್ನು ಪಡೆಯಬಯಸುವವರು ಮತ್ತು ಪರಿಹಾರ ಪಡೆಯಬೇಕಾದವರು ನ್ಯಾಯಮಂಡಳಿಯ (ಟ್ರಿಬ್ಯೂನಲ್) ಮೂಲಕ ಅರ್ಜಿ ಹಾಕಬೇಕಿತ್ತು.

4 ನ್ಯಾಯಮಂಡಳಿಯ ನಿರ್ಧಾರ ಅಂತಿಮವಾಗಿತ್ತು. ಅದರ ನಿರ್ಧಾರವನ್ನು ಉಚ್ಚ ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಬಹುದಾಗಿತ್ತು.

### 3 ಗರಿಷ್ಠ ಹಿಡುವಳಿಯ ಮಿತಿ

1957ರ ನಂತರದಲ್ಲಿ ಆದ ಪ್ರಮುಖ ಪ್ರಯತ್ನಗಳು 1970ರ ದಶಕದಲ್ಲಿ ನಡೆದವು. ಒಂದು ಕುಟುಂಬ ಹೊಂದಬಹುದಾದ ಭೂಮಿಯ ಗರಿಷ್ಠ ಮಿತಿಯನ್ನು ಅಂದಿನ ರಾಜ್ಯ ಸರ್ಕಾರ ನಿಗದಿಪಡಿಸಿತು.

1974ರಲ್ಲಿ ಭೂಮಿಯ ಗರಿಷ್ಠ ಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಯಿತು. ನೀರಿನ ಸೌಕರ್ಯವಿಲ್ಲದ ಖುಷ್ಕಿ ಭೂಮಿಯಾಗಿದ್ದರೆ ಅದರ ಮಿತಿ ಒಂದು ಕುಟುಂಬಕ್ಕೆ 54 ಎಕರೆಗಳಾಗಿರಬೇಕು. ನೀರಾವರಿ ಸೌಕರ್ಯವಿದ್ದು ಎರಡು ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಬೆಳೆಯುತ್ತಿದ್ದರೆ ಪ್ರತಿ ಕುಟುಂಬಕ್ಕೆ 10ರಿಂದ 18ಎಕರೆಗಳು. ಒಂದು ಬೆಳೆ ತೆಗೆಯುವ ನೀರಾವರಿ ಭೂಮಿಯಾದರೆ ಒಂದು ಕುಟುಂಬಕ್ಕೆ ಗರಿಷ್ಠ 27 ಎಕರೆ ನಿಗದಿಪಡಿಸಲಾಗಿತ್ತು. ಜೊತೆಗೆ 1977ರಲ್ಲಿ ಇನಾಂ ರದ್ದತಿ ಕಾಯ್ದೆ ಜಾರಿಗೆ ಬಂದಿತು.

ಇನಾಂ ರದ್ದತಿ ಕಾಯ್ದೆಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

© KTBS NOT TO BE REPUBLISHED

### 4 ಆರ್ಥಿಕ ಹಿಡುವಳಿಗಳ ರಚನೆ

ಯಾವ ಹಿಡುವಳಿಯಿಂದ ಬೇಸಾಯಗಾರನು ಬೇಸಾಯ ವೆಚ್ಚಗಳನ್ನು ಕಳೆದು ತನಗೂ ತನ್ನ ಕುಟುಂಬಕ್ಕೂ ನೆಮ್ಮದಿಯಾಗಿರಲು ಬೇಕಾದ ಆದಾಯ ಗಳಿಸಬಲ್ಲನೋ ಅಂತಹ ಜೀವನಾಧಾರ ಹಿಡುವಳಿಯನ್ನು 'ಆರ್ಥಿಕ ಹಿಡುವಳಿ' ಎನ್ನುತ್ತಾರೆ. ಹಿಡುವಳಿಗಳ ಕ್ರೋಢೀಕರಣ ಮತ್ತು ಗರಿಷ್ಠ ಪ್ರಮಾಣದ ಮಿತಿಯಿಂದ ಅನೇಕ ಕೃಷಿಕರ ಜೀವನಮಟ್ಟ ಸುಧಾರಿಸಿತು.

### 5 ಸಹಕಾರಿ ಬೇಸಾಯ ಅಭಿವೃದ್ಧಿ

ರೈತರು ಸ್ವಯಂಪ್ರೇರಣೆಯಿಂದ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ಎಲ್ಲಾ ಹಿಡುವಳಿಯನ್ನು ಸಹರೈತರ ಉಸ್ತುವಾರಿಗೆ ಒಪ್ಪಿಸಿ ಒಟ್ಟಾಗಿ ಸೇರಿ ಸಾಗುವಳಿ

ಮಾಡುತ್ತಾರೆ. ಉತ್ಪಾದನೆಯು ಕೈಗೆ ಬಂದಾಗ ಜಮೀನಿನ ಶಾಶ್ವತ ಅಭಿವೃದ್ಧಿಗೆ ಅಗತ್ಯ ಬಂಡವಾಳವನ್ನು ತೆಗೆದಿಟ್ಟು ಉಳಿದ ಭಾಗವನ್ನು ಹಂಚಿಕೊಳ್ಳುತ್ತಾರೆ. ಇದನ್ನು 'ಸಹಕಾರಿ ಬೇಸಾಯ ಪದ್ಧತಿ' ಎನ್ನುತ್ತೇವೆ.

ಭೂಸುಧಾರಣೆಯಿಂದ ಭೂಹೀನರಿಗೆ ಭೂಮಿಯ ಒಡೆತನದ ಹಕ್ಕು ಸಣ್ಣ ಪ್ರಮಾಣದಲ್ಲಿ ದೊರಕಿತು. ಸಾಗುವಳಿದಾರರ ಹಕ್ಕುಗಳನ್ನು ಕಾಪಾಡಲಾಯಿತು. ಸಹಕಾರಿ ಬೇಸಾಯ ಪದ್ಧತಿಯಿಂದ ರೈತರು ಸ್ವಲ್ಪಮಟ್ಟಿಗಿನ ಲಾಭವನ್ನು ಹೊಂದಲು ಸಾಧ್ಯವಾಯಿತು. ಆದರೆ ಸಹಕಾರಿ ಬೇಸಾಯ ಪದ್ಧತಿಯು ನಿರೀಕ್ಷಿತ ಪ್ರಮಾಣದಲ್ಲಿ ಜನರಿಗೆ ಒಪ್ಪಿತ ಬೇಸಾಯ ಪದ್ಧತಿಯಾಗಲಿಲ್ಲ.

## ಹಿಂದುಳಿದ ವರ್ಗಗಳ ಆಯೋಗಗಳು

ಭಾರತದ ಸಾಮಾಜಿಕ ವ್ಯವಸ್ಥೆ ಅಸಮಾನತೆಯಿಂದ ಕೂಡಿದೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಿಂದ ಅನೇಕ ಜಾತಿಗಳು ಹಿಂದುಳಿದವುಗಳಾಗಿಯೆ ಉಳಿದವು. ಬ್ರಿಟಿಷರು ಭಾರತಕ್ಕೆ ಬಂದ ನಂತರ ಹೊಸ ಸಾಮಾಜಿಕ ಚಲನಶೀಲತೆ ಪ್ರಾರಂಭವಾಯಿತು.

ಬ್ರಿಟಿಷರ ಆಡಳಿತದಡಿಯಲ್ಲಿ ಯಾವುದೇ ಜಾತಿ ವರ್ಗಗಳ ತಾರತಮ್ಯವಿಲ್ಲದೆ ಎಲ್ಲರೂ ಇಂಗ್ಲಿಷ್ ಭಾಷೆಯನ್ನು ಕಲಿಯಲು ಅರ್ಹರಾದರು. ಇಂಗ್ಲಿಷ್ ಭಾಷೆ ಕಲಿತವರಿಗೆ ಬ್ರಿಟಿಷ್ ಸರಕಾರದಲ್ಲಿ ಹೊಸ ಅವಕಾಶಗಳು ದೊರೆಯತೊಡಗಿದವು. ಬ್ರಾಹ್ಮಣೇತರರು ವಿದ್ಯಾಭ್ಯಾಸ ಕ್ಷೇತ್ರಕ್ಕೆ ತೆರೆದುಕೊಂಡ ನಂತರ ಅವರಲ್ಲಿ ಹೊಸ ಎಚ್ಚರ ಪ್ರಾರಂಭವಾಯಿತು. ಬಹುಸಂಖ್ಯಾತರಾಗಿದ್ದರೂ ತಮ್ಮ ವರ್ಗಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯವಿರಲಿಲ್ಲ. ಇದರ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರರು ಸಾಹುಕಾರ ಚೆನ್ನಯ್ಯ, ಎಂ. ಬಸವಯ್ಯ ಮುಂತಾದವರ ನೇತೃತ್ವದಲ್ಲಿ ಬ್ರಾಹ್ಮಣೇತರ ಚಳವಳಿಯನ್ನು ಹುಟ್ಟುಹಾಕಿದರು.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಭಾರತದಲ್ಲೇ ಪ್ರಥಮವಾಗಿ ಹಿಂದುಳಿದ ವರ್ಗಗಳ ಆಯೋಗವು ನ್ಯಾಯಮೂರ್ತಿ ಲೆಸ್ಲೆ ಸಿ. ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ 1918ರಲ್ಲಿ ನೇಮಕವಾಯಿತು. ಒಂದು ಜಾತಿಯಲ್ಲಿ ಶೇಕಡ ಐದು ಅಥವಾ ಅದಕ್ಕಿಂತ ಹೆಚ್ಚಿನವರು ಇಂಗ್ಲಿಷ್ ಬಲ್ಲವರಿದ್ದರೆ ಅಂತಹ ಜಾತಿಯನ್ನು ಮುಂದುವರೆದವರು ಎಂದು ಈ ಸಮಿತಿ ಅಭಿಪ್ರಾಯ ಪಟ್ಟಿತು. 1921ರಲ್ಲಿ ಮೈಸೂರು ರಾಜ್ಯದಲ್ಲಿ ಪ್ರಥಮ ಮೀಸಲಾತಿ ಆಜ್ಞೆ ಜಾರಿಗೆ ಬಂದಿತು.

© KTBS NOT TO BE REPUBLISHED

ಮುಖ್ಯಮಂತ್ರಿ ಡಿ. ದೇವರಾಜ್ ಅರಸ್‌ರವರು 1975 ರಲ್ಲಿ ಎಲ್.ಜಿ. ಹಾವನೂರು ಅವರ ನೇತೃತ್ವದಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಿದರು. 1975ನೇ ಇಸವಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿವಿಧ ಜಾತಿಯ ವಿದ್ಯಾರ್ಥಿಗಳ ಶೇಕಡಾವಾರನ್ನು ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಮಾನದಂಡವನ್ನಾಗಿ ತೆಗೆದುಕೊಳ್ಳಲಾಯಿತು. ಹಾವನೂರು ವರದಿಯ ಆಧಾರದ ಮೇಲೆ 1977ರಲ್ಲಿ ಸರಕಾರಿ ಆಜ್ಞೆಯನ್ನು ಜಾರಿಗೆ ತರಲಾಯಿತು. ಇದು ಒಂದು ಕ್ರಾಂತಿಕಾರಕ ಆಜ್ಞೆಯಾಯಿತು. ಹಿಂದುಳಿದ ವರ್ಗಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಬಲರಾಗಲು ಈ ಆಜ್ಞೆ ಬಹುಮಟ್ಟಿಗೆ ಕಾರಣವಾಯಿತು. ಇದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಈ ವರದಿಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲಾಗುವುದು ಎನ್ನುವ ಭರವಸೆಯನ್ನು ಕರ್ನಾಟಕ ಸರ್ಕಾರವು ನ್ಯಾಯಾಲಯಕ್ಕೆ ನೀಡಿತು. ಇದರ ಪರಿಣಾಮವಾಗಿ 1983ರಲ್ಲಿ ಟಿ. ವೆಂಕಟಸ್ವಾಮಿ ಆಯೋಗದ ನೇಮಕವಾಯಿತು. ರಾಜಕೀಯ ಒತ್ತಡದ ಕಾರಣಗಳಿಗಾಗಿ ವೆಂಕಟಸ್ವಾಮಿ ವರದಿಯನ್ನು ಸರ್ಕಾರ ಒಪ್ಪಲಿಲ್ಲ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಆಡಳಿತಾವಧಿಯಲ್ಲಿ ನ್ಯಾಯಮೂರ್ತಿ ಓ. ಚಿನ್ನಪ್ಪ ರೆಡ್ಡಿಯವರ ನೇತೃತ್ವದಲ್ಲಿ ಒಂದು ಸಮಿತಿಯ ರಚನೆಯಾಯಿತು. ಈ ವರದಿಯ ಶಿಫಾರಸುಗಳು ಕೂಡ ರಾಜಕೀಯ ಒತ್ತಡಗಳಿಂದಾಗಿ ಜಾರಿಗೆ ಬರಲಿಲ್ಲ.



ಎಲ್.ಜಿ. ಹಾವನೂರು

ಇಲ್ಲಿಯವರೆಗೂ ಜಾರಿಗೊಂಡ ಎಲ್ಲಾ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಮೀಸಲಾತಿ ಆಜ್ಞೆಗಳು ರಾಜೀಸೂತ್ರದ ಆಜ್ಞೆಗಳಾಗಿವೆಯೇ ಹೊರತು ಯಾವುದೇ ವೈಜ್ಞಾನಿಕ ವರದಿಯ ಶಿಫಾರಸುಗಳ ಮೇಲೆ ರೂಪಿತವಾದ ಆಜ್ಞೆಗಳಾಗಿಲ್ಲ.

## ಪಂಚಾಯತ್ ರಾಜ್ ವ್ಯವಸ್ಥೆ

ಪಂಚಾಯತ್ ರಾಜ್ ವ್ಯವಸ್ಥೆಯನ್ನು ಆಡಳಿತದ ವಿಕೇಂದ್ರೀಕರಣ ವ್ಯವಸ್ಥೆ ಎಂದು ಸರಳ ಭಾಷೆಯಲ್ಲಿ ಹೇಳಬಹುದು. ಸ್ಥಳೀಯರಿಗೆ ಆಡಳಿತದಲ್ಲಿ ಭಾಗವಹಿಸುವ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಕೊಡುವುದೇ ಈ ವ್ಯವಸ್ಥೆಯ ಕೇಂದ್ರ ಆಶಯ. ಭಾರತಕ್ಕೆ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯ ಪರಿಚಯವಿದ್ದರೂ

© KTBS NOT TO BE REPUBLISHED

ಸ್ವಾತಂತ್ರ್ಯಾನಂತರ ಅದಕ್ಕೆ ಸಂವಿಧಾನಾತ್ಮಕ ರೂಪಕೊಡುವ ಕಾರ್ಯ ಚಾಲನೆಗೆ ಬಂದಿತು. ಕೇಂದ್ರ ಸರಕಾರವು 1955ರಲ್ಲಿ ಬಲವಂತರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಸಮಿತಿಯು ಮೂರು ಹಂತದ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಶಿಫಾರಸು ಮಾಡಿತು.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಂದಿನ ರಾಜ್ಯ ಸರಕಾರವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಆಶಯಕ್ಕನುಗುಣವಾಗಿ 1959ರಲ್ಲಿ ಮೈಸೂರು ಗ್ರಾಮ ಪಂಚಾಯಿತಿಗಳ ಅಧಿನಿಯಮವನ್ನು ಜಾರಿಗೊಳಿಸಿತು. ತನ್ಮೂಲಕ ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಕಾಯಂ ನೆಲೆಯನ್ನು ಕಲ್ಪಿಸಿತು. ಹೊಸ ಕಾನೂನಿನ ಪ್ರಕಾರ ಆಡಳಿತ ವ್ಯವಸ್ಥೆಯ ಮೂರು ಹಂತಗಳು ಇವಾಗಿವೆ.

- ಗ್ರಾಮ ಪಂಚಾಯತ್
- ತಾಲ್ಲೂಕ್ ಪಂಚಾಯತ್
- ಜಿಲ್ಲಾ ಪಂಚಾಯತ್

NOT TO BE REPUBLISHED @KTBS

ಕರ್ನಾಟಕದಲ್ಲಿ 1983ರಲ್ಲಿ ಅಸ್ತಿತ್ವಕ್ಕೆ ಬಂದ ಜನತಾ ಸರಕಾರ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು. ಇದರ ರೂವಾರಿ ಅಂದಿನ ಪಂಚಾಯತ್ ರಾಜ್ ಖಾತೆ ಸಚಿವ ಶ್ರೀ ನಜೀರ್ ಸಾಬ್ ಅವರು. ದಲಿತ, ಹಿಂದುಳಿದ ಮತ್ತು ಮಹಿಳಾ ವರ್ಗಗಳಿಗೆ ಸ್ವಯಮಾಡಳಿತದಲ್ಲಿ ಪಾಲ್ಗೊಳ್ಳುವ ಹೆಚ್ಚಿನ ಅವಕಾಶವನ್ನು ಪಂಚಾಯತ್ ರಾಜ್ ವ್ಯವಸ್ಥೆ ಒದಗಿಸಿತು. ಈ ಹೊಸ ವ್ಯವಸ್ಥೆಯನ್ನು ಕ್ರಮೇಣ ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ನಕ್ಷೆಯನ್ನೇ ಬದಲಿಸಿತು.



*ನಜೀರ್ ಸಾಬ್*

### ಹೊಸ ಪದ

ಗೇಣಿ : ಭೂಮಾಲೀಕ ಮತ್ತು ಗೇಣಿದಾರನ ನಡುವೆ ನಡೆಯುವ ಒಪ್ಪಂದದ ಫಲವಾಗಿ ಗೇಣಿದಾರನು ಒಟ್ಟು ಉತ್ಪಾದನೆಯಲ್ಲಿ ಪಡೆಯುವ ಪಾಲು.

## ಅಭ್ಯಾಸಗಳು

**I ಬಿಟ್ಟ ಜಾಗದಲ್ಲಿ ಸೂಕ್ತವಾದ ಪದವನ್ನು ತುಂಬಿರಿ.**

1 ಬಿ.ಡಿ. ಜತ್ತಿಯವರು ಭಾರತದ ______________ ಆಗಿದ್ದರು.

2 1974ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು __________.

3 1975ರಲ್ಲಿ ನೇಮಕವಾದ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ______________

**II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ಭೂಸುಧಾರಣೆ ಎಂದರೇನು?

2 ಕರ್ನಾಟಕದಲ್ಲಿ ಜಾರಿಯಾದ ಭೂಸುಧಾರಣೆಗಳು ಯಾವುವು?

3 ಆರ್ಥಿಕ ಹಿಡುವಳಿ ಎಂದರೇನು?

4 ಒಂದು ಕುಟುಂಬ ಹೊಂದಬಹುದಾದ ಭೂಮಿಯ ಗರಿಷ್ಠ ಮಿತಿಯನ್ನು ಕರ್ನಾಟಕ ಸರ್ಕಾರವು ಏಕೆ ನಿಗದಿ ಪಡಿಸಿದೆ?

5 ಸಹಕಾರಿ ಬೇಸಾಯ ಪದ್ಧತಿ ಎಂದರೇನು?

6 ಎಲ್.ಜಿ. ಹಾವನೂರು ಆಯೋಗವು ಹಿಂದುಳಿಯುವಿಕೆಯನ್ನು ಹೇಗೆ ಗುರುತಿಸಿತು?

7 ಪಂಚಾಯತ್ ರಾಜ್ ವ್ಯವಸ್ಥೆ ಏಕೆ ಮಹತ್ವದ್ದಾಗಿದೆ?



**ಚಟುವಟಿಕೆಗಳು**

1 ಶಾಲೆಯಲ್ಲಿ ಗ್ರಾಮ ಪಂಚಾಯಿತಿಯ ಮಾದರಿ ಸಭೆಯನ್ನು ಏರ್ಪಡಿಸುವುದು. (ಶಿಕ್ಷಕರ ನೆರವನ್ನು ಪಡೆಯಿರಿ).

2 ನಿಮ್ಮ ಊರಿನ ಗ್ರಾಮ ಪಂಚಾಯಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿಯ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

@KTBS
NOT TO BE REPUBLISHED

| ಅಧ್ಯಾಯ 20 | ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ |
| --- | --- |

G9Z9G4

**ಪಾಠದ ಪರಿಚಯ**

ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಹಿರಿದಾದುದು. ಕರ್ನಾಟಕದ ಮುನ್ನಡೆಯಲ್ಲಿ ಕೃಷಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ರಾಂತಿಗಳು ನಿರ್ಣಾಯಕ ಪಾತ್ರ ವಹಿಸಿವೆ. ಇವುಗಳ ಬಗ್ಗೆ ಈ ಪಾಠದಲ್ಲಿ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

**ಸಾಮರ್ಥ್ಯಗಳು**

1 ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರದ ಬಗ್ಗೆ ಅರಿಯುವುದು.

2 ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ರಾಂತಿಯ ಪರಿಣಾಮವಾಗಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಾದ ಬದಲಾವಣೆಗಳನ್ನು ಕುರಿತು ಮಾಹಿತಿ ಸಂಗ್ರಹಿಸುವುದು.

3 ಕೃಷಿ, ಕೈಗಾರಿಕೆ ಮತ್ತು ಮೂಲ ಸೌಕರ್ಯಗಳಲ್ಲಿ ಆದ ಬೆಳವಣಿಗೆಯನ್ನು ಮೆಚ್ಚುವುದು.

©KTBS NOT TO BE REPUBLISHED

## ಸಮೂಹ ಮಾಧ್ಯಮಗಳು

ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುದ್ದಿ ಅಥವಾ ವಿಷಯವನ್ನು ತಲುಪಿಸುವ ವಿಧಾನವನ್ನು ಸಂಪರ್ಕ ವ್ಯವಸ್ಥೆ ಎಂದು ಕರೆಯಲಾಗಿದೆ. ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಬಗೆಯ ಸಂಪರ್ಕ ಮಾಧ್ಯಮಗಳನ್ನು ನಮ್ಮ ಹಿರಿಯರು ಬಳಸುತ್ತಿದ್ದರು. ಉದಾಹರಣೆಗೆ ಪ್ರಾಚೀನ ಕಾಲದಲ್ಲಿ ಪಾರಿವಾಳ, ಒಂಟೆ ಮುಂತಾದವುಗಳನ್ನು ಸಂಪರ್ಕ ಮಾಧ್ಯಮವನ್ನಾಗಿಯೂ ಬಳಸಲಾಗುತ್ತಿತ್ತು.

ಆಧುನಿಕ ಕಾಲಕ್ಕೆ ಬಂದಾಗ ಸಂಪರ್ಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಉಂಟಾದವು. ಈ ಕ್ರಾಂತಿಯು ಪಾಶ್ಚಿಮಾತ್ಯ ದೇಶಗಳಿಂದ ಭಾರತಕ್ಕೆ ಬಳುವಳಿಯಾಗಿ ಬಂತು. ಅಂಚೆ ಮತ್ತು ತಂತಿ ವ್ಯವಸ್ಥೆ 20ನೇ ಶತಮಾನದ ಕೊನೆಯವರೆಗೂ ಬಹುವಾಗಿ ಬಳಕೆಯಾಗುತ್ತಿದ್ದ ಸಂಪರ್ಕ ಮಾಧ್ಯಮವಾಗಿತ್ತು. ಇಂದು ರೇಡಿಯೋ, ದೂರದರ್ಶನ, ಮೊಬೈಲ್, ಅಂತರ್ಜಾಲ ಮುಂತಾದ ಸಂಪರ್ಕ ಮಾಧ್ಯಮಗಳು ಬಹುತೇಕ ಎಲ್ಲಾ

ಸಮುದಾಯಗಳನ್ನು ತಲುಪಿವೆ. ಇವುಗಳನ್ನು ಬಿಟ್ಟು ಜನರು ಬದುಕುವುದನ್ನು ಊಹಿಸಿಕೊಳ್ಳುವುದು ಕಷ್ಟ.

ಸಮೂಹ ಮಾಧ್ಯಮಗಳನ್ನು ಪ್ರಮುಖವಾಗಿ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

- ಮುದ್ರಣ ಮಾಧ್ಯಮ
- ವಿದ್ಯುನ್ಮಾನ ಮಾಧ್ಯಮ
- ಮನರಂಜನಾ ಮಾಧ್ಯಮ

## 1 ಮುದ್ರಣ ಮಾಧ್ಯಮ

ಇಂದು ಮುದ್ರಣ ಮಾಧ್ಯಮದಲ್ಲಿ ಇಂಗ್ಲಿಷ್ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಅಸಂಖ್ಯಾತ ಪತ್ರಿಕೆಗಳು ಪ್ರಕಟವಾಗುತ್ತಿವೆ. ದಿನಪತ್ರಿಕೆಗಳು ಅಂದಂದಿನ ಚರಿತ್ರೆಯ ದಾಖಲೆಗಳೆಂದು ಪರಿಗಣಿಸಲಾಗಿದೆ. ಈ ಪತ್ರಿಕೆಗಳು ನಗರ, ಹಳ್ಳಿ ಎನ್ನುವ ಭೇದವಿಲ್ಲದೆ ಎಲ್ಲರನ್ನು ತಲುಪುವ ಅತ್ಯಂತ ಶಕ್ತಿಶಾಲಿ ಮಾಧ್ಯಮವಾಗಿವೆ.

**ಚಟುವಟಿಕೆ:** ಕನ್ನಡ/ಇಂಗ್ಲಿಷ್ ದಿನಪತ್ರಿಕೆ ಮತ್ತು ವಾರಪತ್ರಿಕೆಗಳನ್ನು ಪಟ್ಟಿಮಾಡಿರಿ.

ಕನ್ನಡದಲ್ಲಿ ಪ್ರಕಟವಾದ ಮೊಟ್ಟಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'. ಪತ್ರಿಕೆಗಳಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ ಪತ್ರಿಕೆ, ಮಾಸಿಕ ಪತ್ರಿಕೆ, ಅರ್ಧವಾರ್ಷಿಕ, ವಾರ್ಷಿಕ ಪತ್ರಿಕೆಗಳಿವೆ.

## 2 ವಿದ್ಯುನ್ಮಾನ ಮಾಧ್ಯಮ

20ನೇ ಶತಮಾನದ ಕೊನೆಯ ಭಾಗದಲ್ಲಿ ವಿದ್ಯುನ್ಮಾನದ ಕ್ರಾಂತಿ ಪ್ರಾರಂಭವಾಯಿತು. 'ದೂರದರ್ಶನ' ಜನರ ಪ್ರಮುಖ ಆಕರ್ಷಣೆಯಾಯಿತು. ಈ ಮಾಧ್ಯಮವು ಅವಶ್ಯಕ ಮಾಹಿತಿಗಳ ಜೊತೆಗೆ ಬೃಹತ್ ಮನರಂಜನೆಯನ್ನು ಒದಗಿಸುತ್ತದೆ.

ವಿದ್ಯುನ್ಮಾನ ಕ್ಷೇತ್ರದಲ್ಲಿ ತೀವ್ರ ಸ್ಪರ್ಧೆ ಪ್ರಾರಂಭವಾಗಿ ವಿವಿಧ ಖಾಸಗಿ ಸಂಸ್ಥೆಗಳು ನಾಮುಂದು ತಾಮುಂದು ಎಂಬಂತೆ ರೈತರು, ಕಾರ್ಮಿಕರು, ಹೂಡಿಕೆದಾರರು, ವಿವಿಧ ಗ್ರಾಹಕರು, ವಿದ್ಯಾರ್ಥಿಗಳು ಮತ್ತು ಇತರ ವರ್ಗಗಳಿಗೆ ಬೇಕಾದ ವಿಪುಲ ಮಾಹಿತಿಯನ್ನು ಒದಗಿಸುತ್ತಿವೆ. ಇಂದು ಆಡಳಿತ ಯಂತ್ರವು ವಿದ್ಯುನ್ಮಾನಗೊಳ್ಳುತ್ತಿದೆ.

ಜಗತ್ತಿನ ಯಾವ ಮೂಲೆಯಲ್ಲಿ ಏನೇ ಘಟನೆ ಸಂಭವಿಸಿದರೂ ಅದರ ದೃಶ್ಯಾವಳಿಯನ್ನು ಕ್ಷಣ ಮಾತ್ರದಲ್ಲಿ ಕಣ್ಣ ಮುಂದೆ ಸಾದರಪಡಿಸುತ್ತದೆ. ಭೂಕಂಪ, ಪ್ರವಾಹ, ಅಪಘಾತ ಮುಂತಾದವುಗಳ ಬಗ್ಗೆ ಸುದ್ದಿಯನ್ನು ಬಿತ್ತರಿಸುತ್ತದೆ. ಅಲ್ಲದೆ ಹವಾಮಾನ ವೈಪರೀತ್ಯಗಳನ್ನು ಸಕಾಲದಲ್ಲಿ ಜನರಿಗೆ ತಲುಪಿಸುವ ಮೂಲಕ ಆಗುವ ಅನಾಹುತಗಳ ಪ್ರಮಾಣವನ್ನು ಕಡಿಮೆ

@KTBS NOT TO BE REPUBLISHED

ಮಾಡುವಲ್ಲಿ ಸಹಾಯಕವಾಗಿದೆ. ದೂರದರ್ಶನವಲ್ಲದೆ ಇನ್ನಿತರ ಪ್ರಭಾವಿ ವಿದ್ಯುನ್ಮಾನ ಮಾಧ್ಯಮಗಳೆಂದರೆ ರೇಡಿಯೋ, ಮೊಬೈಲ್ ಮತ್ತು ಅಂತರ್ಜಾಲ. ಇವು ಅನೇಕರ ಬದುಕಿನ ಅವಿಭಾಜ್ಯ ಭಾಗಗಳಾಗಿವೆ. ಅಂತರ್ಜಾಲವು ನಗರ ಸಮುದಾಯಗಳಲ್ಲಿ ಹೆಚ್ಚಿಗೆ ಬಳಕೆಯಲ್ಲಿದೆ.

ಮೊಬೈಲ್ ಅಕ್ಷರಸ್ಥ ಮತ್ತು ಅನಕ್ಷರಸ್ಥರಿಬ್ಬರನ್ನೂ ತಲುಪಿರುವ ಪ್ರಭಾವಿ ಮಾಧ್ಯಮವಾಗಿದೆ.ಹಾಗೆಯೇ ರೇಡಿಯೋ ಮಾಧ್ಯಮವು ಇಂದು ಪ್ರಭಾವಿ ಮಾಧ್ಯಮವಾಗಿ ಉಳಿದಿದೆ. ಇದು ಮಾಹಿತಿ ಮತ್ತು ಮನರಂಜನೆ ಎರಡಕ್ಕೂ ಇರುವ ಪ್ರಮುಖ ಶ್ರವಣ ಮಾಧ್ಯಮವಾಗಿದೆ.

ಅಂತರ್ಜಾಲವು ಜಗತ್ತನ್ನು ಹತ್ತಿರ ಮಾಡಿದೆ. ಇದು ಕ್ಷಣ ಮಾತ್ರದಲ್ಲಿ ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸುದ್ದಿಯನ್ನು ಮುಟ್ಟಿಸಲು ಇರುವ ಪ್ರಬಲ ಅಸ್ತ್ರವಾಗಿದೆ. ಇಂದು ರೂಪುಗೊಳ್ಳುತ್ತಿರುವ ಅನೇಕ ಚಳವಳಿಗಳಿಗೆ ಅಂತರ್ಜಾಲದಲ್ಲಿ ಲಭ್ಯವಿರುವ ಫೇಸ್ ಬುಕ್, ಟ್ವಿಟರ್ ಮುಂತಾದವು ಮಾಧ್ಯಮಗಳಾಗಿವೆ. ಹೀಗೆ ವಿದ್ಯುನ್ಮಾನ ಮಾಧ್ಯಮಗಳು ನಮ್ಮ ಸಮಾಜದ ಪರಿವರ್ತನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ.

### 3 ಮನರಂಜನಾ ಮಾಧ್ಯಮ

ಮನರಂಜನೆಯ ಕ್ಷೇತ್ರದಲ್ಲಿ ಸಿನಿಮಾ ಬಹು ದೊಡ್ಡ ಮಾಧ್ಯಮವಾಗಿದೆ. ಇದರೊಂದಿಗೆ ಇರುವ ಮತ್ತೊಂದು ಮಾಧ್ಯಮವೆಂದರೆ ನಾಟಕ ಪ್ರದರ್ಶನ.

ಸಿನಿಮಾ ದೃಶ್ಯ ಮಾಧ್ಯಮವಾದ್ದರಿಂದ ಎಲ್ಲಾ ವರ್ಗದ ಜನರನ್ನು ಆಕರ್ಷಿಸುತ್ತಿರುವ ಅತ್ಯಂತ ಶಕ್ತಿಶಾಲಿ ಮಾಧ್ಯಮವಾಗಿದೆ. ಸಿನಿಮಾಗಳಲ್ಲಿ ಪ್ರಧಾನವಾಗಿ ವಾಣಿಜ್ಯ ಸಿನಿಮಾಗಳನ್ನು ಕಾಣುತ್ತೇವೆ. ಇದರೊಂದಿಗೆ ಪರ್ಯಾಯ ಸಿನಿಮಾಗಳು ಎಂದರೆ ಪ್ರಾಯೋಗಿಕ ಸಿನಿಮಾಗಳು ಇವೆ. ಪರ್ಯಾಯ ಸಿನಿಮಾಗಳು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನಾ ದೃಷ್ಟಿಕೋನವನ್ನು ಹೊಂದಿರುತ್ತವೆ ಮತ್ತು ಸಾಮಾಜಿಕ ಮೂಢನಂಬಿಕೆಗಳನ್ನು ತೊಡೆದು ಹಾಕಲು ಪ್ರಯತ್ನಿಸುತ್ತವೆ. ಹೆಚ್ಚು ಜನರು ಅವುಗಳನ್ನು ನೋಡಬೇಕಾಗಿದೆ.

ಸಂಪರ್ಕ ಮಾಧ್ಯಮವು ಇಂದು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಇದು ದೇಶದ ಏಕತೆ, ಒಗ್ಗಟ್ಟು ಹಾಗೂ ಅಖಂಡತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ. ಹಾಗೆಯೇ ವ್ಯಾಪಾರ ಮತ್ತು ವಾಣಿಜ್ಯ ಮೊದಲಾದ ಕ್ಷೇತ್ರಗಳಲ್ಲಿನ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಹಿರಿದಾಗಿದೆ. ಬೃಹತ್ ಕಂಪನಿಗಳು ಇವುಗಳ ಏಕಸ್ವಾಮ್ಯಕ್ಕೆ ಪೈಪೋಟಿ ನಡೆಸುತ್ತಿವೆ.

@KTBS NOT TO BE REPUBLISHED

# ಮಾಹಿತಿ ತಂತ್ರಜ್ಞಾನ ಕ್ರಾಂತಿ

## ಮಾಹಿತಿ ತಂತ್ರಜ್ಞಾನ ಕ್ರಾಂತಿ

ಪ್ರಸ್ತುತ ಸಂದರ್ಭವನ್ನು 'ಮಾಹಿತಿ ಯುಗ' ಎಂದು ಕರೆಯುತ್ತಾರೆ. ತಂತ್ರಜ್ಞಾನದ ನೆರವಿನಿಂದ ಮಾಹಿತಿಯ ಸೃಷ್ಟಿ ಮತ್ತು ಪ್ರಸರಣದ ಪ್ರಕ್ರಿಯೆಯನ್ನು ಮಾಹಿತಿ ತಂತ್ರಜ್ಞಾನ ಎಂದು ವ್ಯಾಖ್ಯಾನಿಸಲಾಗಿದೆ.

ಗಣಕಯಂತ್ರ ತಂತ್ರಾಂಶ ಮತ್ತು ತಂತಿ ಸಂವಹನಗಳ ಸಂಯೋಜನೆ 1990ರ ದಶಕದಲ್ಲಿ ದೊಡ್ಡ ಕ್ರಾಂತಿಯನ್ನು ಸೃಷ್ಟಿಸಿತು. ಮಾಹಿತಿ ಎನ್ನುವುದು ಒಂದು ಉತ್ಪಾದಿತ ವಸ್ತುವಾಗಿ ಪರಿಗಣಿತವಾಯಿತು. ತಂತ್ರಾಂಶದ ಉತ್ಪಾದನೆಯಲ್ಲಿ ಬೆಂಗಳೂರಿನ ದೈತ್ಯ ಕಂಪನಿಗಳಾದ ಇನ್ಫೋಸಿಸ್ ಮತ್ತು ವಿಪ್ರೋಗಳ ಕೊಡುಗೆ ಅಪಾರವಾದುದು. ಬೆಂಗಳೂರನ್ನು ಸೈಬರ್ ಅಥವಾ ಸಿಲಿಕಾನ್ ನಗರವೆಂದು ಕರೆಯುವರು.

ಕರ್ನಾಟಕ ಸರಕಾರವು 1997ರಲ್ಲಿ ಮಾಹಿತಿ ತಂತ್ರಜ್ಞಾನ ಕುರಿತ ಹೊಸ ಯೋಜನೆಯನ್ನು ಸಿದ್ಧಪಡಿಸಿತು. ಹೊಸ ಕಾಯ್ದೆಯನ್ನು ಜಾರಿಗೊಳಿಸಿತು. ಮಾಹಿತಿ ತಂತ್ರಜ್ಞಾನದ ಬಳಕೆಯಿಂದ ಕೈಗಾರಿಕೆ, ವ್ಯವಸಾಯ, ವ್ಯಾಪಾರ, ವಾಣಿಜ್ಯ, ಶಿಕ್ಷಣ, ಆರೋಗ್ಯ, ಕನ್ನಡ ಭಾಷೆಯ ಬೆಳವಣಿಗೆ, ಆಡಳಿತ ಮುಂತಾದ ಕ್ಷೇತ್ರಗಳಿಗೆ ಹೊಸ ರೂಪವನ್ನು ಕೊಡುವ ಪ್ರಯತ್ನವನ್ನು ಮಾಡಲಾಯಿತು. ಈ ಕ್ರಾಂತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದ ಉದ್ಯೋಗ ಸೃಷ್ಟಿಯಾಯಿತು. ಅಂತರ್ಜಾಲವು ಈ ಕ್ಷೇತ್ರದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.


ಐಟಿ ಪಾರ್ಕ್, ಬೆಂಗಳೂರು

ಮತ್ತೊಂದು ಮುಖ್ಯ ಬೆಳವಣಿಗೆಯೆಂದರೆ ಭಾರತ ಸರಕಾರ ಮತ್ತು ಕರ್ನಾಟಕ ಸರಕಾರಗಳು ಜಂಟಿಯಾಗಿ 2000ದಲ್ಲಿ ಸೈಬರ್ ಪಾರ್ಕಿನ ಯೋಜನೆಯನ್ನು ಪ್ರಾರಂಭಿಸಿದವು. ಏಳು ಕೇಂದ್ರಗಳಲ್ಲಿ ಯುವಡಾಟ್‌ಕಾಮ್‌ನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಲಾಯಿತು. ಕನ್ನಡ ಭಾಷೆಯ ಅಭಿವೃದ್ಧಿಗೆ ಸಹಾಯಕವಾಗುವ ತಂತ್ರಾಂಶಕ್ಕೆ ಶಿಷ್ಟ ಸಂಕೇತಗಳನ್ನು ಒದಗಿಸುವ ಕೀಲಿಮಣೆಯನ್ನು (Key Board) ಸೃಷ್ಟಿಸಲಾಯಿತು.

© KTBS NOT TO BE REPUBLISHED

ಮಾಹಿತಿ ತಂತ್ರಜ್ಞಾನದಿಂದ ವಿವಿಧ ವರ್ಗಗಳ ಸಾಮಾಜಿಕ ಸಬಲೀಕರಣದ ಆಶಯವನ್ನು ರೂಪಿಸಲಾಗಿದೆ. ಇಡೀ ಜಗತ್ತು ಮಾಹಿತಿ ತಂತ್ರಜ್ಞಾನವನ್ನು ಅನಿವಾರ್ಯವಾಗಿ ಅವಲಂಬಿಸಲೇ ಬೇಕಾದ ಸಂದರ್ಭವನ್ನು ಇಂದು ನಾವು ಕಾಣುತ್ತಿದ್ದೇವೆ.

**ಚಟುವಟಿಕೆ:** ಕರ್ನಾಟಕದಲ್ಲಿನ ಮಾಹಿತಿ ತಂತ್ರಜ್ಞಾನದ ಪ್ರಮುಖ ಸಂಸ್ಥೆಗಳನ್ನು ಪಟ್ಟಿಮಾಡಿರಿ.

## ಜೈವಿಕ ತಂತ್ರಜ್ಞಾನ ಕ್ರಾಂತಿ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಕ್ಷೇತ್ರದಲ್ಲಾದ ಬದಲಾವಣೆಗಳು 20ನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭವಾದ ಬಹುದೊಡ್ಡ ಕ್ರಾಂತಿಗಳು. ಜೀವವಿಜ್ಞಾನ ಮತ್ತು ಇತರ ಮೂಲ ವಿಜ್ಞಾನಗಳ ಅನ್ವಯಿಕ ರೂಪವನ್ನು ಜೈವಿಕ ತಂತ್ರಜ್ಞಾನವೆಂದು ಹೇಳುವರು. ಸರಳವಾಗಿ ಹೇಳುವುದಾದರೆ ಜೀವಿಗಳ ಗುಣಲಕ್ಷಣಗಳನ್ನು ಬಳಸಿಕೊಂಡು ಉಪಯುಕ್ತ ಉತ್ಪನ್ನಗಳನ್ನು ತಾಂತ್ರಿಕವಾಗಿ ಪಡೆಯುವ ಕ್ರಮವನ್ನು ಜೈವಿಕ ತಂತ್ರಜ್ಞಾನವೆನ್ನುವರು.

© KTBS NOT TO BE REPUBLISHED

ಇತ್ತೀಚಿನ ದಶಕಗಳಲ್ಲಿ ಕರ್ನಾಟಕ ಒಂದು ಪ್ರಮುಖ ಜೈವಿಕ ತಂತ್ರಜ್ಞಾನದ ಕ್ಷೇತ್ರವಾಗಿದೆ. ಹಿಂದಿನಿಂದಲೂ ಜೈವಿಕ ತಂತ್ರಜ್ಞಾನವು ಅನ್ವಯಿಕ ರೂಪದಲ್ಲಿ ಚಾಲ್ತಿಯಲ್ಲಿತ್ತು. ಆದರೆ ಜೈವಿಕ ತಂತ್ರಜ್ಞಾನವು ಒಂದು ವಿಶಿಷ್ಟ ವಿಜ್ಞಾನ ಶಾಖೆಯಾಗಿ ಬೆಳೆದದ್ದು 20ನೇ ಶತಮಾನದಲ್ಲಿ. ಜೈವಿಕ ತಂತ್ರಜ್ಞಾನವು ವಿವಿಧ ಶಾಖೆಗಳಲ್ಲಿ ಮೈದಳೆಯುತ್ತಿದೆ. ಅವುಗಳೆಂದರೆ ತಳಿ ತಂತ್ರಜ್ಞಾನ, ಡಿ.ಎನ್.ಎ., ಬೆರಳಚ್ಚು ತಂತ್ರಜ್ಞಾನ(fingerprint), ಅಂಗಾಂಶ ಕೃಷಿ, ತದ್ರೂಪಿ ಸೃಷ್ಟಿ ಮುಂತಾದವು. 1997ರಲ್ಲಿ ವಿಲ್ಮಟ್ ಎಂಬ ವಿಜ್ಞಾನಿಯು ಪ್ರಪಂಚದ ಮೊಟ್ಟಮೊದಲ ತದ್ರೂಪಿ ಪ್ರಾಣಿ ಕುರಿಯೊಂದನ್ನು (ಡಾಲಿ) ಸೃಷ್ಟಿಸಿದನು. ಅನಂತರ ಅನೇಕ ತದ್ರೂಪಿಗಳು ಸೃಷ್ಟಿಯಾಗಿವೆ.

ಇಂದು ಇಂಧನ ಕೊರತೆ ಒಂದು ಗಂಭೀರ ಸಮಸ್ಯೆಯಾಗಿದೆ. ಗಗನಕ್ಕೇರಿದ ಇಂಧನ ಬೆಲೆಯನ್ನು ಜನರಿಂದ ಭರಿಸಲಾಗುತ್ತಿಲ್ಲ. ಇದಕ್ಕೆ ಪರ್ಯಾಯವಾಗಿ ಜೈವಿಕ ಇಂಧನವನ್ನು ತಯಾರಿಸುವ ಸಂಶೋಧನಾ ಪ್ರಯತ್ನಗಳು ವಿಪುಲವಾಗಿ ನಡೆದಿವೆ.


*ಬಯೋಕಾನ್ ಕಂಪನಿ*

ಕೃಷಿ ವಲಯದಲ್ಲಿ ಜೈವಿಕ ತಂತ್ರಜ್ಞಾನದ ಅಳವಡಿಕೆಯ ಪ್ರಯತ್ನಗಳು ಭರದಿಂದ ನಡೆಯುತ್ತಿವೆ. ಕರ್ನಾಟಕದಲ್ಲಿ ಈ ಎಲ್ಲಾ ಬಗೆಯ ಪ್ರಯತ್ನಗಳು ನಡೆದಿವೆ. ಬೆಂಗಳೂರು

ಮತ್ತು ಧಾರವಾಡದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕುಗಳನ್ನು ಸ್ಥಾಪಿಸಲಾಗಿದೆ. ಹಾಗೆಯೇ ತೀರ ಪ್ರದೇಶಗಳ ಜೈವಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಸಲುವಾಗಿ ಕಾರವಾರದಲ್ಲಿ ಜೈವಿಕ ತಂತ್ರಜ್ಞಾನ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಕೃಷಿ ಜೈವಿಕ ತಾಂತ್ರಿಕ ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಖಾಸಗಿ ಕ್ಷೇತ್ರದಲ್ಲಿ ಬಯೋಕಾನ್‌ನಂತಹ ಬೃಹತ್ ಕಂಪನಿಗಳು ಕಾರ್ಯನಿರತವಾಗಿವೆ. ಈ ಬೆಳವಣಿಗೆಗಳು ನಮ್ಮ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಮೇಲೆ ದೂರಗಾಮಿ ಪರಿಣಾಮಗಳನ್ನು ಉಂಟುಮಾಡುತ್ತಿವೆ.

**ಚಟುವಟಿಕೆ:** ಇಂಧನ ಸಮಸ್ಯೆಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

## ಕರ್ನಾಟಕದಲ್ಲಿ ಕೃಷಿ ಅಭಿವೃದ್ಧಿ

ಭೂಮಿಯೆಂದರೆ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ, ಖನಿಜ, ಅರಣ್ಯ, ಅಣು ಹಾಗೂ ಶಕ್ತಿ ಸಂಪನ್ಮೂಲಗಳ ಸಂಯೋಜನೆ. ಇವುಗಳನ್ನು ಸಮರ್ಥವಾಗಿ ಬಳಸಿಕೊಂಡಾಗ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಭಾರತದ ಬಹುತೇಕ ಕುಟುಂಬಗಳು ತಮ್ಮ ಬದುಕಿನ ಪೋಷಣೆಗಾಗಿ ಕೃಷಿಯನ್ನೇ ಅವಲಂಬಿಸಿವೆ. ಕರ್ನಾಟಕದ ಸ್ಥಿತಿಯೂ ಕೂಡ ಇದಕ್ಕೆ ಹೊರತಾಗಿಲ್ಲ.

ವ್ಯವಸಾಯವು ನಮಗೆ ಬೇಕಾದ ಆಹಾರ ಧಾನ್ಯಗಳನ್ನು ಪೂರೈಸುತ್ತದೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಸರಬರಾಜು ಮಾಡುತ್ತದೆ. ಅದು ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ; ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಲ್ಪಿಸುತ್ತದೆ; ಮತ್ತು ತಲಾ ಆದಾಯ ಹಾಗೂ ರಾಷ್ಟ್ರೀಯ ಆದಾಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಕೃಷಿಯು ರಾಷ್ಟ್ರದ ಆರ್ಥಿಕತೆಯ ಮೂಲ ಜೀವಾಳವಾಗಿದೆ.

ಕರ್ನಾಟಕ ರಾಜ್ಯದ ಒಟ್ಟು ವಿಸ್ತೀರ್ಣವು ಸುಮಾರು 1,90,000 ಚ.ಕಿ.ಮೀ. ಆಗಿದೆ. ಭೂವಿಸ್ತೀರ್ಣದ ದೃಷ್ಟಿಯಿಂದ ಕರ್ನಾಟಕವು ಭಾರತದಲ್ಲಿ ಏಳನೆಯ ದೊಡ್ಡ ರಾಜ್ಯವಾಗಿದೆ.

ಭೂಮಿಯನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತಿದೆ. ಕರ್ನಾಟಕವು ಸುಮಾರು 19 ಮಿಲಿಯನ್ (19,060,620) ಹೆಕ್ಟೇರ್‌ಗಳಷ್ಟು ಭೂಮಿಯನ್ನು ಹೊಂದಿದೆ. ಆದರೆ ಇದರಲ್ಲಿ ಸುಮಾರು 11 ಮಿಲಿಯನ್ ಹೆಕ್ಟೇರು ಪ್ರದೇಶ ಮಾತ್ರ ಸಾಗುವಳಿಗೆ ಯೋಗ್ಯವಾಗಿದೆ. ಸಾಗುವಳಿಗೆ ಬಳಸಲು ಯೋಗ್ಯವಾದ ಪ್ರದೇಶವು ಒಟ್ಟು ಭೂಮಿಯ ಶೇ.58ರಷ್ಟಿದೆ. ಕೃಷಿಯೇತರ ಭೂಮಿ ಶೇ.11 ಮತ್ತು ಅರಣ್ಯ ಪ್ರದೇಶ ಶೇ.19ರಷ್ಟಿದೆ.

@KTBS NOT TO BE REPUBLISHED

**ಚಟುವಟಿಕೆ :** ಕರ್ನಾಟಕದಲ್ಲಿ ಪಾಳುಬಿದ್ದ ಭೂಮಿ ಶೇ.19ರಷ್ಟಿದೆ. ಇದನ್ನು ಸದುಪಯೋಗಪಡಿಸಲು ಕೈಗೊಳ್ಳಬಹುದಾದ ಕ್ರಮಗಳನ್ನು ಚರ್ಚಿಸಿರಿ.

## ಕೃಷಿ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳು

**1 ನೀರಾವರಿ ವ್ಯವಸ್ಥೆ:** ಕರ್ನಾಟಕದ ಕೃಷಿ ಉತ್ಪನ್ನಗಳ ಬೆಳವಣಿಗೆಗಾಗಿ ಅನೇಕ ನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ. ತುಂಗಭದ್ರಾ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ, ಭದ್ರಾ ಯೋಜನೆ, ಘಟಪ್ರಭಾ ಯೋಜನೆ, ಮಲಪ್ರಭಾ ಯೋಜನೆ, ಹೇಮಾವತಿ, ಹಾರಂಗಿ, ವಾಣಿವಿಲಾಸ, ಕಾರಂಜಾ, ವಾರಾಹಿ, ಬೆಣ್ಣೆತೊರೆ ಮತ್ತು ಹಿಪ್ಪರಗಿ ಮುಂತಾದವು ಪ್ರಮುಖ ಯೋಜನೆಗಳಾಗಿವೆ. ಇರುವ ನೀರನ್ನು ವೈಜ್ಞಾನಿಕವಾಗಿ ಬಳಸಿಕೊಳ್ಳಲು ಮತ್ತಷ್ಟು ಸುಧಾರಣೆಗಳನ್ನು ತರಬೇಕಾಗಿದೆ.

2006ರ ಆರ್ಥಿಕ ಸಮೀಕ್ಷೆಯ ಪ್ರಕಾರ ಕರ್ನಾಟಕವು ಕೃಷಿ ಉತ್ಪಾದನೆಯಲ್ಲಿ 5ನೇ ಸ್ಥಾನವನ್ನು ಪಡೆದಿದೆ.

**2 ಮಣ್ಣಿನ ಸಂರಕ್ಷಣೆಗೆ ಒತ್ತು:** ಗಾಳಿ, ಮಳೆ ಮತ್ತು ಪ್ರವಾಹ ಮೊದಲಾದ ನೈಸರ್ಗಿಕ ಕ್ರಿಯೆಗಳಿಂದ ಮಣ್ಣಿನ ಫಲವತ್ತಾದ ಮೇಲಿನ ಪದರು ಕಳಚಿ ಹೋಗುವುದಕ್ಕೆ 'ಮಣ್ಣಿನ ಸವಕಳಿ' ಎನ್ನುತ್ತಾರೆ. ಅರಣ್ಯ ನಾಶ, ದೋಷಪೂರಿತ ಬೇಸಾಯ ಪದ್ಧತಿ ಮೊದಲಾದ ಕಾರಣಗಳಿಂದಲೂ ಮಣ್ಣಿನ ಸವಕಳಿ ಉಂಟಾಗುತ್ತದೆ. ಕರ್ನಾಟಕ ಸರ್ಕಾರವು ರೈತರನ್ನು ಈ ಸಂಕಷ್ಟದಿಂದ ಪಾರುಮಾಡಲು ಹಲವು ಮಾರ್ಗಸೂಚಿಗಳನ್ನು ನೀಡಿದೆ. ಬಾನುಲಿಗಳಲ್ಲಿ ಹಾಗೂ ದೂರದರ್ಶನಗಳಲ್ಲಿ ಬಿತ್ತರಗೊಳ್ಳುವ 'ಕೃಷಿರಂಗ' ಕಾರ್ಯಕ್ರಮಗಳಲ್ಲಿ ರೈತರಿಗೆ ತಿಳಿವಳಿಕೆ ನೀಡುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ.

**ಚಟುವಟಿಕೆ:** ಮಣ್ಣಿನ ಸವಕಳಿಯನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಒಂದು ಕಿರು ಪ್ರಬಂಧ ಸಿದ್ಧಪಡಿಸಿರಿ. ಉದಾ: ಅರಣ್ಯ ಸಂರಕ್ಷಣೆ, ಆಣೆಕಟ್ಟು ಹಾಗೂ ಒಡ್ಡುಗಳ ನಿರ್ಮಾಣ, ಬೆಳೆಗಳ ಪರಿವರ್ತನೆ ಮುಂತಾದವು.

**3 ಸಾವಯವ ಕೃಷಿ ಪದ್ಧತಿಗೆ ಪ್ರೋತ್ಸಾಹ:** ಆಧುನಿಕ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸಿ ಕೃಷಿ ಉತ್ಪನ್ನ ಪ್ರಮಾಣ ಹೆಚ್ಚಿಸಲಾಗುತ್ತಿದೆ. ರಾಸಾಯನಿಕ ಗೊಬ್ಬರ ಹಾಗೂ ಕೀಟ ನಾಶಕಗಳ ಅತಿಯಾದ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಜನರು ಮನಗಂಡಿದ್ದಾರೆ. ಇತ್ತೀಚೆಗೆ ನಡೆದ ಪರಿಸರ ಸಂರಕ್ಷಣ ಚಳವಳಿಗಳು ಸರ್ಕಾರದ ಕಣ್ಣು ತೆರೆಸುವ ಪ್ರಯತ್ನಗಳಾಗಿವೆ. ಸಾವಯವ ಗೊಬ್ಬರಗಳ ಬಳಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಸರ್ಕಾರ ಕ್ರಮಕೈಗೊಂಡಿದೆ.

© KTBS NOT TO BE REPUBLISHED




ಸಾವಯವ ಕೃಷಿ ಪದ್ಧತಿಯ ಹೊಲ

2001ರಲ್ಲಿ ಕರ್ನಾಟಕದಲ್ಲಿ ಕೃಷಿಯನ್ನು ಅವಲಂಬಿಸಿದವರ ಸಂಖ್ಯೆ ಶೇ.55.89.

**ಚಟುವಟಿಕೆ :** ವೈಜ್ಞಾನಿಕ ಬೇಸಾಯ ಪದ್ಧತಿಯೊಂದಿಗೆ ದೇಶೀಯ ಸಾಂಪ್ರದಾಯಿಕ ಬೇಸಾಯ ಪದ್ಧತಿಯನ್ನು ಹೋಲಿಸಿರಿ. ಉತ್ತಮ ಅಂಶಗಳನ್ನು ಪಟ್ಟಿಮಾಡಿರಿ. ಕರ್ನಾಟಕದ ಪ್ರಗತಿಪರ ರೈತರೆನಿಸಿಕೊಂಡಿದ್ದ ಶ್ರೀ ಪ್ರಫುಲ್ಲಚಂದ್ರರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರಿ.

@KTBS NOT TO BE REPUBLISHED

## ಕೈಗಾರಿಕಾ ಅಭಿವೃದ್ಧಿ

ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರ ಹಿರಿದಾದುದು. ಕೈಗಾರಿಕೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಣ್ಣ ಕೈಗಾರಿಕೆಗಳು, ಮಧ್ಯಮ ಕೈಗಾರಿಕೆಗಳು ಮತ್ತು ಬೃಹತ್ ಕೈಗಾರಿಕೆಗಳು. ವಿವಿಧ ಉದ್ಯಮಗಳು ಮತ್ತು ಕೈಗಾರಿಕೆಗಳನ್ನು ಸ್ಥಾಪಿಸುವುದು ಹಾಗೂ ಅವುಗಳಿಗೆ ಸಂಬಂಧಿಸಿದ ಸಾರಿಗೆ, ಸಂಪರ್ಕ ಮೊದಲಾದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ 'ಕೈಗಾರಿಕೀಕರಣ' ಎನ್ನುತ್ತೇವೆ. ಇದೊಂದು ನಿರಂತರ ಪ್ರಕ್ರಿಯೆ. ಹೊಸ ಹೊಸ ಉದ್ದಿಮೆಗಳು ಮತ್ತು ಕೈಗಾರಿಕೆಗಳನ್ನು ಸ್ಥಾಪಿಸುತ್ತಾ ಹೋದಂತೆ ಅವುಗಳಿಗೆ ಬೇಕಾದ ಮೂಲಭೂತ ವ್ಯವಸ್ಥೆಗಳನ್ನು (ಉದಾ: ವಿದ್ಯುತ್ ಸ್ಥಾವರಗಳ ಸ್ಥಾಪನೆ, ಸಾರಿಗೆ, ಸಂಪರ್ಕ) ಅಭಿವೃದ್ಧಿಪಡಿಸಲೇಬೇಕಾಗುತ್ತದೆ. ಕರ್ನಾಟಕವು ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಆದರೆ ತೀವ್ರವಾದ ವಿದ್ಯುಚ್ಛಕ್ತಿ ಬೇಡಿಕೆಯನ್ನು ಪೂರೈಸುವಲ್ಲಿ ಅದು ಇನ್ನೂ ಹಿಂದಿದೆ.

ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಬಹುಬಗೆಯ ಉದ್ದಿಮೆಗಳನ್ನು ಸ್ಥಾಪಿಸಲಾಗಿದೆ. ಕರ್ನಾಟಕದ ಪ್ರಮುಖ ಕೈಗಾರಿಕೆಗಳೆಂದರೆ:

- ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
- ಹತ್ತಿಬಟ್ಟೆ ಕೈಗಾರಿಕೆ
- ಸಕ್ಕರೆ ಕೈಗಾರಿಕೆ
- ವಿದ್ಯುನ್ಮಾನ ಕೈಗಾರಿಕೆ
- ಅಲ್ಯೂಮಿನಿಯಂ ಕೈಗಾರಿಕೆ
- ರೇಷ್ಮೆ ಕೈಗಾರಿಕೆ
- ಕಾಗದ ಕೈಗಾರಿಕೆ
- ಸಿಮೆಂಟ್ ಕೈಗಾರಿಕೆ ಇತ್ಯಾದಿಗಳು

ಈ ಉದ್ಯಮಗಳು ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಿದ್ದಲ್ಲದೆ ವಿದೇಶಿ ವಿನಿಮಯವನ್ನು ಪಡೆಯುವಲ್ಲಿಯೂ ನೆರವಾಗಿವೆ. ಆದರೂ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳ ಬೆಳವಣಿಗೆಗಳಲ್ಲಿ ಸಮನ್ವಯತೆ ಮತ್ತು ಸಮತೋಲನಗಳನ್ನು ಕಾಪಾಡಿಕೊಳ್ಳುವ ಅವಶ್ಯಕತೆಯಿದೆ.

## ಗೃಹ ಮತ್ತು ಸಣ್ಣ ಕೈಗಾರಿಕೆಗಳ ಮಹತ್ವ

ಗೃಹ ಮತ್ತು ಸಣ್ಣ ಕೈಗಾರಿಕೆಗಳು ಕರ್ನಾಟಕದ ಆರ್ಥಿಕ ವ್ಯವಸ್ಥೆಯ ಜೀವಾಳ. ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಈ ಕೈಗಾರಿಕೆಗಳೇ ಆಧಾರ ಸ್ತಂಭಗಳು. ಮಹಾತ್ಮ ಗಾಂಧೀಜಿಯವರ ಹೇಳಿಕೆಯ ಪ್ರಕಾರ "ಗೃಹಕೈಗಾರಿಕೆಗಳೇ ದೇಶವನ್ನು ಪ್ರಗತಿ ಪಥದತ್ತ ಕೊಂಡ್ಯೊಯುವ ದೀವಟಿಕೆಗಳು". ಕರ್ನಾಟಕ ಸರ್ಕಾರವು ಗೃಹ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹಿಸಲು ವಿವಿಧ ರೀತಿಯ ಸಹಾಯಹಸ್ತ ನೀಡುತ್ತಿದೆ. ಇದಕ್ಕಾಗಿ ಅನೇಕ ನಿಗಮಗಳನ್ನು ಸ್ಥಾಪಿಸಿದೆ. ಉದಾ: ತೆಂಗಿನನಾರು ಅಭಿವೃದ್ಧಿ ನಿಗಮ, ಗೇರುಬೀಜ ಅಭಿವೃದ್ಧಿ ನಿಗಮ, ಮುಂತಾದವು.

**ಚಟುವಟಿಕೆ:** ಗೃಹ ಕೈಗಾರಿಕೆಗಳನ್ನು ಬಲಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿರಿ.

## ಕೈಗಾರಿಕಾ ನೀತಿ

ಸಾರ್ವಜನಿಕ ಹಾಗೂ ಖಾಸಗಿ ರಂಗಗಳಲ್ಲಿ ಕೈಗಾರಿಕೆಗಳ ಸ್ಥಾಪನೆ, ಬಂಡವಾಳ ಹೂಡುವಿಕೆ, ಕೈಗಾರಿಕೆಗಳಿಗೆ ವಿದೇಶಿ ನೆರವು ನೀಡಿಕೆ, ಕೈಗಾರಿಕಾ ತೆರಿಗೆ, ಕಾರ್ಮಿಕರ ಬಳಕೆ, ಅವರ ರಕ್ಷಣೆ ಇತ್ಯಾದಿ ಅಂಶಗಳೆಲ್ಲವೂ ಕೈಗಾರಿಕಾ ನೀತಿಯ ವ್ಯಾಪ್ತಿಗೆ ಒಳಪಡುತ್ತವೆ. 1948ರಲ್ಲಿ ಕೇಂದ್ರ ಸರ್ಕಾರ ರೂಪಿಸಿದ ನೀತಿಯ ಹಿನ್ನೆಲೆಯಲ್ಲಿ ಕರ್ನಾಟಕದ ಕೈಗಾರಿಕಾ ನೀತಿಗಳು ರೂಪುಗೊಂಡಿವೆ. ರಾಜ್ಯದ ಕೈಗಾರಿಕಾ ನೀತಿಯು ತನ್ನಲ್ಲಿ ದೊರೆಯುವ ಸಂಪನ್ಮೂಲಗಳನ್ನು ಆಧರಿಸಿ ರೂಪುಗೊಂಡಿದೆ. 1956, 1977 ಮತ್ತು 1980ರಲ್ಲಿ ಪ್ರಮುಖ ಕೈಗಾರಿಕಾ ನೀತಿಗಳನ್ನು ಕೇಂದ್ರ ಸರಕಾರಗಳು ಜಾರಿಗೊಳಿಸಿದವು.

**ಚಟುವಟಿಕೆ:** ನಿಮ್ಮ ಊರಿಗೆ ಸಮೀಪದಲ್ಲಿರುವ ಕೈಗಾರಿಕಾ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ಗಮನಿಸಿರಿ.

ಕರ್ನಾಟಕ ಸರ್ಕಾರವು 1996ರಲ್ಲಿ ತನ್ನದೇ ಆದ ಕೈಗಾರಿಕಾ ನೀತಿಯನ್ನು ರೂಪಿಸಿತು. ಇದರಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಕ್ರಿಯಾತ್ಮಕ ಸಹಭಾಗಿತ್ವಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

© KTBS NOT TO BE REPUBLISHED

ಕೈಗಾರಿಕಾ ಉದ್ಯಾನ (ಇಂಡಸ್ಟ್ರಿಯಲ್ ಪಾರ್ಕ್), ವಿಮಾನ ನಿಲ್ದಾಣ ಇತ್ಯಾದಿ ಮೂಲಸೌಕರ್ಯಗಳ ಸೃಷ್ಟಿಯ ಬಗ್ಗೆ ಅಂದಾಜು ಮಾಡಿ ಯೋಜನೆಯನ್ನು ರೂಪಿಸಲು ಸರ್ಕಾರವು ಕ್ರಮಕೈಗೊಂಡಿದೆ. ನಂತರ 2001ರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿ ಮಾರುಕಟ್ಟೆಗಳ ಬೆಳವಣಿಗೆಗೆ ಉತ್ತೇಜನ, ತಂತ್ರಜ್ಞಾನ ಕ್ಷೇತ್ರದ ಉದ್ದಿಮೆಗಳ ಉನ್ನತೀಕರಣ, ಕೃಷಿ ತೋಟಗಾರಿಕೆ, ಪಶುಸಂಗೋಪನೆ, ಖನಿಜ ಹಾಗೂ ಮಾನವ ಸಂಪನ್ಮೂಲ ಬೆಳವಣಿಗೆ ಮುಂತಾದ ಕ್ಷೇತ್ರಗಳಿಗೆ ಸರ್ಕಾರವು ಉತ್ತೇಜನ ನೀಡಿತು.

2004-05ರಲ್ಲಿ ಕೈಗಾರಿಕಾ ವಲಯದ ವಾರ್ಷಿಕ ಬೆಳವಣಿಗೆಯ ಪ್ರಮಾಣ ಶೇ. 9.15ರಷ್ಟು.

ಪ್ರಾಕೃತಿಕ ಸೌಂದರ್ಯವನ್ನು ಹಾಳುಗೆಡಹದೆ, ಪರಿಸರ ಮಾಲಿನ್ಯಕ್ಕೆ ಎಡೆಕೊಡದೆ, ನೈಸರ್ಗಿಕ ಸಂಪನ್ಮೂಲಗಳನ್ನು ನಾಶಮಾಡದೆ ಸದ್ಬಳಕೆ ಮಾಡಿಕೊಂಡು ಬೆಳೆಯುವ ಕೈಗಾರಿಕೆಗಳು ಜನಸಮುದಾಯದ ಅಭಿವೃದ್ಧಿಗೆ ಪೂರಕವಾಗುತ್ತವೆ. ಅಂತಹ ಆಶಯಗಳನ್ನು ಬಿಟ್ಟು ಆಗುವ ಎಲ್ಲಾ ಕೈಗಾರಿಕಾ ಬೆಳವಣಿಗೆಗಳು ಅಭಿವೃದ್ಧಿಗೆ ಮಾರಕವಾಗಿರುತ್ತವೆ. ಕೈಗಾರಿಕೆಗಳ ಬೆಳವಣಿಗೆಗಳು ಮನುಷ್ಯನ ಬದುಕಿಗೆ ಮಾರಕವಾಗದೆ ಪೂರಕವಾಗಿರುವಂತೆ ನೋಡಿಕೊಳ್ಳುವುದು ನಮ್ಮ ಸರ್ಕಾರಗಳ ಹಾಗೂ ನಮ್ಮ ಕರ್ತವ್ಯವೂ ಆಗಿದೆ.

©KTBS NOT TO BE REPUBLISHED

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ಸಂಪರ್ಕ ವ್ಯವಸ್ಥೆ ಎಂದರೇನು?
2 ಪ್ರಮುಖವಾದ ಮೂರು ಸಂಪರ್ಕ ಮಾಧ್ಯಮಗಳಾವುವು?
3 ಮಾಹಿತಿ ತಂತ್ರಜ್ಞಾನ ಎಂದರೇನು?
4 ಜೈವಿಕ ತಂತ್ರಜ್ಞಾನ ಎಂದರೇನು?
5 ಜೈವಿಕ ತಂತ್ರಜ್ಞಾನದ ಪಾರ್ಕ್ ಇರುವ ಕರ್ನಾಟಕದ ಜಿಲ್ಲೆಗಳಾವುವು?
6 ಸಾವಯವ ಕೃಷಿ ಪದ್ಧತಿಯ ಮಹತ್ವ ತಿಳಿಸಿ.
7 ಮಣ್ಣಿನ ಸವಕಳಿ ಎಂದರೇನು?



**ಚಟುವಟಿಕೆ**

ಕರ್ನಾಟಕ ಸರ್ಕಾರವು 1996ರಲ್ಲಿ ರೂಪಿಸಿದ ಕೈಗಾರಿಕಾ ನೀತಿಯನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.

# ಅಧ್ಯಾಯ 21

# ನ್ಯಾಯಾಂಗ

N5Y8D6

**ಪಾಠದ ಪರಿಚಯ**

ಈ ಪಾಠವು ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ಕುರಿತಾಗಿದೆ. ಪಾಠದಲ್ಲಿ ಸರ್ವೋಚ್ಚ ನ್ಯಾಯಾಧೀಶರು ಹಾಗೂ ಉಚ್ಚನ್ಯಾಯಾಧೀಶರ ಅರ್ಹತೆ ಮತ್ತು ಕಾರ್ಯಗಳು; ಮತ್ತು ಅಧೀನ ನ್ಯಾಯಾಲಯಗಳು ಹಾಗೂ ಲೋಕ ಅದಾಲತ್‌ಗಳ ಕಾರ್ಯಗಳನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1 ಕಾನೂನು ಮತ್ತು ನ್ಯಾಯಾಂಗಗಳು ರಾಜ್ಯಾಡಳಿತದಲ್ಲಿ ನಿರ್ವಹಿಸುವ ಪಾತ್ರವನ್ನು ಪ್ರಶಂಸಿಸುವುದು.

2 ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗದ ನಿಯಂತ್ರಣಕ್ಕೆ ಒಳಪಡದೆ ಪಕ್ಷಪಾತವಿಲ್ಲದೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅರಿಯುವುದು.

3 ಭಾರತದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು.

4 ಲೋಕ ಅದಾಲತ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುವುದು.

©KTBS NOT TO BE REPUBLISHED

ಕಾನೂನುಗಳಿಗೆ ತಕ್ಕಂತೆ ನ್ಯಾಯನಿರ್ಣಯ ನೀಡುವ ಪ್ರತ್ಯೇಕ ವ್ಯವಸ್ಥೆಯೇ ನ್ಯಾಯಾಂಗ ವ್ಯವಸ್ಥೆ. ಕಾನೂನು ಮತ್ತು ನ್ಯಾಯಾಂಗಗಳೆರಡೂ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬಹುಮುಖ್ಯವಾದ ಪಾತ್ರವಹಿಸುತ್ತವೆ.

- ಒಂದುಗೂಡಿ ವಾಸಿಸುವ ಕಡೆ ಜನರು ಜಗಳಾಡುವುದು ಸಹಜ. ಇಬ್ಬರೊಳಗಿನ ವಿವಾದ ಪರಿಹಾರವಾಗದಿದ್ದರೆ ಮೂರನೆಯನೊಬ್ಬ ಅದನ್ನು ಆಲಿಸಿ, ನಿರ್ಣಯಿಸಬಲ್ಲ.
- ನ್ಯಾಯನಿರ್ಣಯ ಮಾಡುವ ಸಲುವಾಗಿ ಕಾನೂನುಗಳು ರಚನೆಯಾದವು. ವ್ಯಕ್ತಿಯ ಬಾಹ್ಯ ನಡವಳಿಕೆಗಳನ್ನು ನಿಯಂತ್ರಿಸುವ ನಿಯಮಗಳೇ ಕಾನೂನುಗಳಾದವು. ಕಾನೂನುಗಳು ಅಪರಾಧ ಹಾಗೂ ಅಪರಾಧಿಗಳನ್ನು ನಿಯಂತ್ರಿಸುತ್ತವೆ. ಅವು ಸಮಾಜದಲ್ಲಿ ಶಾಂತಿ, ಶಿಸ್ತು ಮತ್ತು ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುತ್ತವೆ; ಜೊತೆಗೆ ನಾಗರಿಕರ ಹಕ್ಕುಗಳಿಗೆ ರಕ್ಷಣೆ ನೀಡುತ್ತವೆ.

**ನ್ಯಾಯಾಲಯಗಳ ಕಾರ್ಯಗಳು:** ನ್ಯಾಯಾಲಯಗಳು ಶಾಸಕಾಂಗವು ರೂಪಿಸಿದ ಕಾಯಿದೆಗಳ ಅರ್ಥವಿವರಣೆ ನೀಡುತ್ತವೆ. ಅವು ವ್ಯಕ್ತಿಗಳ ನಡುವೆ, ಮತ್ತು ವ್ಯಕ್ತಿ ಹಾಗೂ ಸರ್ಕಾರಗಳ ನಡುವೆ ವಿವಾದದಲ್ಲಿ ತೀರ್ಪು ಕೊಡುತ್ತವೆ. ಪ್ರಜೆಗಳ ಪ್ರಾಣ, ಆಸ್ತಿ, ಮರ್ಯಾದೆ ಮತ್ತು ಹಕ್ಕುಗಳನ್ನು ಕಾಯುವ ಬಹುಮುಖ್ಯವಾದ ಕಾರ್ಯವನ್ನು ನ್ಯಾಯಾಲಯಗಳು ಮಾಡುತ್ತವೆ. ನ್ಯಾಯಾಲಯಗಳು ಶಾಸಕಾಂಗ ಇಲ್ಲವೆ ಕಾರ್ಯಾಂಗಗಳ ನಿಯಂತ್ರಣಕ್ಕೆ ಒಳಪಟ್ಟಿಲ್ಲ; ಅವು ಪಕ್ಷಪಾತವಿಲ್ಲದೆ, ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ.

## ಸರ್ವೋಚ್ಚ ನ್ಯಾಯಾಲಯ

ನಮ್ಮ ಸಂವಿಧಾನವು ದೇಶದ ಏಕತೆಯನ್ನು ಕಾಪಾಡುವ ದೃಷ್ಟಿಯಿಂದ, ಇಡಿ ದೇಶಕ್ಕೆ ಅನ್ವಯವಾಗುವ ನ್ಯಾಯಾಂಗ ಪದ್ಧತಿಯನ್ನು ಅಳವಡಿಸಿದೆ. ದೇಶದ ಅತ್ಯುನ್ನತ ನ್ಯಾಯಾಲಯವೇ ಸರ್ವೋಚ್ಚ ನ್ಯಾಯಾಲಯ (ಸುಪ್ರೀಮ್ ಕೋರ್ಟ್). ಇದರಲ್ಲಿ ಮುಖ್ಯ ನ್ಯಾಯಾಧೀಶರು ಹಾಗೂ ಇತರ 25 ನ್ಯಾಯಾಧೀಶರು ಇರುವರು. ಇವರನ್ನು ರಾಷ್ಟ್ರಪತಿ ನೇಮಕ ಮಾಡುತ್ತಾರೆ. ಸರ್ವೋಚ್ಚ ನ್ಯಾಯಾಲಯವು ಹೊಸದಿಲ್ಲಿಯಲ್ಲಿದೆ.



**ಸರ್ವೋಚ್ಚ ನ್ಯಾಯಾಲಯ, ಹೊಸದಿಲ್ಲಿ**

### ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳು

- ಯಾವುದಾದರೂ ಉಚ್ಚನ್ಯಾಯಾಲಯದಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಕಾಲ ನ್ಯಾಯಾಧೀಶರಾಗಿರಬೇಕು; ಅಥವಾ
- ಕನಿಷ್ಠ ಹತ್ತು ವರ್ಷಗಳ ಕಾಲ ಉಚ್ಚನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿರಬೇಕು; ಅಥವಾ
- ರಾಷ್ಟ್ರಪತಿಯವರ ಅಭಿಪ್ರಾಯದಲ್ಲಿ ಪ್ರಸಿದ್ಧ ನ್ಯಾಯಶಾಸ್ತ್ರಜ್ಞ ಆಗಿರಬೇಕು. ನ್ಯಾಯಾಧೀಶರ ನಿವೃತ್ತಿಯ ವಯೋಮಿತಿ 65 ವರ್ಷ.

### ಸರ್ವೋಚ್ಚ ನ್ಯಾಯಾಲಯದ ಕಾರ್ಯಗಳು

- ಕೇಂದ್ರ ಮತ್ತು ರಾಜ್ಯ ಹಾಗೂ ರಾಜ್ಯಗಳೊಳಗಿನ ವಿವಾದಗಳನ್ನು ಬಗೆಹರಿಸುವುದು.
- ಪ್ರಜೆಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ವಿವಿಧ ರಿಟ್ ಆಜ್ಞೆಗಳನ್ನು ಹೊರಡಿಸುವುದು.
- ಸಂವಿಧಾನದ ಅರ್ಥವಿವರಣೆ ನೀಡುವುದು.
- ರಾಷ್ಟ್ರಪತಿಯವರು ಸರ್ವೋಚ್ಚ ನ್ಯಾಯಾಲಯದ ಸಲಹೆ, ಅಭಿಪ್ರಾಯಗಳನ್ನು ಕೇಳಿದಾಗ ಅವನ್ನು ನೀಡುವುದು.
- ಅಗತ್ಯವಾದ ನಿಯಮಾವಳಿಗಳನ್ನು ರಚಿಸುವುದು.

## ಉಚ್ಚ ನ್ಯಾಯಾಲಯಗಳು

ರಾಜ್ಯಮಟ್ಟದಲ್ಲಿರುವ ಅತ್ಯುನ್ನತ ನ್ಯಾಯಾಲಯವೇ ಉಚ್ಚ ನ್ಯಾಯಾಲಯವಾಗಿದೆ. ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯವು (ಹೈಕೋರ್ಟ್) ಬೆಂಗಳೂರು ಮಹಾನಗರದಲ್ಲಿದೆ. ಉಚ್ಚ ನ್ಯಾಯಾಲಯವು ಮುಖ್ಯ ನ್ಯಾಯಾಧೀಶರು ಮತ್ತು ಇತರ ನ್ಯಾಯಾಧೀಶರನ್ನು ಒಳಗೊಂಡಿರುವುದು. ದೇಶದಲ್ಲಿ ಒಟ್ಟು 25 ಉಚ್ಚ ನ್ಯಾಯಾಲಯಗಳಿವೆ.



**ಕರ್ನಾಟಕದ ಉಚ್ಚ ನ್ಯಾಯಾಲಯ, ಬೆಂಗಳೂರು**

### ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳು

♦ ಭಾರತದ ಪ್ರಜೆಯಾಗಿರಬೇಕು. ♦ ಕನಿಷ್ಠ ಹತ್ತು ವರ್ಷಗಳ ಕಾಲ ಭಾರತದ ನ್ಯಾಯಾಂಗದಲ್ಲಿ ಸೇವೆ ಸಲ್ಲಿಸಿರಬೇಕು; ಅಥವಾ ಹತ್ತು ವರ್ಷಗಳ ಕಾಲ ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿರಬೇಕು.

ರಾಷ್ಟ್ರಪತಿಯವರು ಒಂದು ರಾಜ್ಯದ ಮುಖ್ಯ ನ್ಯಾಯಾಧೀಶರನ್ನು ನೇಮಕ ಮಾಡುವಾಗ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ರಾಜ್ಯಪಾಲರೊಡನೆ ಸಮಾಲೋಚಿಸಿ ನೇಮಕ ಮಾಡುವರು. ♦ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿಯ ವಯೋಮಿತಿ 62 ವರ್ಷ. ಉಚ್ಚ ನ್ಯಾಯಾಲಯದಲ್ಲಿ ಇಂಗ್ಲಿಷ್ ಅಥವಾ ಸ್ಥಳೀಯ ಭಾಷೆಗಳನ್ನು ಬಳಸಬಹುದು.

### ಉಚ್ಚ ನ್ಯಾಯಾಲಯದ ಕಾರ್ಯಗಳು

♦ ಪೌರರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ವಿವಿಧ ರಿಟ್ ಆಜ್ಞೆಗಳನ್ನು ಹೊರಡಿಸುವುದು. ♦ ಅಧೀನ ನ್ಯಾಯಾಲಯಗಳ ಕಾರ್ಯದ ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳ ಕಾರ್ಯನಿರ್ವಹಣೆ.

© NOT TO BE REPUBLISHED

**ವಿವಿಧ ಮಟ್ಟದಲ್ಲಿರುವ ನ್ಯಾಯಾಲಯಗಳು**

ಸರ್ವೋಚ್ಚ ನ್ಯಾಯಾಲಯ ..... ರಾಷ್ಟ್ರಮಟ್ಟದಲ್ಲಿ (ಹೊಸದಿಲ್ಲಿ)

ಉಚ್ಚ ನ್ಯಾಯಾಲಯಗಳು ..... ರಾಜ್ಯ ಮಟ್ಟದಲ್ಲಿ

ಅಧೀನ ನ್ಯಾಯಾಲಯಗಳು ..... ಜಿಲ್ಲಾ ನ್ಯಾಯಾಲಯ, ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಕಿರಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಲೋಕ ಅದಾಲತ್‌ಗಳು

## ಅಧೀನ ನ್ಯಾಯಾಲಯಗಳು

ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲದೆ, ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಅನೇಕ ಅಧೀನ ನ್ಯಾಯಾಲಯಗಳಿವೆ. ಸರ್ವೋಚ್ಚ ನ್ಯಾಯಾಲಯದ ಅಧೀನದಲ್ಲಿ ಉಚ್ಚ ನ್ಯಾಯಾಲಯಗಳಿವೆ. ಅದೇ ರೀತಿ ಉಚ್ಚ ನ್ಯಾಯಾಲಯದ ಅಧೀನದಲ್ಲಿ ಜಿಲ್ಲಾ, ತಾಲೂಕು ಮತ್ತು ನಗರ ನ್ಯಾಯಾಲಯಗಳಿವೆ.

ಅಧೀನ ನ್ಯಾಯಾಲಯಗಳು ಎರಡು ವಿಧ – ನಾಗರಿಕ ವ್ಯವಹಾರ ನ್ಯಾಯಾಲಯ (ಸಿವಿಲ್) ಮತ್ತು ದಂಡ ನ್ಯಾಯಾಲಯ (ಕ್ರಿಮಿನಲ್). ಸಿವಿಲ್ ನ್ಯಾಯಾಲಯವು ಹಣ, ಆಸ್ತಿ, ವ್ಯವಹಾರ ಮತ್ತು ಒಪ್ಪಂದಗಳಿಗೆ ಸಂಬಂಧಿಸಿದ ವಿವಾದಗಳ ಬಗ್ಗೆ ವಿಚಾರಣೆ ನಡೆಸಿ ತೀರ್ಪು ನೀಡುತ್ತದೆ. ಕ್ರಿಮಿನಲ್ ನ್ಯಾಯಾಲಯವು ಕೊಲೆ, ಕಳ್ಳತನ, ದರೋಡೆ ಮೊದಲಾದ ವಿವಾದಗಳ ಬಗ್ಗೆ ವಿಚಾರಣೆ ನಡೆಸಿ ತೀರ್ಪುನೀಡುತ್ತದೆ.

ಕೆಲವು ಸಂದರ್ಭಗಳಲ್ಲಿ ಅಧೀನ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು (ಮೇಲ್ಮನವಿ) ಸಲ್ಲಿಸಬಹುದು ; ಹಾಗೆಯೇ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವ ಅವಕಾಶವಿದೆ.

## ಲೋಕ ಅದಾಲತ್ (ಜನತಾ ನ್ಯಾಯಾಲಯ)

ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಮತ್ತು ಹೊಂದಾಣಿಕೆ ಮುಖಾಂತರ ವ್ಯಾಜ್ಯಗಳನ್ನು ತೀರ್ಮಾನ ಮಾಡುವುದಕ್ಕೆ ಸರ್ಕಾರ ಬೇರೆ ಬೇರೆ ವ್ಯವಸ್ಥೆಗಳನ್ನು ರೂಪಿಸಿದೆ. ಇಂತಹ ಒಂದು ವ್ಯವಸ್ಥೆಯೇ ಲೋಕ ಅದಾಲತ್ (ಜನತಾ ನ್ಯಾಯಾಲಯ).

ಲೋಕ ಅದಾಲತ್‌ಗಳನ್ನು ರಾಜ್ಯ ಅಥವಾ ಜಿಲ್ಲಾಮಟ್ಟದ ಅಧಿಕಾರಿಗಳು ಅನುಕೂಲಕರವಾದ ಸ್ಥಳಗಳಲ್ಲಿ ಆಗಾಗ ವ್ಯವಸ್ಥೆ ಮಾಡುತ್ತಾರೆ. ಎರಡೂ ಪಕ್ಷದವರು ಪರಸ್ಪರ ಒಪ್ಪಿಗೆಯಿಂದ ರಾಜಿ ಮಾಡಿಕೊಳ್ಳಲು ಇಚ್ಛಿಸಿದರೆ ಅಂತಹ ಮೊಕದ್ದಮೆಯನ್ನು ಲೋಕ ಅದಾಲತ್ ಎತ್ತಿಕೊಳ್ಳುತ್ತದೆ. ಅದರ ತೀರ್ಪು ನ್ಯಾಯಾಲಯದ ತೀರ್ಪಿಗೆ ಸಮಾನ ಎಂದೇ ಪರಿಗಣಿಸಿ

© KTBS NOT TO BE REPUBLISHED

ಜಾರಿಗೊಳಿಸಬಹುದಾಗಿದೆ. ಲೋಕ ಅದಾಲತ್ತಿನ ತೀರ್ಪು ಅಂತಿಮವಾಗಿದ್ದು, ಇದಕ್ಕೆ ಎರಡೂ ಪಕ್ಷದವರು ಬದ್ಧರಾಗಿರುತ್ತಾರೆ. ಹೀಗಾಗಿ ಮುಂದಿನ ಖರ್ಚು, ನಷ್ಟ ಹಾಗೂ ವಿಳಂಬ ತಪ್ಪುತ್ತದೆ. ತೀರ್ಪಿನ ವಿರುದ್ಧ ಯಾವ ನ್ಯಾಯಾಲಯಕ್ಕೂ ಮೇಲ್ಮನವಿ ಮಾಡುವಂತಿಲ್ಲ. ಒಂದು ವೇಳೆ ಜೀವ ಬೆದರಿಕೆ ಹಾಕಿ ಒತ್ತಾಯದಿಂದ ರಾಜಿ ಮಾಡಿಸಿದ್ದರೆ ತಕ್ಷಣವೇ ಪೊಲೀಸರಿಗೆ ದೂರು ಸಲ್ಲಿಸಿ ಮೊಕದ್ದಮೆಯನ್ನು ಹಾಕಬಹುದು.

ಇದುವರೆಗೆ ಲೋಕ ಅದಾಲತ್ತುಗಳು ಅನೇಕ ಪ್ರಕರಣಗಳನ್ನು ಇತ್ಯರ್ಥ ಮಾಡಿವೆ. ಸದ್ಬಳಕೆಯಾದರೆ ಲೋಕ ಅದಾಲತ್ತುಗಳು ತುಂಬಾ ಉಪಯುಕ್ತ ನ್ಯಾಯಾಲಯಗಳಾಗಲು ಸಾಧ್ಯವಿದೆ.

**ಹೊಸ ಪದಗಳು :** ವ್ಯಾಜ್ಯ – ಜಗಳ, ಕಲಹ. ನೋಂದಾಯಿಸಿದ – ದಾಖಲುಮಾಡಿದ.

**ನಿಮಗೆ ತಿಳಿದಿರಲಿ**

1 ರಾಷ್ಟ್ರಪತಿಯವರ ಅಧಿಕಾರಾವಧಿಯಲ್ಲಿ ಅವರನ್ನು ದಸ್ತಗಿರಿ ಮಾಡುವಂತಿಲ್ಲ; ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತಿಲ್ಲ; ಹಾಗೂ ತಮ್ಮ ಅಧಿಕಾರವನ್ನು ಬಳಸಿ ನಿರ್ವಹಿಸಿದ ಯಾವುದೇ ಕಾರ್ಯವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ

2 ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು: ಸರಕಾರದ ಇಲಾಖೆಯೋ ಸಾರ್ವಜನಿಕ ಪ್ರಾಧಿಕಾರವೋ ಕಾನೂನನ್ನು ಅತಿಕ್ರಮಿಸಿದರೆ ಇಲ್ಲವೆ ದಬ್ಬಾಳಿಕೆ, ಅನ್ಯಾಯ ಮತ್ತು ಶೋಷಣೆಯಂತಹ ಕೃತ್ಯಗಳಲ್ಲಿ ತೊಡಗಿದರೆ, ಇದರಿಂದ ನೊಂದ ಯಾರೇ ಆಗಲಿ ನ್ಯಾಯಾಲಯಕ್ಕೆ ನೇರವಾಗಿ ದೂರುಪತ್ರವನ್ನು ಬರೆಯಬಹುದು. ಆ ಪತ್ರವನ್ನೇ ರಿಟ್ ಅರ್ಜಿಯೆಂದು ಪರಿಗಣಿಸಿ, ನ್ಯಾಯಾಲಯದ ಶುಲ್ಕವಿಲ್ಲದೆ, ನ್ಯಾಯಾಲಯವು ದೂರನ್ನು ವಿಚಾರಣೆ ಮಾಡುತ್ತದೆ.

©KTBS NOT TO BE REPUBLISHED

## ಅಭ್ಯಾಸಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ**

1 ನ್ಯಾಯಾಂಗದ ಮುಖ್ಯ ಕಾರ್ಯಗಳೇನು?

2 ರಾಷ್ಟ್ರಮಟ್ಟದಲ್ಲಿಯ ಅತ್ಯುನ್ನತ ನ್ಯಾಯಾಲಯ ಯಾವುದು?

3 ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳೇನು?

4 ಸರ್ವೋಚ್ಚ ನ್ಯಾಯಾಲಯದ ಕಾರ್ಯಗಳೇನು?

5 ನ್ಯಾಯನಿರ್ಣಯದ ವಿಳಂಬವನ್ನು ತಡೆಯುವುದು ಹೇಗೆ?

6 ನ್ಯಾಯಾಲಯಗಳಿಗೆ ಇನ್ನಷ್ಟು ಅಧಿಕಾರ ನೀಡಬೇಕೆ? ಬೇಡವೆ?

## ಚಟುವಟಿಕೆಗಳು

1 ನಿಮ್ಮ ಶಾಲೆಯಲ್ಲಿ 'ಕಾನೂನು ಅರಿವು ನೆರವು' ಕಾರ್ಯಕ್ರಮ ಏರ್ಪಡಿಸಿ.

2 ಸ್ಥಳೀಯ ನ್ಯಾಯವಾದಿಗಳನ್ನು ಶಾಲೆಗೆ ಕರೆಸಿ ಕಾನೂನಿನ ಬಗ್ಗೆ ವಿವರವಾಗಿ ತಿಳಿದುಕೊಳ್ಳಿ.

3 ಶಾಲೆಯಲ್ಲಿ ನ್ಯಾಯಾಲಯದ ಅಣುಕು ದೃಶ್ಯವನ್ನು ಪ್ರದರ್ಶಿಸಿ.

4 ಸಮೀಪದ ನ್ಯಾಯಾಲಯಕ್ಕೆ ಭೇಟಿ ನೀಡಿ ವಾದ–ವಿವಾದವನ್ನು ಆಲಿಸಿ.

5 "ನಾನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾದರೆ...." ಈ ವಿಷಯ ಕುರಿತು ವಿದ್ಯಾರ್ಥಿಗಳು ಒಂದೆರಡು ನಿಮಿಷ ಭಾಷಣ ಮಾಡುವುದು.

@KTBS
NOT TO BE REPUBLISHED

# ಅಧ್ಯಾಯ 22

# ರಕ್ಷಣಾ ಪಡೆಗಳು

X2M7R5

ನಿಮಗೆ ತಿಳಿದಂತೆ, ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಮೇಲೆ ಅನೇಕ ದಾಳಿಗಳು ನಡೆದಿವೆ. ಆದರೆ ಸ್ವಾತಂತ್ರ್ಯದ ನಂತರ ಪರಿಸ್ಥಿತಿ ಬದಲಾಗಿದೆ. ಇದಕ್ಕೆ ಕಾರಣಗಳನ್ನು ತಿಳಿದಿದ್ದಿರಾ?

**ಪಾಠದ ಪರಿಚಯ**

ಈ ಪಾಠದಲ್ಲಿ ನಮ್ಮ ರಕ್ಷಣಾಪಡೆಗಳ ಕಾರ್ಯಗಳು, ವಿಭಾಗಗಳು, ತರಬೇತಿ ಕೇಂದ್ರಗಳು, ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಕೇಂದ್ರ ಕಚೇರಿ ಮುಂತಾದವುಗಳ ಪರಿಚಯವನ್ನು ನೀಡಲಾಗಿದೆ. ಜೊತೆಗೆ ಪೂರಕ ರಕ್ಷಣಾಪಡೆಗಳು, ಸಹಾಯಕ ರಕ್ಷಣಾಪಡೆಗಳು ಮತ್ತು ನಾಗರಿಕ ರಕ್ಷಣಾಪಡೆಗಳ ಬಗೆಗೆ ಈ ಪಾಠದಲ್ಲಿ ನಿರೂಪಣೆಯಿದೆ.

**ಸಾಮರ್ಥ್ಯಗಳು**

1 ನಮ್ಮ ರಕ್ಷಣಾಪಡೆಗಳ ಬಗೆಗೆ ತಿಳಿದುಕೊಳ್ಳುವುದು.
2 ಭೂಸೇನೆ, ನೌಕಾದಳ ಮತ್ತು ವಾಯುಪಡೆಗಳ ಬಗೆಗೆ ಅರ್ಥೈಸಿಕೊಳ್ಳುವುದು.
3 ರಕ್ಷಣಾಪಡೆಗಳ ಸಾಮರ್ಥ್ಯಗಳನ್ನು ಅರಿತುಕೊಳ್ಳುವುದು.
4 ಪೂರಕ ರಕ್ಷಣಾಪಡೆಗಳ ಸೇವೆಯನ್ನು ಅರಿತು ಹೆಮ್ಮೆಪಡುವುದು.
5 ಸಹಾಯಕ ಸೇನಾಪಡೆಗಳ ಸ್ವಯಂಸೇವೆಯನ್ನು ಕುರಿತಾಗಿ ಅಭಿಮಾನಪಡುವುದು.

©KTBS NOT TO BE REPUBLISHED



*ಈ ಚಿತ್ರದಲ್ಲಿ ನೀವು ಏನನ್ನು ಕಾಣುವಿರಿ?*

ದೇಶವನ್ನು ಪರಕೀಯರ ಆಕ್ರಮಣಗಳಿಂದ ರಕ್ಷಿಸುವುದು ರಾಷ್ಟ್ರದ ಪ್ರಥಮ ಕರ್ತವ್ಯ. ಈ ಕಾರ್ಯವನ್ನು ರಕ್ಷಣಾಪಡೆಗಳಿಗೆ ನೀಡಲಾಗಿದೆ. ಆದುದರಿಂದ ರಕ್ಷಣಾಪಡೆಗಳ ಪಾತ್ರ ಮಹತ್ವದ್ದಾಗಿದೆ.

ಭಾರತವು ಶಿಸ್ತು, ಸಾಮರ್ಥ್ಯ ಹೊಂದಿದ ಹಾಗೂ ಪರಾಕ್ರಮಶಾಲಿಯಾದ ರಕ್ಷಣಾಪಡೆಯನ್ನು ಹೊಂದಿರುವುದು ಹೆಮ್ಮೆಯ ವಿಷಯ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಸಮಗ್ರತೆಗೆ ಸವಾಲುಗಳು ಎದುರಾದಾಗ ನಾವು ಅವನ್ನು ಸಮರ್ಥವಾಗಿ ಎದುರಿಸಿದ್ದೇವೆ. (ಚೀನ ಮತ್ತು ಪಾಕಿಸ್ತಾನದ ದಾಳಿಗಳು). ನಮ್ಮ ಸೇನಾಪಡೆಗಳು ತಾಯಿನಾಡಿಗಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧ ಎಂಬುದನ್ನು ಕಾರ್ಗಿಲ್ ಯುದ್ಧದಲ್ಲಿ ಪ್ರದರ್ಶಿಸಿದ್ದೇವೆ.

- ಭಾರತವು 15,200 ಕಿ.ಮೀ. ಭೂಗಡಿ ಪ್ರದೇಶವನ್ನು ಮತ್ತು 7516.5 ಕಿ.ಮೀ. ಜಲಗಡಿ ಪ್ರದೇಶವನ್ನು ಹೊಂದಿದೆ.
- ದೇಶದ ರಕ್ಷಣಾ ವ್ಯವಸ್ಥೆಗೆ ಆಯವ್ಯಯದ ಶೇ.25-30ರಷ್ಟು ಹಣಕಾಸನ್ನು ಮೀಸಲು ಇಡಲಾಗುತ್ತದೆ.

## ರಕ್ಷಣಾಪಡೆಗಳ ಜವಾಬ್ದಾರಿಗಳು

- ದೇಶದ ಗಡಿಪ್ರದೇಶಗಳ ರಕ್ಷಣೆ.
- ದೇಶದ ಸಮಗ್ರತೆಯನ್ನು ಕಾಪಾಡುವುದು.
- ಕಳ್ಳಸಾಗಾಣಿಕೆ ಮತ್ತು ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವುದು.

ಭಾರತದ ರಾಷ್ಟ್ರಪತಿಯವರಿಗೆ ನಮ್ಮ ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ನೀಡಲಾಗಿದೆ. ರಕ್ಷಣಾ ವ್ಯವಸ್ಥೆಯು ಮೂರು ವಿಭಾಗಗಳನ್ನು ಹೊಂದಿದೆ: ಭೂಸೇನೆ, ನೌಕಾದಳ ಮತ್ತು ವಾಯುಪಡೆ. ರಕ್ಷಣಾಪಡೆಗಳು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡು ತಮ್ಮ ಸೇನಾಸಾಮರ್ಥ್ಯವನ್ನು ಪ್ರದರ್ಶಿಸುತ್ತವೆ.

ರಕ್ಷಣಾಪಡೆಗಳಲ್ಲಿ ತಮ್ಮ ಸಾಮರ್ಥ್ಯಗಳನ್ನು ಮೆರೆಯಲು ತರಬೇತಿ ಕೇಂದ್ರಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು: ರಾಷ್ಟ್ರೀಯ ರಕ್ಷಣಾ ಕಾಲೇಜು, ನವದೆಹಲಿ, ರಕ್ಷಣಾ ಸೇವಾ ಸಿಬ್ಬಂದಿ ತರಬೇತಿ ಕೇಂದ್ರ, ಉದಕಮಂಡಲ, ಭಾರತೀಯ ಮಿಲಿಟರಿ ಅಕಾಡೆಮಿ, ಡೆಹರಾಡೂನ್ ಮತ್ತು ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಖಡಕ್‌ವಾಸ್ಲಾ, ಪುಣೆ.

NOT TO BE REPUBLISHED @KTBS

## ಭಾರತೀಯ ಭೂಸೇನೆ



ಭೂಸೇನೆಯ ಚಿಹ್ನೆ

ಭಾರತದ ಭೂಸೇನೆಯು ವಿಶ್ವದಲ್ಲಿಯೇ ಎರಡನೆಯ ಅತಿದೊಡ್ಡ ಭೂಸೇನಾಪಡೆಯಾಗಿದೆ. ಭೂಸೇನೆಯು ಪದಾತಿದಳ (ಸೈನಿಕ), ಅಶ್ವದಳ, ಫಿರಂಗಿದಳ, ಒಂಟೆದಳ ಮತ್ತು ಯುದ್ಧ ಟ್ಯಾಂಕ್‌ಗಳನ್ನು ಹೊಂದಿದೆ.

ಭೂಸೇನೆಯಲ್ಲಿ ಒಟ್ಟು 12,37,117 ಯೋಧರಿದ್ದಾರೆ. 9,60,000ದಷ್ಟು ಕಾಯ್ದಿಟ್ಟ ಯೋಧರಿದ್ದಾರೆ.

ಭೂಸೇನೆಯ ಮುಖ್ಯಸ್ಥರನ್ನು **ದಂಡನಾಯಕ (ಜನರಲ್)** ಎಂದು ಕರೆಯುವರು. ಇವರು ಸೇನೆಯ ನಿಯಂತ್ರಣ, ತರಬೇತಿ, ಕಾರ್ಯಾಚರಣೆ ಮತ್ತು ಆಡಳಿತ ವ್ಯವಸ್ಥೆಯನ್ನು ಹೊಸದಿಲ್ಲಿಯಲ್ಲಿರುವ ಭೂಸೇನೆಯ ಪ್ರಧಾನ ಕಚೇರಿಯಿಂದ ನಿರ್ವಹಿಸುತ್ತಾರೆ.

ದೇಶದ ಗಡಿಗಳ ರಕ್ಷಣೆಯ ಜೊತೆಗೆ ನೈಸರ್ಗಿಕ ವಿಕೋಪಗಳಾದ ಭೂಕಂಪ, ಪ್ರವಾಹ, ಬರಗಾಲ, ಭೂಕುಸಿತ, ಬಿರುಗಾಳಿ ಮುಂತಾದ ಸಂದರ್ಭಗಳಲ್ಲಿ ಮಾನವೀಯ ಕಾರ್ಯಗಳನ್ನು ಭೂಸೇನೆ ನಿರ್ವಹಿಸುತ್ತದೆ. ಭೂಸೇನೆಯು ತಾಂತ್ರಿಕವಾಗಿ ಅತ್ಯಂತ ಮುಂದುವರಿದಿದೆಯಲ್ಲದೆ ಬೇಹುಗಾರಿಕೆ ವ್ಯವಸ್ಥೆಯನ್ನೂ ಹೊಂದಿದೆ.

NOT TO BE REPUBLISHED ©KTBS

## ಭಾರತೀಯ ನೌಕಾದಳ




ನೌಕಾದಳದ ಚಿಹ್ನೆ

ಕರಾವಳಿ ತೀರವನ್ನು ಹಾಗೂ ದ್ವೀಪಗಳನ್ನು ರಕ್ಷಿಸಲು ನೌಕಾದಳದ ಅಗತ್ಯವಿದೆ. ಭಾರತದ ನೌಕಾದಳವು ಜಗತ್ತಿನಲ್ಲಿ ಆರನೆಯ ಅತಿ ದೊಡ್ಡ ನೌಕಾದಳವಾಗಿದೆ. ಅದರ ಮುಖ್ಯಸ್ಥರನ್ನು **ಅಡ್ಮಿರಲ್** ಎಂದು ಕರೆಯುತ್ತಾರೆ. ನೌಕಾದಳದ ಮುಖ್ಯ ಕಚೇರಿ ಹೊಸದಿಲ್ಲಿಯಲ್ಲಿದೆ.

ನೌಕಾದಳವು ಆಧುನಿಕ ಮಾದರಿಯ ಕ್ಷಿಪಣಿ ಹಡಗುಗಳು ಮತ್ತು ಜಲಾಂತರ್ಗಾಮಿಗಳನ್ನು ಹೊಂದಿದೆ. ಅವುಗಳಲ್ಲಿ **ಐ.ಎನ್.ಎಸ್.ವಿಭೂತಿ** ಮತ್ತು **ಐ.ಎನ್.ಎಸ್.ಗೋದಾವರಿ,** ಪ್ರಮುಖವಾದವುಗಳು. ಅಲ್ಲದೆ **ಐ.ಎನ್.ಎಸ್.ವಿರಾಟ್** ಮತ್ತು **ಐ.ಎನ್.ಎಸ್. ವಿಕ್ರಮಾದಿತ್ಯ**ದಂತಹ ವಿಮಾನವಾಹಕಗಳನ್ನು ಹೊಂದಿರುವ ನೌಕಾದಳವು ಸುಸಜ್ಜಿತವಾಗಿದೆ. ಕರ್ನಾಟಕದ ಕಾರವಾರದಲ್ಲಿ 'ಸೀಬರ್ಡ್' ನೌಕಾನೆಲೆಯನ್ನು ಸ್ಥಾಪಿಸಲಾಗಿದೆ.



ಐ.ಎನ್.ಎಸ್. ವಿಕ್ರಮಾದಿತ್ಯ

## ಭಾರತೀಯ ವಾಯುಪಡೆ




ವಾಯುಪಡೆಯ ಚಿಹ್ನೆ



ಯುದ್ಧ ವಿಮಾನ

@KTBS NOT TO BE REPUBLISHED

ಭಾರತವು ಪ್ರಪಂಚದಲ್ಲಿಯೇ ನಾಲ್ಕನೆಯ ಅತಿ ದೊಡ್ಡ ವಾಯುಪಡೆಯನ್ನು ಹೊಂದಿದೆ. ಇದರ ಮುಖ್ಯಸ್ಥರನ್ನು **ಏರ್‌ಚೀಫ್ ಮಾರ್ಷಲ್** ಎನ್ನುವರು. ಇದರ ಕೇಂದ್ರ ಕಚೇರಿ ಹೊಸದಿಲ್ಲಿಯಲ್ಲಿದೆ. ಆಡಳಿತದ ಅನುಕೂಲಕ್ಕಾಗಿ ವಾಯುಪಡೆಯನ್ನು ಐದು ಕಮಾಂಡಗಳಾಗಿ ವಿಂಗಡಿಸಲಾಗಿದೆ.

ಬೆಂಗಳೂರು, ಹೈದರಾಬಾದ್ ಮತ್ತು ದಿಂಡಿಗಲ್‌ನಲ್ಲಿ (ತಮಿಳುನಾಡು) ವಾಯುಪಡೆಗೆ ತರಬೇತಿ ನೀಡುವ ಪ್ರಮುಖ ಕೇಂದ್ರಗಳಿವೆ. ವಾಯುಪಡೆಯು ತಂತ್ರಜ್ಞಾನದ ಅಳವಡಿಕೆಯಿಂದ ಅನೇಕ ಹೊಸ ಯುದ್ಧ ವಿಮಾನಗಳನ್ನು ಹೊಂದಿ ಶಸ್ತ್ರಸನ್ನದ್ಧವಾಗಿದೆ.



*ಮಿಗ್ ಯುದ್ಧ ವಿಮಾನ*

ನಮ್ಮ ವಾಯುಪಡೆಯು ಜಾಗ್ವಾರ್, ರಾಫೆಲ್‌ನಂತಹ ಆಧುನಿಕ ಯುದ್ಧ ವಿಮಾನಗಳನ್ನು ಹೊಂದಿದೆ. ಅದು ಒಟ್ಟು 1,00,000ರಷ್ಟು ಯೋಧರು ಮತ್ತು 1330ರಷ್ಟು ಯುದ್ಧ ವಿಮಾನಗಳನ್ನು ಹೊಂದಿದೆ. ವಾಯುಪಡೆಯು ಬಲಾಢ್ಯವಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿಯಾಗಿದೆ.

## ಪೂರಕ ರಕ್ಷಣಾಪಡೆಗಳು

ರಕ್ಷಣಾಪಡೆಗಳಲ್ಲದೆ ಅವುಗಳಿಗೆ ವಿಷಮ ಸಂದರ್ಭಗಳಲ್ಲಿ ನೆರವಾಗಲು ಪೂರಕ ರಕ್ಷಣಾ ಪಡೆಗಳು ಕಾರ್ಯನಿರ್ವಹಿಸುತ್ತಿವೆ.



*ಗಡಿಭದ್ರತಾ ದಳ*

- **ಗಡಿಭದ್ರತಾ ದಳ** (Border Security Force): ಭಾರತದ ಗಡಿಪ್ರದೇಶಗಳನ್ನು ರಕ್ಷಿಸುವುದು ಗಡಿಭದ್ರತಾ ದಳದ ಪ್ರಮುಖ ಕಾರ್ಯವಾಗಿದೆ. ಕಾರ್ಗಿಲ್ ಯುದ್ಧದಲ್ಲಿ ಗಡಿಭದ್ರತಾ ದಳವು ಪರ್ವತದ ಎತ್ತರದವರೆಗೆ ಸೇನೆಯ ಜೊತೆಗೂಡಿ ಹೋರಾಟ ಮಾಡಿತು. ಸಾಯುವವರೆಗೆ ಕರ್ತವ್ಯ (Duty Until Death) ಎಂಬುದು ಇದರ ಧ್ಯೇಯ ವಾಕ್ಯವಾಗಿದೆ.

© KTBS NOT TO BE REPUBLISHED

• **ಗಡಿರಸ್ತೆಗಳ ಸಂಘಟನೆ** (Border Roads Organisation): ಗಡಿರಸ್ತೆಗಳ ಸಂಘಟನೆಯು ಮುಚ್ಚಿರುವ ರಸ್ತೆಗಳನ್ನು ತೆರವು ಮಾಡಿ ಸೈನಿಕ ಕಾರ್ಯಾಚರಣೆಗಳಿಗೆ ತಕ್ಷಣದ ಸಹಾಯವನ್ನು ಮಾಡುತ್ತದೆ. ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ ಮತ್ತು ಒಳಚರಂಡಿ ನಿರ್ಮಾಣದಂತಹ ಕಾರ್ಯಗಳನ್ನು ಈ ಸಂಘಟನೆ ಮಾಡುತ್ತದೆ.

• **ಕರಾವಳಿ ಪಹರೆಯವರು** (Coast Guards): ಇದೊಂದು ಅರೆಮಿಲಿಟರಿ ಪಡೆಯಾಗಿದೆ. ಇದರ ಪ್ರಧಾನ ಕಚೇರಿ ಹೊಸದಿಲ್ಲಿಯಲ್ಲಿದೆ. ಕರಾವಳಿ ತೀರವನ್ನು ರಕ್ಷಿಸುವುದು ಇದರ ಜವಾಬ್ದಾರಿಯಾಗಿದೆ. ಬಿರುಗಾಳಿ, ಚಂಡಮಾರುತ, ಸುನಾಮಿಯಂತಹ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತದೆ. ಅಕ್ರಮ ಒಳನುಸುಳುವಿಕೆ, ಕಳ್ಳಸಾಗಣೆ ಮುಂತಾದವುಗಳನ್ನು ತಡೆಗಟ್ಟುವುದು ಇದರ ಪ್ರಮುಖ ಕಾರ್ಯವಾಗಿದೆ.



*ಕರಾವಳಿ ಪಹರೆಯವರು*

© KTBS NOT TO BE REPUBLISHED

ಕರಾವಳಿ ಪಹರೆಯು 1402 ಅತ್ಯಾಧುನಿಕ ಹಡಗುಗಳು ಮತ್ತು 381 ವಿಮಾನ ಹಾಗೂ 60 ಹೆಲಿಕಾಪ್ಟರ್‌ಗಳನ್ನು ಹೊಂದಿದೆ. 12,585 ಯೋಧರು ಕರಾವಳಿ ಪಹರೆಯಲ್ಲಿದ್ದಾರೆ.

• **ಕೇಂದ್ರ ಕೈಗಾರಿಕಾ ಭದ್ರತಾಪಡೆ** (Central Industrial Security Force): ಇದು ವಿಶ್ವದ ಅತಿದೊಡ್ಡ ಕೈಗಾರಿಕಾ ಭದ್ರತಾಪಡೆ. 1,45,000 ಯೋಧರು ಇದರಲ್ಲಿದ್ದಾರೆ. ಇದು ದೇಶದಲ್ಲಿರುವ ಸುಮಾರು 300ಕ್ಕೂ ಹೆಚ್ಚು ಸರಕಾರಿ, ಖಾಸಗಿ ಕೈಗಾರಿಕಾ ಘಟಕಗಳು ಮತ್ತು ಪ್ರಯೋಗಾಲಯಗಳಿಗೆ ಭದ್ರತೆಯನ್ನು ಒದಗಿಸುತ್ತದೆ. ಇದಲ್ಲದೆ ವಿಮಾನ ನಿಲ್ದಾಣ, ಬಂದರುಗಳು, ರೈಲ್ವೆ ನಿಲ್ದಾಣಗಳು, ಐತಿಹಾಸಿಕ ಸಂರಕ್ಷಿತ ಸ್ಮಾರಕಗಳಿಗೂ ಮತ್ತು ಅಣುಶಕ್ತಿ ಕೇಂದ್ರಗಳಿಗೂ ಭದ್ರತೆಯನ್ನು ಒದಗಿಸುತ್ತದೆ.

## ಸಹಾಯಕ ರಕ್ಷಣಾ ಸೇವೆಗಳು

ದೇಶದಾದ್ಯಂತ ಯುವಕರಲ್ಲಿ ಸೇವೆ ಮತ್ತು ದೇಶಪ್ರೇಮವನ್ನು ಬೆಳೆಸಲು ಶಾಲಾ ಮತ್ತು ಕಾಲೇಜುಗಳಲ್ಲಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇವುಗಳಲ್ಲಿ ಎನ್.ಸಿ.ಸಿ. ಒಂದು ಪ್ರಮುಖ ಚಟುವಟಿಕೆ.

• **ಎನ್‌ಸಿಸಿ ನ್ಯಾಷನಲ್ ಕ್ಯಾಡೆಟ್ ಕೋರ್** (National Cadet Corps): ಸಾಮೂಹಿಕ ಜೀವನದ ಪ್ರಾಧಾನ್ಯ, ನಾಯಕತ್ವ ಮುಂತಾದ ಗುಣಗಳನ್ನು ಎನ್‌ಸಿಸಿ ಕಲಿಸುತ್ತದೆ. ಈ ತರಬೇತಿ ಪಡೆದವರಿಗೆ ಸೇನೆಯನ್ನು ಸೇರಲು ವಿಶೇಷ ಆದ್ಯತೆಯನ್ನು ನೀಡಲಾಗುತ್ತದೆ. ಉನ್ನತ ವ್ಯಾಸಂಗಕ್ಕೂ ವಿದ್ಯಾರ್ಥಿಗಳಿಗೆ ಇದರಿಂದ ಮೀಸಲಾತಿ ದೊರೆಯುತ್ತದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಯುವಕರು ಮತ್ತು ಯುವತಿಯರು ಎನ್‌ಸಿಸಿಯನ್ನು ಸೇರಬಹುದು. ಒಟ್ಟಿನಲ್ಲಿ ರಾಷ್ಟ್ರ ರಕ್ಷಣೆಯ ಹೊಣೆಗಾರಿಕೆಯನ್ನು ಮೂಡಿಸುವುದು ಇದರ ಪ್ರಮುಖ ಗುರಿಯಾಗಿದೆ. 'ಶಿಸ್ತು ಮತ್ತು ಒಗ್ಗಟ್ಟು' ಇದರ ಧ್ಯೇಯ ವಾಕ್ಯವಾಗಿದೆ.



*ಎನ್‌ಸಿಸಿ ಕ್ಯಾಡೆಟ್‌ಗಳು*

• **ಭಾರತೀಯ ರೆಡ್‌ಕ್ರಾಸ್ ಸಂಸ್ಥೆ** (Indian Red Cross Society): ರೆಡ್‌ಕ್ರಾಸ್ ಸಂಸ್ಥೆಯು ಭಾರತದಾದ್ಯಂತ 1100 ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರಪತಿಗಳು ಇದರ ಅಧ್ಯಕ್ಷರಾಗಿದ್ದಾರೆ. ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಧ್ಯೇಯವೆಂದರೆ 'ಮಾನವೀಯತೆ ಮತ್ತು ಸ್ವಯಂಸೇವೆ'.




*ರೆಡ್‌ಕ್ರಾಸ್ ಚಿಹ್ನೆ*

• **ನಾಗರಿಕ ಪೊಲೀಸ್ ಪಡೆಗಳು** (Civil Defence) : ಪೊಲೀಸ್ ಪಡೆಗಳು ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿವೆ. ರಾಜ್ಯ ಪೊಲೀಸ್ ಪಡೆಯ ವ್ಯಾಪ್ತಿ ರಾಜ್ಯಕ್ಕೆ ಸೀಮಿತವಾಗಿದೆ. ಕೇಂದ್ರ ಸರಕಾರವು ತನ್ನದೇ ಪೊಲೀಸ್ ಪಡೆಗಳನ್ನು ಸ್ಥಾಪಿಸಿದೆ.

ರಾಷ್ಟ್ರೀಯ ರಕ್ಷಣಾ ದಳ: ರಾಷ್ಟ್ರೀಯ ರಕ್ಷಣಾ ದಳವು ಗಣ್ಯರಿಗೆ ರಕ್ಷಣೆಯನ್ನು ನೀಡುತ್ತದೆ. ಇದು ದೇಶದಲ್ಲಿಯ ಆಂತರಿಕ ಭದ್ರತೆಗೆ ಮತ್ತು ಭಯೋತ್ಪಾದನೆ ನಿಗ್ರಹಕ್ಕೆ ಹೆಚ್ಚು ಒತ್ತು ನೀಡುತ್ತದೆ. ಬಾಂಬ್ ನಿಷ್ಕ್ರಿಯ ದಳ ಇದಕ್ಕೆ ಪೂರಕವಾಗಿದೆ.

• **ಗೃಹರಕ್ಷಕ ದಳ** (Home Guards): ಇದು ಪೊಲೀಸ್ ಪಡೆಗೆ ಪೂರಕವಾಗಿ ಕೆಲಸ ಮಾಡುತ್ತದೆ. ಇದರ ಕಾರ್ಯಗಳು: ಆಂತರಿಕ ಭದ್ರತೆ ಒದಗಿಸುವಲ್ಲಿ ನೆರವಾಗುವುದು; ಮತ್ತು ತುರ್ತುಪರಿಸ್ಥಿತಿ, ಪ್ರಕೃತಿ ವಿಕೋಪ ಮುಂತಾದ ಸಮಯದಲ್ಲಿ ಸಹಾಯ ಮಾಡುವುದು.

**ನಿಮಗೆ ತಿಳಿದಿರಲಿ:**

ಭೂಸೇನೆಯ ಉನ್ನತ ಅಧಿಕಾರಿಗಳು: ಜನರಲ್, ಲೆಫ್ಟಿನೆಂಟ್ ಜನರಲ್, ಮೇಜರ್ ಜನರಲ್, ಬ್ರಿಗೇಡಿಯರ್, ಕರ್ನಲ್, ಲೆಫ್ಟಿನೆಂಟ್ ಕರ್ನಲ್, ಮೇಜರ್, ಕ್ಯಾಪ್ಟನ್ ಮತ್ತು ಲೆಫ್ಟಿನೆಂಟ್. ನೌಕಾದಳ ಮತ್ತು ವಾಯುಪಡೆಯಲ್ಲಿ ಕೂಡ ಅದರದೇ ಆದ ಉನ್ನತ ಅಧಿಕಾರಿಗಳ ರ್‍ಯಾಂಕ್‌ಗಳಿವೆ. ಮೂರು ರಕ್ಷಣಾ ಪಡೆಗಳ ಮುಖ್ಯಸ್ಥರನ್ನು ರಕ್ಷಣಾ ಸಿಬ್ಬಂದಿ ಮುಖ್ಯಸ್ಥರೆಂದು ಕರೆಯುತ್ತಾರೆ.

## ಅಭ್ಯಾಸಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1 ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ಯಾರಿಗೆ ನೀಡಲಾಗಿದೆ?
2 ರಕ್ಷಣಾಪಡೆಯ ವಿಭಾಗಗಳಾವುವು?
3 ಭೂಸೇನೆಯ ಮುಖ್ಯಸ್ಥರನ್ನು ಏನೆಂದು ಕರೆಯುವರು?
4 ಭೂಸೇನೆಯ ಆಡಳಿತ ಕಚೇರಿ ಎಲ್ಲಿದೆ?
5 ನೌಕಾದಳದ ಮುಖ್ಯಸ್ಥರನ್ನು ಏನೆಂದು ಕರೆಯುತ್ತಾರೆ?
6 ಎನ್‌ಸಿಸಿಯ ಧ್ಯೇಯ ವಾಕ್ಯ ಯಾವುದು?
7 ಭೂಸೇನೆಯ ಪ್ರಮುಖ ಕಾರ್ಯಗಳಾವುವು?
8 ಗಡಿರಸ್ತೆಗಳ ಸಂಘಟನೆಯ ಕಾರ್ಯಗಳಾವುವು?
9 ರೆಡ್‌ಕ್ರಾಸ್ ಸಂಸ್ಥೆಯ ಧ್ಯೇಯ ಯಾವುದು?
10 ರಕ್ಷಣಾಪಡೆಯಲ್ಲಿ ಸೇವೆ ಸಲ್ಲಿಸಲು ನಿನಗೆ ಇಚ್ಛೆಯಿದೆಯೇ? ಕಾರಣ ಕೊಡು.

**ಚರ್ಚಿಸಿ**

ನಾವೇಕೆ ರಕ್ಷಣಾಪಡೆಯಲ್ಲಿ ಸೇವೆ ಸಲ್ಲಿಸಬೇಕು?

**ಚಟುವಟಿಕೆಗಳು**

1 ನಿಮ್ಮ ಗ್ರಾಮದ ಸೈನಿಕರನ್ನು ಭೇಟಿ ಮಾಡಿ ಶಾಲೆಗೆ ಆಹ್ವಾನಿಸಿ.
2 ರಕ್ಷಣಾಪಡೆಗಳ ವಿವಿಧ ಘಟಕಗಳ ಚಿಹ್ನೆಗಳನ್ನು ಸಂಗ್ರಹಿಸಿ.
3 ಸಮೀಪದ ಶಾಲೆ ಕಾಲೇಜುಗಳಲ್ಲಿರುವ ಎನ್‌ಸಿಸಿ ಘಟಕಕ್ಕೆ ಭೇಟಿ ನೀಡಿ.

© KTBS NOT TO BE REPUBLISHED

# ಅಧ್ಯಾಯ 23

# ಭಾರತ ಮತ್ತು ನೆರೆ ದೇಶಗಳು

A8T4K2

**ಪಾಠದ ಪರಿಚಯ**

ಯಾವುದೇ ರಾಷ್ಟ್ರದ ಪ್ರಗತಿಯಲ್ಲಿ ಅದರ ವಿದೇಶಾಂಗ ನೀತಿಯು ಪ್ರಮುಖ ಪಾತ್ರ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾರತವು ತನ್ನ ವಿದೇಶಾಂಗ ನೀತಿಯ ಅಂಗವಾಗಿ ನೆರೆ ದೇಶಗಳೊಂದಿಗೆ ಯಾವ ಬಗೆಯ ಸಂಬಂಧವನ್ನು ರೂಪಿಸಿಕೊಂಡಿದೆ ಎಂಬುದನ್ನು ಈ ಪಾಠದಿಂದ ತಿಳಿಯಬಹುದು.

**ಸಾಮರ್ಥ್ಯಗಳು**

1 ಭಾರತವು ತನ್ನ ನೆರೆ ದೇಶಗಳೊಂದಿಗೆ ಹೊಂದಿರುವ ರಾಜತಾಂತ್ರಿಕ ಸಂಬಂಧವನ್ನು ಅರಿಯುವುದು.

2 ನೆರೆ ದೇಶಗಳೊಂದಿಗೆ ಭಾರತ ಹೊಂದಿರುವ ಶಾಂತಿಯುತ ಸಂಬಂಧವನ್ನು ಮೆಚ್ಚುವುದು.

3 ನೆರೆ ದೇಶಗಳೊಂದಿಗೆ ಭಾರತ ಹೊಂದಿರುವ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಹಕಾರದ ಬಗ್ಗೆ ತಿಳಿಯುವುದು.

4 ನೆರೆ ದೇಶಗಳೊಂದಿಗಿರುವ ಗಡಿ ಸಮಸ್ಯೆ, ಯುದ್ಧಗಳು, ಭಯೋತ್ಪಾದನಾ ಚಟುವಟಿಕೆಗಳು, ಜನಾಂಗೀಯ ಸಮಸ್ಯೆ, ಜಲವಿವಾದ ಮುಂತಾದ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವುದು.

5 ನೆರೆ ದೇಶಗಳನ್ನು ಪ್ರೀತಿಸುವ ಮನೋಭಾವವನ್ನು ಬೆಳಸಿಕೊಳ್ಳುವುದು.

NOT TO BE REPUBLISHED ©KTBS

ದಕ್ಷಿಣ ಏಷ್ಯದ ಆರ್ಥಿಕ ವ್ಯವಹಾರಗಳು ಮೂಲತಃ ಭಾರತ ಕೇಂದ್ರಿತವಾಗಿವೆ. ಭಾರತವು ತನ್ನ ಬೃಹತ್ ಗಾತ್ರ, ಭೌಗೋಳಿಕ ಸನ್ನಿವೇಶ, ಆರ್ಥಿಕ ಮತ್ತು ಮಿಲಿಟರಿ ಶಕ್ತಿಯಿಂದಾಗಿ ದಕ್ಷಿಣ ಏಷ್ಯದ ವ್ಯವಹಾರಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಭಾರತದ ಉತ್ತರದಲ್ಲಿ ಚೀನ, ನೇಪಾಳ ಮತ್ತು ಭೂತಾನ್ ರಾಜ್ಯಗಳಿವೆ; ಪೂರ್ವದಲ್ಲಿ ಬಾಂಗ್ಲಾದೇಶ ಮತ್ತು ಮಯನ್ಮಾರ್‌ಗಳಿದ್ದರೆ ವಾಯುವ್ಯದಲ್ಲಿ ಪಾಕಿಸ್ತಾನ, ದಕ್ಷಿಣದಲ್ಲಿ ಶ್ರೀಲಂಕೆಯಿದೆ. ಇವು ನಮ್ಮ ದೇಶದ ಏಳು ನೆರೆ ದೇಶಗಳು. ಇವನ್ನು ಭೂಪಟದಲ್ಲಿ ಗಮನಿಸಿ.

ಶಾಂತಿ, ಸ್ನೇಹ ಸೌಹಾರ್ದ, ಸಹಕಾರಗಳ ಅಗಾಧ ಪರಂಪರೆಯನ್ನು ಭಾರತ ಹೊಂದಿದೆ. ಕೆಲವು ನೆರೆ ದೇಶಗಳೊಂದಿಗೆ ಭಾರತಕ್ಕೆ ಭಿನ್ನಾಭಿಪ್ರಾಯ, ವಿವಾದಗಳಿದ್ದರೂ ಮಾತುಕತೆಯ ಮೂಲಕ ಶಾಂತಿಯುತ ಪರಿಹಾರವನ್ನು ಕಾಣಲು ನಮ್ಮ ದೇಶ ಬಯಸುತ್ತದೆ.

ಹೀಗಾಗಿ ನೆರೆ ದೇಶಗಳು 'ಹೊರೆ' ದೇಶಗಳಾಗುವುದನ್ನು ಭಾರತ ಇಚ್ಛಿಸುವುದಿಲ್ಲ. ನೆರೆ ದೇಶಗಳೊಂದಿಗೆ ಭಾರತದ ಸಂಬಂಧವನ್ನು ನಾವೀಗ ತಿಳಿಯೋಣ.




@KTBS NOT TO BE REPUBLISHED

## ಭಾರತ ಮತ್ತು ಪಾಕಿಸ್ತಾನ

ಭಾರತದ ಭೂಭಾಗವಾಗಿದ್ದ ಪಾಕಿಸ್ತಾನವು ದೇಶ ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ಪ್ರತ್ಯೇಕ ರಾಷ್ಟ್ರವಾಗಿ 1947ರಲ್ಲಿ ಉದಯಿಸಿತು. ಸಂಘರ್ಷದ ಮೂಲದಲ್ಲೇ ಈ ಎರಡು ರಾಷ್ಟ್ರಗಳು ಉದಯಿಸಿದ್ದರಿಂದ ಅವೆರಡರ ನಡುವೆ ಹೊಂದಾಣಿಕೆ ಸಾಧ್ಯವಾಗಲಿಲ್ಲ. ಆದುದರಿಂದ ಸಮಸ್ಯೆಗಳು ಪರಿಹಾರ ಕಾಣದೆ ಹಾಗೆಯೇ ಉಳಿದಿವೆ. ಅವುಗಳೆಂದರೆ ಮುಖ್ಯವಾಗಿ

- ಕಾಶ್ಮೀರ ವಿವಾದ
- ಮಿಲಿಟರಿ ಆಕ್ರಮಣ
- ಭಯೋತ್ಪಾದನೆ
- ಜಲ ವಿವಾದ
- ಅಲ್ಪಸಂಖ್ಯಾತರ ರಕ್ಷಣೆ
- ವ್ಯಾಪಾರ ವಾಣಿಜ್ಯ ಬೆಳವಣಿಗೆ, ಮುಂತಾದವು.

ಮೂಲಭೂತವಾಗಿ ಕಾಶ್ಮೀರ ಪ್ರಶ್ನೆಯು ಸ್ವಾತಂತ್ರ್ಯೋತ್ತರ ಕಾಲದಿಂದಲೇ ಭಾರತಪಾಕ್ ಸಂಬಂಧವನ್ನು ಹದಗೆಡಿಸುತ್ತ ಬಂದಿದೆ. ಈವರೆಗೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ನಾಲ್ಕು ಬಾರಿ ಯುದ್ಧಗಳು ನಡೆದಿವೆ (1947, 1965, 1971 ಮತ್ತು 1999ರಲ್ಲಿ). 1948ರಲ್ಲಿ ಪಾಕಿಸ್ತಾನವು ಸಶಸ್ತ್ರ ಕ್ರಮದ ಮೂಲಕ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಯತ್ನಿಸಿ ಕಾಶ್ಮೀರದ ಕೆಲವು ಭಾಗಗಳನ್ನು ಆಕ್ರಮಿಸಿತು. ಆ ಭಾಗವನ್ನು 'ಪಾಕ್‌ಆಕ್ರಮಿತ ಕಾಶ್ಮೀರ' (Pak Occupied Kashmir (PoK) ಎಂಬುದಾಗಿ ಕರೆಯಲಾಗುತ್ತದೆ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಭಾರತವು ಪ್ರಾರಂಭದಿಂದಲೂ ಸಮರ್ಥಿಸುತ್ತಿದೆ. ಈ ದಿಶೆಯಲ್ಲಿ ಅಮೇರಿಕವು ದ್ವಿಮುಖ ನೀತಿಯನ್ನು ಅನುಸರಿಸುತ್ತಾ ಬಂದಿದೆ. ಬೇರೆ ಬೇರೆ ಕಾರಣಗಳಿಗಾಗಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ.

© KTBS NOT TO BE REPUBLISHED

**ಚಟುವಟಿಕೆ:** ಕಾಶ್ಮೀರ ಸಮಸ್ಯೆಯ ಮೂಲದ ಬಗ್ಗೆ ಶಿಕ್ಷಕರ ಸಹಾಯದಿಂದ ಗುಂಪಾಗಿ ಚರ್ಚಿಸಿರಿ.

1962 ಭಾರತ–ಚೀನ ಸಮರದ ನಂತರ ಪಾಕಿಸ್ತಾನವು ಚೀನದೊಂದಿಗೆ ನಿಕಟ ಸೈನಿಕ ಸಂಬಂಧವನ್ನು ಇಟ್ಟುಕೊಂಡಿತು. ಪಾಕಿಸ್ತಾನವು ಜಮ್ಮು ಕಾಶ್ಮೀರ ರಾಜ್ಯದಲ್ಲಿ ಸುಮಾರು 2,700 ಚದರ ಮೈಲಿಗಳಷ್ಟು ಭಾರತದ ಭೂಪ್ರದೇಶವನ್ನು ಚೀನಕ್ಕೆ ನೀಡಿತು.

1965ರಲ್ಲಿ ಭಾರತ–ಪಾಕ್ ಯುದ್ಧದಲ್ಲಿ ಭಾರತವು ಸೆರೆಹಿಡಿದ 80,000ಕ್ಕೂ ಮೇಲ್ಪಟ್ಟ ಪಾಕಿಸ್ತಾನಿ ಸೈನಿಕರನ್ನು ಸ್ವದೇಶಕ್ಕೆ ಒಪ್ಪಿಸಿತು. ಕಾಶ್ಮೀರ ಸಮಸ್ಯೆಯನ್ನು ಕೇವಲ ಭಾರತ ಮತ್ತು ಪಾಕಿಸ್ತಾನ ನಡುವಿನ ಮಾತುಕತೆಯಿಂದ ಮಾತ್ರ ಬಗೆಹರಿಸಿಕೊಳ್ಳಬೇಕೆಂದು ಒಪ್ಪಲಾಯಿತು.

ಪಾಕಿಸ್ತಾನದ ಸೈನಿಕ ಪಡೆ ಹಾಗೂ ಭಾರತ ಬೆಂಬಲಿತ ಪೂರ್ವ ಪಾಕಿಸ್ತಾನದ (ಬಾಂಗ್ಲಾದೇಶ) ನಡುವೆ ತೀವ್ರ ಘರ್ಷಣೆ ನಡೆಯಿತು. ಸಾಮಾನ್ಯವಾಗಿ ಈ ಯುದ್ಧವನ್ನು ಭಾರತ ಪಾಕಿಸ್ತಾನದ ನಡುವೆ ನಡೆದ ಮೂರನೆ ಯುದ್ಧವೆಂದೇ ಪರಿಗಣಿಸಲಾಗಿದೆ.

• 1971ರಲ್ಲಿ ಭಾರತ-ಪಾಕ್ ಯುದ್ಧ ನಡೆದು, 1972ರಲ್ಲಿ ಶಿಮ್ಲಾದಲ್ಲಿ ಶೃಂಗಸಭೆ ನಡೆಯಿತು. ಆ ಕಾಲದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಭಾರತದ ಪ್ರಧಾನಮಂತ್ರಿಯಾಗಿದ್ದರು. ಶೃಂಗಸಭೆಯಲ್ಲಿ ಕಾಶ್ಮೀರವು ಸೇರಿದಂತೆ ತಮ್ಮೊಳಗಿನ ಎಲ್ಲಾ ಸಮಸ್ಯೆಗಳನ್ನು ಮಾತುಕತೆಯ ಮೂಲಕವೇ ಬಗೆಹರಿಸಬೇಕೆಂದು ಒಪ್ಪಂದ ಮಾಡಿಕೊಳ್ಳಲಾಯಿತು. ಈ ಒಪ್ಪಂದವೇ 'ಶಿಮ್ಲಾ ಒಪ್ಪಂದ'.



*ಕಾರ್ಗಿಲ್ ಯುದ್ಧದಲ್ಲಿ ನಮ್ಮ ಸೈನಿಕರು ಹೋರಾಟ ನಡೆಸುತ್ತಿರುವುದು*

• 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದ ನಂತರ ಭಾರತದ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅಮೃತ್‌ಸರದಿಂದ ಲಾಹೋರಿಗೆ 'ಲಾಹೋರ್ ಬಸ್‌ಯಾತ್ರೆ'ಯನ್ನು ಆರಂಭಿಸುವ ಮೂಲಕ ಎರಡು ರಾಷ್ಟ್ರಗಳ ಸಂಬಂಧವನ್ನು ಉತ್ತಮಪಡಿಸಲು ಯತ್ನಿಸಿದರು. ತದನಂತರದಲ್ಲಿ ನಡೆದ ಆಗ್ರಾ ಶೃಂಗಸಭೆಯಲ್ಲಿ ಎರಡು ರಾಷ್ಟ್ರಗಳ ನಡುವೆ ಶಾಂತಿ ಸ್ಥಾಪನೆಗಾಗಿ ಪ್ರಯತ್ನಿಸಿದರು. ಆದರೆ ಶೃಂಗಸಭೆ ವಿಫಲಗೊಂಡಿತು. ಈ ವಿಫಲತೆಯಿಂದಾಗಿ ಪಾಕಿಸ್ತಾನವು ಭಯೋತ್ಪಾದಕರಿಗೆ ಪ್ರೋತ್ಸಾಹ ನೀಡಿತು. ಪರಿಣಾಮವಾಗಿ ಪಾಕ್ ಪ್ರೇರಿತ ಭಯೋತ್ಪಾದಕರು ಡಿಸೆಂಬರ್ 13, 2001ರಂದು ಭಾರತದ ಸಂಸತ್ತಿನ ಮೇಲೆ ದಾಳಿ ಮಾಡಿದರು. ಇದು ಭಾರತ ಮತ್ತು ಪಾಕಿಸ್ತಾನದ ಸಂಬಂಧವನ್ನು ಮತ್ತಷ್ಟು ಹದಗೆಡಿಸಿತು.

ತಮ್ಮ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಲು ಈ ಎರಡು ರಾಷ್ಟ್ರಗಳು ಸತತವಾಗಿ ಪೈಪೋಟಿ ನಡೆಸುತ್ತಿವೆ. ಹೀಗಿದ್ದರೂ ಭಾರತ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ನೆರೆ ದೇಶವಾದ ಪಾಕಿಸ್ತಾನದೊಂದಿಗೆ ಸ್ನೇಹಹಸ್ತ ಚಾಚಿದೆ.

**ಚಟುವಟಿಕೆ:** ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಮಗ್ನವಾಗಿರುವ ಬಗೆಯನ್ನು ಚರ್ಚಿಸಿರಿ.

## ಭಾರತ ಮತ್ತು ಚೀನ

ಭಾರತದ ನೆರೆಯ ರಾಷ್ಟ್ರಗಳಲ್ಲಿ ಚೀನ ಪ್ರಮುಖವಾದದ್ದು. ಏಕೆಂದರೆ ಭಾರತ ಮತ್ತು ಚೀನದ ನಡುವಿನ ಗಡಿರೇಖೆ ಸುದೀರ್ಘವಾಗಿದೆ. ಭಾರತವು ಚೀನಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನ ದೊರಕಿಸಿ ಕೊಡಲು ಯತ್ನಿಸಿತು. ಭಾರತವು ಆರಂಭದಿಂದಲೂ ಚೀನದೊಡನೆ ಶಾಂತಿಯುತ ಸಂಬಂಧವನ್ನು ಅಪೇಕ್ಷಿಸಿತು.

ಚೀನ ಮತ್ತು ಭಾರತದ ನಡುವಿನ ಸಂಘರ್ಷಕ್ಕೆ ಟಿಬೆಟ್ ಮತ್ತು ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದ ವಿಚಾರಗಳು ಮುಖ್ಯ ಕಾರಣವಾಗಿವೆ.

1950ರಲ್ಲಿ ಚೀನವು ಟಿಬೆಟಿನಲ್ಲಿ ಕೈಗೊಂಡ ಸಶಸ್ತ್ರ ಕಾರ್ಯಾಚರಣೆಯಿಂದಾಗಿ ಭಾರತ ಬಹಳ ನಿರಾಶೆಗೊಂಡಿತು. ಟಿಬೆಟಿಯನ್ನರ ಸ್ವಾಯತ್ತತೆಯನ್ನು ದಮನ ಮಾಡಲು ಚೀನ ಪ್ರಯತ್ನಿಸಿದಾಗ ಭಾರತವು ಟಿಬೆಟಿಯನ್ನರಿಗೆ ತನ್ನ ಬೆಂಬಲವನ್ನು ನೀಡುವ ಮೂಲಕ ಮಾನವ ಹಕ್ಕುಗಳ ಪ್ರತಿಪಾದನೆಯನ್ನು ಮಾಡಿತು. ಆದರೆ ಚೀನ ಈ ಸಲಹೆಯನ್ನು ತಿರಸ್ಕರಿಸುವುದರ ಜೊತೆಗೆ ತನ್ನ ಆಂತರಿಕ ವ್ಯವಹಾರದಲ್ಲಿ ಭಾರತ ಹಸ್ತಕ್ಷೇಪ ಮಾಡುತ್ತಿದೆ ಎಂದು ಕಟುವಾಗಿ ಟೀಕಿಸಿತು.



*ದಲಾಯಿ ಲಾಮಾ*



*ಬೌದ್ಧ ಮಂದಿರ, ಬೈಲುಕುಪ್ಪೆ*

1950ರಲ್ಲಿ ಚೀನ ಟಿಬೆಟಿನ ಮೇಲೆ ಆಕ್ರಮಣಮಾಡಿ ಮಿಲಿಟರಿ ನಿಯಂತ್ರಣವನ್ನು ಸಾಧಿಸಿತು. ಈ ಸಂದರ್ಭದಲ್ಲಿ ನೆಲೆಯನ್ನು ಕಳೆದುಕೊಂಡ ಟಿಬೆಟಿನ ಧರ್ಮಗುರು ದಲಾಯಿ ಲಾಮಾರವರಿಗೆ ಭಾರತ ಆಶ್ರಯ ಕಲ್ಪಿಸಿತು. ಇವರ ಜೊತೆ ಸಾವಿರಾರು (ಸುಮಾರು 80,000) ಮಂದಿ ಟಿಬೆಟಿಯನ್ನರು ಭಾರತಕ್ಕೆ ನಿರಾಶ್ರಿತರಾಗಿ ಬಂದರು. ಭಾರತದ ಹತ್ತು ರಾಜ್ಯಗಳಲ್ಲಿ ಇವರಿಗೆ ಪುನರ್ವಸತಿ ಮಾಡಲಾಯಿತು. ಮುಂಡಗೋಡ (ಉತ್ತರ ಕನ್ನಡ) ಮತ್ತು ಬೈಲುಕುಪ್ಪೆ (ಮೈಸೂರು) ಇಲ್ಲಿ ಇವರ ನೆಲೆಗಳಿವೆ. ಇದರಿಂದ

NOT TO BE REPUBLISHED ©KTBS

ತೀವ್ರ ಅಸಮಾಧಾನಗೊಂಡ ಚೀನ ಭಾರತದ ಪೂರ್ವ ಗಡಿ ಭಾಗದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಸಿತು. ಇದನ್ನು ಭಾರತ ವಿರೋಧಿಸಿತು.

**ಚಟುವಟಿಕೆ:** ಶಿಕ್ಷಕರೊಂದಿಗೆ ಮುಂಡಗೋಡ ಮತ್ತು ಬೈಲುಕುಪ್ಪೆಗೆ ಪ್ರವಾಸ ಕೈಗೊಂಡು ಟಿಬೆಟಿಯನರ ಜೀವನ ಶೈಲಿಯ ಬಗ್ಗೆ ವರದಿ ತಯಾರಿಸಿರಿ; ಅಥವಾ ಟಿಬೆಟಿಯನರ ಜೀವನ ಶೈಲಿ, ಧರ್ಮದ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

ಚೀನಿ ಪ್ರಧಾನಿ ಚೌಯನ್‌ಲಾಯ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಭಾರತದ ಪ್ರಧಾನಿ ನೆಹರುರವರ ಜೊತೆ 1954ರಲ್ಲಿ ಪಂಚಶೀಲ ಸೂತ್ರಕ್ಕೆ ಸಹಿ ಹಾಕಲಾಯಿತು. ಪಂಚಶೀಲ ಸೂತ್ರಗಳ ಬಗ್ಗೆ ಈಗಾಗಲೆ ತಿಳಿದಿರುವಿರಿ.

ಚೀನದ ಪಠ್ಯಪುಸ್ತಕಗಳಲ್ಲಿ ಭಾರತದ ಕೆಲವು ಭಾಗಗಳು ತನ್ನದೆಂದು ತೋರಿಸಿದ್ದ ಭೂಪಟಗಳನ್ನು ತಿದ್ದುಪಡಿ ಮಾಡಬೇಕು ಎಂಬ ಬೇಡಿಕೆಯನ್ನು ಭಾರತ ಮುಂದಿಟ್ಟಿತು. ಇದಕ್ಕೆ ಚೀನದ ಪ್ರಧಾನಿ ಒಪ್ಪಿಕೊಂಡರೂ ಈ ಕುರಿತಂತೆ ಯಾವುದೇ ಬದಲಾವಣೆ ಮಾಡಲಿಲ್ಲ.

ಟಿಬೆಟಿನ ಸಮಸ್ಯೆಯ ಹಿನ್ನೆಲೆಯಲ್ಲಿ ಚೀನವು ಭಾರತದ ಮೇಲೆ 1962ರಲ್ಲಿ ಈಶಾನ್ಯ ಗಡಿನಾಡಿನಿಂದ ಹಿಡಿದು ಲಡಾಕ್ (ಜಮ್ಮು ಮತ್ತು ಕಾಶ್ಮೀರದ ಭಾಗ) ತನಕ ಭಾರಿ ಆಕ್ರಮಣ ಮಾಡಿತು. ಆದರೆ ಅದು ಏಕಪಕ್ಷೀಯವಾಗಿ ಕದನ ವಿರಾಮವನ್ನು ಘೋಷಿಸಿತು. ಅಷ್ಟರೊಳಗೆ ಚೀನ ಸುಮಾರು 12,000 ಚದರ ಮೈಲಿಗಳಷ್ಟು ಪ್ರದೇಶವನ್ನು ವಶಪಡಿಸಿಕೊಂಡಿತ್ತು. ಇದರಿಂದಾಗಿ ಪಂಚಶೀಲ ಸೂತ್ರಗಳಿಗೆ ಕಾರಣರಾದ ನೆಹರು ಭ್ರಮನಿರಸನ ಹೊಂದಿದರು. ಇಂದಿಗೂ ಎರಡು ದೇಶಗಳ ನಡುವಿನ ಗಡಿಯಲ್ಲಿ ಯಥಾಸ್ಥಿತಿ (Line of Actual Control - LAC) ಮುಂದುವರಿಯುತ್ತಿದೆ.

ಚೀನಿಯರ ಪಾಕಿಸ್ತಾನ ಪರ ನೀತಿ ಹಾಗೂ ಪಾಕಿಸ್ತಾನ ಮತ್ತು ಚೀನ ನಡುವೆ ಹಾದು ಹೋಗುವ ಹೆದ್ದಾರಿಗಳು ಭಾರತದ ಆತಂಕಕ್ಕೆ ಕಾರಣವಾಗಿವೆ.

NOT TO BE REPUBLISHED © KTBS

**ಭಾರತದ ಮೇಲೆ ಚೀನದ ಆಕ್ರಮಣ**

- ಭಾರತ ಮತ್ತು ಚೀನ ನಡುವಿನ 3,440 ಕಿ.ಮೀ. ಉದ್ದದ ಅಂತರ್‌ರಾಷ್ಟ್ರೀಯ ಗಡಿರೇಖೆಯನ್ನು ಗುರುತಿಸಿದವನು ಬ್ರಿಟಿಷ್ ಇಂಡಿಯದ ವಿದೇಶಾಂಗ ಕಾರ್ಯದರ್ಶಿ ಸರ್ ಮ್ಯಾಕ್‌ಮಹೊನ್. ಆದುದರಿಂದ ಇದನ್ನು 'ಮ್ಯಾಕ್‌ಮಹೊನ್ ಗಡಿರೇಖೆ' ಎನ್ನುವರು.
- ಚೀನವು 1962ರಲ್ಲಿ ಪೂರ್ವ ಲಡಾಕ್‌ನ (ಅಸ್ಸೈ ಚಿನ್) ಮೇಲೆ ಆಕ್ರಮಣಮಾಡಿ ಭಾರತದ 43,000 ಚದರ ಕಿ.ಮೀ. ಭೂಪ್ರದೇಶವನ್ನು ತನ್ನ ಸ್ವಾಧೀನದಲ್ಲಿರಿಸಿಕೊಂಡಿದೆ. ಚೀನದ ಸ್ವಾಧೀನತೆ ಇಂದಿನವರೆಗೂ ಮುಂದುವರಿದಿದೆ.
- ಅಲ್ಲದೆ ಭಾರತದ ರಾಜ್ಯವಾದ ಅರುಣಾಚಲ ಪ್ರದೇಶದಲ್ಲಿ 90,000 ಚ.ಕಿ.ಮೀ. ಭೂಪ್ರದೇಶ ತನ್ನದೆಂದು ಸಾಧಿಸಲು ಯತ್ನಿಸುತ್ತಿದೆ.

## ಭಾರತ ಮತ್ತು ನೇಪಾಳ

ನೇಪಾಳವು ಭಾರತದ ಉತ್ತರಕ್ಕೆ ಹಿಮಾಲಯ ಪರ್ವತ ಶ್ರೇಣಿಗೆ ಹೊಂದಿಕೊಂಡಿರುವ ದೇಶವಾಗಿದೆ. ಮೊದಲಿನಿಂದಲೂ ಭಾರತ–ನೇಪಾಳ ಸಂಬಂಧವು ನಿಕಟವಾಗಿತ್ತು. ಎರಡೂ ದೇಶಗಳ ಗಡಿಗಳು ಮುಕ್ತವಾಗಿದ್ದು ಜನಸಂಚಾರ ಹಾಗೂ ವಸ್ತುಗಳ ಸಾಗಾಟ ಅಡೆತಡೆ ಇಲ್ಲದೆ ನಡೆಯುತ್ತಿದೆ.

ನೇಪಾಳ ಭೂಆವೃತ ಪ್ರದೇಶವಾಗಿರುವುದರಿಂದ ಅದಕ್ಕೆ ಅನಿವಾರ್ಯವಾಗಿ ಭಾರತದ ಮುಖಾಂತರವೇ ಹೊರದೇಶಗಳ ಸಂಪರ್ಕ ಸಾಧ್ಯ. ಅದಕ್ಕೆ ಹೊಂದಿಕೊಂಡಿರುವ ಇನ್ನೊಂದು ದೇಶವೆಂದರೆ ಚೀನ. ಆದರೆ ಅದು ಸಾಗರೋತ್ತರ ಪ್ರದೇಶವಾದುದರಿಂದ ಸಂಪರ್ಕ ಕಷ್ಟ ಸಾಧ್ಯ. ಹೀಗಾಗಿ ನೇಪಾಳವು ಭಾರತದೊಂದಿಗೆ ಉತ್ತಮ ಬಾಂಧವ್ಯವನ್ನು ಬಯಸುತ್ತದೆ. ಭಾರತನೇಪಾಳ ಸಂಬಂಧವು 1950ರ 'ಸ್ನೇಹ ಮತ್ತು ಶಾಂತಿ ಒಪ್ಪಂದ'ವನ್ನು ಆಧರಿಸಿದೆ. ಸಾರಿಗೆ ಸಂಪರ್ಕ, ನೀರಾವರಿ, ವಿದ್ಯುತ್, ಅರಣ್ಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ನೇಪಾಳಕ್ಕೆ ಭಾರತವೇ ಅತ್ಯಂತ ಹೆಚ್ಚು ನೆರವನ್ನು ನೀಡುತ್ತಿದೆ.

ಭಾರತವು 1971ರಲ್ಲಿ ಇಂಡೋನೇಪಾಳ ಒಪ್ಪಂದಕ್ಕೆ ಸಹಿ ಹಾಕಿದ್ದು ಅದರ ಪ್ರಕಾರ ನೇಪಾಳದ ಮೂಲಕ ವಸ್ತು, ಸಾಮಗ್ರಿಗಳನ್ನು ಸುಂಕ ನೀಡದೆ ಮುಕ್ತವಾಗಿ ಭಾರತಕ್ಕೆ ತರಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಮಾವೋವಾದಿಗಳು ನೇಪಾಳದಲ್ಲಿ ಪ್ರಬಲರಾಗುತ್ತಿದ್ದು ಅವರು ಎರಡು ದೇಶಗಳ ನಡುವಿನ ಸಂಬಂಧಕ್ಕೆ ಆತಂಕವನ್ನು ಒಡ್ಡುತ್ತಿದ್ದಾರೆ. ರಾಜಕುಟುಂಬದ ಸದಸ್ಯರನ್ನು ಹತ್ಯೆ ಮಾಡಲಾಗಿದ್ದು ಆಂತರಿಕ ಕ್ಷೋಭೆ ಸೃಷ್ಟಿಯಾಗಿದೆ. ಇತ್ತೀಚೆಗೆ ನೇಪಾಳದಲ್ಲಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದಿದೆ.

©KTBS NOT TO BE REPUBLISHED

## ಭಾರತ ಮತ್ತು ಭೂತಾನ್

1949ರಲ್ಲಿ ಭಾರತ ಮತ್ತು ಭೂತಾನ್ ಮಾಡಿಕೊಂಡ ಒಪ್ಪಂದದಂತೆ, ಭಾರತವು ಭೂತಾನಿನ ಆಂತರಿಕ ವ್ಯವಹಾರದಲ್ಲಿ ಕೈಹಾಕುವುದಿಲ್ಲ ಎಂಬ ಭರವಸೆ ನೀಡಿತು. ಭೂತಾನ್ ತನ್ನ ಬಾಹ್ಯ ವ್ಯವಹಾರಗಳಲ್ಲಿ ಭಾರತದ ಮಾರ್ಗದರ್ಶನ ಪಡೆಯಲು ಒಪ್ಪಿಗೆ ನೀಡಿತು.

ಭಾರತವು ನಡೆಸಿದ ಯತ್ನದ ಫಲವಾಗಿ ಭೂತಾನವು ವಿಶ್ವಸಂಸ್ಥೆಯ ಸದಸ್ಯತ್ವವನ್ನು ಪಡೆಯಿತು. 1961ರಿಂದ 1981ರವರೆಗೆ ಭಾರತವು ಭೂತಾನದ ಆರ್ಥಿಕ ಅಭಿವೃದ್ಧಿಗೆ ನೆರವು ನೀಡಿತಲ್ಲದೆ, ಅನೇಕ ಯೋಜನೆಗಳಿಗೆ ಪೂರ್ಣಪ್ರಮಾಣದಲ್ಲಿ ಹಣ ಒದಗಿಸಿತು. ಭೂತಾನ್ 'ಸಾರ್ಕ್'ನ ಸದಸ್ಯರಾಷ್ಟ್ರವಾಗಿದೆ.

## ಭಾರತ ಮತ್ತು ಶ್ರೀಲಂಕಾ

ಶ್ರೀಲಂಕಾ ಭಾರತದ ದಕ್ಷಿಣಕ್ಕೆ ಇರುವ ಒಂದು ದ್ವೀಪ ರಾಷ್ಟ್ರವಾಗಿದೆ. ರಾಮಾಯಣ ಕಾಲದಿಂದಲೂ ಭಾರತ ಮತ್ತು ಶ್ರೀಲಂಕೆಯ ನಡುವೆ ಉತ್ತಮ ಸಂಬಂಧವಿತ್ತು. ಸಾಮ್ರಾಟ್

ಅಶೋಕನು ಬೌದ್ಧಮತದ ಪ್ರಚಾರಕ್ಕೆ ತನ್ನ ಪ್ರತಿನಿಧಿಗಳನ್ನು ಅಲ್ಲಿಗೆ ಕಳುಹಿಸಿದ್ದನು. ಆ ಮೂಲಕ ಭಾರತ ಮತ್ತು ಶ್ರೀಲಂಕೆಯ ನಡುವಿನ ಸಾಂಸ್ಕೃತಿಕ ಸಂಬಂಧ ಮತ್ತಷ್ಟು ಗಟ್ಟಿಯಾಗಿತ್ತು.

ಶ್ರೀಲಂಕೆಯಲ್ಲಿ ಎರಡು ಪ್ರಮುಖ ಜನಾಂಗೀಯ ಗುಂಪುಗಳಿದ್ದು, ಒಂದು ಸಿಂಹಳೀಯರು ಮತ್ತೊಂದು ತಮಿಳರು. ಸಿಂಹಳೀಯರು ಶ್ರೀಲಂಕೆಯ ಮೂಲನಿವಾಸಿಗಳು; ತಮಿಳರು ತಮಿಳುನಾಡಿನಿಂದ ಬಂದ ವಲಸಿಗರು. ಇವುಗಳೊಳಗೆ ನಿರಂತರವಾಗಿ ಸಂಘರ್ಷಗಳು ನಡೆಯುತ್ತಲಿವೆ. ಶ್ರೀಲಂಕೆಯಲ್ಲಿರುವ ತಮಿಳರು ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹಾಗೂ ಪ್ರತ್ಯೇಕ ರಾಜ್ಯ ಸ್ಥಾಪನೆಗಾಗಿ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಎರಡು ದಶಕಗಳಿಂದಲೂ ಈ ಹೋರಾಟ ಮುಂದುವರಿಯುತ್ತಾ ಬಂದಿದೆ. ಇಷ್ಟಾದರೂ ಭಾರತವು ಶ್ರೀಲಂಕೆಯೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಲು ಇಚ್ಛಿಸುತ್ತದೆ. ಭಿನ್ನಾಭಿಪ್ರಾಯವನ್ನು ಹೋಗಲಾಡಿಸಲು ಶಾಂತಿಯುತ ಪರಿಹಾರವನ್ನು ಕಂಡುಕೊಳ್ಳುತ್ತಿದೆ.

ಪಾಕ್ ಕೊಲ್ಲಿಯ ಮಧ್ಯೆ ಇರುವ ಕಚತೀವ್ ದ್ವೀಪದ ಮೇಲಿನ ಹಕ್ಕಿಗಾಗಿ 1974–76ರಲ್ಲಿ ಭಾರತವು ಶ್ರೀಲಂಕೆಯೊಂದಿಗೆ ಒಪ್ಪಂದ ಮಾಡಿಕೊಂಡಿತು. ಸಮುದ್ರ ವ್ಯಾಪಾರದ ಬಗ್ಗೆಯೂ ಒಪ್ಪಂದ ಮಾಡಿಕೊಳ್ಳಲಾಯಿತು. 1987ರಲ್ಲಿ ಶ್ರೀಲಂಕಾ ಸರಕಾರವು ದೇಶದೊಳಗಿನ ತಮಿಳರು ರಾಜಕೀಯ ಪ್ರತ್ಯೇಕತೆಗಾಗಿ ಮಾಡುತ್ತಿದ್ದ ಹೋರಾಟವನ್ನು ಶಮನಗೊಳಿಸಲು ಭಾರತದ ನೆರವನ್ನು ಕೇಳಿಕೊಂಡಿತು. ಅದಕ್ಕೆ ಸಂಬಂಧಿಸಿದಂತೆ 1988ರಲ್ಲಿ ಭಾರತದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಹಾಗೂ ಶ್ರೀಲಂಕೆಯ ಅಧ್ಯಕ್ಷ ಜಯವರ್ಧನೆ ಇವರೊಳಗಿನ ಒಪ್ಪಂದದಂತೆ ಭಾರತ ಶಾಂತಿ ದಳವನ್ನು (Indian Peace Keeping Force (I.P.K.F.) ಶ್ರೀಲಂಕೆಗೆ ಕಳುಹಿಸಲಾಯಿತು.

ಶ್ರೀಲಂಕೆಯ ತಮಿಳು ಸಮುದಾಯವು ಭಾರತ ಕೈಗೊಂಡ ಕ್ರಮವನ್ನು ವಿರೋಧಿಸಿತು. ಈ ಹಿನ್ನೆಲೆಯಲ್ಲಿ ರಾಜೀವ್ ಗಾಂಧಿಯವರು ಶ್ರೀಲಂಕೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಹತ್ಯೆಯ ವಿಫಲ ಪ್ರಯತ್ನ ನಡೆಯಿತು. ಇಷ್ಟಾದರೂ ಭಾರತದ ನಿಲುವನ್ನು ಒಪ್ಪದ ಶ್ರೀಲಂಕೆಯ 'ತಮಿಳು ಉಗ್ರಗಾಮಿಗಳ ವಿಮೋಚನಾ ಸಂಘಟನೆ'ಯು (Liberation Of Tamil Tiger Eelam (LTTE) ರಾಜೀವ್ ಗಾಂಧಿಯವರನ್ನು 1992 ಮೇ 21ರಂದು ಹತ್ಯೆ ಮಾಡಿತು. ಹೀಗಿದ್ದರೂ ಭಾರತವು ಶ್ರೀಲಂಕೆಯೊಂದಿಗೆ ಮಿತ್ರತ್ವ ಭಾವನೆಯನ್ನು ಮುಂದುವರಿಸಿಕೊಂಡು ಬಂದಿದೆ. ಆದರೆ ಎಲ್.ಟಿ.ಟಿ.ಇ.ಯ ಪರಮೋಚ್ಚ ನಾಯಕರಾಗಿದ್ದ ವೇಲುಪಿಳ್ಳೆ ಪ್ರಭಾಕರನ್ ಹತ್ಯೆಯ ನಂತರ ಶ್ರೀಲಂಕೆಯ ತಮಿಳರ ಉಗ್ರಗಾಮಿ ಹೋರಾಟ ಸ್ಥಗಿತಗೊಂಡಿದೆ. ಶ್ರೀಲಂಕೆಯ ಸರ್ಕಾರವು ತಮ್ಮ ಸಂವಿಧಾನದ ಚೌಕಟ್ಟಿನಲ್ಲಿಯೇ ಸಮಸ್ಯೆಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದು ದೃಡ ನಿಲುವನ್ನು ತಳೆದಿದೆ.

©KTBS NOT TO BE REPUBLISHED

**ಚಟುವಟಿಕೆ:** ರಾಜೀವ್ ಗಾಂಧಿಯವರ ಹತ್ಯೆಯ ಬಗ್ಗೆ ಶಿಕ್ಷಕರಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

## ಭಾರತ ಮತ್ತು ಬಾಂಗ್ಲಾದೇಶ

ಬಾಂಗ್ಲಾದೇಶವು ಪಾಕಿಸ್ತಾನದ ಭಾಗವಾಗಿದ್ದು, ಅದನ್ನು ಪೂರ್ವ ಪಾಕಿಸ್ತಾನವೆಂದು ಕರೆಯಲಾಗಿತ್ತು. ಪೂರ್ವ ಪಾಕಿಸ್ತಾನವು 1960ರಿಂದಲೇ ಒಂದು ಪ್ರತ್ಯೇಕ ರಾಷ್ಟ್ರವಾಗಿ ಹೊರಹೊಮ್ಮಲು ಹೋರಾಟ ನಡೆಸಿತು. ಶೇಖ್ ಮುಜೀಬುರ್ ರೆಹಮಾನ್‌ರವರ ನೇತೃತ್ವದಲ್ಲಿ ಅವರ ಸಂಘಟನೆಯಾದ ಅವಾಮಿ ಲೀಗ್ ವಿಮೋಚನಾ ಚಳವಳಿಯನ್ನು ಮಾಡಿತು. ಪೂರ್ವ ಪಾಕಿಸ್ತಾನದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾದ ಹಿನ್ನಲೆಯಲ್ಲಿ ಭಾರತದ ಮಿಲಿಟರಿ ಪ್ರವೇಶ ಅನಿವಾರ್ಯವಾಯಿತು. 1971ರಲ್ಲಿ ನಡೆದ ನಿರ್ಣಾಯಕ ಯುದ್ಧದಲ್ಲಿ ಪಶ್ಚಿಮ ಪಾಕಿಸ್ತಾನವು ಸೋಲುವುದರೊಂದಿಗೆ ಪೂರ್ವ ಪಾಕಿಸ್ತಾನವು ಬಾಂಗ್ಲಾದೇಶ ಎನ್ನುವ ಹೊಸ ರಾಷ್ಟ್ರವಾಗಿ ಉದಯಿಸಿತು.

1972ರಲ್ಲಿ ಭಾರತ ಮತ್ತು ಬಾಂಗ್ಲಾದೇಶದ ಪ್ರಧಾನಿಗಳು ಢಾಕಾದಲ್ಲಿ ಸಭೆ ಸೇರಿ ಸ್ನೇಹ, ಸಹಕಾರ ಮತ್ತು ಶಾಂತಿಗಾಗಿ 25 ವರ್ಷಗಳ ಅವಧಿಯ ಒಪ್ಪಂದಕ್ಕೆ ಸಹಿ ಹಾಕಿದರು. ಇದರ ಪರಿಣಾಮವಾಗಿ ಎರಡು ರಾಷ್ಟ್ರಗಳ ನಡುವೆ ಇದ್ದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಿತು.

ಚಿತ್ತಗಾಂಗ್ ಪರ್ವತ ಪ್ರದೇಶಗಳಿಂದ ಭಾರತಕ್ಕೆ ವಲಸೆ ಬರುತ್ತಿರುವ ಚಕ್ಮಾ ನಿರಾಶ್ರಿತರ ಸಮಸ್ಯೆ, ಮಾದಕ ವಸ್ತುಗಳ ಅಕ್ರಮ ಕಳ್ಳಸಾಗಾಣಿಕೆ ಮುಂತಾದ ಸಮಸ್ಯೆಗಳು ಇನ್ನೂ ಬಗೆಹರಿಯಬೇಕಾಗಿವೆ. ಅಲ್ಲದೆ ಬಾಂಗ್ಲಾದೇಶದಿಂದ ಭಾರತಕ್ಕೆ ಬಂದ ಲಕ್ಷಾಂತರ ಅಕ್ರಮ ವಲಸಿಗರರ ಸಮಸ್ಯೆ ತೀವ್ರವಾಗಿದೆ. ಈಶಾನ್ಯ ಭಾರತದ ಅನೇಕ ಬಂಡುಕೋರ ಗುಂಪುಗಳಿಗೂ ಬಾಂಗ್ಲಾದೇಶವು ಆಶ್ರಯ ನೀಡುತ್ತಿರುವುದು ಗೊಂದಲಕ್ಕೀಡುಮಾಡಿದ ಸಂಗತಿಯಾಗಿದೆ. ಆದರೂ ಭಾರತಕ್ಕೆ ಬಾಂಗ್ಲಾದೇಶವು ಮಿತ್ರ ರಾಷ್ಟ್ರವಾಗಿಯೇ ಉಳಿದಿದೆ.

© KTBS NOT TO BE REPUBLISHED

**ಚಟುವಟಿಕೆ:** ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತದ ಪಾತ್ರವನ್ನು ಚರ್ಚಿಸಿರಿ.

## ಸಾರ್ಕ್ (SAARC)

ದಕ್ಷಿಣ ಏಷ್ಯದ ರಾಷ್ಟ್ರಗಳು ತಮ್ಮ ನಡುವೆ ಸಹಕಾರವನ್ನು ಪ್ರೋತ್ಸಾಹಿಸಲು ಪೂರಕವಾಗುವಂತೆ ಪ್ರಾದೇಶಿಕ ಸಂಘಟನೆ ಒಂದನ್ನು ಸ್ಥಾಪಿಸಲು ನಿರ್ಧರಿಸಿದವು. ಇದರ ಫಲವಾಗಿ 1985ರಲ್ಲಿ ದಕ್ಷಿಣ ಏಷ್ಯ ಪ್ರಾದೇಶಿಕ ಸಹಕಾರ ಸಂಸ್ಥೆ (South Asian Association for Regional Cooperation (SAARC) ಸಾರ್ಕ್ ಅಸ್ತಿತ್ವಕ್ಕೆ ಬಂದಿತು. ಮೂಲತಃ ಸಾರ್ಕ್ ಏಳು ರಾಷ್ಟ್ರಗಳನ್ನು ಒಳಗೊಂಡಿತ್ತು. ತದನಂತರ ಅಫ್‌ಘಾನಿಸ್ತಾನವನ್ನು (2007, 14ನೇ ಶೃಂಗಸಭೆ, ಹೊಸದಿಲ್ಲಿ) ಸಾರ್ಕ್‌ನ ಸದಸ್ಯರಾಷ್ಟ್ರವಾಗಿ ಸೇರಿಸಿಕೊಳ್ಳಲಾಯಿತು

ಭಾರತ, ಬಾಂಗ್ಲಾದೇಶ, ಭೂತಾನ್, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ, ಶ್ರೀಲಂಕಾ ಹಾಗೂ ಅಫ್‌ಘಾನಿಸ್ತಾನ ಇವು ಸಾರ್ಕ್‌ನ ಎಂಟು ಸದಸ್ಯರಾಷ್ಟ್ರಗಳು.

ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೆಗಾಗಿ ಭಾರತವು ಪ್ರತ್ಯೇಕ ಉಪಗ್ರಹ ಒಂದನ್ನು ಉಡಾವಣೆಗೊಳಿಸಿ ಇದರ ಬಳಕೆಯನ್ನು ಎಲ್ಲಾ ಸಾರ್ಕ್ ಸದಸ್ಯ ರಾಷ್ಟ್ರಗಳಿಗೆ ಕೊಡುಗೆಯಾಗಿ ನೀಡಿದೆ.

### ಸಾರ್ಕ್‌ನ ಉದ್ದೇಶಗಳು

- ದಕ್ಷಿಣ ಏಷ್ಯ ರಾಷ್ಟ್ರಗಳ ನಡುವೆ ಪರಸ್ಪರ ನಂಬಿಕೆ ಮತ್ತು ವಿಶ್ವಾಸಗಳನ್ನು ವೃದ್ಧಿಸುವುದು.
- ದಕ್ಷಿಣ ಏಷ್ಯ ಜನತೆಯ ಕ್ಷೇಮಾಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.
- ಆರ್ಥಿಕ, ಸಾಂಸ್ಕೃತಿಕ, ತಾಂತ್ರಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಹಾಗೂ ಸಹೋದ್ಯಮ.
- ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಡನೆ ಸಂಬಂಧವನ್ನು ಬಲಪಡಿಸುವುದು.

ಸಾರ್ಕ್ ಸದಸ್ಯರಾಷ್ಟ್ರಗಳು ಭಾರತದಿಂದ ಏಕಮುಖ ನಿರೀಕ್ಷೆ ಮಾಡುತ್ತಿರುವುದು, ಭಾರತವನ್ನು ಸಂಶಯ ಮತ್ತು ಭಯದ ದೃಷ್ಟಿಯಿಂದ ನೋಡುವುದು ಇದರ ಬೆಳವಣಿಗೆಗೆ ಅಡ್ಡಿಯಾಗಿ ಪರಿಣಮಿಸಿದೆ.

NOT TO BE REPUBLISHED ©KTBS

## ಅಭ್ಯಾಸಗಳು

### I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1 ಭಾರತದ ನೆರೆ ದೇಶಗಳಾವುವು?

2 ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸೌಹಾರ್ದಕ್ಕೆ ಅಡ್ಡಿ ಬರುವ ಅಂಶಗಳನ್ನು ಪಟ್ಟಿ ಮಾಡಿರಿ.

3 ಚೀನ ಮತ್ತು ಭಾರತ ನಡುವಿನ ಸಂಘರ್ಷಕ್ಕೆ ಮುಖ್ಯ ಕಾರಣಗಳಾವುವು?

4 ಭಾರತ ಮತ್ತು ಪಾಕಿಸ್ತಾನದ ನಡುವೆ ಇಂದಿಗೂ ಯಾವ ಭೂಪ್ರದೇಶದ ಬಗ್ಗೆ ಭಿನ್ನಭಿಪ್ರಾಯವಿದೆ?

5 ಬಾಂಗ್ಲಾದೇಶ ಸ್ವಾತಂತ್ರ್ಯ ಪಡೆಯಲು ಭಾರತವು ವಹಿಸಿದ ಪಾತ್ರವನ್ನು ವಿಶ್ಲೇಷಿಸಿರಿ.

6 ಎಲ್.ಟಿ.ಟಿ.ಇ. ರಾಜೀವ್ ಗಾಂಧಿಯವರ ಹತ್ಯೆಗೆ ಸಂಚು ನಡೆಸಲು ಕಾರಣವೇನು?

7 ಭಾರತ ಮತ್ತು ಬಾಂಗ್ಲಾದೇಶಗಳ ನಡುವೆ ಇರುವ ಮುಖ್ಯ ಸಮಸ್ಯೆಗಳಾವುವು?

8 1962ರ ಚೀನ–ಭಾರತ ಯುದ್ಧದ ಪರಿಣಾಮವೇನು?

9 ಸಾರ್ಕ್ ಸ್ಥಾಪನೆಯ ಉದ್ದೇಶಗಳಾವುವು?



**ಚಟುವಟಿಕೆಗಳು**

1 ಭಾರತದ ನೆರೆ ದೇಶಗಳ ರಾಷ್ಟ್ರಧ್ವಜಗಳ ಸಚಿತ್ರ ಮಾಹಿತಿಯನ್ನು ಸಂಗ್ರಹಿಸಿರಿ.

2 ವಿಶ್ವದ ಭೂಪಟದಲ್ಲಿ ಭಾರತದ ನೆರೆಯ ದೇಶಗಳನ್ನು ಗುರುತಿಸಿರಿ.

@KTBS NOT TO BE REPUBLISHED

# ಅಧ್ಯಾಯ 24

# ವಿಶ್ವಸಂಸ್ಥೆ

W6A3F9

## ಪಾಠದ ಪರಿಚಯ

ಇತಿಹಾಸದಲ್ಲೇ ಅತಿ ಭೀಕರವಾದ ಎರಡನೆಯ ಮಹಾಯುದ್ಧವು ಯುರೋಪಿನ ರಾಷ್ಟ್ರಗಳ ನಡುವೆ ಸತತ ಆರು ವರ್ಷಗಳ ಕಾಲ ನಡೆದು (1939–1945) ಸುಮಾರು ನಾಲ್ಕು ಕೋಟಿ ಜನ ಮತ್ತು ಅಪಾರ ಪ್ರಮಾಣದ ಸ್ವತ್ತುಗಳು ವಿನಾಶಗೊಂಡವು.

ಉಗ್ರ ಹಿಂಸೆಯಿಂದ ತತ್ತರಿಸಿದ ಮನುಕುಲವು ಶಾಶ್ವತ ಶಾಂತಿಗಾಗಿ ಹಂಬಲಿಸುತ್ತಿತ್ತು. ಈ ವಿಷಮ ಕಾಲಘಟ್ಟದಲ್ಲಿ ಐವತ್ತೊಂದು ರಾಷ್ಟ್ರಗಳ ಪ್ರತಿನಿಧಿಗಳು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಸಮಾವೇಶಗೊಂಡು 1945 ಅಕ್ಟೋಬರ್ 24ರಂದು ಶಾಶ್ವತ ಶಾಂತಿಗಾಗಿ ವಿಶ್ವಸಂಸ್ಥೆಯನ್ನು ಸ್ಥಾಪಿಸಿದರು.

ಈ ಪಾಠದಲ್ಲಿ ವಿಶ್ವಸಂಸ್ಥೆಯ ಸ್ಥಾಪನೆಯ ಹಿನ್ನೆಲೆ, ಮೂಲ ಉದ್ದೇಶಗಳು, ಅಂಗಸಂಸ್ಥೆಗಳು, ವಿಶೇಷ ಸೇವಾಸಂಸ್ಥೆಗಳು ಮತ್ತು ಅವುಗಳ ಸಾಧನೆಗಳನ್ನು ವಿವರಿಸಲಾಗಿದೆ. ವಿಶ್ವಸಂಸ್ಥೆಯಲ್ಲಿ ಭಾರತವು ವಹಿಸಿದ ಪಾತ್ರವನ್ನು ಕೂಡ ತಿಳಿಸಲಾಗಿದೆ.

## ಸಾಮರ್ಥ್ಯಗಳು

1 ವಿಶ್ವಸಂಸ್ಥೆಯ ಧ್ಯೆಯೋದ್ದೇಶ ಮತ್ತು ಆದರ್ಶಗಳನ್ನು ಅರ್ಥೈಸಿಕೊಳ್ಳುವುದು.

2 ವಿಶ್ವಸಂಸ್ಥೆಯ ಅಂಗಸಂಸ್ಥೆಗಳ ಕಾರ್ಯವಿಧಾನಗಳನ್ನು ಅರಿಯುವುದು.

3 ವಿಶ್ವಸಂಸ್ಥೆಯು ಜಗತ್ತಿನ ರಾಷ್ಟ್ರಗಳ ನಡುವೆ ಶಾಂತಿ ಸೌಹಾರ್ದವನ್ನು ಸಾಧಿಸುವ ನಿಟ್ಟಿನಲ್ಲಿ ಮಾಡಿರುವ ಸಾಧನೆಗಳನ್ನು ಮೆಚ್ಚುವುದು.

4 ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ವಿಶ್ವಸಂಸ್ಥೆಯಲ್ಲಿ ಭಾರತವು ಸಕ್ರಿಯವಾಗಿ ನಿರ್ವಹಿಸಿದ ಪಾತ್ರವನ್ನು ಮೆಚ್ಚುವುದು.

NOT TO BE REPUBLISHED @KTBS

ಇಲ್ಲಿ ಕೊಟ್ಟಿರುವ ಲಾಂಛನವನ್ನು ಗಮನಿಸಿ. ಲಾಂಛನದ ಮಧ್ಯ ಭಾಗದಲ್ಲಿ ಭೂಖಂಡಗಳನ್ನು ತೋರಿಸಲಾಗಿದೆ. ಲಾಂಛನದ ಎರಡೂ ಕಡೆಗಳಲ್ಲಿ ಆಲಿವ್ ರೆಂಬೆಗಳಿವೆ. ಇವು ಏನನ್ನು ಸೂಚಿಸುತ್ತವೆ?

ಲಾಂಛನದಲ್ಲಿ ತೋರಿಸಲಾದ ಭೂಖಂಡಗಳು ಜಗತ್ತಿನ ಎಲ್ಲಾ ದೇಶಗಳನ್ನು ಮತ್ತು ಆಲಿವ್ ರೆಂಬೆಗಳು ಸ್ನೇಹ ಮತ್ತು ಶಾಂತಿ ಸೂಚಿಸುತ್ತವೆ. ಇದು ವಿಶ್ವಸಂಸ್ಥೆಯ ಮೂಲ ಆದರ್ಶವನ್ನು ಬಿಂಬಿಸುವ ಲಾಂಛನವಾಗಿದೆ.



*ವಿಶ್ವಸಂಸ್ಥೆಯ ಲಾಂಛನ*

## ವಿಶ್ವ ಸಂಸ್ಥೆಯ ಉದಯ

### ವಿಶ್ವಸಂಸ್ಥೆ ಎಂದರೇನು? ಅದನ್ನು ಏತಕ್ಕಾಗಿ ಸ್ಥಾಪಿಸಲಾಯಿತು ಗೊತ್ತೆ?

ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಯುರೋಪಿನ ದೇಶಗಳ ನಡುವೆ ಅತಿ ಭೀಕರ ಯುದ್ಧವೊಂದು ಪ್ರಾರಂಭವಾಯಿತು. ಅಲ್ಪಕಾಲದಲ್ಲೇ ಇತರ ಖಂಡಗಳ ದೇಶಗಳು ಯುದ್ಧದಲ್ಲಿ ಸೇರಿಕೊಂಡವು. ಇದೇ ಎರಡನೆಯ ಮಹಾಯುದ್ಧ. ಯುದ್ಧದ ಪರಿಣಾಮವಾಗಿ ಅಸಂಖ್ಯಾತ ಜೀವ, ಸ್ವತ್ತುಗಳು ನಾಶವಾದವು. ಯುದ್ಧಾಗ್ನಿಯಿಂದ ಬಳಲಿ ಹೋದ ಮನುಕುಲವು ಯುದ್ಧಮುಕ್ತ ಶಾಶ್ವತ ಶಾಂತಿಯಿಂದ ಕೂಡಿದ ಜಗತ್ತಿಗಾಗಿ ಹಂಬಲಿಸುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್, ಬ್ರಿಟಿಷ್ ಪ್ರಧಾನಿ ಚರ್ಚಿಲ್ ಹಾಗೂ ರಷ್ಯದ ಸರ್ವಾಧಿಕಾರಿ ಸ್ಟಾಲಿನ್ ಮುಂತಾದವರ ಮುಂದಾಳು ತನದಲ್ಲಿ ಐವತ್ತೊಂದು ದೇಶಗಳ ಪ್ರತಿನಿಧಿಗಳು ಸಮಾವೇಶಗೊಂಡು ವಿಶ್ವದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುವ ನಿರ್ಣಯವನ್ನು ಕೈಗೊಂಡರು. ಇದನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಸ್ಥಾಪಿಸಿದ ಸಂಸ್ಥೆಯೇ ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘ (ಯು.ಎನ್.ಓ.) ಇದು 1945 ಅಕ್ಟೋಬರ್ 24ರಂದು ಜನ್ಮತಾಳಿತು.

> ಹಿಂದೆ UNO ಎಂದು ಇದ್ದದ್ದನ್ನು, ಅದು ಒಂದು ಸಂಘ ಅಲ್ಲ ಎಂಬ ಕಾರಣಕ್ಕಾಗಿ, UN ಎಂದಷ್ಟೇ ಬಳಸಲಾಗುತ್ತದೆ. ಯಾಕೆಂದರೆ ಅದು ವಿಶ್ವರಾಷ್ಟ್ರಗಳನ್ನು ಪ್ರತಿನಿಧಿಸುತ್ತದೆ. UN ಎಂದರೆ ಯುನೈಟೆಡ್ ನೇಷನ್ಸ್.

@KTBS NOT TO BE REPUBLISHED

### ವಿಶ್ವಸಂಸ್ಥೆಯ ಮೂಲ ಉದ್ದೇಶಗಳು

- ಯುದ್ಧಗಳನ್ನು ತಡೆಗಟ್ಟಿ ವಿಶ್ವದಲ್ಲಿ ಶಾಶ್ವತ ಶಾಂತಿ ಮತ್ತು ಭದ್ರತೆಯ ಸ್ಥಾಪನೆ.
- ರಾಷ್ಟ್ರಗಳ ನಡುವೆ ಸ್ನೇಹ ಸೌಹಾರ್ದವನ್ನು ಸಾಧಿಸುವುದು.
- ಅಂತಾರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಹಕರಿಸುವುದು.
- ಮಾನವ ಹಕ್ಕುಗಳ ಮೇಲೆ ಗೌರವವನ್ನು ಬೆಳೆಸುವುದು.
- ಮೇಲಿನ ಗುರಿಗಳ ಸಾಧನೆಗಾಗಿ ಸಮನ್ವಯ ಕೇಂದ್ರವಾಗಿ ಕಾರ್ಯಮಾಡುವುದು.

## ವಿಶ್ವಸಂಸ್ಥೆಯ ಅಂಗಸಂಸ್ಥೆಗಳು

ವಿಶ್ವಸಂಸ್ಥೆಯ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಯಾವ ಯಾವ ಅಂಗ ಸಂಸ್ಥೆಗಳನ್ನು ರಚಿಸಲಾಗಿದೆ?




## 1 ಮಹಾಸಭೆ

ಇದು ವರ್ಷಕ್ಕೊಮ್ಮೆ ಸೆಪ್ಟಂಬರ್ ತಿಂಗಳಲ್ಲಿ ಸಮಾವೇಶಗೊಳ್ಳುತ್ತದೆ. ಸದಸ್ಯ ರಾಷ್ಟ್ರಗಳು ಮಹಾಸಭೆಯಲ್ಲಿ ಪಾಲ್ಗೊಳ್ಳುತ್ತವೆ. ಪ್ರತಿ ಸದಸ್ಯ ರಾಷ್ಟ್ರದ ಐದು ಜನ ಪ್ರತಿನಿಧಿಗಳಿದ್ದರೂ ಆ ರಾಷ್ಟ್ರವು ಒಂದೇ ಮತವನ್ನು ಚಲಾಯಿಸುವ ಹಕ್ಕನ್ನು ಹೊಂದಿರುತ್ತದೆ. ಮಹಾಸಭೆಯು ವಿಶ್ವಸಂಸ್ಥೆಯ ಸಂಸತ್ತಿನಂತೆ ಕಾರ್ಯನಿರ್ವಹಿಸುತ್ತದೆ. ಪ್ರಸ್ತುತ (2022) ವಿಶ್ವದ 193 ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳಾಗಿವೆ. ಸುಡಾನ್ ವಿಶ್ವಸಂಸ್ಥೆಯ 193ನೇ ಸದಸ್ಯರಾಷ್ಟ್ರ.

## 2 ಭದ್ರತಾ ಮಂಡಳಿ

ಭದ್ರತಾ ಮಂಡಳಿಯು ವಿಶ್ವಸಂಸ್ಥೆಯ ಕಾರ್ಯಾಂಗವಿದ್ದಂತೆ. ಮಹಾಸಭೆಯು ಕೈಗೊಳ್ಳುವ ನಿರ್ಣಯಗಳ ಕುರಿತು ಸಲಹೆ ನೀಡುವುದು, ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳುವುದು ಇದರ ಅತಿ ಮುಖ್ಯ ಕಾರ್ಯಗಳಾಗಿವೆ.

ಭದ್ರತಾ ಮಂಡಳಿಯಲ್ಲಿ 15 ಸದಸ್ಯರಾಷ್ಟ್ರಗಳ ಪ್ರತಿನಿಧಿಗಳಿರುತ್ತಾರೆ. ಅವರಲ್ಲಿ ಅಮೆರಿಕ, ರಷ್ಯ, ಬ್ರಿಟನ್, ಫ್ರಾನ್ಸ್ ಮತ್ತು ಚೀನ ಶಾಶ್ವತ ಸದಸ್ಯರಾಷ್ಟ್ರಗಳು. ಉಳಿದ ಹತ್ತು ಸದಸ್ಯರಾಷ್ಟ್ರಗಳನ್ನು ಮಹಾಸಭೆಯು ಎರಡು ವರ್ಷಗಳ ಅವಧಿಗೆ ತಾತ್ಕಾಲಿಕ ಸದಸ್ಯರೆಂದು ಚುನಾಯಿಸುತ್ತದೆ.

ಭದ್ರತಾ ಮಂಡಳಿಯಲ್ಲಿ ಯಾವುದೇ ನಿರ್ಣಯ ಅಂಗೀಕೃತವಾಗಲು ಒಂಬತ್ತು ಸದಸ್ಯ ರಾಷ್ಟ್ರಗಳ ಒಪ್ಪಿಗೆ ಅವಶ್ಯಕ. ಆದರೆ ಶಾಶ್ವತ ಸದಸ್ಯ ರಾಷ್ಟ್ರಗಳ ಪೈಕಿ ಯಾವುದೇ ಒಂದು ರಾಷ್ಟ್ರವು ನಿರ್ಣಯವನ್ನು ವಿರೋಧಿಸಿದರೂ ಆ ನಿರ್ಣಯವು ಅಂಗೀಕರಿಸಲ್ಪಡುವುದಿಲ್ಲ. ಶಾಶ್ವತ ಸದಸ್ಯರಾಷ್ಟ್ರದ ವಿರೋಧಿಸುವ ಈ ಅಧಿಕಾರವನ್ನು 'ವಿಟೋ' ಎನ್ನುವರು.

©KTBS NOT TO BE REPUBLISHED

**ಚಟುವಟಿಕೆ:** ಮಹಾಸಭೆಯ ಬಹುಮತದ ತೀರ್ಮಾನ ಅಂತಿಮವೊ? ಅಥವಾ ಭದ್ರತಾ ಮಂಡಳಿಯ ವಿಟೋ ಅಧಿಕಾರ ಅಂತಿಮವೊ? ಚರ್ಚಿಸಿರಿ.

### 3 ಆರ್ಥಿಕ ಮತ್ತು ಸಾಮಾಜಿಕ ಮಂಡಳಿ

ಪ್ರಪಂಚದ ಎಲ್ಲಾ ದೇಶಗಳು ಸಾಮಾನ್ಯವಾಗಿ ಎದುರಿಸುವ ಅನೇಕ ಸಮಸ್ಯೆಗಳಿವೆ. ವರ್ಣ, ಭಾಷೆ, ಧರ್ಮ, ಗಡಿಗಳ ಹಿನ್ನೆಲೆಯಲ್ಲಿ ನಡೆಯುವ ಮಾನವ ಹಕ್ಕುಗಳ ಉಲ್ಲಂಘನೆಯ ಸಮಸ್ಯೆಗಳನ್ನು ಪರಿಹರಿಸುವ ಜವಾಬ್ದಾರಿಯನ್ನು ಇದು ಹೊಂದಿದೆ.

ನಿರಕ್ಷರತೆ, ಬಡತನ, ಹಸಿವು, ನಿರಾಶ್ರಿತರ ಪುನರ್ವಸತಿ, ಆರೋಗ್ಯ, ಸ್ತ್ರೀಸಮಾನತೆ, ಶಿಶು ಸಂರಕ್ಷಣೆ, ಮಾದಕ ವಸ್ತುಗಳ ನಿಯಂತ್ರಣ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಮತ್ತು ನೆರವನ್ನು ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯು ನೀಡುತ್ತದೆ.

### 4 ಅಂತಾರಾಷ್ಟ್ರೀಯ ನ್ಯಾಯಾಲಯ

ಅಂತಾರಾಷ್ಟ್ರೀಯ ನ್ಯಾಯಾಲಯವು ನೆದರ್‌ಲ್ಯಾಂಡಿನ ಹೇಗ್ ನಗರದಲ್ಲಿದೆ. ಈ ನ್ಯಾಯಾಲಯದಲ್ಲಿ ಹದಿನೈದು ಮಂದಿ ನ್ಯಾಯಾಧೀಶರಿರುತ್ತಾರೆ. ಭದ್ರತಾ ಮಂಡಳಿ ಹಾಗೂ ಮಹಾಸಭೆಯ ಸದಸ್ಯರು ಇವರನ್ನು ಚುನಾಯಿಸುತ್ತಾರೆ. ಸದಸ್ಯರಾಷ್ಟ್ರಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸುವುದು ಅಂತಾರಾಷ್ಟ್ರೀಯ ನ್ಯಾಯಾಲಯದ ಕಾರ್ಯವಾಗಿದೆ.

### 5 ಪ್ರಧಾನ ಕಾರ್ಯಾಲಯ

ನ್ಯೂಯಾರ್ಕಿನ ಬಳಿಯ ಲೇಕ್ ಸಕ್ಸೆಸ್ ನಗರದಲ್ಲಿ ವಿಶ್ವಸಂಸ್ಥೆಯ ಶಾಶ್ವತ ಪ್ರಧಾನ ಕಾರ್ಯಾಲಯವಿದೆ. ಮಹಾಕಾರ್ಯದರ್ಶಿಯು ಇದರ ಆಡಳಿತ ನಿರ್ವಹಣೆಯನ್ನು ಮಾಡುವ ಮುಖ್ಯ ಅಧಿಕಾರಿ. ಜಾಗತಿಕ ಶಾಂತಿಯನ್ನು ಕದಡುವ ಯಾವುದೇ ಸಂಗತಿಯನ್ನು ವಿಶ್ವಸಂಸ್ಥೆಯ ಗಮನಕ್ಕೆ ತಕ್ಷಣ ತಂದು ಪರಿಹಾರ ಕಂಡುಕೊಳ್ಳುವ ಜವಾಬ್ದಾರಿ ಮಹಾಕಾರ್ಯದರ್ಶಿಗಿದೆ.



*ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ*

© KTBS NOT TO BE REPUBLISHED

ಈಗಿನ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಅಂಟೋನಿಯೊ ಗುಟೆರಸ್ (ಪೋರ್ಚುಗಲ್). ಮಹಾಸಭೆಯಲ್ಲಿ ಆಯ್ಕೆಯಾದ ಅಭ್ಯರ್ಥಿಯು ಭದ್ರತಾ ಮಂಡಳಿಯ ಅನುಮೋದನೆಗೆ ಒಳಪಟ್ಟು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಳ್ಳುತ್ತಾರೆ.



*ಅಂಟೋನಿಯೊ ಗುಟೆರಸ್ (ಪೋರ್ಚುಗಲ್)*

### 6 ಧರ್ಮದರ್ಶಿ ಮಂಡಳಿ

ವಿಶ್ವಸಂಸ್ಥೆಯು ಸ್ಥಾಪನೆಯಾದ ಕಾಲದಲ್ಲಿ ಹನ್ನೊಂದು ಪ್ರದೇಶಗಳಲ್ಲಿ ಇನ್ನೂ ಸ್ವಯಂ ಆಡಳಿತವಿರಲಿಲ್ಲ. ಇವುಗಳ ಹಿತಾಸಕ್ತಿಯನ್ನು ನೋಡಿಕೊಳ್ಳಲು ಐದು ಸದಸ್ಯರಾಷ್ಟ್ರಗಳ ಮಂಡಳಿಯನ್ನು ವಿಶ್ವಸಂಸ್ಥೆಯ ಅಂಗಸಂಸ್ಥೆಯಾಗಿ ರಚಿಸಲಾಯಿತು. ಇದೇ ಧರ್ಮದರ್ಶಿ ಮಂಡಳಿ. 1994ರಲ್ಲಿ ಈ ಎಲ್ಲಾ ಪ್ರದೇಶಗಳು ಸ್ವತಂತ್ರಗೊಂಡಿವೆ.

### ವಿಶ್ವಸಂಸ್ಥೆಯ ಧ್ವಜ ಮತ್ತು ಆಡಳಿತ ಭಾಷೆ

ವಿಶ್ವಸಂಸ್ಥೆಗೆ ತನ್ನದೇ ಆದ ಧ್ವಜವಿದೆ. ಧ್ವಜವು ತಿಳಿನೀಲಿ ಬಣ್ಣದ ಹಿನ್ನೆಲೆಯನ್ನು ಹೊಂದಿದ್ದು ಮಧ್ಯದಲ್ಲಿ ವಿಶ್ವಸಂಸ್ಥೆಯ ಲಾಂಛನವಿದೆ. ಪ್ರತಿವರ್ಷ ಅಕ್ಟೋಬರ್ 24ರಂದು ವಿಶ್ವಸಂಸ್ಥೆಯ ದಿನವನ್ನು ಪ್ರಪಂಚದ ಎಲ್ಲೆಡೆ ಆಚರಿಸಲಾಗುತ್ತದೆ.



*ವಿಶ್ವಸಂಸ್ಥೆಯ ಧ್ವಜ*

ವಿಶ್ವಸಂಸ್ಥೆಯ ಆಡಳಿತ ಭಾಷೆಯಾಗಿ ಇಂಗ್ಲಿಷ್, ರಷ್ಯನ್, ಸ್ಪಾನಿಷ್, ಚೀನಿ, ಫ್ರೆಂಚ್, ಅರೇಬಿಕ್ ಇತ್ಯಾದಿ ಭಾಷೆಗಳು ಪ್ರಚಲಿತದಲ್ಲಿವೆ. ಸಾಮಾನ್ಯವಾಗಿ ಇಂಗ್ಲಿಷ್ ಬಳಸಲಾಗುತ್ತದೆ.

## ವಿಶೇಷ ಸೇವಾಸಂಸ್ಥೆಗಳು

ವಿಶ್ವಸಂಸ್ಥೆಯ ಆಶ್ರಯದಲ್ಲಿ ಹಲವಾರು ವಿಶೇಷ ಸೇವಾಸಂಸ್ಥೆಗಳು (ಉಪಾಂಗಗಳು) ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಕೆಲಸ ಮಾಡುತ್ತಿವೆ. ಕೆಲವು ಪ್ರಮುಖ ಸೇವಾಸಂಸ್ಥೆಗಳೆಂದರೆ–

©KTBS NOT TO BE REPUBLISHED

- ವಿಶ್ವಸಂಸ್ಥೆಯ ಶೈಕ್ಷಣಿಕ. ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಘ (United Nations Educational, Scientific and Cultural Organisation - UNESCO).

  ಇದರ ಪ್ರಧಾನ ಕಾರ್ಯಾಲಯ ಫ್ರಾನ್ಸಿನ ಪ್ಯಾರಿಸ್‌ನಲ್ಲಿದೆ.
- ಆಹಾರ ಮತ್ತು ಕೃಷಿ ಸಂಘ (Food and Agricultural Organisation - FAO). ಇದರ ಪ್ರಧಾನ ಕಾರ್ಯಾಲಯ ಇಟಲಿಯ ರೋಮ್ ನಗರದಲ್ಲಿದೆ.
- ವಿಶ್ವ ಆರೋಗ್ಯ ಸಂಸ್ಥೆ (World Health Organisation - WHO). ಇದರ ಪ್ರಧಾನ ಕಾರ್ಯಾಲಯ ಸ್ವಿಟ್ಜರ್‌ಲೆಂಡ್‌ನ ಜಿನೀವದಲ್ಲಿದೆ.
- ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಕ್ಕಳ ತುರ್ತುನಿಧಿ (United Nations International Children's Emergency Fund - UNICEF).

  ಇದರ ಪ್ರಧಾನ ಕಾರ್ಯಾಲಯ ಅಮೆರಿಕದ ನ್ಯೂಯಾರ್ಕ್‌ನಲ್ಲಿದೆ.

## ವಿಶ್ವಸಂಸ್ಥೆಯ ಸಾಧನೆಗಳು ಮತ್ತು ಇತಿಮಿತಿಗಳು

- **ಆರ್ಥಿಕ ಕೊಡುಗೆ:** ಆರೋಗ್ಯ, ಸಾರಿಗೆ ಸಂಪರ್ಕ, ಆಹಾರ ವಿಜ್ಞಾನ, ಶಿಕ್ಷಣ ಮುಂತಾದ ರಂಗಗಳಿಗೆ ವಿಶ್ವಸಂಸ್ಥೆಯು ಅಪಾರ ಆರ್ಥಿಕ ನೆರವು ನೀಡಿದೆ.
- **ಸಾಮಾಜಿಕ ಕೊಡುಗೆ:** ವಿಶ್ವಸಂಸ್ಥೆಯು ಕೋಟ್ಯಂತರ ನಿರಾಶ್ರಿತರಿಗೆ ನೆರವು ಒದಗಿಸಿದೆ. ಎಳೆಯ ಮಕ್ಕಳು, ತಾಯಂದಿರು ಹಾಗೂ ದುರ್ಬಲ ವರ್ಗಗಳ ವಿಶೇಷ ಅವಶ್ಯಕತೆಗಳನ್ನು ಪೂರೈಸಿ ಮೆಚ್ಚತಕ್ಕಂಥ ಸೇವೆ ಸಲ್ಲಿಸಿದೆ.
- **ಮಾನವ ಹಕ್ಕುಗಳ ಘೋಷಣೆ:** ಮಾನವ ಹಕ್ಕುಗಳ ಘೋಷಣೆಯು ವಿಶ್ವಸಂಸ್ಥೆಯು ಮಾಡಿರುವ ಒಂದು ವಿಶೇಷ ಸಾಧನೆಯಾಗಿದೆ. (ಡಿಸೆಂಬರ್ 10, 1948)
- **ಹೊಸ ರಾಷ್ಟ್ರಗಳ ಉದಯಕ್ಕೆ ನೆರವು:** ವಿದೇಶಿಯರ ಆಳ್ವಿಕೆಯಲ್ಲಿದ್ದ ಅನೇಕ ವಸಾಹತುಗಳು ಸ್ವತಂತ್ರ ರಾಷ್ಟ್ರಗಳಾಗಿ ಉದಯಿಸಲು ವಿಶ್ವಸಂಸ್ಥೆ ಶ್ರಮಿಸಿದೆ.
- **ಶಾಂತಿ ಸ್ಥಾಪನೆ:** ಎರಡು ಮಹಾಯುದ್ಧಗಳಿಂದ ಜರ್ಜರಿತಗೊಂಡ ಜಗತ್ತಿಗೆ ಶಾಂತಿಯ ಭರವಸೆಯನ್ನು ಕೊಡುವುದರ ಮೂಲಕ ಮತ್ತೊಂದು ಮಹಾಯುದ್ಧ ನಡೆಯದಂತೆ ವಿಶ್ವಸಂಸ್ಥೆ ತಡೆಗಟ್ಟಿದೆ. 1945ರ ನಂತರ ಅಣ್ವಸ್ತ್ರ ಬಳಕೆಯಾಗದಿರುವುದು ವಿಶ್ವಸಂಸ್ಥೆಯ ಮಹಾಸಾಧನೆಯಾಗಿದೆ.

ಜಗತ್ತಿನಲ್ಲಿ ಅನೇಕ ಕದನಗಳು ನಡೆದಿದ್ದರೂ ಅವುಗಳನ್ನು ನಿಯಂತ್ರಿಸಲು ವಿಶ್ವಸಂಸ್ಥೆ ಸಾಧ್ಯವಾದ ಎಲ್ಲ ಮಾರ್ಗಗಳನ್ನು ಅನುಸರಿಸಿದೆ.

©KTBS NOT TO BE REPUBLISHED

- ಸೋವಿಯತ್ ರಷ್ಯದ ವಿಘಟನೆಯ ನಂತರ ಶೀತಲ ಸಮರವು ಕೊನೆಗೊಂಡಿತು. ಈ ಬದಲಾದ ಸನ್ನಿವೇಶದಲ್ಲಿ ಅಮೆರಿಕವು ಜಗತ್ತಿನ ಎಲ್ಲ ರಾಷ್ಟ್ರಗಳ ನಾಯಕ ತಾನೇ ಎಂಬಂತೆ ದೊಡ್ಡಣ್ಣನ ಮನೋಧರ್ಮವನ್ನು ಪ್ರದರ್ಶಿಸುತ್ತಿದೆ. ಇದು ಬಹುಮುಖಿ ಸಾಂಸ್ಕೃತಿಕ ಬದುಕಿಗೆ ಮಾರಕವಾಗಿದೆ.
- ವಿಶ್ವಸಂಸ್ಥೆಯ ಹಲವಾರು ನಿರ್ಣಯಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿಲ್ಲ. ತನ್ನ ಸದಸ್ಯರಾಷ್ಟ್ರಗಳ ಮಿಲಿಟರಿ ಶಕ್ತಿಯ ನೆರವಿನಿಂದಲೇ ಸಂಘರ್ಷಗಳನ್ನು ಎದುರಿಸಬೇಕಾಗಿರುವುದರಿಂದ ಸದಸ್ಯರಾಷ್ಟ್ರಗಳು ತಮ್ಮ ಮಿಲಿಟರಿ ಶಕ್ತಿಯನ್ನು ನೀಡಲು ನಿರಾಕರಿಸಿದ ಸಂದರ್ಭಗಳಲ್ಲಿ ಇಂತಹ ಬಿಕ್ಕಟ್ಟುಗಳು ಉಂಟಾಗಿವೆ. ವಿಶ್ವಸಂಸ್ಥೆ ಸ್ವಂತ ಸೇನಾಪಡೆಯನ್ನು ಹೊಂದಿಲ್ಲ.
- ಕಾಯಂ ಸದಸ್ಯರಾಷ್ಟ್ರಗಳ ಒಪ್ಪಿಗೆ ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಯಾವುದಾದರೂ ಒಂದು ಕಾಯಂ ಸದಸ್ಯರಾಷ್ಟ್ರ ಒಪ್ಪದಿದ್ದಾಗ ನಿರ್ಣಯ ಕೈಗೊಳ್ಳಲಾಗುವುದಿಲ್ಲ.

## ಭಾರತ ಮತ್ತು ವಿಶ್ವಸಂಸ್ಥೆ

1945ರಲ್ಲಿ ವಿಶ್ವಸಂಸ್ಥೆಯ ಸಂವಿಧಾನಕ್ಕೆ ಸಹಿ ಹಾಕಿರುವ ದೇಶಗಳಲ್ಲಿ ಭಾರತವು ಒಂದಾಗಿತ್ತು. ಸ್ವಾತಂತ್ರ್ಯಗೊಂಡ ನಂತರ ಭಾರತವು ಜಾಗತಿಕ ವ್ಯವಹಾರಗಳಲ್ಲಿ ಸಕ್ರಿಯ ಪಾತ್ರವಹಿಸಿದೆ.

- ಆರಂಭದಿಂದಲೇ ಭಾರತವು ವರ್ಣಭೇದ ನೀತಿಯನ್ನು ವಿರೋಧಿಸಿದೆ.
- ವಸಾಹತುಶಾಹಿಯ ನಿರ್ಮೂಲನಕ್ಕಾಗಿ ಭಾರತ ಸತತ ಯತ್ನ ನಡೆಸಿದೆ.
- ಅಣ್ವಸ್ತ್ರ ಪರೀಕ್ಷೆ ಪೂರ್ಣವಾಗಿ ನಿಲ್ಲಬೇಕೆಂದು ಒತ್ತಿ ಹೇಳಿದ ದೇಶಗಳಲ್ಲಿ ಭಾರತವು ಮೊದಲನೆಯದು. ಇದಲ್ಲದೆ ಭಾರತವು ಶಸ್ತ್ರಾಸ್ತ್ರ ನಿಯಂತ್ರಣ ಹಾಗೂ ವಿಶ್ವಶಾಂತಿಯನ್ನು ಸತತವಾಗಿ ಪ್ರತಿಪಾದಿಸಿದೆ.
- ದೇಶಗಳ ನಡುವೆ ಕದನಗಳು ನಡೆದಾಗ ಶಾಂತಿ ಸ್ಥಾಪನೆಗೆ ಭಾರತ ತನ್ನ ಸೈನ್ಯದ ತುಕಡಿಗಳನ್ನು ವಿಶ್ವಸಂಸ್ಥೆಯ ನೆರವಿಗೆ ಕಳುಹಿಸಿದೆ.

@KTBS NOT TO BE REPUBLISHED

- ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ವಿಶ್ವಸಂಸ್ಥೆಯ ಮಹಾಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆ.
- ಬೆನೆಗಲ್ ನರಸಿಂಗರಾವ್ ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿ ಮತ್ತು ಡಾ|| ನಾಗೇಂದ್ರ ಸಿಂಗ್ ಮುಖ್ಯ ನ್ಯಾಯಾಧೀಶರಾಗಿ ಸ್ಮರಣೀಯ ಸೇವೆಗೈದಿದ್ದಾರೆ.
- ಜನರಲ್ ಕೆ.ಎಸ್. ತಿಮ್ಮಯ್ಯ ಮತ್ತಿತರ ಭಾರತೀಯ ದಂಡನಾಯಕರು ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಯಲ್ಲಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ.

ಈಗ ಕಾಯಂ ಸದಸತ್ವ ಹೊಂದಿರುವ ರಾಷ್ಟ್ರಗಳು ಸ್ವಹಿತಾಸಕ್ತಿಗಳ ಹಿನ್ನೆಲೆಯಲ್ಲಿ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವವನ್ನು ಕೇವಲ ಐದು ರಾಷ್ಟ್ರಗಳಿಗೆ ಸೀಮಿತಗೊಳಿಸಿವೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಕಾಯಂ ಸದಸ್ಯತ್ವದ ಸ್ಥಾನ ಲಭಿಸದೆ ಇರುವುದು ವಿಪರ್ಯಾಸವೆ ಸರಿ.

## ಅಭ್ಯಾಸಗಳು

### I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1 ವಿಶ್ವಸಂಸ್ಥೆ ಯಾವಾಗ ಪ್ರಾರಂಭವಾಯಿತು?

2 ವಿಶ್ವಸಂಸ್ಥೆಯ ಸ್ಥಾಪನೆಗೆ ಮುಖ್ಯ ಕಾರಣರಾದವರು ಯಾರು?

3 'ವಿಶ್ವ ಸಂಸತ್ತು' ಎಂದು ಯಾವುದನ್ನು ಕರೆಯುತ್ತೇವೆ?

4 ಭದ್ರತಾ ಮಂಡಳಿಯ ಶಾಶ್ವತ ಸದಸ್ಯರಾಷ್ಟ್ರಗಳು ಯಾವುವು?

5 ವಿಶ್ವಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಇಬ್ಬರು ಭಾರತೀಯ ಮಹನೀಯರನ್ನು ಹೆಸರಿಸಿರಿ.

6 ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆಯನ್ನು ಕೈಗೊಳ್ಳಲು ಒಂದು ಕಾರಣವನ್ನು ತಿಳಿಸಿರಿ.

### II ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1 ವಿಶ್ವಸಂಸ್ಥೆಯ ಮೂಲ ಉದ್ದೇಶಗಳಾವುವು?

2 ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾರ್ಯವನ್ನು ವಿವರಿಸಿರಿ.

3 ವಿಶ್ವಸಂಸ್ಥೆಯ ನಾಲ್ಕು ಸಾಧನೆಗಳನ್ನು ಪಟ್ಟಿಮಾಡಿರಿ.

© KTBS NOT TO BE REPUBLISHED

4 ವಿಶ್ವಸಂಸ್ಥೆಯ ವಿಶೇಷ ಸೇವಾಸಂಸ್ಥೆಗಳನ್ನು ಹೆಸರಿಸಿರಿ.

5 'ವಿಟೋ' ಎಂದರೇನು?

6 ವಿಶ್ವಸಂಸ್ಥೆಯ ಎರಡು ಇತಿಮಿತಿಗಳನ್ನು ತಿಳಿಸಿರಿ.

## III ಖಾಲಿ ಬಿಟ್ಟ ಸ್ಥಳದಲ್ಲಿ ಸೂಕ್ತ ಉತ್ತರ ತುಂಬಿರಿ.

1 ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ __________ ನಗರದಲ್ಲಿದೆ.

2 ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ __________ ಯ ಮುಖ್ಯ ಕಾರ್ಯವಾಗಿದೆ.

3 ಭದ್ರತಾ ಮಂಡಳಿಯ ಒಟ್ಟು ಸದಸ್ಯ ಬಲ __________.

4 ಅಂತಾರಾಷ್ಟ್ರೀಯ ನ್ಯಾಯಾಲಯವು ನೆದರ್‌ಲ್ಯಾಂಡಿನ __________ ನಗರದಲ್ಲಿದೆ.

NOT TO BE REPUBLISHED ©KTBS



### ಚಟುವಟಿಕೆಗಳು

1 ವಿಶ್ವಸಂಸ್ಥೆಯ ವಿಶೇಷ ಸೇವಾಸಂಸ್ಥೆಗಳ ಲಾಂಛನಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿರಿ.

2 ವಿಶ್ವಸಂಸ್ಥೆಯ ವಿವಿಧ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಭಾರತೀಯರ ಭಾವಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿರಿ.

# ಭೂಗೋಳ ವಿಜ್ಞಾನ

| ಅಧ್ಯಾಯ 25 | ಆಸ್ಟ್ರೇಲಿಯ |
| --- | --- |

E2R5S1

**ಪಾಠದ ಪರಿಚಯ**

ಈ ಪಾಠದಲ್ಲಿ ಆಸ್ಟ್ರೇಲಿಯ ಖಂಡದ ಸ್ಥಾನ ಮತ್ತು ಸನ್ನಿವೇಶ, ಅದರ ಪ್ರಾಕೃತಿಕ ವಿಭಾಗಗಳು ಮತ್ತು ನದಿವ್ಯವಸ್ಥೆ, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ, ವ್ಯವಸಾಯ, ಪಶುಸಂಗೋಪನೆ, ಖನಿಜ ಮತ್ತು ಕೈಗಾರಿಕೆಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಕುರಿತು ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1 ಪ್ರಪಂಚದಲ್ಲಿ ಆಸ್ಟ್ರೇಲಿಯ ಖಂಡದ ಸ್ಥಾನ, ಸನ್ನಿವೇಶಗಳ ಬಗ್ಗೆ ತಿಳಿದುಕೊಳ್ಳುವುದು.

2 ಆಸ್ಟ್ರೇಲಿಯದ ಮೇಲ್ಮೈಲಕ್ಷಣ, ನದಿವ್ಯವಸ್ಥೆ, ವಾಯುಗುಣ ಮತ್ತು ಸಸ್ಯವರ್ಗಗಳ ಬಗ್ಗೆ ಅರಿಯುವುದು.

3 ಈ ಖಂಡದ ವ್ಯವಸಾಯ ಮತ್ತು ಪಶುಸಂಗೋಪನೆ ಬಗ್ಗೆ ತಿಳಿಯುವುದು.

4 ವಿವಿಧ ಖನಿಜಗಳು ಮತ್ತು ಕೈಗಾರಿಕೆಗಳ ಬಗ್ಗೆ ಪರಿಚಯ ಮಾಡಿಕೊಳ್ಳುವುದು.

5 ಜನಸಂಖ್ಯಾ ಗಾತ್ರ, ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳ ಬಗ್ಗೆ ತಿಳಿದುಕೊಳ್ಳುವುದು.

NOT TO BE REPUBLISHED ©KTBS

## ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಸ್ಥಾನ:** ಆಸ್ಟ್ರೇಲಿಯ ಖಂಡವು ಪೂರ್ಣವಾಗಿ ದಕ್ಷಿಣ ಮತ್ತು ಪೂರ್ವ ಗೋಳಾರ್ಧದಲ್ಲಿದೆ. ಇದು $10^{0}$ $45^{1}$ ದಕ್ಷಿಣದಿಂದ $43^{0}$ $39^{1}$ ದಕ್ಷಿಣ ಅಕ್ಷಾಂಶ ಹಾಗೂ $113^{0}$ $9^{1}$ ಪೂರ್ವದಿಂದ $153^{0}$ $39^{1}$ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಕರ ಸಂಕ್ರಾಂತಿ ವೃತ್ತವು ಹೆಚ್ಚು ಕಡಿಮೆ ಈ ಖಂಡದ ಮಧ್ಯಭಾಗದಲ್ಲಿ ಹಾಯ್ದು ಹೋಗಿದೆ.

**ವಿಸ್ತೀರ್ಣ:** ವಿಸ್ತೀರ್ಣ ಮತ್ತು ಜನಸಂಖ್ಯೆಗಳೆರಡರಲ್ಲೂ ಆಸ್ಟ್ರೇಲಿಯವು ಪ್ರಪಂಚದಲ್ಲಿ ಚಿಕ್ಕ ಭೂಖಂಡ. ತಾಸ್ಮೇನಿಯ ದ್ವೀಪವೂ ಸೇರಿದಂತೆ ಇದರ ಒಟ್ಟು ವಿಸ್ತೀರ್ಣ 76.82 ಲಕ್ಷ ಚ.ಕಿ.ಮೀ.ಗಳು. ಅಮೆರಿಕ ಸಂಯುಕ್ತ ಸಂಸ್ಥಾನಕ್ಕಿಂತ ಸ್ವಲ್ಪ ಚಿಕ್ಕದು ಮತ್ತು ಭಾರತಕ್ಕಿಂತ ಎರಡು ಪಟ್ಟು ದೊಡ್ಡದು. ಪ್ರಪಂಚದ ಏಳನೆಯ ಭೂಖಂಡವಾಗಿರುವ ಇದು ದಕ್ಷಿಣೋತ್ತರವಾಗಿ 3,940 ಕಿ.ಮೀ. ಉದ್ದ ಮತ್ತು ಪೂರ್ವಪಶ್ಚಿಮವಾಗಿ 4,350 ಕಿ.ಮೀ. ಅಗಲವಾಗಿದೆ. 19,310 ಕಿ.ಮೀ. ತೀರಪ್ರದೇಶ ಒಳಗೊಂಡಿದೆ.




*ಆಸ್ಟ್ರೇಲಿಯ (ರಾಜಕೀಯ)*

NOT TO BE REPUBLISHED @KTBS

ಆಸ್ಟ್ರೇಲಿಯ ಎಂಬ ಪದ ದಕ್ಷಿಣ ಎಂದು ಅರ್ಥ ಕೊಡುವ 'ಆಸ್ಟ್ರಲ್' (ಲ್ಯಾಟಿನ್) ಎಂಬುದರಿಂದ ಬಳಕೆಗೆ ಬಂದಿದೆ.

ಮಧ್ಯ ಮತ್ತು ದಕ್ಷಿಣ ಪೆಸಿಫಿಕ್ ಸಾಗರದಲ್ಲಿರುವ ಸುಮಾರು 10,000 ದ್ವೀಪ ಸಮೂಹಗಳಿಗೆ 'ಓಸೀನಿಯ' ಎನ್ನುವರು. ಇದರಲ್ಲಿ ಆಸ್ಟ್ರೇಲಿಯ ಖಂಡ ಪ್ರಮುಖವಾದುದು.

**ಭೌಗೋಳಿಕ ಸನ್ನಿವೇಶ:** ಆಸ್ಟ್ರೇಲಿಯವು ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳ ನಡುವೆ ನೆಲೆಸಿರುವ ದ್ವೀಪಖಂಡ. ಈ ಖಂಡದ ವಾಯುವ್ಯಕ್ಕೆ ತೈಮರ್, ಆರಾಫುರ ಸಮುದ್ರಗಳು, ಈಶಾನ್ಯಕ್ಕೆ ಟೊರ್ರೆಸ್ ಜಲಸಂಧಿ ಹಾಗೂ ಆಗ್ನೇಯದಲ್ಲಿ ತಾಸ್ಮನ್ ಸಮುದ್ರಗಳಿವೆ. ದಕ್ಷಿಣದಲ್ಲಿ ಗ್ರೇಟ್ ಆಸ್ಟ್ರೇಲಿಯನ್ ಬೈಟ್ ಇದೆ.

# ಪ್ರಾಕೃತಿಕ ವಿಭಾಗಗಳು ಮತ್ತು ನದಿಗಳ ವ್ಯವಸ್ಥೆ

**ಪ್ರಾಕೃತಿಕ ವಿಭಾಗಗಳು:** ಆಸ್ಟ್ರೇಲಿಯದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಶೇ.94 ಭಾಗವು ಸಮುದ್ರಮಟ್ಟಕ್ಕೆ 600 ಮೀ.ಗಳಿಗಿಂತ ತಗ್ಗಿನಲ್ಲಿದ್ದು ಸಮತಟ್ಟಾಗಿದೆ. ಆದ್ದರಿಂದ ಅದನ್ನು 'ಅತ್ಯಂತ ಸಮತಟ್ಟಾದ ಭೂಖಂಡ' ಎಂದು ಕರೆಯಲಾಗಿದೆ. ಬಹಳಷ್ಟು ಪ್ರದೇಶವು ಮರುಭೂಮಿಯಿಂದ ಆವರಿಸಿರುವುದರಿಂದ ಇದನ್ನು 'ಮರುಭೂಮಿಯ ಭೂಖಂಡ'ವೆಂತಲೂ ಕರೆಯುವರು.




*ಆಸ್ಟ್ರೇಲಿಯ (ಪ್ರಾಕೃತಿಕ)*

NOT TO BE REPUBLISHED @KTBS

ಆಸ್ಟ್ರೇಲಿಯವು ಮೂಲತಃ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದ್ದು ಅತ್ಯಂತ ಪುರಾತನವಾದುದು. ಇದನ್ನು ಭೂಸ್ವರೂಪದ ಆಧಾರದ ಮೇಲೆ ಮೂರು ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ.

1 ಪೂರ್ವದ ಉನ್ನತ ಪ್ರದೇಶ, 2 ಮಧ್ಯದ ತಗ್ಗು ಮೈದಾನ, ಮತ್ತು 3 ಪಶ್ಚಿಮದ ಪ್ರಸ್ಥಭೂಮಿ.

ಹದಿನೇಳನೆಯ ಶತಮಾನದಲ್ಲಿ ಯೂರೋಪಿನ ಜೇಮ್ಸ್ ಕುಕ್‌ನಿಂದ ಕಂಡುಹಿಡಿಯಲ್ಪಟ್ಟ ಆಸ್ಟ್ರೇಲಿಯವನ್ನು ಹೊಸ ಭೂಖಂಡವೆನ್ನುವರು.

**1 ಪೂರ್ವದ ಉನ್ನತ ಪ್ರದೇಶ:** ಇದು ಖಂಡದ ಪೂರ್ವಭಾಗದಲ್ಲಿದ್ದು ಉತ್ತರದಲ್ಲಿ ಯಾರ್ಕ್ ಭೂಶಿರದಿಂದ ದಕ್ಷಿಣದಲ್ಲಿ ತಾಸ್ಮೇನಿಯದ ಬಾಸ್ ಜಲಸಂಧಿಯವರೆಗೆ ವಿಸ್ತರಿಸಿದೆ. ಹೆಚ್ಚು ಕಡಿಮೆ ಪೂರ್ವ ಕರಾವಳಿಗೆ ಹೊಂದಿಕೊಂಡಂತಿರುವ ಈ ಪರ್ವತ ಸರಣಿಗಳ ಪೂರ್ವ ಭಾಗ ಕಡಿದಾಗಿಯೂ ಮತ್ತು ಪಶ್ಚಿಮ ಭಾಗವು ಇಳಿಜಾರಿನಿಂದ ಕೂಡಿದೆ. ಹಿಂದೆ ಪೂರ್ವ ಕರಾವಳಿಯಿಂದ ಪ್ರವೇಶಿಸುವವರಿಗೆ ದುರ್ಗಮವಾಗಿದ್ದರಿಂದ ಇದನ್ನು 'ಗ್ರೇಟ್ ಡಿವೈಡಿಂಗ್ ಸರಣಿ' ಎಂದು ಕರೆಯಲಾಯಿತು. ಈ ಸರಣಿಯು ನ್ಯೂಸೌತ್‌ವೇಲ್ಸ್‌ನಲ್ಲಿ ಸಾಕಷ್ಟು ಎತ್ತರವಾಗಿದ್ದು ಕಡಿದಾದ ಇಳಿಜಾರಿನಿಂದ ಕೂಡಿದೆ. ಇವುಗಳನ್ನು "ಆಸ್ಟ್ರೇಲಿಯದ ಆಲ್ಪ್ಸ್" ಹಾಗೂ "ನ್ಯೂಇಂಗ್ಲೆಂಡ್ ಸರಣಿ" ಎಂದು ಕರೆಯುವರು. ಎತ್ತರವಾದ ಶಿಖರಗಳು ಚಳಿಗಾಲದಲ್ಲಿ ಹಿಮಾವೃತವಾಗಿರುತ್ತವೆ. ಈ ಭಾಗದ ಕೊಸಿಯುಸ್ಕೊ (2230 ಮೀ.) ಖಂಡದ ಅತಿ ಎತ್ತರವಾದ ಶಿಖರ.

ಆಸ್ಟ್ರೇಲಿಯದ ಪೂರ್ವ ತೀರದಿಂದಾಚೆ ದಕ್ಷಿಣೋತ್ತರವಾಗಿ "ಗ್ರೇಟ್ ಬ್ಯಾರಿಯರ್ ರೀಫ್" ಎಂಬ ಹವಳ ದಿಣ್ಣೆಗಳು (2000 ಕಿ.ಮೀ.) ಹಬ್ಬಿವೆ.

**2 ಮಧ್ಯದ ತಗ್ಗುಮೈದಾನ:** ಉತ್ತರದಲ್ಲಿ ಕಾರ್ಪೆಂಟೇರಿಯ ಕೊಲ್ಲಿಯಿಂದ ದಕ್ಷಿಣದ ಮರ್ರೆ ಬಯಲಿನವರೆಗೆ ಈ ತಗ್ಗು ಮೈದಾನ ಹರಡಿದೆ. ಇದು ಪೂರ್ವ ಉನ್ನತ ಭಾಗದಿಂದ ಪಶ್ಚಿಮಕ್ಕಿದ್ದು, ಆಂತರಿಕ ಜಲವ್ಯವಸ್ಥೆಯಿಂದ ಕೂಡಿದೆ. ಇದರ ಮಧ್ಯಭಾಗದಲ್ಲಿರುವ ಐರ್ ಸರೋವರದ ಕಡೆಗೆ ನದಿಗಳು ಹರಿಯುತ್ತವೆ. ಪ್ರಪಂಚದ ಪ್ರಸಿದ್ಧ ಆರ್ಟೀಸಿಯನ್ ನೀರಿನ ಬಾವಿಗಳನ್ನು ಕಾಣಬಹುದು.





*ಆರ್ಟೀಸಿಯನ್ ಬಾವಿಗಳು*

ಈ ತಗ್ಗು ಮೈದಾನವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ:

1 ಮರ್ರೆ ಡಾರ್ಲಿಂಗ್ ಮೈದಾನ

2 ಐರ್ ಸರೋವರ ಮೈದಾನ

3 ಕಾರ್ಪೆಂಟೇರಿಯ ಮೈದಾನ



*ಮರ್ರೆ ನದಿ*



*ಡಾರ್ಲಿಂಗ್ ನದಿ*

ಮರ್ರೆ ಮತ್ತು ಡಾರ್ಲಿಂಗ್ ನದಿಗಳ ಬಯಲು, ಉತ್ತರದಲ್ಲಿರುವ ಐರ್ ಸರೋವರದಿಂದ ಪ್ರತ್ಯೇಕಗೊಂಡಿದೆ. ನದಿಗಳ ನೀರಿನ ಪೂರೈಕೆಯಿಂದಾಗಿ ಇದೊಂದು ಆಸ್ಟ್ರೇಲಿಯದ ಸಮೃದ್ಧ ಕೃಷಿ ಭಾಗವಾಗಿದೆ. ಇದರಿಂದ ಉತ್ತರಕ್ಕಿರುವ ಐರ್ ಸರೋವರ ಮೈದಾನವು ವಿಶಾಲವಾದ ತಟ್ಟೆ ಆಕಾರ(ಸಾಸರ್)ವುಳ್ಳದ್ದಾಗಿದೆ. ಇಲ್ಲಿ ಹಲವು ಉಪ್ಪಿನ ಸರೋವರಗಳಿವೆ. ಇದರ ಬಹು ಭಾಗ ಬರಡು ಪ್ರದೇಶವಾಗಿದ್ದು ಅತಿ ವಿರಳ ಜನಸಂಖ್ಯೆಯಿಂದ ಕೂಡಿದೆ. ಫ್ಲಿಂಡರ್ಸ್ ಮತ್ತು ಮಿಚೆಲ್ ನದಿಗಳು ಹರಿಯುವ ಕಾರ್ಪೆಂಟೇರಿಯ ಮೈದಾನವು ಸಮತಟ್ಟಾಗಿದೆ. ಇದನ್ನು ಐರ್ ನದಿಬಯಲಿನಿಂದ ಬರ್ಕ್ಲೆ ಪ್ರಸ್ಥಭೂಮಿಯು ಬೇರ್ಪಡಿಸುತ್ತದೆ.

**3 ಪಶ್ಚಿಮದ ಪ್ರಸ್ಥಭೂಮಿ:** ಇದು ಕಾರ್ಪೆಂಟೇರಿಯ ಕೊಲ್ಲಿಯಿಂದ ಆನ್‌ಸ್ಲೊ, ಪರ್ತ್ ಮತ್ತು ಆಲ್ಬೇನಿಯವರೆಗೆ ಹರಡಿದ ಆಸ್ಟ್ರೇಲಿಯದ 2/3 ಭಾಗವನ್ನಾವರಿಸಿದ ಏರುತಗ್ಗುಳ್ಳ ಪ್ರಸ್ಥಭೂಮಿ. ಗ್ರೇಟ್ ಸ್ಯಾಂಡಿ ಡೆಸರ್ಟ್, ಗಿಬ್ಸನ್ ಮತ್ತು ವಿಕ್ಟೋರಿಯ ಮರುಭೂಮಿಗಳನ್ನೊಳಗೊಂಡ ಈ ಭಾಗವು ಭಾರತದ ದಖನ್ ಪ್ರಸ್ಥಭೂಮಿಯಷ್ಟೇ ಪುರಾತನವಾದುದು. ಇಲ್ಲಿ ಅಪಾರ ಮರಳು ದಿಣ್ಣೆಗಳಿವೆ. ಅಲ್ಲಲ್ಲಿ ಪ್ರತ್ಯೇಕಿತ ಶಿಲಾ–ಬೆಟ್ಟ ಗುಡ್ಡಗಳಿವೆ. ಅವುಗಳಲ್ಲಿ ಖಂಡದ ಕೇಂದ್ರ ಭಾಗದಲ್ಲಿರುವ ಮ್ಯಾಕ್‌ಡೊನೆಲ್ ಮತ್ತು ಮಸ್‌ಗ್ರೇವ್ ಸರಣಿಗಳು ಎತ್ತರವಾದವು.

**ನದಿಗಳ ವ್ಯವಸ್ಥೆ:** ಅತಿಶಾಖ ಮತ್ತು ಶುಷ್ಕತೆಗಳಿಂದಾಗಿ ಆಸ್ಟ್ರೇಲಿಯದ ಬಹಳಷ್ಟು ಭಾಗವು ಮರುಭೂಮಿಯಿಂದ ಆವರಿಸಿದೆ. ಹೀಗಾಗಿ ನದಿ ವ್ಯವಸ್ಥೆ ಕಡಿಮೆ ಇದ್ದರೂ ಅವುಗಳಲ್ಲಿ ಹಲವು ಚಿಕ್ಕವು ಮತ್ತು ಅಕಾಲಿಕ ನದಿಗಳು. ಸಮುದ್ರ ಸೇರುವ ನದಿಗಳಿಗಿಂತ ಸರೋವರಗಳಿಗೆ ಸೇರುವ ಒಳನಾಡಿನ ನದಿಗಳೇ ಹೆಚ್ಚು. ಬಹಳಷ್ಟು ನದಿಗಳು ಪೂರ್ವದ ಉನ್ನತ ಪ್ರದೇಶಗಳಲ್ಲಿ ಉಗಮ ಹೊಂದಿ ಪೂರ್ವದೆಡೆಗೆ ಹರಿಯುತ್ತವೆ.

© KTBS NOT TO BE REPUBLISHED




***ಆಸ್ಟ್ರೇಲಿಯದ ನದಿಗಳು***

ಮರ್ರೆ ಆಸ್ಟ್ರೇಲಿಯದ ಅತಿ ಪ್ರಮುಖವಾದ ನದಿ. ಇದು ನ್ಯೂಸೌತ್‌ವೇಲ್ಸ್‌ನ ಆಗ್ನೇಯಕ್ಕಿರುವ ಕೊಸಿಯುಸ್ಕೊ ಶಿಖರದ ಬಳಿ ಉಗಮ ಹೊಂದಿ ಪೂರ್ವ ಹಾಗೂ ನೈಋತ್ಯಕ್ಕೆ ಹರಿದು (2,590 ಕಿ.ಮೀ.) ಎನ್‌ಕೌಂಟರ್ ಕೊಲ್ಲಿಯನ್ನು ಸೇರುತ್ತದೆ. ಡಾರ್ಲಿಂಗ್ ಲಾಚ್‌ಲನ್, ಮುರಂಬೀಚ್‌ಗಳು ಇದರ ಉಪನದಿಗಳು. ವರ್ಷದ ಕೆಲವು ಋತುಗಳಲ್ಲಿ ಮಾತ್ರ ಈ ನದಿ ಮೂಲಕ ನೌಕಾಯಾನ ಸಾಧ್ಯ. ಪೂರ್ವಾಭಿಮುಖವಾಗಿ ಹರಿಯುವ ನದಿಗಳು ಚಿಕ್ಕವು ಹಾಗೂ ವೇಗವಾಗಿ ಹರಿಯುತ್ತವೆ.

ಪೂರ್ವಕ್ಕೆ ಹರಿಯುವ ನದಿಗಳು ಚಿಕ್ಕದಾಗಿರುತ್ತವೆ ಮತ್ತು ವೇಗವಾಗಿರುತ್ತವೆ. ಅವುಗಳೆಂದರೆ ಹಂಟರ್, ಪೂರ್ವ ಫ್ಲಿಟ್ಝ್ರಾಯ್ ಮತ್ತು ಬೆಲ್ಯಾಂಡೋ. ಈಶಾನ್ಯ ಭಾಗದಲ್ಲಿರುವ ಮಿಚೆಲ್, ಗಿಲ್ಬರ್ಟ್ ಮತ್ತು ಫ್ಲಿಂಡರ್ಸ್ ನದಿಗಳು ವಾಯುವ್ಯಕ್ಕೆ ಹರಿದು ಕಾರ್ಪೆಂಟಾರಿಯಾ ಕೊಲ್ಲಿಯನ್ನು ಸೇರುತ್ತವೆ. ಡಾಲಿ, ವಿಕ್ಟೋರಿಯಾ, ಪಶ್ಚಿಮ ಫ್ಲಿಟ್ಜೆರಾಯ್ ಮತ್ತು ಇತರರು ಉತ್ತರದ ಕಡೆಗೆ ಮತ್ತು ವಾಯುವ್ಯಕ್ಕೆ ಹರಿದು ಟಿಮೋರ್ ಸಮುದ್ರವನ್ನು ಸೇರುತ್ತಾರೆ.

ಕೂಪರ್ ಕ್ರೀಕ್, ಡೈಮಂಟಿನಾ ಮತ್ತು ಮುಕುಂಬಾ ನದಿಗಳು ಐರ್ ಸರೋವರಕ್ಕೆ ಬರುತ್ತವೆ. ಮರ್ಚಿಸನ್, ಏವನ್, ಬ್ಲ್ಯಾಕ್ ವುಡ್ ಇತ್ಯಾದಿ ನದಿಗಳು ಹಿಂದೂ ಮಹಾಸಾಗರಕ್ಕೆ ಹರಿಯುತ್ತವೆ.

ಆಸ್ಟ್ರೇಲಿಯದಲ್ಲಿ ಕೆಲವು ಸರೋವರಗಳಿವೆ. ಅವು ಚಿಕ್ಕವು ಮತ್ತು ಹೆಚ್ಚು ಉಪ್ಪು ನೀರಿನ ಸರೋವರಗಳು. ಉದಾ: ಐರ್, ಟಾರೆನ್ಸ್, ಗೆರ್ಡ್‌ನರ್ ಇತ್ಯಾದಿ. ಇವುಗಳಲ್ಲಿ ಐರ್ ಸರೋವರ ಅತಿ ದೊಡ್ಡದು ಮತ್ತು ಖಂಡದ ಅತ್ಯಂತ ತಗ್ಗಿನಲ್ಲಿದೆ. ಇದರಿಂದ ಪಶ್ಚಿಮ ಭಾಗದಲ್ಲಿ ಪ್ರಪಂಚದ ಅತಿದೊಡ್ಡ ಏಕಶಿಲೆಯಾದ ಆಯರ್ಸ್ (ಉಲೂರು) ಶಿಲೆಯಿದೆ.

© KTBS NOT TO BE REPUBLISHED



ಆಯರ್ಸ್ (ಉಲೂರು) ಶಿಲೆ



ಐರಿ ಸರೋವರ

## ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ

**ವಾಯುಗುಣ:** ಆಸ್ಟ್ರೇಲಿಯದ ಮಧ್ಯದಲ್ಲಿ ಮಕರ ಸಂಕ್ರಾಂತಿ ವೃತ್ತವು ಹಾಯ್ದು ಹೋಗಿದೆ. ಹೀಗಾಗಿ ಆಸ್ಟ್ರೇಲಿಯದಲ್ಲಿ ಉಷ್ಣವಲಯ ಮತ್ತು ಉಪಉಷ್ಣವಲಯದ ವಾಯುಗುಣವಿದೆ. ಖಂಡದ ಬಹಳಷ್ಟು ಭಾಗದಲ್ಲಿ ವರ್ಷವಿಡೀ ಅಧಿಕ ಉಷ್ಣಾಂಶವಿರುತ್ತದೆ. ಪಶ್ಚಿಮ ತೀರದಲ್ಲಿ ಶೀತಸಾಗರ ಪ್ರವಾಹ ಹರಿಯುತ್ತದೆ. ಇದರಿಂದ ಆಸ್ಟ್ರೇಲಿಯದ ಪಶ್ಚಿಮ ಭಾಗ ಮರುಭೂಮಿ ಮತ್ತು ಶುಷ್ಕ ವಾಯುಗುಣವನ್ನು ಹೊಂದಿದೆ. ಉತ್ತರ ಭಾಗಗಳಲ್ಲಿ ಮಾನ್ಸೂನ್ ಮತ್ತು ದಕ್ಷಿಣ ಕರಾವಳಿಯಲ್ಲಿ ಮೆಡಿಟರೇನಿಯನ್ ಮಾದರಿ ವಾಯುಗುಣವಿದೆ.

**ಚಳಿಗಾಲ:** ಆಸ್ಟ್ರೇಲಿಯ ಖಂಡವು ದಕ್ಷಿಣ ಗೋಳಾರ್ಧದಲ್ಲಿರುವುದರಿಂದ ಋತುಕಾಲಗಳು ಉತ್ತರ ಗೋಳಾರ್ಧಕ್ಕೆ ವಿರುದ್ಧ ಅವಧಿಯಲ್ಲಿ ಏರ್ಪಡುತ್ತವೆ. ಅಂದರೆ ಉತ್ತರ ಗೋಳಾರ್ಧದಲ್ಲಿ ಬೇಸಿಗೆಯಿದ್ದಾಗ ಇಲ್ಲಿ ಚಳಿಗಾಲವಾಗಿರುತ್ತದೆ. ಉದಾ: ಜೂನ್‌ನಿಂದ ಆಗಸ್ಟ್. ಈ ಅವಧಿಯಲ್ಲಿ ಉಷ್ಣಾಂಶ ಕಡಿಮೆ. ಅದು ಉತ್ತರದಿಂದ ದಕ್ಷಿಣಕ್ಕೆ ಕಡಿಮೆಯಾಗುತ್ತದೆ. ಆದರೆ ಒತ್ತಡ ಹೆಚ್ಚಾಗುತ್ತದೆ. ಮಾರುತಗಳು ಒಳನಾಡಿನಿಂದ ಸಮುದ್ರದ ಕಡೆಗೆ ಬೀಸುತ್ತವೆ. ಅವು ಹೆಚ್ಚು ಮಳೆ ತರುವುದಿಲ್ಲ. ಶುಷ್ಕ ಮತ್ತು ಶಾಖವುಳ್ಳ ವಾಯುಗುಣವಿರುತ್ತದೆ. ತಾಸ್ಮೇನಿಯದಲ್ಲಿ ಭಿನ್ನವಾದ ವಾಯುಗುಣವಿರುತ್ತದೆ.

**ಬೇಸಿಗೆ ಕಾಲ:** ಇದು ಡಿಸೆಂಬರಿನಿಂದ ಫೆಬ್ರವರಿವರೆಗಿರುತ್ತದೆ. ಈ ಅವಧಿಯಲ್ಲಿ ಉಷ್ಣಾಂಶ ಹೆಚ್ಚು. ಖಂಡದ ಪೂರ್ವಭಾಗಕ್ಕಿಂತ ಪಶ್ಚಿಮದ ಮರುಭೂಮಿಗಳಲ್ಲಿ ಗರಿಷ್ಠ ತಾಪಮಾನವಿರುತ್ತದೆ. ದಕ್ಷಿಣ, ಆಗ್ನೇಯ ಭಾಗಗಳು ಮತ್ತು ತಾಸ್ಮೇನಿಯ ದ್ವೀಪಗಳಲ್ಲಿ ಸಾಧಾರಣ ಉಷ್ಣಾಂಶವಿರುತ್ತದೆ. ಒಳನಾಡಿನಲ್ಲಿ ಕಡಿಮೆ ಒತ್ತಡವಿದ್ದು, ಮಾರುತಗಳು ಸಮುದ್ರದ ಕಡೆಯಿಂದ ಬೀಸುವಾಗ ಸ್ವಲ್ಪ ಮಳೆ ತರುತ್ತದೆ. ಖಂಡದ ದಕ್ಷಿಣ ಮತ್ತು ಆಗ್ನೇಯ ಭಾಗಗಳಿಗೆ ಮಳೆ ಹೆಚ್ಚು.

ಆಸ್ಟ್ರೇಲಿಯಾದಲ್ಲಿ ಚಂಡಮಾರುತಗಳನ್ನು 'ವಿಲ್ಲಿ ವಿಲ್ಲಿಸ್' ಎಂದು ಕರೆಯಲಾಗುತ್ತದೆ.

©KTBS NOT TO BE REPUBLISHED

ಸಾಮಾನ್ಯವಾಗಿ, ಆಸ್ಟ್ರೇಲಿಯಾದಲ್ಲಿ ಮಳೆಯು ಮಾನ್ಸೂನ್ ಪ್ರಕಾರದಂತಿದೆ, ಇದು ಸಮಯ ಮತ್ತು ಜಾಗದಲ್ಲಿ ವಿಶ್ವಾಸಾರ್ಹವಲ್ಲದ ಆಗ್ನೇಯ, ಉತ್ತರ ಮತ್ತು ನೈಋತ್ಯ ಕರಾವಳಿ ಪ್ರದೇಶಗಳಲ್ಲಿ ವಾರ್ಷಿಕ ಮಳೆ 75 ಸೆಂ.ಮೀ. ಇದು ಆಸ್ಟ್ರೇಲಿಯಾದ ಅತಿದೊಡ್ಡ ಆಂತರಿಕ ಮರುಭೂಮಿಯಲ್ಲಿ 25 ಸೆಂ.ಮೀಗಿಂತ ಕಡಿಮೆಯಿದೆ.

## ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತು

**ಸ್ವಾಭಾವಿಕ ಸಸ್ಯವರ್ಗ:** ದಟ್ಟವಾದ ಕಾಡುಗಳ ಕೊರತೆಯು ಆಸ್ಟ್ರೇಲಿಯದ ಪ್ರಮುಖ ಲಕ್ಷಣ. ಖಂಡದ ಬಹಳಷ್ಟು ಭಾಗವು ಹುಲ್ಲುಗಾವಲು, ಕುರುಚಲು ಸಸ್ಯ ಮತ್ತು ತೆರೆದ ವಿರಳವಾದ ಮರಗಳಿಂದ ಕೂಡಿದ ಸಸ್ಯವರ್ಗವನ್ನು ಹೊಂದಿದೆ. ಇದು ಖಂಡದ ವಾಯುಗುಣವನ್ನು ಪ್ರತಿಬಿಂಬಿಸುತ್ತದೆ. ಆಸ್ಟ್ರೇಲಿಯ ಖಂಡದ ವಿವಿಧ ಸ್ವಾಭಾವಿಕ ಸಸ್ಯವರ್ಗವು ಈ ಕೆಳಕಂಡಂತಿದೆ.



NOT TO BE REPUBLISHED @KTBS

*ಆಸ್ಟ್ರೇಲಿಯದ ಸ್ವಾಭಾವಿಕ ಸಸ್ಯವರ್ಗ*

**1 ಉಷ್ಣವಲಯದ ಕಾಡುಗಳು:** ಹೆಚ್ಚು ಮಳೆ ಬೀಳುವ ಉತ್ತರ ಮತ್ತು ಈಶಾನ್ಯ ಕರಾವಳಿ ಪ್ರದೇಶಗಳಲ್ಲಿ ಇಂತಹ ಕಾಡುಗಳಿವೆ. ಅಲ್ಲಲ್ಲಿ ಚದುರಿದಂತೆ ಕಂಡುಬರುವ ಇವು ಬಹಳ ಕಡಿಮೆ ಕ್ಷೇತ್ರವನ್ನಾವರಿಸಿವೆ. ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಆ್ಯಶ್, ಸಿಡಾರ್, ಬೀಚ್ ಮತ್ತು ತಾಳೆ.

**2 ಸಮಶೀತೋಷ್ಣವಲಯದ ಕಾಡುಗಳು:** ಇಂತಹ ಕಾಡುಗಳು ಪರ್ವತ ಮತ್ತು ಬೆಟ್ಟಗುಡ್ಡಗಳಲ್ಲಿ ಕಂಡು ಬರುತ್ತವೆ. ಹೀಗಾಗಿ ಇವುಗಳನ್ನು "ಗುಡ್ಡಗಾಡು ಅರಣ್ಯ"ಗಳೆಂತಲೂ ಕರೆಯುತ್ತಾರೆ. ಅವು ಹೆಚ್ಚಾಗಿ ಕ್ವೀನ್ಸ್‌ಲ್ಯಾಂಡ್, ನ್ಯೂಸೌತ್‌ವೇಲ್ಸ್, ವಿಕ್ಟೋರಿಯ ಮತ್ತು ತಾಸ್ಮೇನಿಯಗಳಲ್ಲಿ ಹಂಚಿಕೆಯಾಗಿವೆ. ಇಲ್ಲಿನ ಪ್ರಮುಖ ಮರಗಳೆಂದರೆ ನೀಲಗಿರಿ, ಪೈನ್, ಇತ್ಯಾದಿ. ಇವು ತೈಲ ಮತ್ತು ಕಾಗದ ತಯಾರಿಕೆಗೆ ಹೆಚ್ಚು ಉಪಯುಕ್ತ.

**3 ಹುಲ್ಲುಗಾವಲು:** ಆಸ್ಟ್ರೇಲಿಯದ ಹುಲ್ಲುಗಾವಲಿನಲ್ಲಿ ಎರಡು ವಿಧಗಳಿವೆ: (i) ಉಷ್ಣವಲಯದ ಹುಲ್ಲುಗಾವಲು ಅಥವಾ ಸವನ್ನ (ii) ಸಮಶೀತೋಷ್ಣವಲಯದ ಹುಲ್ಲುಗಾವಲು ಅಥವಾ ಡೌನ್ಸ್.

ಮೊದಲನೆಯದು ಪೂರ್ವದ ಉನ್ನತ ಪ್ರದೇಶಗಳಿಂದ ಪಶ್ಚಿಮ ಭಾಗಗಳಾದ ಕ್ವೀನ್ಸ್ ಲ್ಯಾಂಡ್, ಉತ್ತರ ಆಸ್ಟ್ರೇಲಿಯದ ಮಧ್ಯ ಮತ್ತು ಪಶ್ಚಿಮ ಆಸ್ಟ್ರೇಲಿಯದ ಉತ್ತರ ಭಾಗಗಳಲ್ಲಿ ಹರಡಿದೆ. ಎರಡನೆಯ ಪ್ರಕಾರದ ಹುಲ್ಲುಗಾವಲು ಮರ್ರೆ ಡಾರ್ಲಿಂಗ್ ಬಯಲಿನಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಇದು ಪಶುಪಾಲನೆಗೆ ಹೆಚ್ಚು ಉಪಯುಕ್ತವಾಗಿದೆ. ಸಮಶೀತೋಷ್ಣವಲಯದ ಹುಲ್ಲುಗಾವಲಿನಲ್ಲಿ ಪೊದೆಹುಲ್ಲು (ಕುರಿಸಾಕಲು), ವಿಚೆಲ್ ಮತ್ತು ಅಟ್ರೇಬಲ್ ಹುಲ್ಲು ಪ್ರಭೇದಗಳು ಕಂಡುಬರುತ್ತವೆ.



*ಸವನ್ನ ಹುಲ್ಲುಗಾವಲು*



*ಡೌನ್ಸ್ ಹುಲ್ಲುಗಾವಲು*

© KTBS NOT TO BE REPUBLISHED

**4 ಕುರುಚಲು ಸಸ್ಯವರ್ಗ:** ಇದು ಪಶ್ಚಿಮ ಆಸ್ಟ್ರೇಲಿಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳು, ದಕ್ಷಿಣ ಆಸ್ಟ್ರೇಲಿಯ ಹಾಗೂ ಕ್ವೀನ್ಸ್‌ಲ್ಯಾಂಡ್‌ನ ಕೆಲವು ಭಾಗಗಳಲ್ಲಿ ಕಂಡು ಬರುತ್ತದೆ. ಮಳೆ ಕೊರತೆಯಿಂದಾಗಿ ಕುರುಚಲು ಗಿಡಗಳು ಬೆಳೆಯುತ್ತವೆ. ಇಲ್ಲಿ ಜಾಲಿಮರಗಳೇ ಹೆಚ್ಚಾಗಿಕಂಡುಬರುತ್ತವೆ. ಅಲ್ಲಲ್ಲಿ ನೀಲಗಿರಿ ಮರಗಳು, ಕತ್ತಾಳೆ ಮತ್ತು ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ.



ಆ್ಯಶ್



ಸಿಡಾರ್



ತಾಲ್



ನೀಲಗಿರಿ

**5 ಮರುಭೂಮಿ ಸಸ್ಯವರ್ಗ:** ಪಶ್ಚಿಮ ಆಸ್ಟ್ರೇಲಿಯದ ಕೇಂದ್ರ ಮತ್ತು ಪೂರ್ವ ಭಾಗದಲ್ಲಿ ಈ ಸಸ್ಯವರ್ಗ ಹಂಚಿಕೆಯಾಗಿದೆ. ಇಲ್ಲಿ ಕಳ್ಳಿಜಾತಿ ಮರಗಳು, ಸಾಲ್ಟ್‌ಬುಶ್, ಕುಬ್ಜಹುಲ್ಲು ಹಾಗೂ ವಿವಿಧ ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ. ಇವು ಕ್ಷಾಮ ನಿಭಾಯಿಸಬಲ್ಲ ಗುಣಲಕ್ಷಣವನ್ನು ಹೊಂದಿವೆ.

**6 ಪ್ರಾಣಿವರ್ಗ:** ಆಸ್ಟ್ರೇಲಿಯದಲ್ಲಿ ಬೇರೆಲ್ಲೂ ಇಲ್ಲದ ಅಪರೂಪದ ಹಾಗೂ ವಿಚಿತ್ರ ಪ್ರಾಣಿ ಪಕ್ಷಿಗಳಿವೆ. ಪ್ಲಾಟಿಪಸ್ ಎನ್ನುವ ಸಸ್ತನಿ ಮೊಟ್ಟೆ ಇಡುತ್ತದೆ ಹಾಗು ತನ್ನ ಮರಿಗಳಿಗೆ

ಮೊಲೆಯುಣಿಸುತ್ತದೆ. ಮೈತುಂಬ ತುಪ್ಪಳವುಳ್ಳ ಚರ್ಮದ ಹೊದಿಕೆ ಹೊಂದಿದೆ. ಇವು ತಮ್ಮ ಮರಿಗಳನ್ನು ಹೊಟ್ಟೆಯ ಹೊರಚೀಲಗಳಲ್ಲಿ ಪೋಷಿಸುತ್ತವೆ. ಎಮು ಆಸ್ಟ್ರೇಲಿಯದ ಅತಿ ದೊಡ್ಡ ಪಕ್ಷಿ. ಲೈರ್ ಎಂಬುದು ನವಿಲಿನಂತಹ ಸುಂದರವಾದ ಪಕ್ಷಿ. ನಗುವಿನಂತೆ ಕೂಗುವ ಕೂಕಾಬುರ್ರ, ಕಪ್ಪು ಹಂಸ ಮುಂತಾದ ಪಕ್ಷಿಗಳಿವೆ. ಕಾಂಗರೂ ರಾಷ್ಟ್ರೀಯ ಪ್ರಾಣಿಯಾಗಿದೆ. ಡಿಂಗೊ ಎಂಬುದು ತೋಳದಂತೆ ಕಾಣುವ ಕಾಡುನಾಯಿ. ವಲ್ಲಬಿ, ನೊಣ ತಿನ್ನುವ ಎಕಿಡ್ನ, ಮರಹತ್ತುವ ಸಣ್ಣ ಆಕಾರವುಳ್ಳ ಕರಡಿಕೋಲ ಇತ್ಯಾದಿ ಪ್ರಾಣಿಗಳಿವೆ. ಸರೀಸೃಪಗಳು ಮತ್ತು ವಿಷಪೂರಿತ ಹಾವುಗಳು ಸರ್ವೇಸಾಮಾನ್ಯ.


ಕಾಂಗರೂ


ವಲ್ಲಬಿ


ಡಿಂಗೊ


ಕರಡಿಕೋಲ


ಎಮು


ಕಪ್ಪು ಹಂಸ

ಆಸ್ಟ್ರೇಲಿಯ "ಅಪರೂಪದ ಪ್ರಾಣಿ ಪಕ್ಷಿಗಳ ನಾಡು". ಸು.60%ರಷ್ಟು ಇಲ್ಲಿನ ಪ್ರಾಣಿ ಪಕ್ಷಿಗಳು ಪ್ರಪಂಚದಲ್ಲೆಲ್ಲೂ ಕಾಣುವುದಿಲ್ಲ. ಕಾಂಗರೂ ಆಸ್ಟ್ರೇಲಿಯಾದ ರಾಷ್ಟ್ರೀಯ ಚಿಹ್ನೆಯಾಗಿದೆ.

## ವ್ಯವಸಾಯ ಮತ್ತು ಪಶುಸಂಗೋಪನೆ

**ವ್ಯವಸಾಯ:** ವ್ಯವಸಾಯ ಆಸ್ಟ್ರೇಲಿಯದ ವೃತ್ತಿಗಳಲ್ಲಿ ಒಂದಾಗಿದೆ. ಆದರೆ ಇಲ್ಲಿ ಕೃಷಿ ಭೂಮಿ ಕಡಿಮೆ. ಈ ಖಂಡದ ವಿಸ್ತೀರ್ಣದಲ್ಲಿ ಶೇ.4 ಭಾಗ ಮಾತ್ರ ಕೃಷಿಗೆ ಯೋಗ್ಯವಾದುದು. ಅದು ಸಮುದ್ರ ತೀರ ಮತ್ತು ನದಿ ಬಯಲುಗಳಲ್ಲಿ ಕಂಡುಬರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.44ರಷ್ಟು ಭಾಗ ಜನರು ಮಾತ್ರ ವ್ಯವಸಾಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಬಿಳಿಯರು ಈ ವೃತ್ತಿಯಲ್ಲಿ ನಿರತರಾಗಿರುವುದು ವಿಶೇಷ.

ಮಳೆಯ ಅಭಾವ ಮತ್ತು ಅಕಾಲಿಕ ಹಂಚಿಕೆ, ಫಲವತ್ತಲ್ಲದ ಮರಳುಮಣ್ಣು, ಕೃಷಿಯೋಗ್ಯ ಭೂಮಿಯ ಕೊರತೆ ಮತ್ತು ನೀರಾವರಿಯ ಕೊರತೆಗಳಿಂದಾಗಿ ಕೃಷಿಕ್ಷೇತ್ರ ಕಡಿಮೆ. ಆದರೂ ಆಸ್ಟ್ರೇಲಿಯವು ತನ್ನ ಬೇಡಿಕೆಯನ್ನು ಪೂರೈಸಿಕೊಳ್ಳುವಷ್ಟು ಕೃಷಿ ಉತ್ಪನ್ನಗಳಲ್ಲಿ ಸ್ವಯಂ ಪೂರ್ಣತೆಯನ್ನು ಹೊಂದಿದೆ.

ಆಸ್ಟ್ರೇಲಿಯವು ವಿಸ್ತರಣಾ ಬೇಸಾಯ ಪದ್ಧತಿಯನ್ನು ಅನುಸರಿಸುತ್ತದೆ. ಭೂಹಿಡುವಳಿ ಗಾತ್ರ ದೊಡ್ಡದು. ಆಧುನಿಕ ಬೇಸಾಯ ಕ್ರಮವನ್ನು ಬಳಸಲಾಗುವುದು. ರಫ್ತು ಮಾಡುವ ಉದ್ದೇಶದಿಂದ ವಾಣಿಜ್ಯ ಬೆಳೆಗಳ ಸಾಗುವಳಿಗೆ ಆದ್ಯತೆ ಹೆಚ್ಚು.ಆದರೂ ವಿವಿಧ ಬೆಳೆಗಳನ್ನು ಬೆಳೆಯಲಾಗುವುದು. ಉದಾ: ಗೋಧಿ, ಕಬ್ಬು, ಹತ್ತಿ, ತಂಬಾಕು, ಮೆಕ್ಕೆ ಜೋಳ, ವಿವಿಧ ಹಣ್ಣುಹಂಪಲು ಮತ್ತು ತರಕಾರಿಗಳು.



*ಗೋಧಿ*



*ಕಬ್ಬು*



*ತಂಬಾಕು*



*ಹತ್ತಿ ಬೇಸಾಯ*



*ಸೇಬು ಬೆಳೆ*

**ಗೋಧಿ** ಆಸ್ಟ್ರೇಲಿಯದ ಅತ್ಯಂತ ಪ್ರಮುಖವಾದ ಆಹಾರ ಬೆಳೆ. ಇದನ್ನು ದಕ್ಷಿಣ ಆಸ್ಟ್ರೇಲಿಯ, ಕ್ವೀನ್ಸ್‌ಲ್ಯಾಂಡ್, ನ್ಯೂಸೌತ್‌ವೇಲ್ಸ್ ಮತ್ತು ವಿಕ್ಟೋರಿಯಗಳಲ್ಲಿ ಬೆಳೆಯಲಾಗುವುದು. ಮರ್ರೆ ಡಾರ್ಲಿಂಗ್ ಬಯಲು ಪ್ರದೇಶ ಗೋಧಿಗೆ ಪ್ರಸಿದ್ಧ. ಆಸ್ಟ್ರೇಲಿಯ ತನ್ನ ಗೋಧಿ ಉತ್ಪನ್ನದಲ್ಲಿ ಶೇ.70ರಷ್ಟು ಭಾಗವನ್ನು ರಫ್ತು ಮಾಡುತ್ತದೆ.

ಮೆಕ್ಕೆ ಜೋಳ ಮತ್ತೊಂದು ಆಹಾರದ ಬೆಳೆ. ಇದನ್ನು ಜಾನುವಾರುಗಳ ಆಹಾರ ತಯಾರಿಕೆಗಾಗಿ ಬೆಳೆಯಲಾಗುತ್ತದೆ. ಇದನ್ನು ಕ್ವೀನ್ಸ್‌ಲ್ಯಾಂಡ್ ಮತ್ತು ನ್ಯೂಸೌತ್‌ವೇಲ್ಸ್‌ಗಳಲ್ಲಿ ಹೆಚ್ಚು ಬೆಳೆಯಲಾಗುವುದು. ಮರ್ರೆ ಡಾರ್ಲಿಂಗ್ ಬಯಲಿನಲ್ಲಿ ಸ್ವಲ್ಪಮಟ್ಟಿಗೆ ಭತ್ತ ಬೆಳೆಯಲಾಗುತ್ತದೆ.

**ಕಬ್ಬು** ಆಸ್ಟ್ರೇಲಿಯದ ಪ್ರಮುಖ ವಾಣಿಜ್ಯ ಬೆಳೆ. ಇದನ್ನು ಹೆಚ್ಚಾಗಿ ಪೂರ್ವ ಕರಾವಳಿಗೆ ಹೊಂದಿಕೊಂಡಿರುವ ಉತ್ತರ ನ್ಯೂಸೌತ್‌ವೇಲ್ಸ್‌ನಿಂದ ಕ್ವೀನ್ಸ್‌ಲ್ಯಾಂಡ್‌ವರೆಗಿನ ಪ್ರದೇಶದಲ್ಲಿ ಬೆಳೆಯಲಾಗುವುದು. ಮತ್ತೊಂದು ವಾಣಿಜ್ಯ ಬೆಳೆಯಾದ ತಂಬಾಕನ್ನು ಕ್ವೀನ್ಸ್‌ಲ್ಯಾಂಡ್‌ನಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ವಿವಿಧ ಹಣ್ಣು ಮತ್ತು ತರಕಾರಿಗಳನ್ನು ತಾಸ್ಮೇನಿಯ, ವಿಕ್ಟೋರಿಯ ಮತ್ತು ನ್ಯೂಸೌತ್‌ವೇಲ್ಸ್‌ಗಳಲ್ಲಿ ಬೆಳೆಯಲಾಗುತ್ತದೆ. ಸೇಬು, ದ್ರಾಕ್ಷಿ, ಪೇರು, ಕಿತ್ತಳೆ ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ.

**ಪಶುಸಂಗೋಪನೆ:** ಇದು ಆಸ್ಟ್ರೇಲಿಯದ ಅತಿ ಪ್ರಮುಖ ವೃತ್ತಿ. ಆಸ್ಟ್ರೇಲಿಯವು “ಪಶುಪಾಲನಾ ದೇಶ” ಎಂದೇ ಪ್ರಸಿದ್ಧಿ. ಹಾಲಿನ ಉತ್ಪನ್ನ, ಮಾಂಸ, ಉಣ್ಣೆ ಮತ್ತು ಚರ್ಮದ ವಸ್ತುಗಳಿಗಾಗಿ ಕುರಿ ಮತ್ತು ದನಕರುಗಳನ್ನು ಸಾಕಲಾಗುವುದು.





*ಕುರಿ ಸಾಕಾಣಿಕೆ*

ಕುರಿಸಾಕಣೆಯು ಆಸ್ಟ್ರೇಲಿಯದ ಅತ್ಯಂತ ಪ್ರಮುಖ ಆರ್ಥಿಕ ವೃತ್ತಿ. ಅಧಿಕ ಸಂಖ್ಯೆಯ ಕುರಿಗಳನ್ನು ಹೊಂದಿರುವ ಈ ಖಂಡ ಉಣ್ಣೆಯ ಉತ್ಪಾದನೆ ಮತ್ತು ಕಚ್ಚಾಉಣ್ಣೆಯನ್ನು ರಫ್ತು ಮಾಡುವುದರಲ್ಲಿಯೂ ಮುಂದಿದೆ. ವಿಶಾಲ ಹುಲ್ಲುಗಾವಲು, ಆರ್ಟೀಸಿಯನ್ ಬಾವಿಗಳಿಂದ ನೀರಿನ ಲಭ್ಯತೆ, ತಂಪು ಮತ್ತು ಶುಷ್ಕ ವಾಯುಗುಣ, ಅತ್ಯಾಧುನಿಕ ವಿಧಾನದ ಕುರಿಸಾಕಣೆ, ವಿಶಾಲ ಮಾರುಕಟ್ಟೆ ಸೌಲಭ್ಯಗಳು ಕುರಿಸಾಕಣೆಗೆ ಉತ್ತೇಜಕವಾಗಿವೆ. ಇಲ್ಲಿ

ಸಾಕುವ ಕುರಿಗಳಲ್ಲಿ ಸುಮಾರು ಶೇ.75 ಭಾಗ 'ಮೆರಿನೊ' ಜಾತಿಗೆ ಸೇರಿವೆ. ಅವು ಉತ್ತಮ ಗುಣಮಟ್ಟದ ಉಣ್ಣೆಯನ್ನು ನೀಡುತ್ತವೆ. ವಿಶಾಲವಾದ ಕುರಿಸಾಕಣೆ ಪ್ರದೇಶಕ್ಕೆ 'ಕುರಿಗಾವಲು' ಎನ್ನುವರು.

ದನಕರುಗಳನ್ನು ಪ್ರಮುಖವಾಗಿ ಗೋಮಾಂಸ ಮತ್ತು ಕ್ಷೀರೋತ್ಪನ್ನಗಳಿಗಾಗಿ ಸಾಕಲಾಗುತ್ತದೆ. ಸವನ್ನ ಪ್ರದೇಶದಲ್ಲಿ ಗೋಮಾಂಸಕ್ಕಾಗಿ ಮತ್ತು ಸಮಶೀತೋಷ್ಣವಲಯದ ಡೌನ್ಸ್ ಹುಲ್ಲುಗಾವಲಿನ ಪ್ರದೇಶದಲ್ಲಿ ಕ್ಷೀರೋತ್ಪನ್ನಗಳಿಗಾಗಿ ದನಕರುಗಳನ್ನು ಸಾಕಲಾಗುವುದು.

## ಖನಿಜ ಮತ್ತು ಕೈಗಾರಿಕೆಗಳು

**ಖನಿಜಗಳು:** ಆಸ್ಟ್ರೇಲಿಯದಲ್ಲಿ ಸಾಕಷ್ಟು ಖನಿಜ ಸಂಪತ್ತಿದೆ. ಕಬ್ಬಿಣದ ಅದಿರು, ಬಾಕ್ಸೈಟ್, ಸತು, ನಿಕ್ಕಲ್, ತಾಮ್ರ, ಮ್ಯಾಂಗನೀಸ್, ಚಿನ್ನ, ತವರ, ಸೀಸ ಮತ್ತು ಯುರೇನಿಯಂ ಪ್ರಮುಖ ಖನಿಜಗಳು. ಜೊತೆಗೆ ಇಂಧನ ಖನಿಜಗಳಾದ ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳೂ ಸಹ ದೊರೆಯುತ್ತವೆ. ಇವುಗಳಲ್ಲಿ ಅನೇಕ ಖನಿಜಗಳು ರಫ್ತಾಗುತ್ತವೆ.

@KTBS NOT TO BE REPUBLISHED

ಆಸ್ಟ್ರೇಲಿಯ ಒಂದು ಪ್ರಮುಖ ಕಬ್ಬಿಣದ ಅದಿರು ಉತ್ಪಾದಿಸುವ ದೇಶ. ಅತ್ಯಧಿಕ ಪ್ರಮಾಣದ ಕಬ್ಬಿಣದ ಅದಿರು ಜಪಾನಿಗೆ ರಫ್ತಾಗುತ್ತದೆ.

ಪ್ರಪಂಚದಲ್ಲೇ ಹೆಚ್ಚು ಬಾಕ್ಸೈಟ್ ನಿಕ್ಷೇಪವು ಆಸ್ಟ್ರೇಲಿಯದಲ್ಲಿದೆ. ಪಶ್ಚಿಮ ಆಸ್ಟ್ರೇಲಿಯದ ಕೂಲ್‌ಗಾರ್ಡಿ ಮತ್ತು ಕಾಲ್ಗೂರ್ಲಿಗಳು ಪ್ರಸಿದ್ಧ ಚಿನ್ನ ಉತ್ಪಾದಿಸುವ ಕೇಂದ್ರಗಳಾಗಿವೆ. ಸೀಸ, ಸತು ಮತ್ತು ಬೆಳ್ಳಿಗಳು ಜೊತೆಜೊತೆಯಾಗಿ ದೊರೆಯುತ್ತವೆ. ಚಿನ್ನವು ನ್ಯೂ ಸೌತ್ ವೇಲ್ಸ್, ವಿಕ್ಟೋರಿಯಾ ಮತ್ತು ಕ್ವೀನ್ಸ್‌ಲ್ಯಾಂಡ್‌ನಲ್ಲಿ ದೊರೆಯುತ್ತದೆ.

ನ್ಯೂಸೌತ್‌ವೇಲ್ಸ್‌ನಲ್ಲಿ ಹೆಚ್ಚು ತಾಮ್ರ ಉತ್ಪಾದನೆಯಾಗುತ್ತದೆ. ಹಾಗೆಯೇ ಕಾರ್ಪೆಂಟೇರಿಯ ಕೊಲ್ಲಿ ಪ್ರದೇಶವು ಮ್ಯಾಂಗನೀಸ್ ಉತ್ಪಾದನೆಯಲ್ಲಿ ಮುಂದಿದೆ. ಆಸ್ಟ್ರೇಲಿಯವು ಅತ್ಯಧಿಕ ಪ್ರಮಾಣದ ಯುರೇನಿಯಂ ನಿಕ್ಷೇಪವನ್ನು ಹೊಂದಿದೆ. ಅದು ಹೆಚ್ಚಾಗಿ ಉತ್ತರ ಪ್ರಾಂತ್ಯ (60%), ಪಶ್ಚಿಮ ಆಸ್ಟ್ರೇಲಿಯ ಮತ್ತು ದಕ್ಷಿಣ ಆಸ್ಟ್ರೇಲಿಯದಲ್ಲಿ ದೊರೆಯುತ್ತದೆ.

**ಕೈಗಾರಿಕೆಗಳು:** ಇಂದು ಆಸ್ಟ್ರೇಲಿಯವು ವಿವಿಧ ಕೈಗಾರಿಕೆಗಳ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಖನಿಜ ಸಂಪತ್ತು, ಕೃಷಿ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿ, ವಿದೇಶೀ ಬಂಡವಾಳ ಹೂಡಿಕೆ ಮತ್ತು ವಿಶಾಲ ಮಾರುಕಟ್ಟೆಗಳು ಕೈಗಾರಿಕಾಭಿವೃದ್ಧಿಗೆ ಪೂರಕವಾಗಿವೆ. ಪ್ರಾರಂಭದಿಂದಲೂ ಆಸ್ಟ್ರೇಲಿಯದ ಕೈಗಾರಿಕೋದ್ಯಮ ವಿದೇಶಿ ನೆರವನ್ನು ಅವಲಂಬಿಸಿದೆ. ಅದರಲ್ಲೂ ಜಪಾನಿನ ಕೊಡುಗೆ ಅಪಾರವಾದುದು. ಆಸ್ಟ್ರೇಲಿಯದ ಕೆಲವು ಪ್ರಮುಖ ಕೈಗಾರಿಕೆಗಳು ಈ ಕೆಳಕಂಡಂತಿವೆ.

- ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
- ಸ್ವಚಾಲಿತ ವಾಹನ ಕೈಗಾರಿಕೆ
- ಹಡಗು ನಿರ್ಮಾಣ
- ವಿದ್ಯುದುಪಕರಣ
- ಜವಳಿ ಉದ್ಯಮ
- ಕಾಗದ, ರಟ್ಟು ಮತ್ತು ಮರದ ತಿರುಳು
- ತೈಲ ಶುದ್ಧೀಕರಣ

@KTBS
NOT TO BE REPUBLISHED



*ಸಿಡ್ನಿ ಕೈಗಾರಿಕಾ ಪಟ್ಟಣ*

ಇತರೆ ಕೈಗಾರಿಕೆಗಳೆಂದರೆ ವಿಮಾನ ತಯಾರಿಕೆ (ಸಿಡ್ನಿ, ಮೆಲ್ಬೋರ್ನ್), ಹಿಟ್ಟಿನ ಗಿರಣಿ, ಮೀನು ಮತ್ತು ಹಣ್ಣು ಸಂಸ್ಕರಣೆ, ರಾಸಾಯನಿಕ ವಸ್ತುಗಳ ತಯಾರಿಕೆ ಇತ್ಯಾದಿ.

## ಜನಸಂಖ್ಯೆ

**ಬೆಳವಣಿಗೆ:** ಈಗಾಗಲೇ ತಿಳಿಸಿದಂತೆ ಆಸ್ಟ್ರೇಲಿಯ ಖಂಡವು ವಿಸ್ತೀರ್ಣದಲ್ಲಿ ಮಾತ್ರವಲ್ಲ ಜನಸಂಖ್ಯೆಯಲ್ಲೂ ಚಿಕ್ಕದು. ಇದರ ಒಟ್ಟು ಜನಸಂಖ್ಯೆ 20.0 ದಶಲಕ್ಷ (2012). ಇದು ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ.0.31 ಭಾಗದಷ್ಟು ಮಾತ್ರ. ಈ ಖಂಡದ ಜನಸಂಖ್ಯೆ 1860ರಲ್ಲಿ 1.15 ದಶಲಕ್ಷವಾಗಿತ್ತು. 1960ರಲ್ಲಿ 10 ದಶಲಕ್ಷ, 1980ರಲ್ಲಿ 14.8 ದಶಲಕ್ಷ ಮತ್ತು 1998ರಲ್ಲಿ 18.7 ದಶಲಕ್ಷವಾಯಿತು. ಕಳೆದ ಶತಮಾನದ ಅಂತ್ಯಾವಧಿಯಲ್ಲಿ ಖಂಡದ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿರುವುದು ಕಂಡುಬರುತ್ತದೆ.

**ಹಂಚಿಕೆ:** ಆಸ್ಟ್ರೇಲಿಯದ ಜನಸಂಖ್ಯಾ ಹಂಚಿಕೆಯಲ್ಲಿ ವಿರಳತೆ ಮತ್ತು ಅಸಮಾನತೆಯಿದೆ. ಖಂಡದ ಒಳನಾಡಿನ ಬಹುಭಾಗವು ನಿರ್ಜನವಾದುದು. ನ್ಯೂಸೌತ್‌ವೇಲ್ಸ್ ಅತಿ ಜನಭರಿತವಾದ ($\frac{1}{3}$) ಪ್ರಾಂತ್ಯ. ವಿಕ್ಟೋರಿಯ ಎರಡನೆಯ ($\frac{1}{4}$) ಸ್ಥಾನದಲ್ಲಿದೆ. ತರುವಾಯ ಕ್ವೀನ್ಸ್‌ಲ್ಯಾಂಡ್, ದಕ್ಷಿಣ ಆಸ್ಟ್ರೇಲಿಯ ಮತ್ತು ತಾಸ್ಮೇನಿಯಗಳು ಸ್ಥಾನ ಪಡೆದಿವೆ. ಪ್ರತಿಯಾಗಿ ಉತ್ತರ ಪ್ರಾಂತ್ಯವು ಅತ್ಯಂತ ವಿರಳ ಜನರಿಂದ ಕೂಡಿದೆ. ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಆರು ನಗರಗಳಲ್ಲಿ ಸಾಂದ್ರೀಕೃತವಾಗಿದೆ. ಉದಾ: ಸಿಡ್ನಿ, ಮೆಲ್ಬೋರ್ನ್, ಬ್ರಿಸ್ಬೇನ್, ಅಡಿಲೇಡ್, ಪರ್ತ ಮತ್ತು ನ್ಯೂಕ್ಯಾಸಲ್.

**ಜನಸಾಂದ್ರತೆ:** ಪ್ರಪಂಚದ ಅತಿ ಕಡಿಮೆ ಜನಸಾಂದ್ರತೆವುಳ್ಳ ದೇಶಗಳಲ್ಲಿ ಆಸ್ಟ್ರೇಲಿಯವು ಒಂದಾಗಿದೆ. ಇದರ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿಲೋ ಮೀಟರ್‌ಗೆ ಮೂರು ಜನರು ಮಾತ್ರ. ಇದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಎಲ್ಲಾ ನಗರ ಪ್ರದೇಶ, ರಾಜಧಾನಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಜನಸಾಂದ್ರತೆ ಹೆಚ್ಚು. ಉದಾ: ವಿಕ್ಟೋರಿಯ, ನ್ಯೂಸೌತ್‌ವೇಲ್ಸ್, ತಾಸ್ಮೇನಿಯ, ಕ್ವೀನ್ಸ್‌ಲ್ಯಾಂಡ್ ಇತ್ಯಾದಿ. ಈ ಖಂಡದ ಆಗ್ನೇಯ ಭಾಗಗಳಲ್ಲಿ ಸಾಧಾರಣ ಜನಸಾಂದ್ರತೆ ಇದೆ. ಆದರೆ ಮರುಭೂಮಿ ಮತ್ತು ಅರೆಮರುಭೂಮಿಗಳಿಂದ ಕೂಡಿದ ಸುಮಾರು ಶೇ.80 ಭಾಗದಲ್ಲಿ ಜನಸಾಂದ್ರತೆ ಅತಿ ವಿರಳ.

ಆಸ್ಟ್ರೇಲಿಯದಲ್ಲಿ ಗ್ರಾಮೀಣ ಜನಸಂಖ್ಯೆಗಿಂತ (15%) ನಗರ ಜನಸಂಖ್ಯೆಯ (85%) ಪ್ರಮಾಣ ಹೆಚ್ಚು.

NOT TO BE REPUBLISHED ©KTBS




***ಆಸ್ಟ್ರೇಲಿಯದ ಜನಸಾಂದ್ರತೆ***

©KTBS NOT TO BE REPUBLISHED

### ಹೊಸ ಪದಗಳು

ದ್ವೀಪಖಂಡ, ಗೊಂಡ್ವಾನ, ತಟ್ಟೆ ಆಕಾರ, ಏಕಶಿಲೆ, ಹವಳದಿಣ್ಣೆ, ಕಾಂಗರೂ, ಲೈರ್, ಡಿಂಗೊ, ಕೂಕಾಬುರ್ರ, ವಲ್ಲಬಿ, ಎಕಿಡ್ನ ಮತ್ತು ಕರಡಿಕೋಲ, ಜನಸಾಂದ್ರತೆ, ಸಾಂದ್ರೀಕೃತ.

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ಆಸ್ಟ್ರೇಲಿಯವನ್ನು 'ಅತ್ಯಂತ ಸಮತಟ್ಟಾದ ಭೂಖಂಡ' ಎನ್ನುವರು. ಏಕೆ?

2 ಆಸ್ಟ್ರೇಲಿಯ ಖಂಡದ ಸ್ಥಾನ ಮತ್ತು ಸನ್ನಿವೇಶಗಳನ್ನು ತಿಳಿಸಿರಿ.

3 ಆಸ್ಟ್ರೇಲಿಯದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

4 ಆಸ್ಟ್ರೇಲಿಯದ ನದಿವ್ಯವಸ್ಥೆ ಕುರಿತು ತಿಳಿಸಿರಿ.

5 ಆಸ್ಟ್ರೇಲಿಯದ ಪ್ರಮುಖ ಬೆಳೆಗಳಾವುವು?

6 ಆಸ್ಟ್ರೇಲಿಯ ಖಂಡದ ಪ್ರಮುಖ ಖನಿಜಗಳಾವುವು?

7 ಆಸ್ಟ್ರೇಲಿಯದ ಪ್ರಮುಖ ಕೈಗಾರಿಕೆಗಳನ್ನು ತಿಳಿಸಿರಿ.

8 ಆಸ್ಟ್ರೇಲಿಯದಿಂದ ರಫ್ತಾಗುವ ಪದಾರ್ಥಗಳನ್ನು ತಿಳಿಸಿರಿ.

9 ಆಸ್ಟ್ರೇಲಿಯದಲ್ಲಿ ಜನಸಾಂದ್ರತೆ ವಿರಳವೇಕೆ?

10 ಆಸ್ಟ್ರೇಲಿಯದ ಹುಲ್ಲುಗಾವಲುಗಳನ್ನು ಹೆಸರಿಸಿ.



**ಚಟುವಟಿಕೆಗಳು**

1 ಆಟ್ಲಾಸ್ ಪುಸ್ತಕದ ನೆರವಿನಿಂದ ಆಸ್ಟ್ರೇಲಿಯ ಖಂಡದ ಪ್ರಮುಖ ಪರ್ವತ, ನದಿ ಮತ್ತು ಸರೋವರಗಳನ್ನು ಗುರುತಿಸಿ, ಪಟ್ಟಿ ಮಾಡಿ ಹಾಗೂ ಬಾಹ್ಯನಕ್ಷೆಯಲ್ಲಿ ಗುರುತಿಸಿರಿ.

2 ನೀವು ವಾಸವಾಗಿರುವ ಸ್ಥಳದ ಸುತ್ತಲಿನ ಭಾಗಗಳನ್ನು ವೀಕ್ಷಿಸಿ ಅಲ್ಲಿನ ಬೆಳೆ, ಸಸ್ಯವರ್ಗ, ಪ್ರಾಣಿ ಪಕ್ಷಿ, ಬೆಟ್ಟಗಳ ಬಗ್ಗೆ ಒಂದು ಪಟ್ಟಿ ತಯಾರಿಸಿರಿ.

@KTBS
NOT TO BE REPUBLISHED

**ಅಧ್ಯಾಯ 26**

# ಅಂಟಾರ್ಟಿಕ

T8P6J6

**ಪಾಠದ ಪರಿಚಯ**

ಈ ಪಾಠದಲ್ಲಿ ಅಂಟಾರ್ಟಿಕ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ, ಮೇಲ್ಮೈ ಲಕ್ಷಣ, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತು, ಅನ್ವೇಷಣೆ, ಅಂಟಾರ್ಟಿಕ ಒಪ್ಪಂದ ಮತ್ತು ಪ್ರಮುಖ ಸಂಶೋಧನಾ ಕೇಂದ್ರಗಳನ್ನು ಕುರಿತು ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1 ಅಂಟಾರ್ಟಿಕ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶಗಳನ್ನು ತಿಳಿಯುವುದು.

2 ಅಂಟಾರ್ಟಿಕ ಖಂಡದ ಮೇಲ್ಮೈ ಲಕ್ಷಣ, ನೆಲ ಮತ್ತು ಜಲಗಳ ಬಗ್ಗೆ ಅರಿಯುವುದು.

3 ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತನ್ನು ತಿಳಿದುಕೊಳ್ಳುವುದು.

4 ಅಂಟಾರ್ಟಿಕ ಖಂಡದ ಅನ್ವೇಷಣೆ, ಒಪ್ಪಂದ ಮತ್ತು ಸಂಶೋಧನಾ ಕೇಂದ್ರಗಳ ಬಗ್ಗೆ ಅರಿಯುವುದು.

@KTBS NOT TO BE REPUBLISHED

## ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಸ್ಥಾನ:** ದಕ್ಷಿಣ ಧ್ರುವದ ಸುತ್ತ ವ್ಯಾಪಿಸಿರುವ ಭೂಖಂಡ. ಅಂಟಾರ್ಟಿಕ ವೃತ್ತ ಅಥವಾ $66^{0}30^{1}$ ದಕ್ಷಿಣ ಅಕ್ಷಾಂಶದೊಳಗೆ ಹರಡಿರುವ ಖಂಡ. ಉತ್ತರ ಧ್ರುವದಲ್ಲಿರುವ ಆರ್ಕ್‌ಟಿಕ್ ಸಾಗರಕ್ಕೆ ವಿರುದ್ಧವಾಗಿರುವುದು ಈ ಭೂಖಂಡದ ವೈಶಿಷ್ಟ್ಯ.

**ವಿಸ್ತೀರ್ಣ:** ಅಂಟಾರ್ಟಿಕವು ಪ್ರಪಂಚದ ಐದನೆಯ ದೊಡ್ಡ ಭೂಖಂಡ. ಇದರ ಒಟ್ಟು ವಿಸ್ತೀರ್ಣ 14.2 ಮಿಲಿಯನ್ ಚ.ಕಿ.ಮೀ.ಗಳು. ಇದು ಭಾರತ ಮತ್ತು ಚೀನ ದೇಶಗಳ ವಿಸ್ತೀರ್ಣಕ್ಕಿಂತ ದೊಡ್ಡದು. ಅಮೆರಿಕ ಸಂಯುಕ್ತ ಸಂಸ್ಥಾನದ ವಿಸ್ತೀರ್ಣದ ಒಂದೂವರೆಯಷ್ಟು ಇದೆ.

**ಭೌಗೋಳಿಕ ಸನ್ನಿವೇಶ:** ಅಂಟಾರ್ಟಿಕ ಖಂಡವನ್ನು ಸುತ್ತಲೂ ಜಲರಾಶಿಗಳು ಆವರಿಸಿವೆ. ಈ ಜಲರಾಶಿಯನ್ನು ದಕ್ಷಿಣ ಸಾಗರವೆಂದೇ ಕರೆಯಲಾಗಿದೆ. ಆದರೆ ಇದು ಪ್ರತ್ಯೇಕ ಜಲರಾಶಿಯಲ್ಲ, ಬದಲಾಗಿ ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಮಹಾಸಾಗರಗಳು ಒಂದುಗೂಡಿರುವ ಭಾಗ. ಲ್ಯಾಟಿನ್ ಅಮೆರಿಕದ ದಕ್ಷಿಣದ ತುತ್ತತುದಿಯ ಕೇಪ್‌ಹಾರ್ನ್ ಈ ಖಂಡದ ಸಮೀಪಕ್ಕಿರುವ ಭೂಭಾಗ. ಇದು 990 ಕಿ.ಮೀ. ದೂರದಲ್ಲಿದೆ. ಈ ಖಂಡದ

ಪೂರ್ವಕ್ಕೆ ಹಿಂದೂ ಮಹಾಸಾಗರ, ಪಶ್ಚಿಮಕ್ಕೆ ಪೆಸಿಫಿಕ್ ಮಹಾಸಾಗರ ಹಾಗೂ ವಾಯವ್ಯಕ್ಕೆ ಅಟ್ಲಾಂಟಿಕ್ ಮಹಾಸಾಗರಗಳಿವೆ.




*ಅಂಟಾರ್ಟಿಕ ಖಂಡ*

## ಮೇಲ್ಮೈ ಲಕ್ಷಣಗಳು

ಅಂಟಾರ್ಟಿಕ ಖಂಡದ ಶೇ.98 ಭಾಗ ಹಿಮಾವೃತವಾಗಿದೆ. ಇದರ ಭೂಮೇಲ್ಮೈ ಲಕ್ಷಣಗಳು ಬಹುವಾಗಿ ಮಂಜುಗಡ್ಡೆ ಹಾಳೆಯಿಂದ ಮುಚ್ಚಿ ಹೋಗಿವೆ. ಎತ್ತರವಾದ ಪರ್ವತ ಶಿಖರ ಮತ್ತು ಪ್ರಸ್ಥಭೂಮಿಗಳು ಗೋಚರಿಸುತ್ತವೆ. ಮಂಜುಗಡ್ಡೆಯ ಪದರವು ಸುಮಾರು 2,200 ಮೀಟರ್‌ಗಳಿಗಿಂತ ಹೆಚ್ಚು ಮಂದವಾಗಿದ್ದು, ಎಲ್ಲೆಡೆಯೂ ಶ್ವೇತವರ್ಣಮಯ. ಹೀಗಾಗಿ ಈ ಖಂಡವನ್ನು 'ಶ್ವೇತ ಖಂಡ', 'ಹಿಮದ ಮರುಭೂಮಿ' ಎಂತಲೂ ಹಾಗೂ ಅತ್ಯಂತ ಶೀತವಾಗಿರುವುದರಿಂದ 'ಶೀತಲ ಖಂಡ' ಎಂದೂ ಕರೆಯಲಾಗಿದೆ.

ಅಂಟಾರ್ಟಿಕ ಖಂಡದಲ್ಲಿ ಪರ್ವತ, ಪ್ರಸ್ಥಭೂಮಿ, ಕಣಿವೆ, ಕಂದರಗಳಂತಹ ಭೂಸ್ವರೂಪಗಳಿವೆ. ಸಮುದ್ರ ಮಟ್ಟಕ್ಕೆ ಸರಾಸರಿ 2,300 ಮೀಟರ್ ಎತ್ತರವುಳ್ಳ ಅಂಟಾರ್ಟಿಕವು ಭೂಗೋಳದ ಎತ್ತರವಾದ ಭೂಖಂಡವಾಗಿದೆ. ಟ್ರಾನ್ಸ್ ಅಂಟಾರ್ಟಿಕ ಪರ್ವತ ಸರಣಿಯು ಈ ಖಂಡವನ್ನು ಎರಡು ಪ್ರಮುಖ ಭೌಗೋಳಿಕ ವಿಭಾಗಗಳಾಗಿ ವಿಭಜಿಸುತ್ತದೆ: (1) ಪೂರ್ವ ಅಂಟಾರ್ಟಿಕ ಮತ್ತು (2) ಪಶ್ಚಿಮ ಅಂಟಾರ್ಟಿಕ.

©KTBS NOT TO BE REPUBLISHED



ನೀರ್ಗಲ್ಲು

**(1) ಪೂರ್ವ ಅಂಟಾರ್ಟಿಕವು** ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳ ಕಡೆಗೆ ಮುಖವಾಗಿದೆ. ಅವು ಈ ಖಂಡದ ಅರ್ಧಕ್ಕೂ ಹೆಚ್ಚಿನ ಭಾಗವನ್ನಾವರಿಸಿವೆ. ಆದ್ದರಿಂದ ಇದನ್ನು 'ಗ್ರೇಟರ್ ಅಂಟಾರ್ಟಿಕ' ಎನ್ನುವರು. ಇದರ ಕರಾವಳಿಯಲ್ಲಿ ಪರ್ವತ, ಕಣಿವೆ ಮತ್ತು ಹಿಮನದಿಗಳಿವೆ. ಈ ವಿಭಾಗದ ಮಧ್ಯಭಾಗ ಪ್ರಸ್ಥಭೂಮಿಯಾಗಿದೆ. ಅಲ್ಲಿ ದಕ್ಷಿಣ ಧ್ರುವವು ನೆಲೆಗೊಂಡಿದೆ.

**(2) ಪಶ್ಚಿಮ ಅಂಟಾರ್ಟಿಕವು** ಪೆಸಿಫಿಕ್ ಸಾಗರದ ಕಡೆಗಿದೆ. ಇದರ ಬಹಳಷ್ಟು ಭಾಗವು ಸಮುದ್ರ ಮಟ್ಟದಿಂದ ಕೆಳಗಿದೆ. ಈ ಭೌಗೋಳಿಕ ವಿಭಾಗದ ಅಂಟಾರ್ಟಿಕ ಪರ್ಯಾಯ ಭಾಗವು ಪರ್ವತಗಳಿಂದ ಕೂಡಿದ್ದು, ಅದರ 'S' ಆಕಾರದ ತುದಿಯು ದಕ್ಷಿಣ ಅಮೆರಿಕದ ಕಡೆಗೆ ಮೊನಚಾಗಿದೆ. ಇದರ ಸಮೀಪದಲ್ಲಿ ಹಲವು ದ್ವೀಪಗಳಿವೆ. ಜೊತೆಗೆ ಪರ್ವತ ಶಿಖರ ಮತ್ತು ಜ್ವಾಲಾಮುಖಿಗಳಿವೆ. ಈ ಭಾಗದ ಎಲ್ಸ್‌ವರ್ತ್ ಪರ್ವತ ಸರಣಿಯಲ್ಲಿರುವ ವಿನ್ಸನ್ ಮ್ಯಾಸಿಫ್ (5140 ಮೀ.) ಶಿಖರವು ಅಂಟಾರ್ಕಟಿಕ್ ಖಂಡದಲ್ಲೇ ಎತ್ತರವಾದುದು. ರಾಸ್ ದ್ವೀಪದಲ್ಲಿರುವ ಮೌಂಟ್ ಎರೆಬಸ್ ಎಂಬುದು ಅಂಟಾರ್ಟಿಕ ಖಂಡದ ಅತಿ ಪ್ರಮುಖ ಜಾಗೃತ ಜ್ವಾಲಾಮುಖಿಯಾಗಿದೆ. ಇದು ರಾಸ್ ಐಲ್ಯಾಂಡ್‌ನಲ್ಲಿದೆ. ಪ್ರಿನ್ಸ್ ಚಾರ್ಲ್ಸ್ ಎಂಬುದು ಮತ್ತೊಂದು ಪರ್ವತ.

ಟ್ರಾನ್ಸ್ ಅಂಟಾರ್ಟಿಕ ಪರ್ವತ ಸರಣಿಗಳ ವಿರುದ್ಧ ಅಂಚಿನಲ್ಲಿ ಎರಡು ದೊಡ್ಡ ಖಾರಿಗಳಿವೆ: ರಾಸ್ ಸಮುದ್ರ ಮತ್ತು ವೆಡೆಲ್ ಸಮುದ್ರ

© KTBS NOT TO BE REPUBLISHED

## ಸಸ್ಯ ಮತ್ತು ಪ್ರಾಣಿಸಂಪತ್ತು

ಈ ಮೊದಲು ತಿಳಿಸಿದಂತೆ ಅಂಟಾರ್ಟಿಕ ಖಂಡವು ಹಿಮಾವೃತವಾಗಿದ್ದು ಪ್ರತಿಕೂಲವಾದ ಶೀತ ಹವಾಮಾನದಿಂದ ಕೂಡಿದೆ. ವರ್ಷದಲ್ಲಿ ಆರು ತಿಂಗಳು ಕತ್ತಲು ಮತ್ತು ಆರು ತಿಂಗಳು ಬೆಳಕಿನಿಂದ ಕೂಡಿದೆ. ಇಲ್ಲಿ ಜೀವಿಗಳ ಪೋಷಣೆ ಕಷ್ಟ. ಪಾಚಿ, ಶಿಲಾವಲ್ಕ ಮತ್ತು ಹಾವಸೆಗಳೇ ಇಲ್ಲಿನ ಪ್ರಮುಖ ಸಸ್ಯಗಳು. ಅವು ತೆರೆದ ಭಾಗದಲ್ಲಿರುವ ಬಂಡೆಗಳ ಮೇಲೆ ಕಂಡುಬರುತ್ತವೆ.

ಇಲ್ಲಿನ ಪ್ರತಿಕೂಲ ವಾಯುಗುಣವನ್ನು ನಿಭಾಯಿಸಬಲ್ಲ ಕೆಲವು ಪ್ರಾಣಿಗಳು ಜೀವಿಸುತ್ತವೆ. ಆದರೆ ಸುತ್ತಲಿನ ಜಲಭಾಗಗಳಲ್ಲಿ ವಿವಿಧ ಪ್ರಾಣಿಗಳನ್ನು ಕಾಣಬಹುದು. **ಉದಾ:** ಪೆಂಗ್ವಿನ್, ತಿಮಿಂಗಿಲ, ಸೀಲ್, ಕ್ರಿಲ್ ಮೀನು ಮತ್ತು ಬಗೆಬಗೆಯ ಪಕ್ಷಿಗಳು. ಸೀಗಡಿ ಮೀನು ಮತ್ತು ಇಂಚಾಕಗಳನ್ನು ಹೋಲುವ ಕ್ರಿಲ್‌ಗಳ ಸಂಖ್ಯೆ ಅಪಾರ. ಅವು ಗುಂಪುಗುಂಪಾಗಿ ಈಜುತ್ತಾ ಬದುಕುತ್ತವೆ. ಇಂಥ ಸೂಕ್ಷ್ಮ ಜೀವಿಗಳು ಸಮುದ್ರದ ದೊಡ್ಡ ಪ್ರಾಣಿ ಮತ್ತು ಮೀನುಗಳಿಗೆ ಮುಖ್ಯ ಆಹಾರವಾಗುತ್ತವೆ.

ಸಮುದ್ರ ತೀರಗಳಲ್ಲಿ ಅಸಂಖ್ಯಾತ ಪೆಂಗ್ವಿನ್‌ಗಳು ವಾಸಿಸುತ್ತವೆ. ಇವು ಹಾರಾಟ ಮಾಡದ ಪಕ್ಷಿಗಳು. ಅದಿಲೆ, ಎಂಪರರ್ ಪೆಂಗ್ವಿನ್ ಮತ್ತು ಚಿನ್‌ಸ್ಟ್ರಾಪ್ ಇವು ಇಲ್ಲಿನ ಪ್ರಮುಖ ಪೆಂಗ್ವಿನ್ ಪ್ರಭೇದಗಳು. ಹಿಮಾವೃತವಾದ ಈ ಖಂಡಕ್ಕೆ ಆಗಮಿಸುವ ಹಡಗುಗಳಿಗೆ ಮೊದಲು ಸ್ವಾಗತ ನೀಡುವವೇ ಅದಿಲೆ ಪೆಂಗ್ವಿನ್‌ಗಳು. ಈ ಖಂಡದ ಸಮೀಪದ ದ್ವೀಪಗಳು ಮತ್ತು ಸಮುದ್ರ ತೀರಗಳಲ್ಲಿ ಸೀಲ್ ಸಂತತಿ ಹೆಚ್ಚು. ಆರು ಬಗೆಯ ಸೀಲ್‌ಗಳನ್ನು ಗುರುತಿಸಲಾಗಿದೆ. ನಿರಂತರ ಬೇಟೆಯಿಂದ ಸೀಲ್ ಅಳಿವಿನಂಚಿನಲ್ಲಿವೆ.

NOT TO BE REPUBLISHED © KTBS



*ಪೆಂಗ್ವಿನ್*



*ಸೀಲ್‌ಗಳು*

• ಪೆಂಗ್ವಿನ್‌ಗಳು ತಮ್ಮ ಸಂತಾನಾಭಿವೃದ್ಧಿಗಾಗಿ ಕಲ್ಲು ಪೊಟರೆಗಳಲ್ಲಿ ನಿರ್ಮಿಸಿಕೊಂಡ ಗೂಡುಗಳಿಗೆ 'ರೂಕರಿ' ಎನ್ನುವರು.

• ದಕ್ಷಿಣ ಧ್ರುವಕ್ಕೆ ಸಮೀಪದಲ್ಲಿರುವ ಈ ಖಂಡದ 'ವೋಸ್ಟಾಕ್' ಪ್ರಪಂಚದಲ್ಲೇ ಅತ್ಯಂತ ಕಡಿಮೆ ಉಷ್ಣಾಂಶವನ್ನು ದಾಖಲಿಸುವ ಸ್ಥಳ (–೮೯°ಸೆ).

## ಅಂಟಾರ್ಟಿಕ ಯಾನ – ಅಂಟಾರ್ಟಿಕ ಒಪ್ಪಂದ

ಹದಿನೆಂಟನೆಯ ಶತಮಾನದ ಅಂತ್ಯಾವಧಿಯಿಂದಲೂ ಅಂಟಾರ್ಟಿಕ ಖಂಡ ಕುರಿತ ಸಂಶೋಧನೆ ನಡೆಯುತ್ತಿದೆ. ಹಲವು ಸಾಗರಯಾನಿಗಳು ಈ ಖಂಡದ ಶೋಧನೆಗೆ ಸಾಹಸಯಾನ ಮಾಡಿರುವರು. ಯು.ಎಸ್.ಎ ನೌಕಾಪಡೆಯ ಮುಖ್ಯಸ್ಥ ಚಾರ್ಲ್ಸ್ ವಿಲ್ಸ್ ಈ ಖಂಡವನ್ನು ಶೋಧಿಸಿದನು. ಅಂತಹವರಲ್ಲಿ ಬ್ರಿಟನ್ನಿನ ಪರಿಶೋಧಕ ಜೇಮ್ಸ್ ಕ್ಲಾರ್ಕ್‌ರಾಸ್ 1841ರಲ್ಲಿ (ಈತನ ಹೆಸರಿನಿಂದ ಕರೆಯುವ) ಈ ಖಂಡದ ರಾಸ್ ಸಮುದ್ರವನ್ನು ಪತ್ತೆಹಚ್ಚಿದ. ಇಂಗ್ಲೆಂಡಿನ ರಾಬರ್ಟ್ ಫಾಲ್ಕನ್ ಸ್ಕಾಟ್ ಈ ಸಮುದ್ರ ದಾಟುವುದರಲ್ಲಿ ಯಶಸ್ವಿಯಾದನು. ಪರಿಶೋಧಕರು ಬೇಸಿಗೆಯ ಅಂತಿಮಾವಧಿಯಲ್ಲಿ ಸಮುದ್ರದ ಮೂಲಕ ಈ ಖಂಡವನ್ನು ಪ್ರವೇಶಿಸುವರು. ಅನಂತರ ತಮ್ಮ ಚಳಿಗಾಲದ ಶಿಬಿರಕ್ಕೆ ನೆಲೆ ಮಾಡಿಕೊಳ್ಳುವರು.

© KTBS NOT TO BE REPUBLISHED



ಸ್ಕಾಟ್ ಮತ್ತು ಅಮುಂಡ್‌ಸನ್

ಅಂಟಾರ್ಟಿಕ ಖಂಡದ ಸಮಗ್ರ ಪರಿಶೋಧನೆ 20ನೆಯ ಶತಮಾನದ ಆರಂಭದಲ್ಲಿ ಪ್ರಾರಂಭಗೊಂಡಿತು. 1909ರಲ್ಲಿ ಇಂಗ್ಲೆಂಡಿನ ಷಾಕಲ್ಟನ್ ದಕ್ಷಿಣದ ಕಾಂತ ಧ್ರುವ ಕಂಡುಹಿಡಿದನು. ನಾರ್ವೆಯ ರೋಲ್ಡ್ ಅಮುಂಡ್‌ಸನ್ 1911ರಲ್ಲಿ ದಕ್ಷಿಣ ಧ್ರುವ ತಲುಪಿದನು. 1912ರಲ್ಲಿ ರಾಬರ್ಟ್ ಫಾಲ್ಕನ್ ಸ್ಕಾಟ್‌ನು ಸಹ ಅದೇ ಧ್ರುವವನ್ನು ತಲುಪಿ ಹಿಂತಿರುಗುವಾಗ ಕಾಲವಶನಾದನು. ಅವನ ದಿನಚರಿಯಲ್ಲಿ ದೊರೆತ ಮಾಹಿತಿಗಳು ಮುಂದಿನ ವೈಜ್ಞಾನಿಕ ಅನ್ವೇಷಣೆಗೆ ಹೆಚ್ಚು ನೆರವಾದವು. ಅಮೆರಿಕದ ನೌಕೌಪಡೆಯ ಅಡ್ಮಿರಲ್ ರಿಚರ್ಡ್ ಬೈರ್ಡ್ ಈ ಖಂಡದ ಪರಿಶೋಧನೆಗಾಗಿ ವಿಮಾನದ ಮೂಲಕ ಮೊದಲಿಗೆ (1929) ತಲುಪಿದನು. ತರುವಾಯ ಈ ಖಂಡದ ಅಧ್ಯಯನಕ್ಕೆ ಅನೇಕ ದೇಶಗಳು ಮುಂದಾದವು.

**ಅಂಟಾರ್ಟಿಕ ಒಪ್ಪಂದ :** ಇದು ಅಂಟಾರ್ಕ್ಟಿಕಾವನ್ನು ಕೇವಲ ವೈಜ್ಞಾನಿಕ ಸಂಶೋಧನೆಗಾಗಿ ಒಂದು ಸ್ಥಳವಾಗಿ ಇರಿಸಿಕೊಳ್ಳಲು ದೇಶಗಳ ನಡುವಿನ ಒಪ್ಪಂದವಾಗಿದೆ. ಆದ್ದರಿಂದ, ಇದನ್ನು ನಂತರ "ವಿಜ್ಞಾನದ ಖಂಡ ಎಂದು ಕರೆಯಲಾಯಿತು. ಒಪ್ಪಂದವನ್ನು ವಾಷಿಂಗ್ಟನ್ DC ಯಲ್ಲಿ 1 ಡಿಸೆಂಬರ್ 1959 ರಂದು 12 ರಾಷ್ಟ್ರಗಳು ಸಹಿ ಹಾಕಿದವು ಮತ್ತು ಇದನ್ನು 23 ಜೂನ್ 1961 ರಂದು ಜಾರಿಗೊಳಿಸಲಾಯಿತು. ಈ ಒಪ್ಪಂದವು $60^0$ ಅಕ್ಷಾಂಶದ ದಕ್ಷಿಣ ಪ್ರದೇಶಕ್ಕೆ ಅನ್ವಯಿಸುತ್ತದೆ. ಸದಸ್ಯ ರಾಷ್ಟ್ರಗಳು: ಅರ್ಜೆಂಟೀನಾ, ಆಸ್ಟ್ರೇಲಿಯಾ, ಬೆಲ್ಜಿಯಂ, ಚಿಲಿ, ಫ್ರಾನ್ಸ್, ಜಪಾನ್, ನ್ಯೂಜಿಲೆಂಡ್, ನಾರ್ವೆ, ದಕ್ಷಿಣ ಆಫ್ರಿಕಾ, ರಷ್ಯಾ, ಇಂಗ್ಲೆಂಡ್ ಮತ್ತು ಅಮೇರಿಕಾ ಸದಸ್ಯ ರಾಷ್ಟ್ರಗಳಾಗಿವೆ.

©KTBS NOT TO BE REPUBLISHED



*ಆಧುನಿಕ ಸಂಶೋಧನಾ ಕೇಂದ್ರಗಳು*

**ಒಪ್ಪಂದದ ಉದ್ದೇಶಗಳು :** ಈ ಒಪ್ಪಂದದ ಪ್ರಕಾರ ಈ ಖಂಡವು ವೈಜ್ಞಾನಿಕ ಸಂಶೋಧನೆಗಷ್ಟೇ ಮೀಸಲು. ಹೀಗಾಗಿ ಈ ಖಂಡವನ್ನು "ವಿಜ್ಞಾನ ಭೂಖಂಡ" ಎಂತಲೂ ಕರೆಯುತ್ತಾರೆ. ಅಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸುವಂತಿಲ್ಲ. ಯಾವ ದೇಶವೂ ನೆಲ,

ಜಲದ ಮೇಲೆ ಸ್ವಾಮ್ಯ ಹೊಂದುವಂತಿಲ್ಲ. ಇಲ್ಲಿನ ಪರಿಸರವನ್ನು ಮಾಲಿನ್ಯಗೊಳಿಸುವಂತಿಲ್ಲ. ಈ ಖಂಡದ ಸಂಶೋಧನೆಗೆ ಬರುವವರು ಯಾವುದೇ ಹೊರ ಜೀವಿ ಪ್ರಭೇದವನ್ನು ತರುವಂತಿಲ್ಲ. ಅಲ್ಲದೆ ತಿಮಿಂಗಿಲಗಳ ಬೇಟೆಗೆ ನಿಷೇಧವಿದೆ. ವೈಜ್ಞಾನಿಕ ಮಾಹಿತಿಗಳ ಮುಕ್ತ ವಿನಿಮಯಕ್ಕೆ ಅವಕಾಶವಿದೆ. ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಬೇಕು. ಒಟ್ಟಾರೆ ಈ ಖಂಡವು ಶಾಂತಿಯ ಉದ್ದೇಶಗಳಿಗೆ ಮಾತ್ರ ಮೀಸಲು.



*ಹಿಮಾವೃತ ಖಂಡದಲ್ಲಿ ಸಂಶೋಧನೆ*

NOT TO BE REPUBLISHED @KTBS

> ಅಂಟಾರ್ಟಿಕ ಖಂಡದಲ್ಲಿ ಪ್ರಪಂಚದ ಶೇ.90 ಭಾಗದ ಸಿಹಿನೀರು ಮಂಜುಗಡ್ಡೆಯ ರೂಪದಲ್ಲಿದೆ.

## ಪ್ರಮುಖ ಸಂಶೋಧನಾ ಕೇಂದ್ರಗಳು

ಹಲವು ದೃಷ್ಟಿಯಿಂದ ಅಂಟಾರ್ಟಿಕ ಖಂಡವು ಜಾಗತಿಕ ಸಂಶೋಧನೆಗಾಗಿ ಮೀಸಲಾಗಿದ್ದು ವೈಜ್ಞಾನಿಕವಾದ ಆಸಕ್ತಿಯನ್ನು ಹುಟ್ಟಿಸುತ್ತದೆ. ಈ ಖಂಡದ ಉಗಮ ಮತ್ತು ಭೂರಚನೆ, ವಾಯುಗುಣದ ಪರಿಸ್ಥಿತಿ, ಜೀವಿಪರಿಸರ ವ್ಯವಸ್ಥೆ, ಜೈವಿಕ ವೈವಿಧ್ಯತೆ ಮತ್ತು ಸಂರಕ್ಷಣೆ, ಅಲ್ಲಿನ ಪರಿಸರ ಮಾಲಿನ್ಯ ಮತ್ತು ಪರಿಹಾರ, ತ್ಯಾಜ್ಯ ಪದಾರ್ಥಗಳ ವಿಲೇವಾರಿ ಮತ್ತು ನಿರ್ವಹಣೆ, ತೈಲ ಸೋರಿಕೆಯಿಂದಾಗುವ ಅವಘಡ ಮತ್ತು ಆ ಬಗ್ಗೆ ತೆಗೆದುಕೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮ ಮೊದಲಾದವುಗಳು ಸಂಶೋಧನಾ ವಿಷಯಗಳಾಗಿವೆ. ಈ ಬಗ್ಗೆ ಸಂಶೋಧನೆ ಮಾಡಲು ಪ್ರಪಂಚದ 30ಕ್ಕಿಂತ ಹೆಚ್ಚಿನ ರಾಷ್ಟ್ರಗಳು ತಮ್ಮ ಸಂಶೋಧನಾ ಕೇಂದ್ರಗಳನ್ನು ಇಲ್ಲಿ ಸ್ಥಾಪಿಸಿವೆ.

ಭಾರತವು ಸಹ ತನ್ನ ಸಂಶೋಧನಾ ಕೇಂದ್ರವನ್ನು ಈ ಖಂಡದಲ್ಲಿ ಸ್ಥಾಪಿಸಿದೆ. ಮೊಟ್ಟಮೊದಲಿಗೆ 1981ರ ಡಿಸೆಂಬರ 6ರಂದು ಎಸ್.ಜೆಡ್.ಕಾಸಿಂರ ನೇತೃತ್ವದಲ್ಲಿ ವಿಜ್ಞಾನಿಗಳ ತಂಡವು ಗೋವಾದಿಂದ ಪ್ರಯಾಣ ಆರಂಭಿಸಿತು. ಈ ತಂಡವನ್ನು ಒಯ್ದ ಪೋಲಾರ್ ಸರ್ಕಲ್ ನೌಕೆಯು 1982 ಜನವರಿ 9ರಂದು ಅಂಟಾರ್ಟಿಕ ಖಂಡವನ್ನು ತಲಪಿತು. ಭಾರತೀಯ ತಂಡ ಸ್ಥಾಪಿಸಿದ ಮೊದಲ ಸಂಶೋಧನಾ ಕೇಂದ್ರದ ಹೆಸರು "ದಕ್ಷಿಣ

ಗಂಗೋತ್ರಿ".ಇದು ನಿರ್ಮಾಣಗೊಂಡದ್ದು 1983ರಲ್ಲಿ ಮತ್ತು ಈ ಹೆಸರನ್ನು ಕೊಟ್ಟದ್ದು 1989ರಲ್ಲಿ. ಈಗ ಇದು ಮಾನವರಹಿತವಾಗಿದ್ದು ದಾಸ್ತಾನಿಗಷ್ಟೇ ಬಳಕೆಯಾಗುತ್ತಿದೆ.




*‘ಮೈತ್ರಿ’ ಭಾರತದ ಸಂಶೋಧನಾ ಕೇಂದ್ರ*



*ಭಾರತಿ’ ಭಾರತದ ಮತ್ತೊಂದು ಸಂಶೋಧನಾ ಕೇಂದ್ರ*

© KTBS NOT TO BE REPUBLISHED

**ದಕ್ಷಿಣ ಗಂಗೋತ್ರಿ :** ಮೊದಲ ಯಾನದ ಯಶಸ್ಸಿನ ನಂತರ ಈವರೆಗೆ ಸುಮಾರು 50 ಬಾರಿ ಭಾರತದ ಸಂಶೋಧನಾ ತಂಡಗಳು ಅಂಟಾರ್ಟಿಕ ಖಂಡಕ್ಕೆ ಹೋಗಿ ಬಂದಿವೆ. “ಮೈತ್ರಿ” ಎರಡನೆಯ ಸಂಶೋಧನಾ ಕೇಂದ್ರ. ಇದು ಶಿರ್ಮಾಚರ್ ಓಯಸಿಸ್ ಮೇಲೆ ನಿರ್ಮಾಣ ಗೊಂಡಿದೆ (1988–89). ಇದು ಸರ್ವಋತು ಕೇಂದ್ರ ಮತ್ತು 26 ಮಂದಿ ಒಟ್ಟಿಗೆ ಇರಲು ಅನುಕೂಲವಿದೆ. ಇಲ್ಲಿಂದ 255 ಮೀ. ದೂರದಲ್ಲಿ ಸಿಹಿನೀರಿನ ಪೂರೈಕೆಗಾಗಿ “ಪ್ರಿಯದರ್ಶಿನಿ” ಎಂಬ ಸರೋವರವನ್ನು ಭಾರತ ನಿರ್ಮಿಸಿದೆ. ಮೈತ್ರಿ ಕೇಂದ್ರದಲ್ಲಿ ಭೂವಿಜ್ಞಾನ, ಭೂಗೋಳಶಾಸ್ತ್ರ ಮತ್ತು ಔಷಧಿಗಳ ಬಗ್ಗೆ ಸಂಶೋಧನೆ ನಡೆಯುತ್ತದೆ.

“ಭಾರತಿ” ಎಂಬ ಮತ್ತೊಂದು ಸಂಶೋಧನಾ ಕೇಂದ್ರವನ್ನು ಅಂಟಾರ್ಟಿಕದಲ್ಲಿ ಸ್ಥಾಪಿಸಲು ಭಾರತವು ಯೋಚಿಸಿದೆ. ಇದು ವಿಶೇಷವಾಗಿ ಸಾಗರಾಧ್ಯಯನ ಶೋಧನೆ ಉದ್ದೇಶವುಳ್ಳದ್ದು. ಅಗತ್ಯವಾದ ಸರ್ವೇಕಾರ್ಯವು ಈಗಾಗಲೇ ಮುಗಿದಿದೆ.

## ಹೊಸ ಪದಗಳು

ಶ್ವೇತಖಂಡ, ಶೀತಲ ಖಂಡ, ವಿನ್ಸನ್ ಮ್ಯಾಸಿಫ್, ಎರೆಬಸ್, ಹಾವಸೆ, ಪೆಂಗ್ವಿನ್, ತಿಮಿಂಗಿಲ, ಸೀಲ್, ಸೀಗಡಿ, ಅದಿಲೆ, ಚಿನ್‌ಸ್ಟ್ರಾಪ್, ಕ್ರಿಲ್, ಭೂಭೌತ, ದಕ್ಷಿಣ ಗಂಗೋತ್ರಿ, ಮೈತ್ರಿ, ಭಾರತಿ.

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1 ಅಂಟಾರ್ಟಿಕ ಭೂಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿರಿ.

2 ಅಂಟಾರ್ಟಿಕ ಖಂಡದ ಭೌಗೋಳಿಕ ಸನ್ನಿವೇಶ ವಿವರಿಸಿರಿ.

3 ಅಂಟಾರ್ಟಿಕವನ್ನು 'ಶ್ವೇತ ಖಂಡ' ಎನ್ನುವರು. ಏಕೆ?

4 ಅಂಟಾರ್ಟಿಕ ಖಂಡದ ಪ್ರಮುಖ ಪರ್ವತ ಮತ್ತು ಶಿಖರಗಳನ್ನು ತಿಳಿಸಿರಿ.

5 ಅಂಟಾರ್ಟಿಕ ಖಂಡದ ಸಸ್ಯ ಮತ್ತು ಪ್ರಾಣಿಗಳನ್ನು ಹೆಸರಿಸಿರಿ.

6 ಅಂಟಾರ್ಟಿಕದಲ್ಲಿ ಭಾರತದ ಸಂಶೋಧನಾ ಕೇಂದ್ರಗಳ ಹೆಸರನ್ನು ತಿಳಿಸಿರಿ.

@KTBS NOT TO BE REPUBLISHED



**ಚಟುವಟಿಕೆಗಳು**

1 ಅಂಟಾರ್ಟಿಕ ಖಂಡದಲ್ಲಿ ಸ್ಥಾಪನೆಯಾಗಿರುವ ವಿವಿಧ ದೇಶಗಳ ಸಂಶೋಧನಾ ಕೇಂದ್ರಗಳ ಚಿತ್ರಗಳನ್ನು ಸಂಗ್ರಹಿಸಿ ಅವುಗಳ ಪಟ್ಟಿ ಸಿದ್ಧಗೊಳಿಸುವುದು

2 ಅಂಟಾರ್ಟಿಕ ಖಂಡದ ವಿವಿಧ ಸಸ್ಯ ಮತ್ತು ಪ್ರಾಣಿಗಳ ಪಟ್ಟಿಮಾಡಿ ಅವುಗಳ ಚಿತ್ರಗಳನ್ನು ಸಂಗ್ರಹಿಸುವುದು.